ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಸ್ಟಾಂಪು ಅಧಿನಿಯಮ, 1957

# ಕರ್ನಾಟಕ ಸ್ಟಾಂಪು ನಿಯಮಗಳು, 1958

# ಕರ್ನಾಟಕ ಸ್ಟಾಂಪು (ಲಿಖಿತಗಳ ಕಡಿಮೆ ಮೌಲ್ಯಮಾಪನವನ್ನು ತಡೆಗಟ್ಟುವ) ನಿಯಮಗಳು, 1977

**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ: ಎಲ್‌ಎಡಬ್ಲ್ಯೂ 31 ಎಲ್‌ಎಂಪಿ 90, ದಿನಾಂಕ: 1ನೇ ಆಗಸ್ಟ್ 1993**

The Karnataka Stamp Act, 1957 (Karnataka Act No. 34 of 1957), The Karnataka Stamp Rules, 1958, The Karnataka Stamp (Prevention of Under Valuation of Instruments) Rules, 1977 – ಇದರ ಕನ್ನಡ ಭಾಷಾಂತರವನ್ನು ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ 1963ರ ಕರ್ನಾಟಕ ರಾಜ್ಯಭಾಷಾ ಅಧಿನಿಯಮದ 5ಎ ಪ್ರಕರಣದ ಅನುಸಾರವಾಗಿ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

The Karnataka Stamp Act, 1957 (Karnataka Act No. 34 of 1957), The Karnataka Stamp Rules, 1958, The Karnataka Stamp (Prevention of Under Valuation of Instruments) Rules, 1977 – ಇದರ ಮುಂದಿನ ಕನ್ನಡ ಭಾಷಾಂತರವನ್ನು ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ 1963ರ ಕರ್ನಾಟಕ ರಾಜ್ಯಭಾಷಾ ಅಧಿನಿಯಮದ 5ಎ ಪ್ರಕರಣದ ಅನುಸಾರವಾಗಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

# ವಿಷಯಸೂಚಿ

ಪುಟಗಳು

1. ಕರ್ನಾಟಕ ಸ್ಟಾಂಪು ಅಧಿನಿಯಮ, 1957
2. ಕರ್ನಾಟಕ ಸ್ಟಾಂಪು ನಿಯಮಗಳು, 1958
3. ಕರ್ನಾಟಕ ಸ್ಟಾಂಪು (ಲಿಖಿತಗಳ ಕಡಿಮೆ ಮೌಲ್ಯ ಮಾಪನವನ್ನು ತಡೆಗಟ್ಟುವ) ನಿಯಮಗಳು, 1977
4. ನಮೂನೆಗಳು
5. ಅಧಿಸೂಚನೆಗಳು
6. ತಿದ್ದುಪಡಿ ಅಧಿನಿಯಮಗಳು

# ಕರ್ನಾಟಕ ಸ್ಟಾಂಪು ಅಧಿನಿಯಮ, 1957
## ಪ್ರಕರಣಗಳ ಅನುಕ್ರಮಣಿಕೆ


### ಅಧ್ಯಾಯ – I

### ಪ್ರಾರಂಭಿಕ

**ಪ್ರಕರಣಗಳು**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ – II

### ಸ್ಟಾಂಪು ಸುಂಕಗಳು

### ಕ. ಲಿಖಿತಗಳು ಸುಂಕಕ್ಕೆ ಹೊಣೆಯಾಗಿರುವುದರ ಬಗ್ಗೆ

3. ಸುಂಕ ವಿಧಿಸಲಾಗುವ ಲಿಖಿತಗಳು

3ಕ. ಐದು ಪೈಸೆಯ ಗುಣಕಗಳಲ್ಲಿ ಸುಂಕಕ್ಕೆ ಹೊಣೆಯಾಗಿರುವ ಲಿಖಿತಗಳು

4. ಮಾರಾಟ, ಅಡಮಾನ ಅಥವಾ ವ್ಯವಸ್ಥೆಯ ಏಕ ವ್ಯವಹಾರದಲ್ಲಿ ಉಪಯೋಗಿಸಿದ ಹಲವಾರು ಲಿಖಿತಗಳು
5. ಹಲವಾರು ವಿಭಿನ್ನ ವಿಷಯಗಳಿಗೆ ಸಂಬಂಧಪಟ್ಟ ಲಿಖಿತಗಳು
6. ಅನುಸೂಚಿಯಲ್ಲಿನ ಹಲವಾರು ವಿವರಣೆಗಳೊಳಗೆ ಬರುವ ಲಿಖಿತಗಳು
7. ಕೆಲವು ಲಿಖಿತಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಸುಂಕದ ಸಂದಾಯ
8. ಸಾಲಗಳ ಬಗ್ಗೆ ಹೊರಡಿಸಿದ ಬಂಧ ಪತ್ರಗಳು ಅಥವಾ ಇತರೆ ಭದ್ರತಾ ಪತ್ರಗಳು
9. ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿ ಮಾಡಿಕೊಳ್ಳಲು ಅಧಿಕಾರ

### ಖ. ಸ್ಟಾಂಪುಗಳು ಮತ್ತು ಅವುಗಳನ್ನು ಉಪಯೋಗಿಸುವ ವಿಧಾನದ ಬಗ್ಗೆ

10. ಸುಂಕಗಳನ್ನು ಹೇಗೆ ಸಂದಾಯ ಮಾಡತಕ್ಕದ್ದು
11. ಅಂಟಿಕೊಳ್ಳುವ ಸ್ಟಾಂಪುಗಳ ಉಪಯೋಗ
12. ಅಂಟಿಕೊಳ್ಳುವ ಸ್ಟಾಂಪುಗಳ ರದ್ದಿಯಾತಿ
13. ಮುದ್ರೆ ಹಾಕಿದ ಸ್ಟಾಂಪುಗಳಿಂದ ಸ್ಟಾಂಪು ಹಾಕಿದ ಲಿಖಿತಗಳನ್ನು ಹೇಗೆ ಬರೆಯತಕ್ಕದ್ದು
14. ಒಂದು ಸ್ಟಾಂಪಿನ ಮೇಲೆ ಒಂದು ಲಿಖಿತ ಮಾತ್ರ ಇರತಕ್ಕದ್ದು
15. 13ನೇ ಪ್ರಕರಣ ಅಥವಾ 14ನೇ ಪ್ರಕರಣದ ಉಲ್ಲಂಘನೆಯಲ್ಲಿ ಬರೆಯಲಾದ ಪ್ರತಿಯೊಂದು ಲಿಖಿತವನ್ನು ಸ್ಟಾಂಪು ಹಚ್ಚಿಲ್ಲವೆಂಬುದಾಗಿ ಭಾವಿಸತಕ್ಕದ್ದು
16. ಸುಂಕವನ್ನು ಸೂಚಿಸುವುದು

### ಗ. ಲಿಖಿತಗಳಿಗೆ ಸ್ಟಾಂಪು ಹಚ್ಚುವ ಕಾಲದ ಬಗ್ಗೆ


17. ಕರ್ನಾಟಕ ರಾಜ್ಯದಲ್ಲಿ ಬರೆದುಕೊಟ್ಟ ಲಿಖಿತಗಳು

18. ಭಾರತದ ಹೊರಗೆ ಬರೆದುಕೊಟ್ಟ ಲಿಖಿತಗಳು

19. ಕರ್ನಾಟಕ ರಾಜ್ಯದಲ್ಲಿ ಹೆಚ್ಚಿಸಿದ ಸುಂಕಕ್ಕೆ ಗುರಿಯಾಗುವ ಕೆಲವು ಲಿಖಿತಗಳ ಮೇಲೆ ಸುಂಕದ ಸಂದಾಯ


### ಘ. ಸುಂಕದ ಮೌಲ್ಯಗಳ ಬಗ್ಗೆ


20. ವಿದೇಶಿ ಕರೆನ್ಸಿಗಳಲ್ಲಿ ವ್ಯಕ್ತಪಡಿಸಿದ ಮೊಬಲಗಿನ ಪರಿವರ್ತನೆ

21. ಸ್ಟಾಕು ಮತ್ತು ಮಾರಾಟಮಾಡಬಹುದಾದ ಭದ್ರತಾ ಪತ್ರಗಳನ್ನು ಹೇಗೆ ಮೌಲ್ಯ ನಿರ್ಣಯ ಮಾಡತಕ್ಕದ್ದು

22. ವಿನಿಮಯ ದರದ ಅಥವಾ ಸರಾಸರಿ ಬೆಲೆಯ ನಿರೂಪಣದ ಪರಿಣಾಮ

23. ಬಡ್ಡಿಯನ್ನು ಕಾಯ್ದಿರಿಸುವ ಲಿಖಿತಗಳು

24. ಅಡಮಾನಗಳು ಅಥವಾ ಮಾರಬಹುದಾದ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ಕೆಲವು ಲಿಖಿತಗಳ ಮೇಲೆ ಒಪ್ಪಂದಗಳಂತೆ ವಿಧಿಸತಕ್ಕದ್ದು

25. ಋಣದ ಪ್ರತಿಫಲಕ್ಕಾಗಿ ಅಥವಾ ಭವಿಷ್ಯ ಸಂದಾಯ, ಇತ್ಯಾದಿಗಳಿಗೆ ಒಳಪಟ್ಟ ವರ್ಗಾವಣೆಯ ಮೇಲೆ ಹೇಗೆ ವಿಧಿಸತಕ್ಕದ್ದು

26. ವರ್ಷಾಶನ, ಇತ್ಯಾದಿಗಳ ಸಂದರ್ಭದಲ್ಲಿ ಮೌಲ್ಯ ನಿರ್ಣಯ

27. ವಸ್ತು ವಿಷಯದ ಮೌಲ್ಯವು ಅನಿರ್ದಿಷ್ಟವಾಗಿರುವಾಗ ಸ್ಟಾಂಪು

28. ಸುಂಕದ ಮೇಲೆ ಪರಿಣಾಮವುಳ್ಳ ಸಂಗತಿಗಳನ್ನು ಲಿಖಿತದಲ್ಲಿ ನಮೂದಿಸತಕ್ಕದ್ದು

29. ಕೆಲವು ಹಸ್ತಾಂತರಣಗಳ ಸಂದರ್ಭದಲ್ಲಿ ಸುಂಕದ ಬಗ್ಗೆ ನಿರ್ದೇಶನ


### ಙ. ಯಾರಿಂದ ಸುಂಕವು ಸಂದಾಯವಾಗಬೇಕು


30. ಯಾರಿಂದ ಸುಂಕಗಳು ಸಂದಾಯವಾಗಬೇಕು


## ಅಧ್ಯಾಯ–III

### ಸ್ಟಾಂಪುಗಳ ಬಗ್ಗೆ ನ್ಯಾಯ ನಿರ್ಣಯ


31. ಸರಿಯಾದ ಸ್ಟಾಂಪುಗಳ ಬಗ್ಗೆ ನ್ಯಾಯ ನಿರ್ಣಯ

32. ಡೆಪ್ಯುಟಿ ಕಮಿಷನರನಿಂದ ಪ್ರಮಾಣ ಪತ್ರ


## ಅಧ್ಯಾಯ–IV

### ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲದ ಲಿಖಿತಗಳು


33. ಲಿಖಿತಗಳನ್ನು ಪರೀಕ್ಷಿಸುವುದು ಮತ್ತು ಪರಿಬದ್ಧಗೊಳಿಸುವುದು

34. ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಿಲ್ಲದ ಲಿಖಿತಗಳು ಸಾಕ್ಷ್ಯದಲ್ಲಿ ಅಗ್ರಾಹ್ಯ ಇತ್ಯಾದಿ

35. ಲಿಖಿತದ ಅಂಗೀಕಾರವನ್ನು ಯಾವಾಗ ಪ್ರಶ್ನಿಸತಕ್ಕದ್ದಲ್ಲ

36. ಸರಿಯಾದ ಸ್ಟಾಂಪನ್ನು ಹಚ್ಚಿಲ್ಲದೆ ಇರುವ ಲಿಖಿತಗಳ ಅಂಗೀಕಾರ

37. ಪರಿಬದ್ಧಗೊಳಿಸಲಾದ ಲಿಖಿತಗಳೊಡನೆ ವ್ಯವಹರಿಸುವ ಬಗೆ

38. 37ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸಂದಾಯ ಮಾಡಿದ ದಂಡವನ್ನು ಮರುಪಾವತಿ ಮಾಡಲು ಡೆಪ್ಯುಟಿ ಕಮೀಷನರನ ಅಧಿಕಾರ

39. ಪರಿಬದ್ಧಗೊಳಿಸಿದ ಲಿಖಿತಗಳಿಗೆ ಸ್ಟಾಂಪು ಹಚ್ಚಲು ಡೆಪ್ಯುಟಿ ಕಮೀಷನರನ ಅಧಿಕಾರ

40. ಆಕಸ್ಮಿಕವಾಗಿ ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲದ ಲಿಖಿತಗಳು

41. 34, 39 ಅಥವಾ 40ನೇ ಪ್ರಕರಣಗಳ ಮೇರೆಗೆ ಸುಂಕವನ್ನು ಸಂದಾಯ ಮಾಡಲಾಗಿರುವಂಥ ಲಿಖಿತಗಳ ಮೇಲೆ ಹಿಂಬರಹ

42. ಸ್ಟಾಂಪು ಕಾನೂನಿನ ವಿರುದ್ಧ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್

43. ಸುಂಕ ಅಥವಾ ದಂಡವನ್ನು ಸಂದಾಯ ಮಾಡುವ ವ್ಯಕ್ತಿಗಳು ಕೆಲವು ಸಂದರ್ಭಗಳಲ್ಲಿ ಅದನ್ನು ವಸೂಲಿ ಮಾಡಬಹುದು

44. ಕೆಲವು ಸಂದರ್ಭಗಳಲ್ಲಿ ದಂಡ ಅಥವಾ ಹೆಚ್ಚಿನ ಸುಂಕವನ್ನು ಮರುಪಾವತಿ ಮಾಡಲು ರಾಜಸ್ವ ಪ್ರಾಧಿಕಾರಿಯ ಅಧಿಕಾರ

45. 37ನೇ ಪ್ರಕರಣದ ಮೇರೆಗೆ ಕಳುಹಿಸಿದ ಲಿಖಿತಗಳು ಕಳೆದು ಹೋಗಿದ್ದಕ್ಕಾಗಿ ಹೊಣೆಗಾರಿಕೆ ಇಲ್ಲದಿರುವುದು

45ಕ. ಕಡಿಮೆ ಮೌಲ್ಯ ಹಸ್ತಾಂತರಣದ ಲಿಖಿತ, ಇತ್ಯಾದಿಗಳೊಂದಿಗೆ ವ್ಯವಹರಿಸುವ ಬಗೆ

46. ಸುಂಕಗಳು ಮತ್ತು ದಂಡಗಳ ವಸೂಲಿ

46ಕ. ವಿಧಿಸಿಲ್ಲದ ಅಥವಾ ಕಡಿಮೆ ವಿಧಿಸಲಾದ ಸ್ಟಾಂಪು ಸುಂಕದ ವಸೂಲಿ

## ಅಧ್ಯಾಯ – V

### ಕೆಲವು ಸಂದರ್ಭಗಳಲ್ಲಿ ಸ್ಟಾಂಪುಗಳಿಗಾಗಿ ರಿಯಾಯಿತಿಗಳು

47. ಕೆಟ್ಟುಹೋದ ಸ್ಟಾಂಪುಗಳಿಗಾಗಿ ರಿಯಾಯಿತಿಗಳು

48. 47ನೇ ಪ್ರಕರಣದ ಮೇರೆಗಿನ ಪರಿಹಾರಕ್ಕಾಗಿ ಯಾವಾಗ ಅರ್ಜಿ ಮಾಡಿಕೊಳ್ಳಬೇಕು

49. ನಿಗಮಗಳಿಗೆ ಇನ್ನು ಮುಂದೆ ಅಗತ್ಯವಿಲ್ಲದ ಮುದ್ರಿತ ನಮೂನೆಗಳ ಸಂದರ್ಭದಲ್ಲಿ ರಿಯಾಯಿತಿ

50. ದುರುಪಯೋಗಪಡಿಸಿದ ಸ್ಟಾಂಪುಗಳಿಗೆ ರಿಯಾಯಿತಿ

51. ಕೆಟ್ಟುಹೋದ ಅಥವಾ ದುರುಪಯೋಗಪಡಿಸಿದ ಸ್ಟಾಂಪುಗಳಿಗಾಗಿ ರಿಯಾಯಿತಿ–ಯನ್ನು ಕೊಡುವ ಬಗೆ

52. ಉಪಯೋಗಕ್ಕೆ ಬೇಕಾಗಿಲ್ಲದ ಸ್ಟಾಂಪುಗಳಿಗಾಗಿ ರಿಯಾಯಿತಿ

52ಕ. ಪರಿಹಾರವನ್ನು ಮಂಜೂರ್ಮಾಡಲು ರಾಜ್ಯ ಸರ್ಕಾರದ ಅಧಿಕಾರ

## ಅಧ್ಯಾಯ – VI

### ಅಭಿಪ್ರಾಯ ಕೋರಿಕೆ ಮತ್ತು ಪುನರೀಕ್ಷಣೆ

53. ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ನಿಯಂತ್ರಣ ಮತ್ತು ಅವನಿಗೆ ಪ್ರಕರಣದ ನಿರೂಪಣೆ

54. ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯು ಉಚ್ಚ ನ್ಯಾಯಾಲಯಕ್ಕೆ ಪ್ರಕರಣದ ವಿವರವನ್ನು ಕೊಡುವುದು

55. ನಿರೂಪಿಸಿದ ಪ್ರಕರಣದ ಬಗ್ಗೆ ಹೆಚ್ಚಿನ ವಿವರಗಳನ್ನು ತರಿಸಿಕೊಳ್ಳಲು ಉಚ್ಚ ನ್ಯಾಯಾಲಯದ ಅಧಿಕಾರ

56. ದಾಖಲು ನಿರೂಪಿಸಿದ ಪ್ರಕರಣವನ್ನು ವಿಲೆ ಮಾಡುವಲ್ಲಿ ಪ್ರಕ್ರಿಯೆ

57. ಇತರ ನ್ಯಾಯಾಲಯಗಳಿಂದ ಉಚ್ಚ ನ್ಯಾಯಾಲಯಕ್ಕೆ ಪ್ರಕರಣದ ನಿರೂಪಣೆ

58. ಸ್ಟಾಂಪುಗಳು ಸಾಕಷ್ಟು ಇರುವ ಬಗ್ಗೆ ನ್ಯಾಯಾಲಯಗಳ ಕೆಲವು ತೀರ್ಮಾನಗಳ ಪುನರೀಕ್ಷಣೆ

## ಅಧ್ಯಾಯ – VII

### ಕ್ರಿಮಿನಲ್ ಅಪರಾಧಗಳು ಮತ್ತು ಪ್ರಕ್ರಿಯೆ

59. ಕ್ರಮಬದ್ಧವಾಗಿ ಸ್ಟಾಂಪು ಹಚ್ಚದ ಲಿಖಿತವನ್ನು ಬರೆದುಕೊಡುವುದು, ಇತ್ಯಾದಿಗಾಗಿ ದಂಡನೆ

60. ಅಂಟಿಕೊಳ್ಳುವ ಸ್ಟಾಂಪುಗಳನ್ನು ರದ್ದು ಮಾಡಲು ತಪ್ಪುವುದಕ್ಕಾಗಿ ದಂಡನೆ

61. 28ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದ್ದಕ್ಕಾಗಿ ದಂಡನೆ

62. ರಾಜಸ್ವವನ್ನು ವಂಚಿಸುವ ಉಪಾಯಗಳಿಗಾಗಿ ದಂಡನೆ

63. ಸ್ಟಾಂಪುಗಳ ಮಾರಾಟಕ್ಕೆ ಸಂಬಂಧಪಟ್ಟ ನಿಯಮದ ಉಲ್ಲಂಘನೆಗಾಗಿ ಮತ್ತು ಅನಧಿಕೃತ ಮಾರಾಟಕ್ಕಾಗಿ ದಂಡನೆ

63ಕ. ಇತರ ಉಪಬಂಧಗಳ ಉಲ್ಲಂಘನೆಗಾಗಿ ದಂಡ

64. ಪ್ರಾಸಿಕ್ಯೂಷನ್‌ಗಳನ್ನು ಹೂಡುವುದು ಮತ್ತು ನಡೆಸುವುದು

65. ಮ್ಯಾಜಿಸ್ಟ್ರೇಟರುಗಳ ಅಧಿಕಾರ ವ್ಯಾಪ್ತಿ

66. ಅಧಿವಿಚಾರಣೆಯ ಸ್ಥಳ

## ಅಧ್ಯಾಯ – VIII

### ಪೂರಕ ಉಪಬಂಧಗಳು

67. ಪುಸ್ತಕಗಳು, ಮುಂತಾದವು ಪರಿಶೀಲನೆಗೆ ಒಳಗಾಗಿರತಕ್ಕದ್ದು

67ಕ. ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ ಮತ್ತು ಡೆಪ್ಯುಟಿ ಕಮೀಷನರರ ಪ್ರಕ್ರಿಯೆ ಮತ್ತು ತಪ್ಪುಗಳನ್ನು ಸರಿಪಡಿಸುವುದು

67ಖ. ಆವರಣವನ್ನು ಪ್ರವೇಶಿಸಲು ಮತ್ತು ಕೆಲವು ದಸ್ತಾವೇಜುಗಳನ್ನು ಪರಿಶೀಲಿಸಲು ಅಧಿಕಾರಿಗಳನ್ನು ಅಧಿಕೃತಗೊಳಿಸಲು ಡೆಪ್ಯುಟಿ ಕಮೀಷನರರ ಅಧಿಕಾರ

68. ನಿಯಮ ರಚನಾಧಿಕಾರ

69. ನ್ಯಾಯಾಲಯದ ಫೀಜುಗಳ ಬಗ್ಗೆ ಉಳಿಸುವಿಕೆ

70. ಅಧಿನಿಯಮವನ್ನು ಭಾಷಾಂತರಿಸಿ ಅಗ್ಗವಾಗಿ ಮಾರಾಟ ಮಾಡತಕ್ಕದ್ದು

71. ನಿರಸನ ಮತ್ತು ಉಳಿಸುವಿಕೆಗಳು

72. ಭಾರತೀಯ ಸ್ಟಾಂಪು ಅಧಿನಿಯಮ, 1989ರ ಅನ್ವಯ

**ಅನುಸೂಚಿ**

# ಕರ್ನಾಟಕ ಅಧಿನಿಯಮ ಸಂಖ್ಯೆ 1957ರ 34

(1957ನೇ ಡಿಸೆಂಬರ್ 5ನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿತವಾಗಿದೆ).

## ಕರ್ನಾಟಕ ಸ್ಟಾಂಪು ಅಧಿನಿಯಮ, 1957

(1958ರ 8, 1962ರ 29, 1966ರ 17, 1971ರ ರಾಷ್ಟ್ರಪತಿ ಅಧಿನಿಯಮ 17, 1972ರ 12, 1973ರ 4, 1974ರ 17, 1975ರ 12, 1976ರ 37, 1979ರ 9 ಮತ್ತು 21, 1980ರ 15, 1981ರ 16 ಮತ್ತು 1983ರ 16ನೇ ಕರ್ನಾಟಕ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

(1957ರ ನವೆಂಬರ್ ಇಪ್ಪತ್ತೆಂಟನೇ ದಿವಸದಂದು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯಿತು)

ಸ್ಟಾಂಪುಗಳಿಗೆ ಸಂಬಂಧಪಟ್ಟಂತೆ ಕಾನೂನುಗಳನ್ನು ಕ್ರೋಢೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಸ್ಟಾಂಪುಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಕ್ರೋಢೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಎಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ-I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು ಅಧಿನಿಯಮ, 1957 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:-** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಕ) 'ಬಂಧಪತ್ರ'ವು.-

(i) ಸಂದರ್ಭಾನುಸಾರ ಒಂದು ನಿರ್ದಿಷ್ಟ ಕಾರ್ಯವನ್ನು ನೆರವೇರಿಸಿದರೆ ಅಥವಾ ನೆರವೇರಿಸದಿದ್ದರೆ ಹೊಣೆಯು ಶೂನ್ಯವಾಗಿರತಕ್ಕದ್ದು ಎಂಬ ಷರತ್ತಿನ ಮೇಲೆ ಯಾವ ಲಿಖಿತದ ಮೂಲಕ ಒಬ್ಬ ವ್ಯಕ್ತಿಯು ಇನ್ನೊಬ್ಬನಿಗೆ ಹಣವನ್ನು ಸಂದಾಯ ಮಾಡಲು ತನ್ನನ್ನು ಹೊಣೆಯಾಗಿಸಿಕೊಳ್ಳುತ್ತಾನೋ ಆ ಯಾವುದೇ ಲಿಖಿತ;

(ii) ಒಬ್ಬ ಸಾಕ್ಷಿಯಿಂದ ಅನುಪ್ರಮಾಣಿತವಾದ ಮತ್ತು ಆದೇಶದ ಮೇಲೆ ಅಥವಾ ವಾಹಕನಿಗೆ ಸಂದಾಯ ಮಾಡಬೇಕಾಗಿಲ್ಲದ ಯಾವ ಲಿಖಿತದ ಮೂಲಕ ಒಬ್ಬ ವ್ಯಕ್ತಿಯು ಇನ್ನೊಬ್ಬನಿಗೆ ಹಣವನ್ನು ಸಂದಾಯ ಮಾಡಲು ಹೊಣೆಯಾಗಿಸಿಕೊಳ್ಳುತ್ತಾನೋ ಆ ಯಾವುದೇ ಲಿಖಿತ;

(iii) ಹಾಗೆ ಅನುಪ್ರಮಾಣಿತವಾದ ಯಾವ ಲಿಖಿತದ ಮೂಲಕ ಒಬ್ಬ ವ್ಯಕ್ತಿಯು ಇನ್ನೊಬ್ಬನಿಗೆ ಧಾನ್ಯ ಅಥವಾ ಇತರ ಕೃಷಿ ಉತ್ಪನ್ನವನ್ನು ವಶಾವಣೆ ಮಾಡಲು ತನ್ನನ್ನು ಹೊಣೆಯಾಗಿಸಿಕೊಳ್ಳುತ್ತಾನೋ ಆ ಯಾವುದೇ ಲಿಖಿತ

– ಇವುಗಳನ್ನು ಒಳಗೊಳ್ಳುತ್ತದೆ;

(ಖ) 'ವಿಧಿಸಬಹುದಾದದ್ದು' ಎಂದರೆ, ಈ ಅಧಿನಿಯಮವು ಪ್ರಾರಂಭವಾದ ತರುವಾಯ ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ಲಿಖಿತಕ್ಕೆ ಅನ್ವಯಿಸುವಂತೆ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದದ್ದು ಮತ್ತು ಯಾವುದೇ ಇತರ ಲಿಖಿತಕ್ಕೆ ಅನ್ವಯಿಸುವಂತೆ ಅಂಥ ಲಿಖಿತವನ್ನು ಬರೆದು ಕೊಟ್ಟಾಗ ಅಥವಾ ಹಲವಾರು ವ್ಯಕ್ತಿಗಳು ಆ ಲಿಖಿತವನ್ನು ಬೇರೆ ಬೇರೆ ಕಾಲಗಳಲ್ಲಿ ಬರೆದುಕೊಟ್ಟಿರುವಲ್ಲಿ ಮೊದಲು ಬರೆದು ಕೊಟ್ಟಾಗ ಕರ್ನಾಟಕ ರಾಜ್ಯದ ರಾಜ್ಯ ಕ್ಷೇತ್ರಗಳಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ವಿಧಿಸಬಹುದಾದದ್ದು;

(ಗ) 'ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ' ಎಂದರೆ, ರಾಜ್ಯ ಸರ್ಕಾರವು ಕರ್ನಾಟಕಕ್ಕಾಗಿ ಸ್ಟ್ಯಾಂಪುಗಳ ಕಮಿಷನರನಾಗಿರಲು ನೇಮಕ ಮಾಡಿದ ಅಧಿಕಾರಿ;

(ಘ) 'ಹಸ್ತಾಂತರಣ ಪತ್ರ'ವು ಮಾರಾಟದ ಮೇಲಿನ ಹಸ್ತಾಂತರಣ ಪತ್ರವನ್ನು ಮತ್ತು ಯಾವುದರ ಮೂಲಕ ಸ್ವತ್ತನ್ನು, ಅದು ಚರ ಸ್ವತ್ತೇ ಆಗಿರಲಿ ಅಥವಾ ಸ್ಥಿರ ಸ್ವತ್ತೇ ಆಗಿರಲಿ ಜೀವಂತ ವ್ಯಕ್ತಿಗಳ ನಡುವೆ ವರ್ಗಾವಣೆ ಮಾಡಲಾಗಿದೆಯೋ ಮತ್ತು ಯಾವುದಕ್ಕೆ ಅನುಸೂಚಿಯ ಮೂಲಕ ನಿರ್ದಿಷ್ಟವಾಗಿ ಅನ್ಯಥಾ ಉಪಬಂಧಿಸಿಲ್ಲವೋ ಆ ಪ್ರತಿಯೊಂದು ಲಿಖಿತವನ್ನು ಒಳಗೊಳ್ಳುತ್ತದೆ;

(ಘಘ) 'ಡೆಪ್ಯುಟಿ ಕಮಿಷನರು' ಒಂದು ಜಿಲ್ಲೆಯ ಕಂದಾಯ ಆಡಳಿತದ ಪ್ರಭಾರವನ್ನು ಹೊಂದಿರುವ ಮುಖ್ಯ ಅಧಿಕಾರಿ ಮತ್ತು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಂಥ ಉಪಬಂಧಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರವೇಶದಲ್ಲಿ ಅಂಥ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಙ) ಲಿಖಿತಕ್ಕೆ ಅನ್ವಯವಾಗುವಂತೆ "ಕ್ರಮಬದ್ಧವಾಗಿ ಸ್ಟಾಂಪು ಹಚ್ಚಲಾದ" ಎಂದರೆ ಲಿಖಿತವು ಸರಿಯಾದ ಮೊಬಲಗಿಗಿಂತ ಕಡಿಮೆ ಇಲ್ಲದ ಅಂಟಿಕೊಳ್ಳುವ ಅಥವಾ ಮುದ್ರೆ ಹಾಕಲಾದ ಸ್ಟಾಂಪು ಹೊಂದಿರುವುದು ಮತ್ತು ಅಂಥ ಸ್ಟಾಂಪನ್ನು ಕರ್ನಾಟಕ ರಾಜ್ಯದ ರಾಜ್ಯ ಕ್ಷೇತ್ರಗಳಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗನುಸಾರವಾಗಿ ಅಂಟಿಸಲಾಗಿರುವುದು ಅಥವಾ ಉಪಯೋಗಿಸಿರುವುದು;

(ಚ) ಲಿಖಿತಗಳಿಗೆ ಸಂಬಂಧಿಸಿದಂತೆ ಉಪಯೋಗಿಸುವ 'ಬರೆದುಕೊಟ್ಟದ್ದು' ಮತ್ತು 'ಬರೆದುಕೊಡುವಿಕೆ' ಎಂದರೆ 'ಸಹಿ ಮಾಡುವುದು' ಮತ್ತು 'ಸಹಿ' ;

(ಛ) 'ಸರ್ಕಾರಿ ಭದ್ರತೆ' ಎಂದರೆ ಸಾರ್ವಜನಿಕ ಋಣ ಅಧಿನಿಯಮ, 1944 (1944ರ ಕೇಂದ್ರಾಧಿನಿಯಮ ಸಂಖ್ಯೆ XVIII)ರಲ್ಲಿ ಪರಿಭಾಷಿಸಿದಂತೆ ಸರ್ಕಾರಿ ಭದ್ರತೆ;

(ಜ) 'ಮುದ್ರೆ ಹಾಕಲಾದ ಸ್ಟಾಂಪು', ಎಂಬುದು–

(i) ಸೂಕ್ತ ಅಧಿಕಾರಿಯಿಂದ ಅಂಟಿಸಲಾದ ಮತ್ತು ಛಾಪಿಸಲಾದ ಲೇಬಲ್‌ಗಳನ್ನು; ಮತ್ತು

(ii) ಛಾಪಾ ಕಾಗದದ ಮೇಲೆ ಉಬ್ಬಚ್ಚು ಮಾಡಲಾದ ಅಥವಾ ಕೊರೆಯಲಾದ ಸ್ಟಾಂಪುಗಳನ್ನೂ

– ಒಳಗೊಳ್ಳುತ್ತದೆ;

(ಝ) 'ಭಾರತ' ಎಂದರೆ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಭಾರತದ ರಾಜ್ಯಕ್ಷೇತ್ರ;

(ಇ) 'ಲಿಖಿತವು' ಯಾವ ದಸ್ತಾವೇಜಿನ ಮೂಲಕ ಯಾವುದೇ ಹಕ್ಕು ಅಥವಾ ಹೊಣೆಯನ್ನು ಸೃಷ್ಟಿಸಲಾಗುವುದೋ, ವರ್ಗಾಯಿಸಲಾಗುವುದೋ, ಪರಿಮಿತಗೊಳಿಸಲಾಗುವುದೋ, ವಿಸ್ತರಿಸಲಾಗುವುದೋ, ಅಂತ್ಯಗೊಳಿಸಲಾಗುವುದೋ ಅಥವಾ ದಾಖಲು ಮಾಡಲಾಗುವುದೋ ಅಥವಾ ಹಾಗೆ ಮಾಡುವುದೆಂದು ತಾತ್ಪರ್ಯವಾಗುವುದೋ ಅಂಥ ಪ್ರತಿಯೊಂದು ದಸ್ತಾವೇಜನ್ನು ಒಳಗೊಳ್ಳುತ್ತದೆ;

(ಟ) 'ವಿಭಜನೆಯ ಲಿಖಿತ' ಎಂದರೆ ಯಾವ ಲಿಖಿತದ ಮೂಲಕ ಯಾವುದೇ ಸ್ವತ್ತಿನ ಸಹಒಡೆಯರು ಅಂಥ ಸ್ವತ್ತನ್ನು ಪ್ರತ್ಯೇಕವಾಗಿ ವಿಭಜಿಸುವರೋ ಅಥವಾ ವಿಭಜಿಸಲು ಒಪ್ಪುವರೋ ಅಂಥ ಯಾವುದೇ ಲಿಖಿತ; ಮತ್ತು

(i) ವಿಭಜನೆಯನ್ನು ಕಾರ್ಯಗತಗೊಳಿಸಲು ಯಾವುದೇ ರೆವಿನ್ಯೂ ಪ್ರಾಧಿಕಾರ ಅಥವಾ ಯಾವುದೇ ಸಿವಿಲ್ ನ್ಯಾಯಾಲಯವು ಮಾಡಿದ ಅಂತಿಮ ಆದೇಶ,

(ii) ಮಧ್ಯಸ್ಥಗಾರನು ವಿಭಜನೆ ಮಾಡುವಂತೆ ನಿರ್ದೇಶಿಸಿದ ಐತೀರ್ಪು, ಮತ್ತು

(iii) ಅಂಥ ಯಾವುದೇ ಲಿಖಿತವನ್ನು ಬರೆದುಕೊಡದೆ ಯಾವುದೇ ವಿಭಜನೆಯನ್ನು ಕಾರ್ಯಗತಗೊಳಿಸಿದಾಗ, ಸಹ ಒಡೆಯರು ಸಹಿ ಮಾಡಿರುವ ಮತ್ತು ಅಂಥ ವಿಭಜನೆಯನ್ನು ಘೋಷಣೆಯ ರೂಪದಲ್ಲಾಗಲಿ ಅಥವಾ ಅನ್ಯಥಾ ಸಹ ಒಡೆಯರ ನಡುವೆ ಮಾಡಿಕೊಂಡ ಅಂಥ ವಿಭಜನೆಯ ನಿಬಂಧನೆಗಳನ್ನು ದಾಖಲು ಮಾಡಿರುವ ಯಾವುದೇ ಲಿಖಿತ ಅಥವಾ ಲಿಖಿತಗಳು

– ಇವುಗಳನ್ನು ಒಳಗೊಳ್ಳುತ್ತದೆ;

(ಠ) 'ಗೇಣಿ' ಎಂದರೆ ಸ್ಥಿರ ಸ್ವತ್ತಿನ ಗೇಣಿ, ಮತ್ತು ಇದು,–

(i) ಪಟ್ಟಾ;

(ii) ಸ್ಥಿರ ಸ್ವತ್ತನ್ನು ಸಾಗುವಳಿ ಮಾಡುವ, ಸ್ವಾಧೀನಪಡಿಸಿಕೊಳ್ಳುವ ಅಥವಾ ಅದಕ್ಕಾಗಿ ಬಾಡಿಗೆ ಸಂದಾಯ ಮಾಡುವ ಅಥವಾ ವಶಾವಣೆ ಮಾಡುವ ಬಗೆಗಿನ ಗೇಣಿ ಪತ್ರದ ದ್ವಿಪ್ರತಿಯಾಗಿಲ್ಲದ ಬರಹದಲ್ಲಿನ ಕಬೂಲಿಯಾತ್ ಅಥವಾ ಇತರ ವಚನಬಂಧ;

(iii) ಯಾವ ಲಿಖಿತದ ಮೂಲಕ ಯಾವುದೇ ಬಗೆಯ ಉಪಕರಣಗಳನ್ನು ಬಾಡಿಗೆಗೆ ಕೊಡಲಾಗಿದೆಯೋ ಆ ಯಾವುದೇ ಲಿಖಿತ;

(iV) ಗೇಣಿಗಾಗಿ ಹಾಕಿಕೊಂಡ ಅರ್ಜಿಯ ಮೇಲೆ ಆ ಅರ್ಜಿಯನ್ನು ಮಂಜೂರು ಮಾಡಲಾಗಿದೆ ಎಂದು ಸೂಚಿಸಲು ಉದ್ದೇಶಿಸಲಾದ ಬರಹ

– ಇವುಗಳನ್ನು ಸಹ ಒಳಗೊಳ್ಳುತ್ತದೆ;

(ಡ) 'ಮಾರಬಹುದಾದ ಭದ್ರತೆ' ಎಂದರೆ ಭಾರತದ ಯಾವುದೇ ಸ್ಟಾಕ್ ಮಾರುಕಟ್ಟೆಯಲ್ಲಿ ಮಾರುವುದಕ್ಕೆ ಸಾಧ್ಯವಾದಂಥ ರೀತಿಯ ಭದ್ರತೆ;

(ಢ) 'ಅಡಮಾನ ಪತ್ರವು' ಸಾಲದ ರೂಪದಲ್ಲಿ ಮುಂಗಡವಾಗಿ ಕೊಡಲಾದ ಅಥವಾ ಕೊಡಲಾಗುವ ಹಣವನ್ನು ಅಥವಾ ಅಸ್ತಿತ್ವದಲ್ಲಿ ಇರುವ ಅಥವಾ ಭಾವೀ ಋಣವನ್ನು ಭದ್ರತೆಗೊಳಿಸುವ ಅಥವಾ ವಚನಬಂಧದ ಪರಿಪಾಲನೆಯ ಉದ್ದೇಶಕ್ಕಾಗಿ ಯಾವ ಲಿಖಿತದ ಮೂಲಕ ಒಬ್ಬ ವ್ಯಕ್ತಿಯು ನಿರ್ದಿಷ್ಟಪಡಿಸಿದ ಸ್ವತ್ತಿನ ಬಗೆಗಿನ ಅಥವಾ ಅದಕ್ಕೆ ಸಂಬಂಧಿಸಿದ ಹಕ್ಕನ್ನು ಇನ್ನೊಬ್ಬನಿಗೆ ಅಥವಾ ಅವನ ಪರವಾಗಿ ವರ್ಗಾವಣೆ ಮಾಡುತ್ತಾನೋ ಅಥವಾ ಸೃಜಿಸುತ್ತಾನೋ ಅಂಥ ಪ್ರತಿಯೊಂದು ಲಿಖಿತವನ್ನು ಒಳಗೊಳ್ಳುತ್ತದೆ;

(ಣ) 'ಕಾಗದ'ವು ಯಾವುದರ ಮೇಲೆ ಲಿಖಿತವನ್ನು ಬರೆಯಬಹುದೋ ಅಂಥ ಚರ್ಮದ ಕಾಗದ, ಪಾರ್ಚ್‌ಮೆಂಟ್ ಕಾಗದ ಅಥವಾ ಇತರ ಯಾವುದೇ ಸಾಮಗ್ರಿಯನ್ನು ಒಳಗೊಳ್ಳುತ್ತದೆ;

(ತ) 'ಮುಖ್ತ್ಯಾರನಾಮೆ'ಯು ಅದನ್ನು ಬರೆದುಕೊಡುವ ವ್ಯಕ್ತಿಯ ಸಲುವಾಗಿ ಮತ್ತು ಅವನ ಹೆಸರಿನಲ್ಲಿ ಕಾರ್ಯನಿರ್ವಹಿಸಲು ನಿರ್ದಿಷ್ಟಪಡಿಸಿದ ಒಬ್ಬ ವ್ಯಕ್ತಿಯನ್ನು ಶಕ್ತಗೊಳಿಸುವ (ತತ್ಕಾಲದಲ್ಲಿ ಜಾರಿಯಲ್ಲಿರುವ ನ್ಯಾಯಾಲಯದ ಫೀಜಿಗೆ ಸಂಬಂಧಿಸಿದ ಕಾನೂನಿನ ಮೇರಗೆ ಫೀಜನ್ನು ವಿಧಿಸಲು ಬಾರದ) ಯಾವುದೇ ಲಿಖಿತವನ್ನು ಒಳಗೊಳ್ಳುತ್ತದೆ;

(ಥ) 'ವ್ಯವಸ್ಥಾಪನಾ ಪತ್ರ' ಎಂದರೆ.–

(i) ವಿವಾಹದ ಪ್ರತಿಫಲವಾಗಿ,

(ii) ವ್ಯವಸ್ಥಾಪಕನ ಸ್ವತ್ತನ್ನು ಅವನ ಕುಟುಂಬದೊಳಗೆ ಅಥವಾ ಅವನು ಒದಗಿಸಬೇಕೆಂದು ಇಚ್ಛಿಸುವಂಥವರಿಗೆ ವಿತರಣೆ ಮಾಡುವ ಉದ್ದೇಶಕ್ಕಾಗಿ ಅಥವಾ ತನ್ನ ಮೇಲೆ ಅವಲಂಬಿತನಾದ ಯಾವನೇ ವ್ಯಕ್ತಿಗಾಗಿ ಒದಗಿಸುವ ಉದ್ದೇಶಕ್ಕಾಗಿ, ಅಥವಾ

(iii) ಯಾವುದೇ ಧಾರ್ಮಿಕ ಅಥವಾ ಧರ್ಮಾರ್ಥದ ಉದ್ದೇಶಕ್ಕಾಗಿ

– ಬರಹದಲ್ಲಿ ಮಾಡಲಾಗಿರುವ ಚರ ಅಥವಾ ಸ್ಥಿರ ಸ್ವತ್ತಿನ ಯಾವುದೇ ಮರಣ ಶಾಸನೇತರ ವಿಲೇವಾರಿ ಮತ್ತು ಇದು, ಅಂಥ ವಿಲೇವಾರಿಯನ್ನು ಮಾಡಲು ಲಿಖಿತದಲ್ಲಿ ಮಾಡಿಕೊಂಡ ಒಪ್ಪಂದ ಮತ್ತು ಅಂಥ ವಿಲೇವಾರಿಯನ್ನು ಬರಹದಲ್ಲಿ ಮಾಡಿಲ್ಲದಿರುವಲ್ಲಿ, ಘೋಷಣೆಯ ರೂಪದಲ್ಲಾಗಲಿ, ನ್ಯಾಸದ ರೂಪದಲ್ಲಾಗಲಿ ಅಥವಾ ಅನ್ಯಥಾ ಯಾವುದೇ ಅಂಥ ವಿಲೇವಾರಿಯ ನಿಬಂಧನೆಗಳನ್ನು ದಾಖಲು ಮಾಡುವ ಯಾವುದೇ ಲಿಖಿತವನ್ನು ಒಳಗೊಳ್ಳುತ್ತದೆ.

(2) ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ನ್ನು ಕರ್ನಾಟಕ ಅಧಿನಿಯಮದ ಅರ್ಥವಿವರಣೆಗಾಗಿ ಅನ್ವಯಿಸುವಂತೆ ಈ ಅಧಿನಿಯಮದ ಅರ್ಥ ವಿವರಣೆಗೂ ಅನ್ವಯಿಸತಕ್ಕದ್ದು.

## ಅಧ್ಯಾಯ–II
## ಸ್ಟಾಂಪು ಸುಂಕಗಳು
## ಕ. ಲಿಖಿತಗಳು ಸುಂಕಕ್ಕೆ ಹೊಣೆಯಾಗಿರುವುದರ ಬಗ್ಗೆ

**3. ಸುಂಕ ವಿಧಿಸಲಾಗುವ ಲಿಖಿತಗಳು:–** ಈ ಅಧಿನಿಯಮದ ಉಪಬಂಧಗಳು ಮತ್ತು ಅನುಸೂಚಿಯಲ್ಲಿ ಅಡಕವಾದ ವಿನಾಯಿತಿಗಳಿಗೊಳಪಟ್ಟು, ಈ ಕೆಳಕಂಡ ಲಿಖಿತಗಳ ಮೇಲೆ ಆ ಅನುಸೂಚಿಯಲ್ಲಿ ಅನುಕ್ರಮವಾಗಿ ಅವುಗಳಿಗಾಗಿ ಸೂಕ್ತ ಸುಂಕವೆಂದು ಸೂಚಿಸಿದಷ್ಟು ಮೊಬಲಗಿನ ಸುಂಕವನ್ನು ವಿಧಿಸತಕ್ಕದ್ದು, ಎಂದರೆ:–

(ಕ) ಆ ಅನುಸೂಚಿಯಲ್ಲಿ ನಮೂದಿಸಲಾಗಿದ್ದು, ಈ ಹಿಂದೆ ಯಾವನೇ ವ್ಯಕ್ತಿಯು ಬರೆದುಕೊಟ್ಟಿರುವ ಯಾವ ಲಿಖಿತವನ್ನು ಈ ಅಧಿನಿಯಮದ ಪ್ರಾರಂಭದಂದು ಅಥವಾ ಆ ತರುವಾಯ ಕರ್ನಾಟಕ ರಾಜ್ಯದ ರಾಜ್ಯ ಕ್ಷೇತ್ರಗಳಲ್ಲಿ ಬರೆದುಕೊಡಲಾಗುವುದೋ ಅಂಥ ಪ್ರತಿಯೊಂದು ಲಿಖಿತ; ಮತ್ತು

(ಖ) ಆ ಅನುಸೂಚಿಯಲ್ಲಿ ನಮೂದಿಸಲಾದ, ಈ ಹಿಂದೆ ಯಾವನೇ ವ್ಯಕ್ತಿಯು ಬರೆದುಕೊಟ್ಟಿರುವ ಯಾವ ಲಿಖಿತವನ್ನು ಕರ್ನಾಟಕ ರಾಜ್ಯದ ಹೊರಗೆ ಆ ದಿವಸದಂದು ಅಥವಾ ಆ ತರುವಾಯ ಬರೆದುಕೊಡಲಾಗುವುದೋ, ಯಾವುದು ಕರ್ನಾಟಕ ರಾಜ್ಯದ ಕ್ಷೇತ್ರಗಳಲ್ಲಿ ಇರುವ ಯಾವುದೇ ಸ್ವತ್ತಿಗೆ ಅಥವಾ ಮಾಡಿದ ಅಥವಾ ಮಾಡಬೇಕಾದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಿರುತ್ತದೋ ಮತ್ತು ಯಾವುದನ್ನು ಕರ್ನಾಟಕ ರಾಜ್ಯದ ರಾಜ್ಯ ಕ್ಷೇತ್ರಗಳಲ್ಲಿ ಸ್ವೀಕರಿಸಲಾಗುವುದೋ ಅಂಥ ಪ್ರತಿಯೊಂದು ಲಿಖಿತ;

ಪರಂತು,–

(1) ಈ ವಿನಾಯಿತಿ ಇಲ್ಲದಿದ್ದಲ್ಲಿ, ರಾಜ್ಯ ಸರ್ಕಾರವು ಅಂಥ ಲಿಖಿತದ ಸಂಬಂಧದಲ್ಲಿ ವಿಧಿಸಬಹುದಾದ ಸುಂಕವನ್ನು ಸಂದಾಯ ಮಾಡಲು ಹೊಣೆಯಾಗಬಹುದಾದಂಥ ಸಂದರ್ಭಗಳಲ್ಲಿ ರಾಜ್ಯ ಸರ್ಕಾರದಿಂದ ಅಥವಾ ಅದರ ಪರವಾಗಿ ಅಥವಾ ಅದರ ಹೆಸರಿನಲ್ಲಿ ಬರೆದುಕೊಟ್ಟ ಯಾವುದೇ ಲಿಖಿತ

(2) ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1958ರ ಮೇರೆಗೆ ನೋಂದಾಯಿಸಲಾದ ಯಾವುದೇ ಹಡಗು ಅಥವಾ ನೌಕೆಯನ್ನು ಅಥವಾ ಯಾವುದೇ ನೌಕೆಯ ಅಥವಾ ಅದರಲ್ಲಿನ ಯಾವುದೇ ಭಾಗ, ಹಿತಾಸಕ್ತಿ, ಷೇರು ಅಥವಾ ಸ್ವತ್ತನ್ನು ನಿರುಪಾಧಿಕವಾಗಿಯೇ ಆಗಲಿ ಅಥವಾ ಅಡಮಾನದ ರೂಪದಲ್ಲಾಗಲಿ ಅಥವಾ ಅನ್ಯಥಾ ಮಾರಾಟ ಮಾಡುವುದಕ್ಕೆ, ವರ್ಗಾವಣೆ ಮಾಡುವುದಕ್ಕೆ ಅಥವಾ ಇತರ ರೀತಿಯಲ್ಲಿ ವಿಲೇ ಮಾಡುವುದಕ್ಕೆ

– ಇವುಗಳಿಗೆ ಸಂಬಂಧಪಟ್ಟಂತೆ ಯಾವುದೇ ಸುಂಕವನ್ನು ವಿಧಿಸತಕ್ಕದ್ದಲ್ಲ.

**3ಕ. ಐದು ಪೈಸೆಯ ಗುಣಕಗಳಲ್ಲಿ ಸುಂಕಕ್ಕೆ ಹೊಣೆಯಾಗಿರುವ ಲಿಖಿತಗಳು:–** 3ನೇ ಪ್ರಕರಣ ಮತ್ತು ಅನುಸೂಚಿ ಅಥವಾ 9ನೇ ಪ್ರಕರಣದ ಮೇರೆಗೆ ಪ್ರಕಟಿಸಿದ ಯಾವುದೇ ನಿಯಮ ಅಥವಾ ಆದೇಶದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸರಿಯಾದ ಸುಂಕವನ್ನು ಐದು ಪೈಸೆಯ ಗುಣಕದಲ್ಲಿ ಲೆಕ್ಕ ಹಾಕತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು:

ಪರಂತು, ಸರಿಯಾದ ಸುಂಕವನ್ನು ನಿರ್ಧರಿಸುವುದಕ್ಕಾಗಿ ದರವನ್ನು ನಿರ್ದಿಷ್ಟಪಡಿಸಿರುವಲ್ಲಿ, ಯಾವುದೇ ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸುಂಕದ ಒಟ್ಟು ಮೊಬಲಗನ್ನು ಅಂಥ ದರಕ್ಕೆ ಅನುಸಾರವಾಗಿ ಲೆಕ್ಕ ಹಾಕತಕ್ಕದ್ದು; ಮತ್ತು ಹಾಗೆ ಲೆಕ್ಕ ಹಾಕಲಾದ ಒಟ್ಟು ಮೊಬಲಗು ಐದು ಪೈಸೆಯ ಯಾವುದೇ ಗುಣಕದ ಜೊತೆಗೆ ಐದು ಪೈಸೆಯ ಒಂದು ಅಂಶವನ್ನು ಒಳಗೊಂಡಿರುವಲ್ಲಿ ಅಂಥ ಅಂಶವನ್ನು ಐದು ಪೈಸೆ ಎಂಬುದಾಗಿ ಭಾವಿಸತಕ್ಕುದು ಮತ್ತು ಆ ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸುಂಕದ ಒಟ್ಟು ಮೊಬಲಗನ್ನು ತದನುಸಾರವಾಗಿ ನಿರ್ಧರಿಸತಕ್ಕದ್ದು.

3ಖ. ****

**4. ಮಾರಾಟ, ಅಡಮಾನ ಅಥವಾ ವ್ಯವಸ್ಥೆಯ ಏಕ ವ್ಯವಹಾರದಲ್ಲಿ ಉಪಯೋಗಿಸಿದ ಹಲವಾರು ಲಿಖಿತಗಳು:–**

(1) ಯಾವುದೇ ಮಾರಾಟ, ಅಡಮಾನ ಅಥವಾ ವ್ಯವಸ್ಥೆಯ ಸಂದರ್ಭದಲ್ಲಿ, ಆ ವ್ಯವಹಾರವನ್ನು ಪೂರ್ಣಗೊಳಿಸುವುದಕ್ಕಾಗಿ ಹಲವಾರು ಲಿಖಿತಗಳನ್ನು ಬಳಸಿರುವಲ್ಲಿ, ಪ್ರಧಾನ ಲಿಖಿತದ ಮೇಲೆ ಮಾತ್ರವೇ ಹಸ್ತಾಂತರಣ ಅಡಮಾನ ಅಥವಾ ವ್ಯವಸ್ಥೆಗಾಗಿ ಅನುಸೂಚಿಯಲ್ಲಿ ನಿಯಮಿಸಿದ ಸುಂಕವನ್ನು ವಿಧಿಸತಕ್ಕದ್ದು ಮತ್ತು ಇತರ ಪ್ರತಿಯೊಂದು ಲಿಖಿತದ ಮೇಲೆ ಅನುಸೂಚಿಯಲ್ಲಿ ಅದಕ್ಕಾಗಿ ನಿಯಮಿಸಿದ ಸುಂಕ ಯಾವುದಾದರೂ ಇದ್ದರೆ ಅದಕ್ಕೆ ಬದಲಾಗಿ ಮೂರು ರೂಪಾಯಿಗಳ ಸುಂಕವನ್ನು ವಿಧಿಸತಕ್ಕದ್ದು.

(2) ಪಕ್ಷಕಾರರು ಹಾಗೆ ಬಳಸಿಕೊಂಡಂಥ ಲಿಖಿತಗಳಲ್ಲಿ ಯಾವುದನ್ನು (1)ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ ಪ್ರಧಾನ ಲಿಖಿತವೆಂದು ಭಾವಿಸತಕ್ಕದ್ದೆಂಬುದನ್ನು ತಮ್ಮಲ್ಲೇ ನಿರ್ಧರಿಸಬಹುದು;

ಪರಂತು, ಹಾಗೆ ನಿರ್ಧರಿಸಿದ ಲಿಖಿತದ ಮೇಲೆ ವಿಧಿಸಬಹುದಾದ ಸುಂಕವು ಹಾಗೆ ಬಳಸಿಕೊಂಡಿರುವ ಸದರಿ ಲಿಖಿತದಲ್ಲಿ ಯಾವುದೋ ಒಂದಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದಂಥ ಅತ್ಯಧಿಕ ಸುಂಕವಾಗಿರತಕ್ಕದ್ದು.

**5. ಹಲವಾರು ವಿಭಿನ್ನ ವಿಷಯಗಳಿಗೆ ಸಂಬಂಧಪಟ್ಟ ಲಿಖಿತಗಳು:–** ಹಲವಾರು ವಿಭಿನ್ನ ವಿಷಯಗಳನ್ನು ಒಳಗೊಂಡಿರುವ ಅಥವಾ ಅವುಗಳಿಗೆ ಸಂಬಂಧಪಟ್ಟ ಯಾವುದೇ ಲಿಖಿತದ ಮೇಲೆ ಅಂಥ ವಿಷಯದ ಪೈಕಿ ಒಂದನ್ನು ಒಳಗೊಂಡ ಅಥವಾ ಒಂದಕ್ಕೆ ಸಂಬಂಧಪಟ್ಟ ಲಿಖಿತಗಳ ಮೇಲೆ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಸುಂಕಗಳ ಒಟ್ಟು ಮೊಬಲಗನ್ನು ವಿಧಿಸತಕ್ಕದ್ದು.

**6. ಅನುಸೂಚಿಯಲ್ಲಿನ ಹಲವಾರು ವಿವರಣೆಗಳೊಳಗೆ ಬರುವ ಲಿಖಿತಗಳು:–** ನಿಕಟ ಪೂರ್ವದ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅನುಸೂಚಿಯಲ್ಲಿ ಎರಡು ಅಥವಾ ಹೆಚ್ಚಿನ ವಿವರಣೆಗಳೊಳಗೆ ಬರುವ ಹಾಗೆ ರೂಪಿಸಲಾದ ಲಿಖಿತದ ಮೇಲೆ, ಅದರ ಮೇಲೆ ವಿಧಿಸಬಹುದಾದ ಸುಂಕಗಳು ಬೇರೆ ಬೇರೆಯಾಗಿರುವಲ್ಲಿ, ಅಂಥ ಸುಂಕಗಳ ಪೈಕಿ ಅತಿ ಹೆಚ್ಚಿನದನ್ನು ಮಾತ್ರ ವಿಧಿಸತಕ್ಕದ್ದು:

ಪರಂತು, ಈ ಅಧಿನಿಯಮದಲ್ಲಿ ಅಡಕವಾಗಿರುವುದು ಯಾವುದೂ, ಯಾವ ಲಿಖಿತದ ಮೇಲೆ ಸುಂಕವನ್ನು ವಿಧಿಸಬಹುದೋ ಮತ್ತು ಯಾವುದಕ್ಕೆ ಸಂಬಂಧಿಸಿದಂತೆ ಸರಿಯಾದ ಸುಂಕವನ್ನು ಸಂದಾಯ ಮಾಡಲಾಗಿದೆಯೋ ಆ ಯಾವುದೇ ಲಿಖಿತದ ದ್ವಿಪ್ರತಿಯ ಅಥವಾ ನಕಲಿಯ ಮೇಲೆ ನಾಲ್ಕು ರೂ.ಗಳು ಮತ್ತು ಐವತ್ತು ಪೈಸೆಗಳನ್ನು ಮೀರಿದ ಸುಂಕವನ್ನು ವಿಧಿಸುವಂತೆ ಮಾಡತಕ್ಕದ್ದಲ್ಲ.

**7. ಕೆಲವು ಲಿಖಿತಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಸುಂಕದ ಸಂದಾಯ:–** (1) 4 ಅಥವಾ 6ನೇ ಪ್ರಕರಣಗಳಲ್ಲಿ ಅಥವಾ ಇತರ ಯಾವುದೇ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕವನ್ನು,–

(ಕ) ಸಂದರ್ಭಾನುಸಾರ ಪ್ರಧಾನ ಅಥವಾ ಮೂಲ ಲಿಖಿತದ ಮೇಲೆ; ಅಥವಾ

(ಖ) ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ

– ಸಂದಾಯ ಮಾಡಲಾಗಿದೆ ಎಂದು ರುಜುವಾತುಪಡಿಸಿದ ಹೊರತು, ಪ್ರಧಾನ ಲಿಖಿತವನ್ನು ಹೊರತುಪಡಿಸಿ, ಮಾರಾಟ, ಅಡಮಾನ ಅಥವಾ ವ್ಯವಸ್ಥೆಯ ಲಿಖಿತದ ಮೇಲೆ ಅಥವಾ ಯಾವುದೇ ಲಿಖಿತದ ದ್ವಿಪ್ರತಿ, ನಕಲು ಅಥವಾ ಪ್ರತಿಯ ಮೇಲೆ ವಿಧಿಸಬಹುದಾದ ಸುಂಕವು, ಪ್ರಧಾನ ಅಥವಾ ಮೂಲ ಲಿಖಿತವನ್ನು ರಾಜ್ಯದಲ್ಲಿ ಸ್ವೀಕರಿಸಿದಾಗ, ಈ ಅಧಿನಿಯಮದ ಮೇರೆಗೆ ಸುಂಕವನ್ನು ಹೆಚ್ಚಿನ ದರದಲ್ಲಿ ವಿಧಿಸಬಹುದಾಗಿದ್ದರೆ, 19ನೇ ಪ್ರಕರಣದ ಮೇರೆಗೆ ಪ್ರಧಾನ ಅಥವಾ ಮೂಲ ಲಿಖಿತದ ಮೇಲೆ ವಿಧಿಸಬಹುದಾಗಿದ್ದಂಥ ಸುಂಕವಾಗಿರತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತ, ದ್ವಿಪ್ರತಿ, ನಕಲು ಅಥವಾ ಪ್ರತಿಯನ್ನು ಈ ಪ್ರಕರಣದ ಮೇರೆಗೆ ಅದರ ಮೇಲೆ ವಿಧಿಸಬಹುದಾದ ಸುಂಕವನ್ನು ಸಂದಾಯ ಮಾಡಿದ ಹೊರತು ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದಲ್ಲ:

ಪರಂತು, ಅಂಥ ಯಾವುದೇ ಲಿಖಿತ, ನಕಲು ಅಥವಾ ಪ್ರತಿಯನ್ನು ಯಾವ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆಯೋ ಆ ಯಾವುದೇ ನ್ಯಾಯಾಲಯವು, ಈ ಪ್ರಕರಣದ ಮೇರೆಗೆ ವಿಧಿಸಬಹುದಾದ ಸುಂಕವನ್ನು ಅದರ ಮೇಲೆ ಸಂದಾಯ ಮಾಡಲು ಅನುಮತಿಸಬಹುದು ಮತ್ತು ಆ ತರುವಾಯ ಅದನ್ನು ಸಾಕ್ಷ್ಯವಾಗಿ ಸ್ವೀಕರಿಸಬಹುದು.

**8. ಸಾಲಗಳ ಬಗ್ಗೆ ಹೊರಡಿಸಿದ ಬಂಧಪತ್ರಗಳು ಅಥವಾ ಇತರ ಭದ್ರತಾ ಪತ್ರಗಳು:–** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಬಂಧಪತ್ರಗಳು ಅಥವಾ ಇತರ ಭದ್ರತಾ ಪತ್ರಗಳನ್ನು ಹೊರಡಿಸುವ ಮೂಲಕ

ಸಾಲವನ್ನು ಎತ್ತುವ ಯಾವುದೇ ಸ್ಥಳೀಯ ಪ್ರಾಧಿಕಾರದ ಮೇಲೆ, ಅಂಥ ಸಾಲಕ್ಕೆ ಸಂಬಂಧಿಸಿದಂತೆ ಅದು ಹೊರಡಿಸಿದ ಬಂಧಪತ್ರಗಳು ಅಥವಾ ಇತರ ಭದ್ರತಾ ಪತ್ರಗಳ ಒಟ್ಟು ಮೊಬಲಗಿನ ಮೇಲೆ ಶೇಕಡಾ ಒಂದರಷ್ಟು ಸುಂಕವನ್ನು ವಿಧಿಸತಕ್ಕದ್ದು ಮತ್ತು ಅಂಥ ಬಂಧಪತ್ರಗಳಿಗೆ ಅಥವಾ ಇತರ ಭದ್ರತಾಪತ್ರಗಳಿಗೆ ಸ್ಟಾಂಪನ್ನು ಹಚ್ಚಬೇಕಾಗಿಲ್ಲ ಮತ್ತು ಅವುಗಳನ್ನು ನವೀಕರಿಸಿದಾಗ, ಕ್ರೋಢೀಕರಿಸಿದಾಗ, ಉಪವಿಭಾಜಿಸಿದಾಗ ಅಥವಾ ಅನ್ಯಥಾ ಮಾಡಿದಾಗ ಯಾವುದೇ ಹೆಚ್ಚಿನ ಸುಂಕವನ್ನು ಅದರ ಮೇಲೆ ವಿಧಿಸತಕ್ಕದ್ದಲ್ಲ.

(2) ಸ್ಟಾಂಪು ಹಚ್ಚುವುದರಿಂದ ಮತ್ತು ಕೆಲವು ಹೆಚ್ಚಿನ ಸುಂಕವನ್ನು ವಿಧಿಸುವುದರಿಂದ ಕೆಲವು ಬಂಧಪತ್ರಗಳು ಅಥವಾ ಇತರ ಭದ್ರತಾ ಪತ್ರಗಳನ್ನು ವಿನಾಯಿತಿಗೊಳಿಸುವ (1)ನೇ ಉಪ–ಪ್ರಕರಣದ ಉಪಬಂಧಗಳು, ಅವುಗಳಲ್ಲಿ ನಮೂದಿಸಿದ ಬಗೆಯ ಬಾಕಿ ನಿಂತಿರುವ ಎಲ್ಲಾ ಸಾಲಗಳ ಬಂಧ ಪತ್ರಗಳು ಅಥವಾ ಇತರ ಭದ್ರತಾ ಪತ್ರಗಳಿಗೆ ಅನ್ವಯವಾಗತಕ್ಕದ್ದು ಮತ್ತು ಎಲ್ಲಾ ಅಂಥ ಬಂಧಪತ್ರಗಳು ಅಥವಾ ಇತರ ಭದ್ರತಾ ಪತ್ರಗಳು, ಅವುಗಳಿಗೆ ಸ್ಟಾಂಪು ಹಚ್ಚಿರಲು ಅಥವಾ ಹಚ್ಚಿಲ್ಲದಿರಲಿ ಸಿಂಧುವಾಗಿರತಕ್ಕದ್ದು.

(3) ಈ ಪ್ರಕರಣದ ಮೂಲಕ ಅಗತ್ಯಪಡಿಸಿದ ಸುಂಕವನ್ನು ಸಂದಾಯ ಮಾಡಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದ ಸಂದರ್ಭದಲ್ಲಿ, ಸಂದಾಯ ಮಾಡಬೇಕಾದ ಸುಂಕದ ಮೊಬಲಗಿನ ಮೇಲೆ ಶೇಕಡಾ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು ಮತ್ತು ಮೊದಲನೇ ತಿಂಗಳಿನ ತರುವಾಯ ನಿರ್ಲಕ್ಷ್ಯತೆಯು ಮುಂದುವರಿಯುವಂಥ ಅವಧಿಯ ಪ್ರತಿಯೊಂದು ತಿಂಗಳಿಗಾಗಿ ಅಂಥದೇ ರೀತಿಯ ದಂಡವನ್ನು ಸ್ಥಳೀಯ ಪ್ರಾಧಿಕಾರವು ಸರ್ಕಾರಕ್ಕೆ ಬಿಟ್ಟುಕೊಡಲು ಹೊಣೆಯಾಗಿರತಕ್ಕದ್ದು.

**9. ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿ ಮಾಡಿಕೊಳ್ಳಲು ಅಧಿಕಾರ:–**

(1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ನಿಯಮ ಅಥವಾ ಆದೇಶದ ಮೂಲಕ,–

(ಕ) ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಕರ್ನಾಟಕ ರಾಜ್ಯದಾದ್ಯಂತ ಅಥವಾ ಅದರ ಯಾವುದೇ ಭಾಗದಲ್ಲಿ ಲಿಖಿತಗಳ ಅಥವಾ ಅಂಥ ವರ್ಗಕ್ಕೆ ಸೇರಿದ ಯಾವುದೇ ಲಿಖಿತ ಅಥವಾ ವ್ಯಕ್ತಿಗಳ ಯಾವುದೇ ವಿಶಿಷ್ಟ ವರ್ಗದಿಂದ ಅಥವಾ ಅದರ ಪರವಾಗಿ ಅಥವಾ ಅಂಥ ವರ್ಗದ ಯಾರೇ ಸದಸ್ಯರಿಂದ ಅಥವಾ ಅವರ ಪರವಾಗಿ ಬರೆದುಕೊಟ್ಟಾಗ ಯಾವುದೇ ಲಿಖಿತಗಳಿಗೆ ವಿಧಿಸಬಹುದಾದಂಥ ಸುಂಕಗಳನ್ನು ಉತ್ತರಾನ್ವಯವಾಗಿಯೇ ಆಗಲಿ ಅಥವಾ ಪೂರ್ವಾನ್ವಯವಾಗಿ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು; ಮತ್ತು

(ಖ) ಯಾವುದೇ ನಿಗಮಿತ ಕಂಪನಿ ಅಥವಾ ಇತರ ನಿಗಮಿತ ನಿಕಾಯವು ಹೊರಡಿಸಿದ ಬಂಧಪತ್ರಗಳು ಅಥವಾ ಇತರ ಮಾರಾಟ ಮಾಡಬಹುದಾದ ಭದ್ರತಾಪತ್ರಗಳ ಸಂದರ್ಭದಲ್ಲಿ, ಸುಂಕಗಳ ಬಗ್ಗೆ ರಾಜಿ ಮಾಡಿಕೊಳ್ಳಲು ಅಥವಾ ಕ್ರೋಢೀಕರಣಕ್ಕಾಗಿ ವ್ಯವಸ್ಥೆ ಮಾಡಬಹುದು.

(2) (1)ನೇ ಉಪಕರಣದ (ಕ) ಖಂಡದ ಮೇರೆಗೆ ಪ್ರಕಟಿಸಿದ ಪ್ರತಿಯೊಂದು ನಿಯಮ ಅಥವಾ ಆದೇಶವನ್ನು ಅದನ್ನು ಪ್ರಕಟಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಆದೇಶವನ್ನು ಮಾಡಕೂಡದೆಂದು ಎರಡೂ

ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಆದೇಶವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

## ಖ. ಸ್ಟಾಂಪುಗಳು ಮತ್ತು ಅವುಗಳನ್ನು ಉಪಯೋಗಿಸುವ ವಿಧಾನದ ಬಗ್ಗೆ

**10. ಸುಂಕಗಳನ್ನು ಹೇಗೆ ಸಂದಾಯ ಮಾಡತಕ್ಕದ್ದು:–** (1) ಈ ಅಧಿನಿಯಮದಲ್ಲಿ ವ್ಯಕ್ತವಾಗಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಯಾವುವೇ ಲಿಖಿತಗಳ ಮೇಲೆ ವಿಧಿಸಬಹುದಾದ ಎಲ್ಲಾ ಸುಂಕಗಳನ್ನು ಸಂದಾಯ ಮಾಡತಕ್ಕುದು ಮತ್ತು ಅಂಥ ಸಂದಾಯವನ್ನು ಅಂಥ ಲಿಖಿತಗಳ ಮೇಲೆ ಸ್ಟಾಂಪುಗಳ ಮೂಲಕ,

(ಕ) ಇಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಅನುಸಾರವಾಗಿ; ಅಥವಾ

(ಖ) ಅದಕ್ಕೆ ಅಂಥ ಉಪಬಂಧವು ಅನ್ವಯವಾಗದಿರುವಾಗ ಸರ್ಕಾರವು ನಿಯಮದ ಮೂಲಕ ನಿರ್ದೇಶಿಸಬಹುದಾದಂತೆ

– ಸೂಚಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳು, ಇತರ ವಿಷಯಗಳೊಂದಿಗೆ,–

(ಕ) ಪ್ರತಿಯೊಂದು ಬಗೆಯ ಲಿಖಿತದ ಸಂದರ್ಭದಲ್ಲಿ ಉಪಯೋಗಿಸಬಹುದಾದಂಥ ಸ್ಟಾಂಪುಗಳ ವಿವರಣೆಯನ್ನು;

(ಖ) ಮುದ್ರೆ ಹಾಕಲಾದ ಸ್ಟಾಂಪುಗಳಿಂದ ಸ್ಟಾಂಪು ಹಾಕಲಾದ ಲಿಖಿತಗಳ ಸಂದರ್ಭದಲ್ಲಿ ಉಪಯೋಗಿಸಬಹುದಾದಂಥ ಸ್ಟಾಂಪುಗಳ ಸಂಖ್ಯೆಯನ್ನು ವಿನಿಯಮಿಸಬಹುದು.

**11. ಅಂಟಿಕೊಳ್ಳುವ ಸ್ಟಾಂಪುಗಳ ಉಪಯೋಗ:–** ಈ ಕೆಳಕಂಡ ಲಿಖಿತಗಳಿಗೆ ಅಂಟಿಸುವ ಸ್ಟಾಂಪುಗಳಿಂದ ಸ್ಟಾಂಪು ಹಾಕಬಹುದು, ಎಂದರೆ:–

(ಕ) ಐವತ್ತು ಪೈಸೆಗಳನ್ನು ಮೀರದ ಸುಂಕವನ್ನು ವಿಧಿಸಬಹುದಾದ ಲಿಖಿತಗಳು;

(ಖ) ರಾಜ್ಯ ಬಾರ್ ಕೌನ್ಸಿಲು ಇಟ್ಟಿರುವ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಕೆಯ ಪ್ರಮಾಣ ಪತ್ರ;

(ಗ) ನೋಟರಿಯ ಕಾರ್ಯಗಳು;

(ಘ) ಅನುಸೂಚಿಯ 51ನೇ ಅನುಚ್ಛೇದದಲ್ಲಿ ನಮೂದಿಸಿರುವ ಲಿಖಿತಗಳು;

(ಙ) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸುಂಕದ ಮೊಬಲಗನ್ನು ವಿಧಿಸಬಹುದಾದ ಲಿಖಿತಗಳು.

**12. ಅಂಟಿಕೊಳ್ಳುವ ಸ್ಟಾಂಪುಗಳ ರದ್ದಿಯಾತಿ:–** (1) (ಕ) ಯಾವನೇ ವ್ಯಕ್ತಿಯು ಬರೆದುಕೊಟ್ಟಿರುವಂಥ ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತಕ್ಕೆ, ಯಾವುದೇ ಅಂಟಿಕೊಳ್ಳುವ ಸ್ಟಾಂಪನ್ನು ಅಂಟಿಸುವ ಯಾವನೇ ವ್ಯಕ್ತಿಯು, ಅಂಥ ಸ್ಟಾಂಪನ್ನು ಅಂಟಿಸುವಾಗ ಅದನ್ನು ಪುನಃ ಉಪಯೋಗಿಸಲು ಬಾರದಂತೆ ರದ್ದುಪಡಿಸತಕ್ಕದ್ದು; ಮತ್ತು

(ಖ) ಅಂಟಿಕೊಳ್ಳುವ ಸ್ಟಾಂಪನ್ನು ಹೊಂದಿರುವ ಯಾವುದೇ ಕಾಗದದ ಮೇಲೆ ಯಾವುದೇ ಲಿಖಿತವನ್ನು ಬರೆದುಕೊಡುವ ಯಾವನೇ ವ್ಯಕ್ತಿಯು ಬರೆದುಕೊಡುವ ಕಾಲದಲ್ಲಿ, ಹಿಂದೆ ಹೇಳಿದ ರೀತಿಯಲ್ಲಿ ಅಂಥ ಸ್ಟಾಂಪನ್ನು ಈಗಾಗೇ ರದ್ದುಪಡಿಸಿದ್ದ ಹೊರತು, ಅದನ್ನು ಪುನಃ ಉಪಯೋಗಿಸಲು ಬಾರದಂತೆ ರದ್ದುಪಡಿಸತಕ್ಕದ್ದು.

(2) ಅದನ್ನು ಪುನಃ ಉಪಯೋಗಿಸಲು ಬಾರದಂತೆ ರದ್ದುಪಡಿಸಿದಂಥ ಅಂಟಿಕೊಳ್ಳುವ ಸ್ಟಾಂಪನ್ನು ಹೊಂದಿರುವ ಯಾವುದೇ ಲಿಖಿತವನ್ನು ಅಂಥ ಸ್ಟಾಂಪಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಸ್ಟಾಂಪು ಹಾಕಿಲ್ಲವೆಂಬುದಾಗಿ ಭಾವಿಸತಕ್ಕದ್ದು.

(3) ಅಂಟಿಕೊಳ್ಳುವ ಸ್ಟಾಂಪನ್ನು ರದ್ದುಪಡಿಸಲು (1)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಿದ ವ್ಯಕ್ತಿಯು, ಸ್ಟಾಂಪಿನ ಮೇಲೆ ಅಥವಾ ಅದಕ್ಕೆ ಅಡ್ಡಲಾಗಿ ಅವನ ಹೆಸರು ಅಥವಾ ಸಂಕ್ಷಿಪ್ತ ಸಹಿ ಅಥವಾ ಅವನ ಫರ್ಮಿನ ಹೆಸರು ಅಥವಾ ಅಧ್ಯಕ್ಷರುಗಳನ್ನು ಅವನು ಹಾಗೆ ಬರೆಯುವ ನಿಜವಾದ ದಿನಾಂಕದೊಂದಿಗೆ ಬರೆಯುವ ಮೂಲಕ ಅಥವಾ ಇತರ ಯಾವುದೇ ಪರಿಣಾಮಕಾರಿಯಾದ ರೀತಿಯಲ್ಲಿ ಅದನ್ನು ರದ್ದುಪಡಿಸಬಹುದು.

**13. ಮುದ್ರೆ ಹಾಕಿದ ಸ್ಟಾಂಪುಗಳಿಂದ ಸ್ಟಾಂಪ್ ಹಾಕಿದ ಲಿಖಿತಗಳನ್ನು ಹೇಗೆ ಬರೆಯತಕ್ಕದ್ದು:–** ಮುದ್ರೆ ಹಾಕಿದ ಸ್ಟಾಂಪಿನಿಂದ ಸ್ಟಾಂಪ್ ಹಾಕಲಾದ ಕಾಗದದ ಮೇಲೆ ಬರೆದ ಪ್ರತಿಯೊಂದು ಲಿಖಿತವನ್ನು, ಲಿಖಿತದ ಮುಖದ ಮೇಲೆ ಸ್ಟಾಂಪು ಕಂಡುಬರಬಹುದಾದಂಥ ರೀತಿಯಲ್ಲಿ ಮತ್ತು ಯಾವುದೇ ಇತರ ಲಿಖಿತಕ್ಕೆ ಉಪಯೋಗಿಸಲು ಅಥವಾ ವಿನಿಯೋಗಿಸಲು ಆಗದಂಥ ರೀತಿಯಲ್ಲಿ ಬರೆಯತಕ್ಕದ್ದು.

**14. ಒಂದು ಸ್ಟಾಂಪಿನ ಮೇಲೆ ಒಂದು ಲಿಖಿತ ಮಾತ್ರ ಇರತಕ್ಕದ್ದು:–** ಸುಂಕವನ್ನು ವಿಧಿಸಬಹುದಾದ ಯಾವುದೇ ಎರಡನೇ ಲಿಖಿತವನ್ನು, ಯಾವ ಸ್ಟಾಂಪು ಕಾಗದದ ಮೇಲೆ ಸುಂಕವನ್ನು ವಿಧಿಸಬಹುದಾದ ಲಿಖಿತವನ್ನು ಈಗಾಗಲೇ ಬರೆಯಲಾಗಿದೆಯೋ ಆ ಸ್ಟಾಂಪು ಕಾಗದದ ಮೇಲೆ ಬರೆಯತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಕ್ರಮಬದ್ಧವಾಗಿ ಸ್ಟಾಂಪು ಹಾಕಿದಂಥ ಅಥವಾ ಸುಂಕವನ್ನು ವಿಧಿಸಬೇಕಾಗಿಲ್ಲದಂಥ ಯಾವುದೇ ಹಿಂಬರಹವನ್ನು ಯಾವುದೇ ಲಿಖಿತದ ಮೇಲೆ ಅದರ ಮೂಲಕ ಸೃಜಿಸಿದ ಅಥವಾ ಕಂಡುಬಂದ ಯಾವುದೇ ಹಕ್ಕನ್ನು ವರ್ಗಾವಣೆ ಮಾಡುವ ಅಥವಾ ಅದರ ಮೂಲಕ ಭದ್ರಗೊಳಿಸಿದಂಥ ಯಾವುದೇ ಹಣದ ಸಂದಾಯ ಅಥವಾ ಸರಕುಗಳ ವಶಾವಣೆಯ ಸ್ವೀಕೃತಿಯನ್ನು ಒಪ್ಪಿಕೊಳ್ಳುವ ಉದ್ದೇಶಕ್ಕಾಗಿ ಮಾಡುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.

**15. 13ನೇ ಪ್ರಕರಣ ಅಥವಾ 14ನೇ ಪ್ರಕರಣದ ಉಲ್ಲಂಘನೆಯಲ್ಲಿ ಬರೆಯಲಾದ ಪ್ರತಿಯೊಂದು ಲಿಖಿತವನ್ನು ಸ್ಟಾಂಪು ಹಚ್ಚಿಲ್ಲವೆಂಬುದಾಗಿ ಭಾವಿಸತಕ್ಕದ್ದು:–** 13ನೇ ಪ್ರಕರಣ ಅಥವಾ 14ನೇ ಪ್ರಕರಣವನ್ನು ಉಲ್ಲಂಘಿಸಿ ಬರೆಯಲಾದ ಪ್ರತಿಯೊಂದು ಲಿಖಿತವನ್ನು ಸ್ಟಾಂಪು ಹಚ್ಚಿಲ್ಲವೆಂಬುದಾಗಿ ಭಾವಿಸತಕ್ಕದ್ದು.

**16. ಸುಂಕವನ್ನು ಸೂಚಿಸುವುದು:–** ಇನ್ನೊಂದು ಲಿಖಿತಕ್ಕೆ ಸಂಬಂಧಿಸಿದಂತೆ ವಾಸ್ತವವಾಗಿ ಸಂದಾಯ ಮಾಡಿದ ಸುಂಕದ ಮೇಲೆ, ಲಿಖಿತದ ಮೇಲೆ ವಿಧಿಸಬಹುದಾದಂಥ ಸುಂಕವು ಅಥವಾ ಸುಂಕದಿಂದ ಅದರ ವಿನಾಯಿತಿಯು ಅವಲಂಬಿತವಾಗಿರುವಲ್ಲಿ, ಮೊದಲು ಹೇಳಿದ ಸುಂಕದ ಸಂದಾಯವನ್ನು, ಆ ಉದ್ದೇಶಕ್ಕಾಗಿ ಡೆಪ್ಯುಟಿ ಕಮಿಷನರನಿಗೆ ಬರಹದಲ್ಲಿ ಅರ್ಜಿಯನ್ನು ಮಾಡಿಕೊಂಡರೆ ಮತ್ತು ಅವೆರಡೂ ಲಿಖಿತಗಳನ್ನು ಹಾಜರುಪಡಿಸಿದ ಮೇಲೆ ಡೆಪ್ಯುಟಿ ಕಮಿಷನರರ ಸಹಿಯ ಮೇರೆಗೆ ಅಥವಾ ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಯಾವುದೇ ರೀತಿ ಇದ್ದರೆ ಅದರ ಮೇರೆಗೆ ಹಿಂಬರಹದ ಮೂಲಕ ಅಂಥ ಲಿಖಿತದ ಮೇಲೆ ಸೂಚಿಸತಕ್ಕದ್ದು.

## ಗ. ಲಿಖಿತಗಳಿಗೆ ಸ್ಟಾಂಪು ಹಚ್ಚುವ ಕಾಲದ ಬಗ್ಗೆ

**17. ಕರ್ನಾಟಕ ರಾಜ್ಯದಲ್ಲಿ ಬರೆದುಕೊಟ್ಟ ಲಿಖಿತಗಳು:–** ಸುಂಕವನ್ನು ವಿಧಿಸಬಹುದಾದ ಮತ್ತು ಕರ್ನಾಟಕ ರಾಜ್ಯದಲ್ಲಿ ಯಾವನೇ ವ್ಯಕ್ತಿಯು ಬರೆದುಕೊಟ್ಟ ಎಲ್ಲಾ ಲಿಖಿತಗಳಿಗೂ, ಬರೆದುಕೊಟ್ಟ ಕಾಲಕ್ಕೆ ಮುಂಚೆ ಅಥವಾ ಬರೆದುಕೊಟ್ಟ ಕಾಲದಲ್ಲಿ ಸ್ಟಾಂಪನ್ನು ಹಚ್ಚತಕ್ಕದ್ದು.

**18. ಭಾರತದ ಹೊರಗೆ ಬರೆದುಕೊಟ್ಟ ಲಿಖಿತಗಳು:–** (1) ಸುಂಕವನ್ನು ವಿಧಿಸಬಹುದಾದ ಮತ್ತು ಭಾರತದ ಹೊರಗೆ ಮಾತ್ರವೇ ಬರೆದುಕೊಟ್ಟ ಪ್ರತಿಯೊಂದು ಲಿಖಿತಕ್ಕೆ ಕರ್ನಾಟಕ ರಾಜ್ಯದಲ್ಲಿ ಅದನ್ನು ಮೊದಲು ಸ್ವೀಕರಿಸಿದ ತರುವಾಯ ಮೂರು ತಿಂಗಳೊಳಗೆ ಸ್ಟಾಂಪನ್ನು ಹಚ್ಚಬಹುದು.

(2) ಅಂಥ ಯಾವುದೇ ಲಿಖಿತಕ್ಕೆ ಅದಕ್ಕಾಗಿ ನಿಯಮಿಸಿದ ಸ್ಟಾಂಪಿನ ವಿವರಣೆಗೆ ಸಂಬಂಧಿಸಿದಂತೆ ಯಾವನೇ ಖಾಸಗಿ ವ್ಯಕ್ತಿಯು ಸರಿಯಾದ ಸ್ಟಾಂಪನ್ನು ಹಚ್ಚಲು ಆಗದಿರುವಲ್ಲಿ, ಮೂರು ತಿಂಗಳ ಸದರಿ ಅವಧಿಯೊಳಗೆ ಅದನ್ನು ಡೆಪ್ಯುಟಿ ಕಮೀಷನರನ ಬಳಿ ತೆಗೆದುಕೊಂಡು ಹೋಗಬಹುದು; ಅವನು ಸರ್ಕಾರವು ನಿಯಮದ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಲಿಖಿತವನ್ನು ಹಾಗೆ ತೆಗೆದುಕೊಂಡು ಹೋಗುವ ವ್ಯಕ್ತಿಗೆ ಅಗತ್ಯವಿರಬಹುದಾದ ಮತ್ತು ಅವನು ಸಂದಾಯಮಾಡಬಹುದಾದಂಥ ಮೌಲ್ಯದ ಸ್ಟಾಂಪನ್ನು ಹಚ್ಚತಕ್ಕದ್ದು.

**19. ಕರ್ನಾಟಕ ರಾಜ್ಯದಲ್ಲಿ ಹೆಚ್ಚಿಸಿದ ಸುಂಕಕ್ಕೆ ಗುರಿಯಾಗುವ ಕೆಲವು ಲಿಖಿತಗಳ ಮೇಲೆ ಸುಂಕದ ಸಂದಾಯ:–** ಅನುಸೂಚಿಯಲ್ಲಿನ ಯಾವುದೇ ಅನುಚ್ಛೇದದಲ್ಲಿ ವಿವರಿಸಿದ ಸ್ವರೂಪದ ಮತ್ತು ಕರ್ನಾಟಕ ರಾಜ್ಯದಲ್ಲಿರುವ ಯಾವುದೇ ಸ್ವತ್ತಿಗೆ ಅಥವಾ ಯಾವುದೇ ವಿಷಯಕ್ಕೆ ಅಥವಾ ಮಾಡಿದ ಅಥವಾ ಮಾಡಬೇಕಾದ ವಸ್ತುವಿಗೆ ಸಂಬಂಧಿಸಿದಂಥ ಯಾವುದೇ ಲಿಖಿತವನ್ನು ಸದರಿ ರಾಜ್ಯದ ಹೊರಗೆ ಬರೆದುಕೊಟ್ಟಿರುವಲ್ಲಿ ಮತ್ತು ಆ ತರುವಾಯ ಸದರಿ ರಾಜ್ಯದಲ್ಲಿ ಸ್ವೀಕರಿಸಲಾಗಿರುವಲ್ಲಿ,–

(ಕ) ಅಂಥ ಲಿಖಿತದ ಮೇಲೆ ವಿಧಿಸಬಹುದಾದ ಸುಂಕದ ಮೊಬಲಗು, ಅಂಥ ಲಿಖಿತದ ಮೇಲೆ ಭಾರತದಲ್ಲಿನ ಯಾವುದೇ ಇತರ ರಾಜ್ಯದಲ್ಲಿ ಈಗಾಗಲೇ ಸಂದಾಯಮಾಡಿದ ಸುಂಕದ ಮೊಬಲಗು ಯಾವುದಾದರೂ ಇದ್ದರೆ ಅದನ್ನು ಕಳೆದುಕೊಂಡು ಕರ್ನಾಟಕ ರಾಜ್ಯದಲ್ಲಿ ಬರೆದುಕೊಟ್ಟ ಅದೇ ವಿವರಣೆಯ ಒಂದು ದಸ್ತಾವೇಜಿನ ಮೇಲೆ ಅನುಸೂಚಿಯ ಮೇರೆಗೆ ವಿಧಿಸಬಹುದಾದ ಸುಂಕದ ಮೊಬಲಗು ಆಗಿರತಕ್ಕದ್ದು.

(ಖ) ಮತ್ತು ಅದಕ್ಕೆ ಈಗಾಗಲೇ ಹಚ್ಚಿದ ಸ್ಟಾಂಪುಗಳು ಯಾವುದಾದರೂ ಇದ್ದರೆ, ಅವುಗಳ ಜೊತೆಗೆ ಅಂಥ ಲಿಖಿತಕ್ಕೆ ಈ ಪ್ರಕರಣದ (ಕ) ಖಂಡದ ಮೇರೆಗೆ ಅದರ ಮೇಲೆ ವಿಧಿಸಬಹುದಾದ ಸುಂಕದ ಸಂದಾಯಕ್ಕಾಗಿ ಅವಶ್ಯವಾದ ಸ್ಟಾಂಪುಗಳಿಂದ ಅಂಥ ಲಿಖಿತವನ್ನು ಕರ್ನಾಟಕ ರಾಜ್ಯದಲ್ಲಿ ಮೊದಲನೆಯ ಬಾರಿಗೆ ಅದಕ್ಕೆ ಹೆಚ್ಚಿನ ಸುಂಕವನ್ನು ವಿಧಿಸಬಹುದಾದಾಗ ಆಗಿನ ಕಾಲದಲ್ಲಿ ಸ್ವೀಕರಿಸುತ್ತಿದ್ದರೆ ಹೇಗೋ ಹಾಗೇ ಅದೇ ರೀತಿಯಲ್ಲಿ ಮತ್ತು ಅದೇ ಕಾಲದಲ್ಲಿ ಮತ್ತು ಅವರೇ ವ್ಯಕ್ತಿಗಳು ಹಚ್ಚತಕ್ಕದ್ದು, ಮತ್ತು

(ಗ) 32ನೇ ಪ್ರಕರಣದ (3)ನೇ ಉಪ–ಪ್ರಕರಣಕ್ಕೆ ಸಂಬಂಧಿಸಿದ ಪರಂತುಕದ (ಖ) ಖಂಡದಲ್ಲಿ ಅಡಕವಾದ ಉಪಬಂಧಗಳು, ಅಂಥ ಲಿಖಿತಕ್ಕೆ ಅದನ್ನು ಭಾರತದ ಹೊರಗೆ ಬರೆದು ಕೊಟ್ಟಿದ್ದರೆ ಅಥವಾ ಮೊದಲ ಬಾರಿಗೆ ಬರೆದುಕೊಟ್ಟಿದ್ದಿದ್ದರೆ ಮತ್ತು ಹಿಂದೆ ಹೇಳಿದಂತೆ ಅದರ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸಬಹುದಾದಾಗ ಕರ್ನಾಟಕ ರಾಜ್ಯದಲ್ಲಿ ಮೊದಲು ಸ್ವೀಕರಿಸಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು; ಆದರೆ ಸದರಿ ಪರಂತುಕದ (ಕ) ಖಂಡದಲ್ಲಿ ಅಡಕವಾದ ಉಪಬಂಧವು ಅದಕ್ಕೆ ಅನ್ವಯವಾಗತಕ್ಕದ್ದಲ್ಲ.

(ಘ) ಸುಂಕದ ಮೌಲ್ಯಗಳ ಬಗ್ಗೆ.

**20. ವಿದೇಶಿ ಕರೆನ್ಸಿಗಳಲ್ಲಿ ವ್ಯಕ್ತಪಡಿಸಿದ ಮೊಬಲಗಿನ ಪರಿವರ್ತನೆ:–** (1) ಭಾರತದ್ದಲ್ಲದ ಇತರ ಯಾವುದೇ ಕರೆನ್ಸಿಯಲ್ಲಿ ವ್ಯಕ್ತಪಡಿಸಿದ ಯಾವುದೇ ಹಣಕ್ಕೆ ಸಂಬಂಧಿಸಿದಂತೆ ಮೌಲ್ಯಾನುಸಾರ ಸುಂಕವನ್ನು ಲಿಖಿತದ ಮೇಲೆ ವಿಧಿಸಬಹುದಾಗಿರುವಲ್ಲಿ, ಅಂಥ ಸುಂಕವನ್ನು ಅಂಥ ಹಣದ ಮೌಲ್ಯದ ಮೇಲೆ ಆ ಲಿಖಿತದ ದಿನಾಂಕದ ಆ ದಿವಸದಂದಿನ ವಿನಿಮಯದ ಚಾಲ್ತಿ ದರಕ್ಕೆ ಅನುಸಾರವಾಗಿ ಭಾರತದ ಕರೆನ್ಸಿಯಲ್ಲಿ ಲೆಕ್ಕ ಹಾಕತಕ್ಕದ್ದು.

(2) ಭಾರತ ಸ್ಟಾಂಪು ಅಧಿನಿಯಮ, 1899 (ಕೇಂದ್ರಾಧಿನಿಯಮ 1899 II)ದ 20ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನಿಯಮಿಸಿದ ವಿನಿಮಯದ ದರವನ್ನು (1)ನೇ ಉಪ–ಪ್ರಕರಣದ ಮೇರೆಗಿನ ಸುಂಕವನ್ನು ಲೆಕ್ಕ ಹಾಕುವ ಉದ್ದೇಶಗಳಿಗಾಗಿ ಯಾವುದೇ ವಿದೇಶಿ ಕರೆನ್ಸಿಯ ಪರಿವರ್ತನೆಗಾಗಿನ ವಿನಿಮಯದ ಚಾಲ್ತಿದರವೆಂಬುದಾಗಿ ಭಾವಿಸತಕ್ಕದ್ದು.

**21. ಸ್ಟಾಕು ಮತ್ತು ಮಾರಾಟ ಮಾಡಬಹುದಾದ ಭದ್ರತಾ ಪತ್ರಗಳನ್ನು ಹೇಗೆ ಮೌಲ್ಯ ನಿರ್ಣಯ ಮಾಡತಕ್ಕದ್ದು:–** ಯಾವುದೇ ಸ್ಟಾಕು ಅಥವಾ ಮಾರಬಹುದಾದ ಯಾವುದೇ ಅಥವಾ ಇತರ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಮೌಲ್ಯಾನುಸಾರ ಸುಂಕವನ್ನು ಲಿಖಿತದ ಮೇಲೆ ವಿಧಿಸಬಹುದಾಗಿರುವಲ್ಲಿ, ಅಂಥ ಸುಂಕವನ್ನು ಅಂಥ ಸ್ಟಾಕ್ ಅಥವಾ ಭದ್ರತಾ ಪತ್ರದ ಮೌಲ್ಯದ ಮೇಲೆ ಲಿಖಿತದ ದಿನಾಂಕದ ದಿವಸದಂದಿನ ಅದರ ಸರಾಸರಿ ಬೆಲೆ ಅಥವಾ ಮೌಲ್ಯಕ್ಕೆ ಅನುಸಾರವಾಗಿ ಲೆಕ್ಕ ಹಾಕತಕ್ಕದ್ದು.

**22. ವಿನಿಮಯ ದರದ ಅಥವಾ ಸರಾಸರಿ ಬೆಲೆಯ ನಿರೂಪಣದ ಪರಿಣಾಮ:–** ಸಂದರ್ಭವು ಅಗತ್ಯಪಡಿಸಬಹುದಾದಂತೆ ಲಿಖಿತವು ವಿನಿಮಯ ಚಾಲ್ತಿದರ ಅಥವಾ ಸರಾಸರಿ ಬೆಲೆಯ ನಿರೂಪಣೆಯನ್ನು ಒಳಗೊಂಡಿರುವಲ್ಲಿ ಮತ್ತು ಅಂಥ ನಿರೂಪಣೆಗೆ ಅನುಸಾರವಾಗಿ ಅದಕ್ಕೆ ಸ್ಟಾಂಪನ್ನು ಹಚ್ಚಿರುವಲ್ಲಿ, ಅದಕ್ಕೆ ಅಂಥ ನಿರೂಪಣೆಯ ಮತ್ತು ವಿಷಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ತದ್ವಿರುದ್ಧವಾಗಿ ರುಜುವಾತಾಗುವವರೆಗೆ ಕ್ರಮಬದ್ಧವಾಗಿ ಸ್ಟಾಂಪ್ ಹಚ್ಚಲಾಗಿದೆಯೆಂದು ಪೂರ್ವಭಾವನೆ ಮಾಡತಕ್ಕದ್ದು.

**23. ಬಡ್ಡಿಯನ್ನು ಕಾಯ್ದಿರಿಸುವ ಲಿಖಿತಗಳು:–** ಲಿಖಿತದ ನಿಬಂಧನೆಗಳ ಮೂಲಕ ಬಡ್ಡಿಯನ್ನು ಸಂದಾಯ ಮಾಡಬೇಕಾಗಿರುವಲ್ಲಿ, ಅಂಥ ಲಿಖಿತದ ಮೇಲೆ ಅದರಲ್ಲಿ ಬಡ್ಡಿಯ ಯಾವುದೇ ನಮೂದನ್ನು ಮಾಡಿಲ್ಲದಿದ್ದರೆ ಅದರ ಮೇಲೆ ವಿಧಿಸಬಹುದಾದುದಕ್ಕಿಂತ ಹೆಚ್ಚಿನ ಸುಂಕವನ್ನು ವಿಧಿಸತಕ್ಕದ್ದಲ್ಲ.

**24. ಅಡಮಾನಗಳು ಅಥವಾ ಮಾರಬಹುದಾದ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ಕೆಲವು ಲಿಖಿತಗಳ ಮೇಲೆ ಒಪ್ಪಂದಗಳಂತೆ ವಿಧಿಸತಕ್ಕದ್ದು:–** (1) (ಕ) ಲಿಖಿತವನ್ನು ಸಾಲದ ರೂಪದಲ್ಲಿ ಮುಂಗಡವಾಗಿ ಕೊಟ್ಟ ಅಥವಾ ಕೊಡಬೇಕಾಗಿರುವ ಹಣಕ್ಕಾಗಿ ಅಥವಾ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯದ ಋಣಕ್ಕಾಗಿ ಭದ್ರತೆಯ ರೂಪದಲ್ಲಿ ಯಾವುದೇ ಮಾರಬಹುದಾದ ಭದ್ರತಾ ಪತ್ರದ ಠೇವಣಿಯ ಸಂದರ್ಭದಲ್ಲಿ ಕೊಟ್ಟಿರುವಲ್ಲಿ, ಅಥವಾ

(ಖ) ಲಿಖಿತವು, ಭದ್ರತೆ ಎಂದು ಉದ್ದೇಶಿಸಿದ ಯಾವುದೇ ಮಾರಬಹುದಾದ ಭದ್ರತಾ ಪತ್ರವನ್ನು ವಿಮೋಚನೆಯನ್ನಾಗಿಸುವಲ್ಲಿ ಅಥವಾ ಅದರ ಕ್ರಮಬದ್ಧ ಸ್ಟಾಂಪು ಹಚ್ಚಿದ ವರ್ಗಾವಣೆಯನ್ನು ಷರತ್ತಿಗೆ ಒಳಪಡಿಸುವಲ್ಲಿ

– ಅದರ ಮೇಲೆ ಅದು ಅನುಸೂಚಿಯ 5ನೇ ಅನುಚ್ಛೇದದ ಮೇರೆಗೆ ಸುಂಕವನ್ನು ವಿಧಿಸಬಹುದಾದ ಒಪ್ಪಂದ ಅಥವಾ ಒಪ್ಪಂದದ ವಿವರಣಾ ಪತ್ರವು ಆಗಿದ್ದಿದ್ದರೆ ಹೇಗೋ ಹಾಗೆ ಸುಂಕವನ್ನು ವಿಧಿಸತಕ್ಕದ್ದು.

(2) ಯಾವುದೇ ಅಂಥ ಲಿಖಿತದ ವಿಮೋಚನೆ ಅಥವಾ ತೀರಿಕೆ ಬಗ್ಗೆ ಅಂಥದೇ ಸುಂಕವನ್ನು ವಿಧಿಸತಕ್ಕದ್ದು.

**25. ಋಣದ ಪ್ರತಿಫಲಕ್ಕಾಗಿ ಅಥವಾ ಭವಿಷ್ಯ ಸಂದಾಯ, ಇತ್ಯಾದಿಗಳಿಗೆ ಒಳಪಟ್ಟ ವರ್ಗಾವಣೆಯ ಮೇಲೆ ಹೇಗೆ ವಿಧಿಸತಕ್ಕದ್ದು:–** ಯಾವನೇ ವ್ಯಕ್ತಿಗೆ ಬಾಕಿಯಿರುವ ಯಾವುದೇ ಋಣದ ಪೂರ್ಣ ಅಥವಾ ಭಾಗಶಃ ಪ್ರತಿಫಲಕ್ಕಾಗಿ

ಅಥವಾ ಆ ಸ್ವತ್ತಿನ ಮೇಲೆ ಋಣಭಾರ ಅಥವಾ ಪೂರ್ವಾಧಿ ಆಗಿರಲಿ ಅಥವಾ ಆಗಿಲ್ಲದೇ ಇರಲಿ ಯಾವುದೇ ಹಣ ಅಥವಾ ಸ್ಟಾಕಿನ ಸಂದಾಯ ಅಥವಾ ವರ್ಗಾವಣೆಗೆ ನಿಶ್ಚಿತವಾಗಿಯೇ ಆಗಲಿ ಅಥವಾ ಅವಲಂಬಿತವಾಗಿಯೇ ಆಗಲಿ ಅದಕ್ಕೆ ಒಳಪಟ್ಟು, ಅವನಿಗೆ ಯಾವುದೇ ಸ್ವತ್ತನ್ನು ವರ್ಗಾಯಿಸುವಲ್ಲಿ ಅಂಥ ಋಣ, ಹಣ ಅಥವಾ ಸ್ಟಾಕನ್ನು ಯಾವ ಪ್ರತಿಫಲಕ್ಕೆ ಸಂಬಂಧಿಸಿದಂತೆ ವರ್ಗಾವಣೆಯ ಮೇಲೆ ಮೌಲ್ಯಾನುಸಾರ ಸುಂಕವನ್ನು ವಿಧಿಸಬಹುದೋ ಆ ಪ್ರತಿಫಲದ, ಸಂದರ್ಭಾನುಸಾರ, ಪೂಣ ಅಥವಾ ಭಾಗವಾಗಿ ಭಾವಿಸತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಅನುಸೂಚಿಯ 15ನೇ ಅನುಚ್ಛೇದದಲ್ಲಿ ನಮೂದಿಸಲಾದಂಥ ಯಾವುದೇ ಮಾರಾಟದ ಪ್ರಮಾಣ ಪತ್ರಕ್ಕೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ:–** ಅಡಮಾನ ಅಥವಾ ಇತರ ಪೂರ್ವಾವಧಿಗೆ ಒಳಪಟ್ಟ ಸ್ವತ್ತಿನ ಮಾರಾಟದ ಸಂದರ್ಭದಲ್ಲಿ, ಸಂದಾಯವಾಗದ ಯಾವುದೇ ಅಡಮಾನದ ಹಣ ಅಥವಾ ಋಣಭಾರ ಹೊರಿಸಿದ ಹಣ, ಅದರ ಮೇಲಿನ ಬಾಕಿಯಿರುವ ಬಡ್ಡಿ (ಯಾವುದಾದರೂ ಇದ್ದರೆ) ಇವುಗಳನ್ನು ಮಾರಾಟಕ್ಕಾಗಿನ ಪ್ರತಿಫಲದ ಭಾಗವೆಂಬುದಾಗಿ ಭಾವಿಸತಕ್ಕದ್ದು:

ಪರಂತು, ಅಡಮಾನಕ್ಕೆ ಒಳಪಟ್ಟ ಸ್ವತ್ತನ್ನು ಅಡಮಾನ ಪಡೆದವನಿಗೆ ವರ್ಗಾಯಿಸಿದಲ್ಲಿ, ಅವನು ಆ ವರ್ಗಾವಣೆಯ ಮೇಲೆ ಸಂದಾಯಮಾಡಬೇಕಾದ ಸುಂಕದಿಂದ ಆ ಅಡಮಾನಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಂದಾಯ ಮಾಡಿದ ಯಾವುದೇ ಸುಂಕದ ಮೊಬಲಗನ್ನು ಮುರಿದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

## ದೃಷ್ಟಾಂತಗಳು

(1) 'ಕ'ನು 'ಖ'ನಿಗೆ 1,000 ರೂಪಾಯಿಗಳನ್ನು ಕೊಡಬೇಕಾಗಿರುತ್ತದೆ. 'ಕ'ನು 'ಖ'ನಿಗೆ ಸ್ವತ್ತನ್ನು ಮಾರಾಟ ಮಾಡುತ್ತಾನೆ. ಅದರ ಪ್ರತಿಫಲ 500 ರೂಪಾಯಿಗಳು ಮತ್ತು 1,000 ರೂಪಾಯಿಗಳ ಹಿಂದಿನ ಋಣದ ವಿಮೋಚನೆಯಾಗಿರುತ್ತದೆ. 1,500 ರೂಪಾಯಿಗಳ ಮೇಲೆ ಸ್ಟಾಂಪ್ ಸುಂಕವನ್ನು ಸಂದಾಯ ಮಾಡಬೇಕಾಗುತ್ತದೆ.

(2) 'ಕ'ನು 'ಖ'ನಿಗೆ 500 ರೂಪಾಯಿಗಳಿಗೆ ಸ್ವತ್ತನ್ನು ಮಾರಾಟ ಮಾಡುತ್ತಾನೆ. ಅದು 'ಗ'ನ 1,000 ರೂಪಾಯಿಗಳ ಅಡಮಾನಕ್ಕೆ ಮತ್ತು ಸಂದಾಯವಾಗದ 200 ರೂಪಾಯಿಗಳ ಬಡ್ಡಿಗೆ ಒಳಪಟ್ಟರೆ 1,700 ರೂಪಾಯಿಗಳ ಮೇಲೆ ಸ್ಟಾಂಪ್ ಸುಂಕವನ್ನು ಸಂದಾಯ ಮಾಡಬೇಕಾಗುತ್ತದೆ.

(3) 'ಕ'ನು 'ಖ'ನಿಗೆ 10,000 ರೂಪಾಯಿಗಳ ಮೌಲ್ಯದ ಮನೆಯನ್ನು 5,000 ರೂಪಾಯಿಗಳಿಗೆ ಅಡಮಾನ ಮಾಡುತ್ತಾನೆ. ಆ ತರುವಾಯ 'ಖ'ನು ಆ ಮನೆಯನ್ನು 'ಕ'ನಿಂದ ಖರೀದಿಸುತ್ತಾನೆ. ಆ ಅಡಮಾನಕ್ಕಾಗಿ ಈಗಾಗಲೇ ಸಂದಾಯ ಮಾಡಿದ ಸ್ಟಾಂಪ್ ಸುಂಕದ ಮೊಬಲಗನ್ನು ಕಳೆದುಕೊಂಡು 10,000 ರೂಪಾಯಿಗಳ ಮೇಲೆ ಸ್ಟಾಂಪ್ ಸುಂಕವನ್ನು ಸಂದಾಯ ಮಾಡಬೇಕಾಗುತ್ತದೆ.

**26. ವರ್ಷಾಶನ, ಇತ್ಯಾದಿಗಳ ಸಂದರ್ಭದಲ್ಲಿ ಮೌಲ್ಯ ನಿರ್ಣಯ:–** ನಿಯತಕಾಲಿಕವಾಗಿ ಸಂದಾಯ ಮಾಡಬೇಕಾದ ಅಥವಾ ಇತರ ಮೊತ್ತದ ಸಂದಾಯದ ಭದ್ರತೆಗೆ ಲಿಖಿತವನ್ನು ಬರೆದು ಕೊಡುವಲ್ಲಿ, ಅಂಥ ಲಿಖಿತದ ಮೂಲಕ ಭದ್ರತೆಗೊಳಿಸಿದ ಮೊಬಲಗನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ,–

(ಕ) ಸಂದಾಯ ಮಾಡಬೇಕಾದ ಒಟ್ಟು ಮೊಬಲಗನ್ನು ಮೊದಲೇ ಖಚಿತಪಡಿಸಿಕೊಳ್ಳುವ ಹಾಗೆ ನಿಶ್ಚಿತ ಅವಧಿಗಾಗಿ ಸಂದಾಯ ಮಾಡಬೇಕಾದ ಮೊತ್ತವಾಗಿರುವಲ್ಲಿ,– ಅಂಥ ಒಟ್ಟು ಮೊಬಲಗು;

(ಖ) ಶಾಶ್ವತವಾಗಿ ಅಥವಾ ಅಂಥ ಲಿಖಿತದ ದಿನಾಂಕದಂದು ಇರುವ ಯಾವುದೇ ಜೀವಿತದೊಂದಿಗೆ ಕೊನೆಗೊಳ್ಳದ ಅನಿಶ್ಚಿತ ಕಾಲಕ್ಕಾಗಿ ಮೊತ್ತವು ಸಂದಾಯವಾಗಬೇಕಾಗಿರುವಲ್ಲಿ ಅಂಥ ಲಿಖಿತದ ನಿಬಂಧನೆಗಳಿಗೆ ಅನುಸಾರವಾಗಿ, ಮೊದಲನೆಯ ಸಂದಾಯವು ಬಾಕಿಯಾಗುವಂಥ ದಿನಾಂಕದಿಂದ ಲೆಕ್ಕ ಹಾಕಿದ ಇಪ್ಪತ್ತು

ವರ್ಷಗಳ ಅವಧಿಯಲ್ಲಿ ಸಂದಾಯವಾಗಬೇಕಾದ ಅಥವಾ ಸಂದಾಯವಾಗಬಹುದಾದ ಒಟ್ಟು ಮೊಬಲಗು; ಮತ್ತು

(ಗ) ಅಂಥ ಲಿಖಿತದ ದಿನಾಂಕದಂದು ಇರುವ ಯಾವುದೇ ಜೀವಿತದೊಂದಿಗೆ ಕೊನೆಗೊಳ್ಳುವ ಅನಿಶ್ಚಿತ ಕಾಲಕ್ಕಾಗಿ ಮೊತ್ತವು ಸಂದಾಯವಾಗಬೇಕಾಗಿರುವಲ್ಲಿ ಮೊದಲನೇ ಸಂದಾಯವು ಬಾಕಿಯಾಗುವಂಥ ದಿನಾಂಕದಿಂದ ಲೆಕ್ಕಹಾಕಿದ 12 ವರ್ಷಗಳ ಅವಧಿಯಲ್ಲಿ ಹಿಂದೆ ಹೇಳಿದಂತೆ ಸಂದಾಯವಾಗಬೇಕಾದ ಅಥವಾ ಸಂದಾಯವಾಗಬಹುದಾದ ಗರಿಷ್ಠ ಮೊಬಲಗು

– ಆಗಿರುವುದಾಗಿ ಭಾವಿಸತಕ್ಕದ್ದು.

**27. ವಸ್ತು ವಿಷಯದ ಮೌಲ್ಯವು ಅನಿರ್ದಿಷ್ಟವಾಗಿರುವಾಗ ಸ್ಟಾಂಪು:–** ಮೌಲ್ಯಾನುಸಾರ ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತದ ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವನ್ನು, ಅದನ್ನು ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ದಿನಾಂಕದಂದು ನಿರ್ಧರಿಸಲಾಗದಿದ್ದಲ್ಲಿ, ಅಂಥ ಲಿಖಿತದ ಮೇರೆಗೆ ಯಾವ ಮೌಲ್ಯವನ್ನು, ಅದೇ ವಿವರಣೆಯ ಲಿಖಿತದಲ್ಲಿ ನಮೂದಿಸಿದ್ದರೆ ಹಾಗೆ ಬರೆದುಕೊಟ್ಟ ದಿನಾಂಕದಂದು ವಾಸ್ತವವಾಗಿ ಬಳಸಿದ ಸ್ಟಾಂಪೇ ಸಾಕಷ್ಟಾಗುತ್ತಿತ್ತೊ ಆ ಗರಿಷ್ಠ ಮೊಬಲಗು ಅಥವಾ ಮೌಲ್ಯಕ್ಕಿಂತ ಹೆಚ್ಚಾದುದನ್ನು ಕ್ಲೇಮು ಮಾಡತಕ್ಕದ್ದಲ್ಲ:

ಪರಂತು, ಯಾವ ಗಣಿಗೆ ರಾಜಸ್ವವನ್ನು ಅಥವಾ ಬಾಡಿಗೆಯಾಗಿ ಅಥವಾ ಬಾಡಿಗೆಯ ಭಾಗವಾಗಿ ಉತ್ಪನ್ನದ ಒಂದು ಪಾಲನ್ನು ಸ್ವೀಕರಿಸಲಾಗುತ್ತದೋ ಆ ಗಣಿಯ ಗುತ್ತಿಗೆಯ ಸಂದರ್ಭದಲ್ಲಿ ಸ್ಟಾಂಪು ಸುಂಕದ ಉದ್ದೇಶಕ್ಕಾಗಿ ಅಂಥ ರಾಜಸ್ವ ಅಥವಾ ಅಂಥ ಪಾಲಿನ ಮೌಲ್ಯವನ್ನು–

(ಕ) ಆ ಗುತ್ತಿಗೆಯನ್ನು ಸರ್ಕಾರವು ಅಥವಾ ಅದರ ಪರವಾಗಿ ಮಂಜೂರು ಮಾಡಲಾಗಿರುವಾಗ, ಪ್ರಕರಣದ ಎಲ್ಲ ಸನ್ನಿವೇಶಗಳನ್ನು ಗಮನಿಸಿ, ಡೆಪ್ಯುಟಿ ಕಮಿಷನರನು ಆ ಗುತ್ತಿಗೆಯ ಮೇರೆಗೆ ಸರ್ಕಾರಕ್ಕೆ ರಾಜಸ್ವ ಅಥವಾ ಪಾಲಿನ ರೂಪದಲ್ಲಿ ಸಂದಾಯ ಮಾಡಬೇಕಾಗಬಹುದೆಂದು ಅಂದಾಜು ಮಾಡಿರಬಹುದಾದಂಥ ಮೊಬಲಗು ಅಥವಾ ಮೌಲ್ಯದ ಮೇರೆಗೆ, ಅಥವಾ

(ಖ) ಗುತ್ತಿಗೆಯನ್ನು ಯಾವನೇ ಇತರ ವ್ಯಕ್ತಿಯು ಮಂಜೂರು ಮಾಡಿರುವಾಗ ವರ್ಷಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳ ಮೇರೆಗೆ

– ಅಂದಾಜು ಮಾಡುವುದು ಸಾಕಷ್ಟಾಗಿರತಕ್ಕದ್ದು ಮತ್ತು ಅಂಥ ರಾಜಸ್ವ ಅಥವಾ ಪಾಲಿನ ಪೂರ್ಣ ಮೊಬಲಗನ್ನು ಅದು ಏನೇ ಆಗಿರಬಹುದಾದರೂ ಅಂಥ ಗುತ್ತಿಗೆಯ ಮೇರೆಗೆ ಅದನ್ನು ಕ್ಲೇಮು ಮಾಡಬಹುದಾಗಿರತಕ್ಕದ್ದು:

ಮತ್ತೂ ಪರಂತು, 31 ಅಥವಾ 39ನೇ ಪ್ರಕರಣದ ಮೇರೆಗೆ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ವ್ಯವಹರಣೆಗಳನ್ನು ತೆಗೆದುಕೊಳ್ಳಲಾಗಿರುವಲ್ಲಿ, ಡೆಪ್ಯುಟಿ ಕಮಿಷನರನು ಪ್ರಮಾಣೀಕರಿಸಿದ ಮೊಬಲಗನ್ನು, ಬರೆದುಕೊಟ್ಟ ದಿನಾಂಕದಂದು ವಾಸ್ತವವಾಗಿ ಉಪಯೋಗಿಸಿದ ಸ್ಟಾಂಪು ಎಂದು ಭಾವಿಸತಕ್ಕದ್ದು.

**28. ಸುಂಕದ ಮೇಲೆ ಪರಿಣಾಮವುಳ್ಳ ಸಂಗತಿಗಳನ್ನು ಲಿಖಿತದಲ್ಲಿ ನಮೂದಿಸತಕ್ಕದ್ದು.–** (1) ಪ್ರತಿಫಲ (ಯಾವುದಾದರೂ ಇದ್ದರೆ) ಮತ್ತು ಯಾವುದೇ ಲಿಖಿತಕ್ಕೆ ಸುಂಕ ವಿಧಿಸುವಿಕೆಯ ಮೇಲೆ ಅಥವಾ ಅದಕ್ಕೆ ವಿಧಿಸಬಹುದಾದಂಥ ಸುಂಕದ ಮೊಬಲಗಿನ ಮೇಲೆ ಪರಿಣಾಮ ಬೀರಿದ ಇತರ ಎಲ್ಲ ಸಂಗತಿಗಳು ಮತ್ತು ಸಂದರ್ಭಗಳನ್ನು ಅದರಲ್ಲಿ ಪೂರ್ಣವಾಗಿ ಮತ್ತು ಸತ್ಯವಾಗಿ ನಮೂದಿಸತಕ್ಕದ್ದು.

(2) ಸ್ವತ್ತಿನ ಮೌಲ್ಯದ ಮೇಲೆ ಆದರೆ ನಮೂದಿಸಿದ ಮೌಲ್ಯದ ಮೇಲೆ ಅಲ್ಲದ ಮೌಲ್ಯಾನುಸಾರ ಸುಂಕವನ್ನು ವಿಧಿಸಬಹುದಾದ ಸ್ಥಿರಸ್ವತ್ತಿಗೆ ಸಂಬಂಧಪಟ್ಟ ಲಿಖಿತಗಳ ಸಂದರ್ಭದಲ್ಲಿ, ಆ ಲಿಖಿತವು

ಕಂದಾಯವನ್ನು ಸಂದಾಯ ಮಾಡುವ ಭೂಮಿಯ ಸಂದರ್ಭದಲ್ಲಿ ವಾರ್ಷಿಕ ಭೂಕಂದಾಯವನ್ನು, ಇತರ ಸ್ಥಿರ ಸ್ವತ್ತಿನ ಸಂದರ್ಭದಲ್ಲಿ ವಾರ್ಷಿಕ ಬಾಡಿಗೆ ಅಥವಾ ಒಟ್ಟು ಆಸ್ತಿಗಳು ಯಾವುದಾದರೂ ಇದ್ದರೆ ಅವುಗಳನ್ನು, ಅಂಥ ಸ್ವತ್ತು ಒಳಪಟ್ಟಿರಬಹುದಾದಂಥ ಸ್ಥಳೀಯ ದರಗಳು, ಪೌರ ಅಥವಾ ಇತರ ತೆರಿಗೆಗಳು ಯಾವುದಾದರೂ ಇದ್ದರೆ ಅವುಗಳನ್ನು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂಥ ಯಾವುದೇ ಇತರ ವಿವರಗಳನ್ನು ಪೂರ್ಣವಾಗಿ ಮತ್ತು ಸರಿಯಾಗಿ ನಮೂದಿಸತಕ್ಕದ್ದು.

(3) 45ಕ ಪ್ರಕರಣವು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಸದರಿ ಪ್ರಕರಣದಲ್ಲಿ ಉಲ್ಲೇಖಿಸಿದ ಲಿಖಿತಗಳು, ಲಿಖಿತದ ವಸ್ತು ವಿಷಯವಾದಂತಹ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಮತ್ತು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ವಿವರಗಳನ್ನು ಪೂರ್ಣವಾಗಿ ಮತ್ತು ಸರಿಯಾಗಿ ನಮೂದಿಸತಕ್ಕದ್ದು.

**29. ಕೆಲವು ಹಸ್ತಾಂತರಣಗಳ ಸಂದರ್ಭದಲ್ಲಿ ಸುಂಕದ ಬಗ್ಗೆ ನಿರ್ದೇಶನ:–** ಹಸ್ತಾಂತರಣದ ವಸ್ತು ವಿಷಯವಾದಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಂಬಂಧಿಸಿದಂತೆ ಅವನಿಗೆ ನೇರವಾಗಿ ಮಾರಾಟ ಮಾಡುವ ವ್ಯಕ್ತಿಯ ಯಾವ ಹಿತಾಸಕ್ತಿಯ ಮೇಲೆ ಮೌಲ್ಯಾನುಸಾರ ಸುಂಕವನ್ನು ವಿಧಿಸಬಹುದಾಗಿದೆಯೋ ಆ ಹಿತಾಸಕ್ತಿಯ ವಾಸ್ತವಿಕ ಹಸ್ತಾಂತರಣವನ್ನು ಉಪ–ಖರೀದಿದಾರನು ತೆಗೆದುಕೊಳ್ಳುವಲ್ಲಿ ಮತ್ತು ಅದಕ್ಕೆ ತದನುಸಾರವಾಗಿ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಿರುವಲ್ಲಿ, ಮೂಲ ಮಾರಾಟಗಾರನು ಅದೇ ಸ್ವತ್ತಿನ ಬಗ್ಗೆ ಅವನಿಗೆ ತರುವಾಯ ಮಾಡಬಹುದಾದ ಯಾವುದೇ ಹಸ್ತಾಂತರಣದ ಮೇಲೆ, ಆ ಹಸ್ತಾಂತರಣದ ವಸ್ತು ವಿಷಯವಾದಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕಾಗಿ ಹಸ್ತಾಂತರಣದ ಮೇಲೆ ವಿಧಿಸಬಹುದಾದಂಥ ಸುಂಕಕ್ಕೆ ಸಮನಾದ ಸುಂಕವನ್ನು ಅಥವಾ ಅಂಥ ಸುಂಕವು ಹತ್ತು ರೂಪಾಯಿಗಳನ್ನು ಮೀರುವುದಾದರೆ, ಹತ್ತು ರೂಪಾಯಿಗಳ ಸುಂಕವನ್ನು ವಿಧಿಸತಕ್ಕದ್ದು.

## (ಐ) ಯಾರಿಂದ ಸುಂಕವು ಸಂದಾಯವಾಗಬೇಕು

**30. ಯಾರಿಂದ ಸುಂಕಗಳು ಸಂದಾಯವಾಗಬೇಕು:–** ತದ್ವಿರುದ್ಧವಾದ ಒಪ್ಪಂದವು ಇಲ್ಲದೇ ಇರುವಲ್ಲಿ, ಸರಿಯಾದ ಸ್ಟಾಂಪನ್ನು ಒದಗಿಸುವ ವೆಚ್ಚವನ್ನು.–

(ಕ) ಅನುಸೂಚಿಯ ಈ ಕೆಳಕಂಡ ಯಾವುದೇ ಅನುಚ್ಛೇದದಲ್ಲಿ ವಿವರಿಸಲಾದ ಯಾವುದೇ ಲಿಖಿತದ ಸಂದರ್ಭದಲ್ಲಿ, ಎಂದರೆ:–

ಸಂಖ್ಯೆ 2 ನಿರ್ವಹಣ ಬಂಧಪತ್ರ

ಸಂಖ್ಯೆ 6 ಸ್ವಾಮ್ಯಪತ್ರಗಳ ಠೇವಣಿ, ಗಿರವಿ ಅಥವಾ ಒತ್ತೆ ಇವುಗಳಿಗೆ ಸಂಬಂಧಪಟ್ಟ ಒಪ್ಪಂದ

ಸಂಖ್ಯೆ 12 ಬಂಧಪತ್ರ

ಸಂಖ್ಯೆ 13 ನೌಕಾಬಂಧಪತ್ರ

ಸಂಖ್ಯೆ 23 ಸೀಮಾ ಸುಂಕ ಬಂಧಪತ್ರ

ಸಂಖ್ಯೆ 27 ಮತ್ತಷ್ಟು ಋಣಭಾರ

ಸಂಖ್ಯೆ 29 ನಷ್ಟ ಭರ್ತಿ ಬಂಧಪತ್ರ

ಸಂಖ್ಯೆ 34 ಅಡಮಾನ ಪತ್ರ

ಸಂಖ್ಯೆ 45 ಬಿಡುಗಡೆ

ಸಂಖ್ಯೆ 46 ನೌಕಾಸರಕುಗಳ ಬಂಧಪತ್ರ

ಸಂಖ್ಯೆ 47 ಭದ್ರತಾ ಬಂಧಪತ್ರ ಅಥವಾ ಅಡಮಾನ ಪತ್ರ

ಸಂಖ್ಯೆ 48 ವ್ಯವಸ್ಥೆ ಪತ್ರ

ಸಂಖ್ಯೆ 52 (ಕ) ಡಿಬೆಂಚರು, ಸುಂಕಕ್ಕೆ ಗುರಿಯಾಗಿರಲಿ ಅಥವಾ ಗುರಿಯಾಗಿಲ್ಲದೇ ಇರಲಿ ಮಾರಾಟಮಾಡಬಹುದಾದ ಭದ್ರತಾ ಪತ್ರಗಳಾಗಿರುವ ಡಿಬೆಂಚರುಗಳ ವರ್ಗಾವಣೆ

ಸಂಖ್ಯೆ 52 (ಖ) ಬಂಧಪತ್ರ, ಅಡಮಾನ ಪತ್ರ ಅಥವಾ ವಿಮಾಪಾಲಿಸಿಯ ಮೂಲಕ ಭದ್ರತೆಗೊಳಿಸಿದ ಯಾವುದೇ ಹಿತಾಸಕ್ತಿಯ ವರ್ಗಾವಣೆ

– ಅಂಥ ಲಿಖಿತವನ್ನು ಬರೆಯುವ, ಮಾಡುವ ಅಥವಾ ಬರೆದುಕೊಡುವ ವ್ಯಕ್ತಿಯು;

(ಖ) ಹಸ್ತಾಂತರಣದ (ಅಡಮಾನ ಮಾಡಿದ ಸ್ವತ್ತಿನ ಮರು ಹಸ್ತಾಂತರಣವನ್ನೂ ಒಳಗೊಂಡಂತೆ) ಸಂದರ್ಭದಲ್ಲಿ – ಪಡೆದವನು ;

ಗೇಣಿ ಆಥವಾ ಗೇಣಿಯ ಒಪ್ಪಂದದ ಸಂದರ್ಭದಲ್ಲಿ–ಗೇಣಿದಾರ ಅಥವಾ ಉದ್ದೇಶಿತ ಗೇಣಿದಾರನು;

(ಗ) ಗೇಣಿಪತ್ರದ ದ್ವಿಪ್ರತಿಯ ಸಂದರ್ಭದಲ್ಲಿ–ಗೇಣಿಗೆ ಕೊಡುವವನು;

(ಘ) ವಿನಿಮಯ ಲಿಖಿತದ ಸಂದರ್ಭದಲ್ಲಿ–ಸಮಾನ ಪಾಲುಗಳಲ್ಲಿ ಪಕ್ಷಕಾರರು;

(ಘಘ) ರಾಜ್ಯ ಬಾರ್ ಕೌನ್ಸಿಲ್ ಇಟ್ಟಿರುವ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳುವ ಪ್ರಮಾಣ ಪತ್ರದ ಸಂದರ್ಭದಲ್ಲಿ–ಸೇರಿಸಿಕೊಳ್ಳಲಾದ ನ್ಯಾಯವಾದಿ;

(ಙ) ಮಾರಾಟದ ಪ್ರಮಾಣಪತ್ರದ ಸಂದರ್ಭದಲ್ಲಿ–ಅಂಥ ಪ್ರಮಾಣಪತ್ರವು ಸಂಬಂಧಪಡುವಂಥ ಸ್ವತ್ತಿನ ಖರೀದಿದಾರನು; ಮತ್ತು

(ಚ) ವಿಭಜನೆಯ ಲಿಖಿತದ ಸಂದರ್ಭದಲ್ಲಿ–ವಿಭಜನೆಯಾದ ಇಡೀ ಸ್ವತ್ತಿನಲ್ಲಿ ಅವರವರ ಪಾಲುಗಳಿಗೆ ಪ್ರಮಾಣಾನುಸಾರವಾಗಿ ಅಥವಾ ಕಂದಾಯ ಪ್ರಾಧಿಕಾರಿ ಅಥವಾ ಸಿವಿಲ್ ನ್ಯಾಯಾಲಯ ಅಥವಾ ಮಧ್ಯಸ್ಥನು ಮಾಡಿದ ಆದೇಶದ ಅಮಲ್‌ಜಾರಿಯಲ್ಲಿ ವಿಭಜನೆಯನ್ನು ಮಾಡಿದಾಗ ಅಂಥ ಪ್ರಾಧಿಕಾರಿ, ನ್ಯಾಯಾಲಯ ಅಥವಾ ಮಧ್ಯಸ್ಥನು ನಿರ್ದೇಶಿಸುವಂಥ ಪ್ರಮಾಣದಲ್ಲಿ ಅದಕ್ಕೆ ಪಕ್ಷಕಾರರು.

– ವಹಿಸತಕ್ಕದ್ದು.

## ಅಧ್ಯಾಯ–III
## ಸ್ಟಾಂಪುಗಳ ಬಗ್ಗೆ ನ್ಯಾಯ ನಿರ್ಣಯ

**31. ಸರಿಯಾದ ಸ್ಟಾಂಪುಗಳ ಬಗ್ಗೆ ನ್ಯಾಯ ನಿರ್ಣಯ:–** (1) ಯಾವುದೇ ಲಿಖಿತವನ್ನು, ಅದನ್ನು ಬರೆದುಕೊಟ್ಟಿರಲಿ ಅಥವಾ ಬರೆದುಕೊಟ್ಟಿಲ್ಲದಿರಲಿ ಮತ್ತು ಈ ಹಿಂದೆ ಸ್ಟಾಂಪು ಹಚ್ಚಿರಲಿ ಅಥವಾ ಹಚ್ಚಿಲ್ಲದಿರಲಿ– ಡೆಪ್ಯುಟಿ ಕಮಿಷನರನ ಬಳಿಗೆ ತಂದಾಗ ಮತ್ತು ಅದನ್ನು ತಂದ ವ್ಯಕ್ತಿಯು, ಅದರ ಮೇಲೆ ವಿಧಿಸಬಹುದಾದಂಥ ಸುಂಕ (ಯಾವುದಾದರೂ ಇದ್ದರೆ) ಅದರ ಬಗ್ಗೆ ಆ ಅಧಿಕಾರಿಯು ಅಭಿಪ್ರಾಯವನ್ನು ಹೊಂದಲು ಅರ್ಜಿ ಸಲ್ಲಿಸಿ, ಆ ಡೆಪ್ಯುಟಿ ಕಮಿಷನರನು ಪ್ರತಿಯೊಂದು ಪ್ರಕರಣದಲ್ಲಿ ನಿರ್ದೇಶಿಸಬಹುದಾದಂಥ ಏಳು ರೂಪಾಯಿಗಳು ಮತ್ತು ಐವತ್ತು ಪೈಸೆಗಳನ್ನು ಮೀರದ ಮತ್ತು ಎಪ್ಪತ್ತೈದು ಪೈಸೆಗಳಿಗಿಂತ ಕಡಿಮೆ ಇಲ್ಲದ ಫೀಜಿನ ಮೊಬಲಗನ್ನು ಸಂದಾಯಮಾಡಿದರೆ, ಆ ಡೆಪ್ಯುಟಿ ಕಮೀಷನರನು ಅವನ ವಿವೇಚನೆಯಲ್ಲಿ ಆ ಲಿಖಿತದ ಮೇಲೆ ವಿಧಿಸಬಹುದಾದಂಥ ಸುಂಕ (ಯಾವುದಾದರೂ ಇದ್ದರೆ) ಅದನ್ನು ನಿರ್ಧರಿಸತಕ್ಕದ್ದು.

(2) ಈ ಉದ್ದೇಶಕ್ಕಾಗಿ ಡೆಪ್ಯುಟಿ ಕಮಿಷನರನು, ಆ ಲಿಖಿತದ ಸಾರಾಂಶವನ್ನು ಮತ್ತು ಲಿಖಿತದ ಮೇಲೆ ಸುಂಕವನ್ನು ವಿಧಿಸುವಿಕೆಯ ಬಗ್ಗೆ ಪರಿಣಾಮ ಬೀರುವ ಎಲ್ಲ ಸಂಗತಿಗಳು ಮತ್ತು ಸಂದರ್ಭಗಳನ್ನು ಅಥವಾ ಅದರ ಮೇಲೆ ವಿಧಿಸಬಹುದಾದಂಥ ಸುಂಕದ ಮೊಬಲಗನ್ನು, ಅದರಲ್ಲಿ ಪೂರ್ಣವಾಗಿ ಮತ್ತು ಸರಿಯಾಗಿ ನಮೂದಿಸಿದೆ ಎಂಬುದನ್ನು ರುಜುವಾತು ಮಾಡಲು ಅವನು ಅವಶ್ಯವೆಂದು ಭಾವಿಸುವಂಥ ಶಪಥ ಪತ್ರ ಅಥವಾ ಇತರ ಸಾಕ್ಷ್ಯದೊಂದಿಗೆ ಒದಗಿಸಬೇಕೆಂದು ಅಗತ್ಯಪಡಿಸಬಹುದು ಮತ್ತು ಅವನು ಯಾವುದೇ ಅಂಥ ಅರ್ಜಿಯ ಬಗ್ಗೆ ಮುಂದುವರೆಯುವುದನ್ನು, ಅಂಥ ಸಾರಾಂಶ ಮತ್ತು ಸಾಕ್ಷ್ಯವನ್ನು ತದನುಸಾರವಾಗಿ ಒದಗಿಸುವವರೆಗೆ, ನಿರಾಕರಿಸಬಹುದು:

ಪರಂತು,–

(ಕ) ಈ ಪ್ರಕರಣದ ಅನುಸರಣೆಯಲ್ಲಿ ಒದಗಿಸಿದ ಯಾವುದೇ ಸಾಕ್ಷ್ಯವನ್ನು, ಯಾವ ಲಿಖಿತಕ್ಕೆ ಅದು ಸಂಬಂಧಪಡುವುದೋ ಆ ಲಿಖಿತದ ಮೇಲೆ ವಿಧಿಸಬಹುದಾದಂಥ ಸುಂಕದ ಬಗೆಗಿನ ಯಾವುದೇ ವಿಚಾರಣೆಯಲ್ಲಿ ಹೊರತು ಯಾವುದೇ ಸಿವಿಲ್ ವ್ಯವಹರಣೆಯಲ್ಲಿ ಯಾವನೇ ವ್ಯಕ್ತಿಯ ವಿರುದ್ಧ ಉಪಯೋಗಿಸತಕ್ಕದ್ದಲ್ಲ; ಮತ್ತು

(ಖ) ಯಾವುದೇ ಅಂಥ ಸಾಕ್ಷ್ಯವನ್ನು ಒದಗಿಸಿದ ಪ್ರತಿಯೊಬ್ಬ ವ್ಯಕ್ತಿಯು ಯಾವ ಲಿಖಿತಕ್ಕೆ ಅದು ಸಂಬಂಧಪಟ್ಟಿದೆಯೋ ಆ ಲಿಖಿತದ ಮೇಲೆ ವಿಧಿಸಬಹುದಾದಂಥ ಪೂರ್ಣ ಸುಂಕವನ್ನು ಸಂದಾಯ ಮಾಡಿದ ಮೇಲೆ ಹಿಂದೆ ಹೇಳಿದ ಯಾವುದೇ ಸಂಗತಿ ಅಥವಾ ಸಂದರ್ಭವನ್ನು ಅಂಥ ಲಿಖಿತದಲ್ಲಿ ಸರಿಯಾಗಿ ನಿರೂಪಿಸಿಲ್ಲದ ಕಾರಣದಿಂದಾಗಿ, ಈ ಅಧಿನಿಯಮದ ಮೇರೆಗೆ ಅವನು ಗುರಿಯಾಗಿರಬಹುದಾದಂಥ ಯಾವುದೇ ದಂಡನೆಯಿಂದ ವಿಮುಕ್ತನಾಗತಕ್ಕದ್ದು.

**32. ಡೆಪ್ಯುಟಿ ಕಮಿಷನರನಿಂದ ಪ್ರಮಾಣಪತ್ರ:–** 31ನೇ ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರನಲ್ಲಿಗೆ ತಂದ ಲಿಖಿತವು, ಅವನ ಅಭಿಪ್ರಾಯದಲ್ಲಿ ಸುಂಕವನ್ನು ವಿಧಿಸಬಹುದಾದ ವಿವರಣೆಯದು ಆಗಿರುವಾಗ, ಮತ್ತು

(ಕ) ಡೆಪ್ಯುಟಿ ಕಮಿಷನರನು ಅದಕ್ಕೆ ಈಗಾಗಲೇ ಪೂರ್ಣವಾಗಿ ಸ್ಟಾಂಪನ್ನು ಹಚ್ಚಲಾಗಿದೆ ಎಂದು ನಿರ್ಧರಿಸಿದಾಗ, ಅಥವಾ

(ಖ) 31ನೇ ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರನು ನಿರ್ಧರಿಸಿದ ಸುಂಕವು ಅಥವಾ ಲಿಖಿತಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಂದಾಯ ಮಾಡಿದ ಸುಂಕದೊಂದಿಗೆ ಹಾಗೆ ನಿರ್ಧರಿಸಿದ ಸುಂಕಕ್ಕೆ ಸಮನಾದಂಥ ಮೊತ್ತವನ್ನು ಸಂದಾಯ ಮಾಡಿರುವಾಗ

–ಡೆಪ್ಯುಟಿ ಕಮಿಷನರನು ಅಂಥ ಲಿಖಿತದ ಮೇಲೆ ಹಿಂಬರಹ ಮಾಡುವ ಮೂಲಕ ಅದರ ಮೇಲೆ ವಿಧಿಸಬಹುದಾದಂಥ ಪೂರ್ಣ ಸುಂಕವನ್ನು (ಮೊಬಲಗನ್ನು ನಿರೂಪಿಸಿ) ಸಂದಾಯ ಮಾಡಲಾಗಿದೆ ಎಂದು ಪ್ರಮಾಣೀಕರಿಸತಕ್ಕದ್ದು.

(2) ಅಂಥ ಲಿಖಿತದ ಮೇಲೆ ಅವನ ಅಭಿಪ್ರಾಯದಲ್ಲಿ ಸುಂಕವನ್ನು ವಿಧಿಸಬೇಕಾಗಿಲ್ಲದಿರುವಾಗ ಡೆಪ್ಯುಟಿ ಕಮಿಷನರನು ಹಿಂದೆ ಹೇಳಿದ ರೀತಿಯಲ್ಲಿ ಅಂಥ ಲಿಖಿತದ ಮೇಲೆ ಹಾಗೆ ವಿಧಿಸಬೇಕಾಗಿಲ್ಲವೆಂದು ಪ್ರಮಾಣೀಕರಿಸತಕ್ಕದ್ದು.

(3) VIನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶಗಳಿಗೆ ಒಳಪಟ್ಟು, ಈ ಪ್ರಕರಣದ ಮೇರೆಗೆ ಹಿಂಬರಹ ಮಾಡಲಾಗಿರುವಂಥ ಯಾವುದೇ ಲಿಖಿತವನ್ನು ಸಂದರ್ಭಾನುಸಾರ ಸರಿಯಾಗಿ ಸ್ಟಾಂಪು ಹಚ್ಚಲಾಗಿದೆ ಅಥವಾ ಸುಂಕವನ್ನು ವಿಧಿಸಬೇಕಾಗಿಲ್ಲವೆಂದು ಭಾವಿಸತಕ್ಕದ್ದು; ಮತ್ತು ಸುಂಕವನ್ನು

ವಿಧಿಸಬಹುದಾಗಿದ್ದರೆ ಸಾಕ್ಷ್ಯದಲ್ಲಿ ಅಥವಾ ಅನ್ಯಥಾ ಸ್ವೀಕರಿಸಬಹುದಾಗಿರತಕ್ಕದ್ದು ಮತ್ತು ಅದಕ್ಕೆ ಮೂಲತಃ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಲಾಗಿದ್ದಿದ್ದರೆ ಹೇಗೊ ಹಾಗೆ ವ್ಯವಹರಿಸಬಹುದು ಮತ್ತು ನೋಂದಾಯಿಸಬಹುದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಡೆಪ್ಯುಟಿ ಕಮೀಷನರನು,–

(ಕ) ಭಾರತದಲ್ಲಿ ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ಮತ್ತು ಸಂದರ್ಭಾನುಸಾರ ಅದನ್ನು ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ದಿನಾಂಕದಿಂದ ಒಂದು ತಿಂಗಳು ಮುಕ್ತಾಯವಾದ ತರುವಾಯ ಅವನ ಬಳಿಗೆ ತರಲಾದ ಯಾವುದೇ ಲಿಖಿತದ ಮೇಲೆ;

(ಖ) ಭಾರತದ ಹೊರಗೆ ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ಮತ್ತು ಕರ್ನಾಟಕ ರಾಜ್ಯದಲ್ಲಿ ಮೊದಲು ಅದನ್ನು ಸ್ವೀಕರಿಸಿದ ತರುವಾಯ ಮೂರು ತಿಂಗಳುಗಳು ಮುಕ್ತಾಯವಾದ ತರುವಾಯ ಅವನ ಬಳಿಗೆ ತರಲಾದ ಯಾವುದೇ ಲಿಖಿತದ ಮೇಲೆ; ಅಥವಾ

(ಗ) ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲದ ಕಾಗದದ ಮೇಲೆ ಅದನ್ನು ಬರೆದು ಕೊಟ್ಟ ತರುವಾಯ ಅವನ ಬಳಿಗೆ ತಂದಾಗ ಹದಿನೈದು ಪೈಸೆಗೆ ಮೀರದ ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತ ಅಥವಾ ಇಪ್ಪತ್ತೈದು ಪೈಸೆ ಸುಂಕವನ್ನು 3ನೇ ಪ್ರಕರಣದ (ಕ) ಅಥವಾ (ಖ) ಖಂಡದ ಮೇರೆಗೆ ವಿಧಿಸಬಹುದಾದ ಫಸಲಿನ ಅಡಮಾನದ ಮೇಲೆ (ಅನುಸೂಚಿಯ 35(ಕ) ಅನುಚ್ಛೇದ)

– ಹಿಂಬರಹ ಮಾಡಲು ಅಧಿಕೃತಗೊಳಿಸತಕ್ಕದ್ದಲ್ಲ.

## ಅಧ್ಯಾಯ – IV
## ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲದ ಲಿಖಿತಗಳು

**33. ಲಿಖಿತಗಳನ್ನು ಪರೀಕ್ಷಿಸುವುದು ಮತ್ತು ಪರಿಬದ್ಧಗೊಳಿಸುವುದು:–** (1) ಯಾರ ಮುಂದೆ, ಅವನ ಅಭಿಪ್ರಾಯದಲ್ಲಿ ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತವನ್ನು ಹಾಜರುಪಡಿಸಲಾಗಿದೆಯೋ, ಅಥವಾ ಅವನ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಅದು ಬರುತ್ತದೆಯೋ, ಕಾನೂನು ಮೂಲಕ ಅಥವಾ ಪಕ್ಷಕಾರರ ಸಮ್ಮತಿಯಿಂದ ಸಾಕ್ಷ್ಯವನ್ನು ಸ್ವೀಕರಿಸಲು ಅಧಿಕಾರವನ್ನು ಹೊಂದಿದ ಆ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಪೊಲೀಸು ಅಧಿಕಾರಿಯನ್ನು ಹೊರತುಪಡಿಸಿ, ಸರ್ಕಾರಿ ಕಚೇರಿಯ ಪ್ರಭಾರದಲ್ಲಿರುವ ಆ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಲಿಖಿತದ ಮೇಲೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಿಲ್ಲವೆಂದು, ಅವನಿಗೆ ಕಂಡು ಬಂದರೆ, ಅವನು ಅದನ್ನು ಪರಿಬದ್ಧಗೊಳಿಸಬಹುದು.

(2) ಆ ಉದ್ದೇಶಕ್ಕಾಗಿ ಅಂಥ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ವಿಧಿಸಬಹುದಾದ ಮತ್ತು ಹಾಗೆ ಹಾಜರುಪಡಿಸಿದ ಅಥವಾ ಅವನ ಮುಂದೆ ಬರುವ ಪ್ರತಿಯೊಂದು ಲಿಖಿತವನ್ನು, ಅಂಥ ಲಿಖಿತವನ್ನು ಬರೆದು ಕೊಟ್ಟಾಗ ಅಥವಾ ಮೊದಲು ಬರೆದು ಕೊಟ್ಟಾಗ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನು ಅಗತ್ಯಪಡಿಸಿದ ಮೌಲ್ಯದ ಮತ್ತು ವಿವರಣೆಯ ಸ್ಟಾಂಪನ್ನು ಅದಕ್ಕೆ ಹಚ್ಚಿಸಲಾಗಿದೆಯೋ ಹೇಗೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಿಸತಕ್ಕದ್ದು:

ಪರಂತು,–

(ಕ) ಇಲ್ಲಿ ಅಡಕವಾಗಿರುವುದು ಯಾವುದೂ, ದಂಡ ಪ್ರಕ್ರಿಯಾ ಸಂಹಿತೆ, 1898ರ XIIನೇ ಅಧ್ಯಾಯ ಅಥವಾ XXXVIನೇ ಅಧ್ಯಾಯದ ಮೇರೆಗಿನ ವ್ಯವಹರಣೆಗಳನ್ನು ಹೊರತುಪಡಿಸಿ, ಯಾವುದೇ ವ್ಯವಹರಣೆಯಲ್ಲಿ ಅವನ ಮುಂದೆ ಬರುವ ಯಾವುದೇ ಲಿಖಿತವನ್ನು, ಅವನು ಹಾಗೆ ಮಾಡುವುದು ಸೂಕ್ತವಲ್ಲವೆಂದು

ಯೋಚಿಸಿದರೆ ಕ್ರಿಮಿನಲ್ ನ್ಯಾಯಾಲಯದ ಯಾವನೇ ಮ್ಯಾಜಿಸ್ಟ್ರೇಟ್ ಅಥವಾ ನ್ಯಾಯಾಧೀಶನನ್ನು ಪರೀಕ್ಷಿಸಲು ಅಥವಾ ಪರಿಬದ್ಧಗೊಳಿಸಲು ಅಗತ್ಯಪಡಿಸುತ್ತದೆಂದು ಭಾವಿಸತಕ್ಕದ್ದಲ್ಲ;

(ಖ) ಉಚ್ಚನ್ಯಾಯಾಲಯದ ನ್ಯಾಯಾಧೀಶರ ಸಂದರ್ಭದಲ್ಲಿ, ಈ ಪ್ರಕರಣದ ಮೇರೆಗಿನ ಯಾವುದೇ ಲಿಖಿತವನ್ನು ಪರೀಕ್ಷಿಸುವ ಮತ್ತು ಪರಿಬದ್ಧಗೊಳಿಸುವ ಕರ್ತವ್ಯವನ್ನು ಈ ಬಗ್ಗೆ ನ್ಯಾಯಾಲಯವು ನೇಮಕ ಮಾಡುವಂಥ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

(3) ಈ ಪ್ರಕರಣದ ಉದ್ದೇಶಕ್ಕಾಗಿ ಸಂದೇಹದ ಸಂದರ್ಭಗಳಲ್ಲಿ ಸರ್ಕಾರವು,–

(ಕ) ಯಾವ ಕಚೇರಿಗಳನ್ನು ಸರ್ಕಾರಿ ಕಚೇರಿಗಳೆಂಬುದಾಗಿ ಭಾವಿಸತಕ್ಕದ್ದು; ಮತ್ತು

(ಖ) ಯಾರು ಸರ್ಕಾರಿ ಕಚೇರಿಗಳ ಪ್ರಭಾರದಲ್ಲಿರುವ ವ್ಯಕ್ತಿಗಳಾಗಿರುವುದಾಗಿ ಭಾವಿಸತಕ್ಕದ್ದು.

– ಎಂಬುದನ್ನು ನಿರ್ಧರಿಸಬಹುದು.

**34. ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಿಲ್ಲದ ಲಿಖಿತಗಳು ಸಾಕ್ಷ್ಯದಲ್ಲಿ ಅಗ್ರಾಹ್ಯ, ಇತ್ಯಾದಿ:–** ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತವನ್ನು ಕಾನೂನಿನ ಮೂಲಕ ಅಥವಾ ಪಕ್ಷಕಾರರ ಸಮ್ಮತಿಯಿಂದ ಸಾಕ್ಷ್ಯವನ್ನು ಸ್ವೀಕರಿಸಲು ಅಧಿಕಾರವನ್ನು ಹೊಂದಿರುವ ಯಾವನೇ ವ್ಯಕ್ತಿಯು, ಅಂಥ ಲಿಖಿತಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಿದ್ದ ಹೊರತು, ಯಾವುದೇ ಉದ್ದೇಶಕ್ಕಾಗಿ ಅಂಗೀಕರಿಸತಕ್ಕದ್ದಲ್ಲ ಅಥವಾ ಅದರ ಬಗ್ಗೆ ವ್ಯವಹರಿಸತಕ್ಕದ್ದಲ್ಲ ಅಥವಾ ಯಾವನೇ ಅಂಥ ವ್ಯಕ್ತಿ ಅಥವಾ ಯಾವನೇ ಸರ್ಕಾರಿ ಅಧಿಕಾರಿಯು ಅದನ್ನು ನೋಂದಾಯಿಸತಕ್ಕದ್ದಲ್ಲ ಅಥವಾ ಅಧಿಪ್ರಮಾಣಿಸತಕ್ಕದ್ದಲ್ಲ:

ಪರಂತು,–

(ಕ) ಕೇವಲ ಹದಿನೈದು ಪೈಸೆಯನ್ನು ಮೀರದ ಸುಂಕವನ್ನು ವಿಧಿಸಬಹುದಾದ ಅಥವಾ 3ನೇ ಪ್ರಕರಣದ (ಕ) ಮತ್ತು (ಖ) ಖಂಡಗಳ ಮೇರೆಗೆ ಇಪ್ಪತ್ತೈದು ಪೈಸೆ ಸುಂಕವನ್ನು ವಿಧಿಸಬಹುದಾದ ಫಸಲಿನ ಅಡಮಾನದ (ಅನುಸೂಚಿಯ 35 (ಕ) ಅನುಚ್ಛೇದ ಲಿಖಿತವಲ್ಲದ ಯಾವುದೇ ಲಿಖಿತವನ್ನು ಎಲ್ಲ ನ್ಯಾಯ ಸಮ್ಮತ ಹೊರತುಪಡಿಸುವಿಕೆಗಳಿಗೆ ಒಳಪಟ್ಟು, ಅದರ ಮೇಲೆ ವಿಧಿಸಬಹುದಾದಂಥ ಸುಂಕವನ್ನು ಅಥವಾ ಸಾಕಷ್ಟಿಲ್ಲದ ಸ್ಟಾಂಪನ್ನು ಹಚ್ಚಿದ ಲಿಖಿತದ ಸಂದರ್ಭದಲ್ಲಿ ಐದು ರೂಪಾಯಿಗಳ ದಂಡದೊಂದಿಗೆ, ಅಂಥ ಕೊರತೆಯನ್ನು ತಪ್ಪಿಸಲು ಅಗತ್ಯವಿರುವ ಮೊಬಲಗನ್ನು ಅಥವಾ ಸರಿಯಾದ ಸುಂಕದ ಮೊಬಲಗಿನ ಹತ್ತರಷ್ಟು ಅಥವಾ ಅದರ ಕೊರತೆಯ ಭಾಗವು ಐದು ರೂಪಾಯಿಗಳನ್ನು ಮೀರಿದರೆ, ಅಂಥ ಸುಂಕ ಅಥವಾ ಭಾಗದ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು;

(ಖ) ಯಾವುದೇ ಬಗೆಯ ಕರಾರು ಅಥವಾ ಒಪ್ಪಂದವನ್ನು ಎರಡು ಅಥವಾ ಹೆಚ್ಚು ಪತ್ರಗಳನ್ನೊಳಗೊಂಡ ಪತ್ರ ವ್ಯವಹಾರದ ಮೂಲಕ ಮಾಡಿಕೊಂಡಿರುವಲ್ಲಿ ಮತ್ತು ಈ ಪತ್ರಗಳ ಪೈಕಿ ಯಾವುದೇ ಒಂದು ಪತ್ರವು ಸರಿಯಾದ ಸ್ಟಾಂಪನ್ನು ಹೊಂದಿರುವಲ್ಲಿ ಆ ಕರಾರು ಅಥವಾ ಒಪ್ಪಂದಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಲಾಗಿದೆ ಎಂದು ಭಾವಿಸತಕ್ಕದ್ದು;

(ಗ) ಇಲ್ಲಿ ಅಡಕವಾಗಿರುವುದು ಯಾವುದೂ ದಂಡ ಪ್ರಕ್ರಿಯಾ ಸಂಹಿತೆ, 1898ರ ಅಧ್ಯಾಯ XII ಅಥವಾ ಅಧ್ಯಾಯ XXXVIರ ಮೇರೆಗಿನ ವ್ಯವಹರಣೆಗಳನ್ನು ಹೊರತುಪಡಿಸಿ ಕ್ರಿಮಿನಲ್ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ, ಸಾಕ್ಷ್ಯದಲ್ಲಿ ಯಾವುದೇ ಲಿಖಿತವನ್ನು ಸಾಕ್ಷ್ಯವನ್ನಾಗಿ ಅಂಗೀಕರಿಸುವುದನ್ನು ಪ್ರತಿಬಂಧಿಸತಕ್ಕದ್ದಲ್ಲ;

(ಫ) ಇಲ್ಲಿ ಅಡಕವಾಗಿರುವುದು ಯಾವುದೂ, ಅಂಥ ಲಿಖಿತವನ್ನು ಸರ್ಕಾರವು ಅಥವಾ ಅದರ ಪರವಾಗಿ ಬರೆದು ಕೊಟ್ಟಿರುವಾಗ, ಅಥವಾ ಈ ಅಧಿನಿಯಮದ 32ನೇ ಪ್ರಕರಣ ಅಥವಾ ಯಾವುದೇ ಇತರ ಉಪಬಂಧದ ಮೇಲೆ ಉಪಬಂಧಿಸಿದಂತೆ ಡೆಪ್ಯುಟಿ ಕಮಿಷನರನ ಪ್ರಮಾಣ ಪತ್ರವನ್ನು ಹೊಂದಿರುವಲ್ಲಿ ಮತ್ತು ಅಂಥ ಪ್ರಮಾಣ ಪತ್ರವನ್ನು VIನೇ ಅಧ್ಯಾಯದ ಉಪಬಂಧಗಳ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಪುನರೀಕ್ಷಣೆ ಮಾಡಿಲ್ಲದೆ ಇರುವಲ್ಲಿ, ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಲಿಖಿತವನ್ನು ಅಂಗೀಕರಿಸುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.

**35. ಲಿಖಿತದ ಅಂಗೀಕಾರವನ್ನು ಯಾವಾಗ ಪ್ರಶ್ನಿಸತಕ್ಕದ್ದಲ್ಲ:–** ಲಿಖಿತವನ್ನು ಸಾಕ್ಷ್ಯವಾಗಿ ಅಂಗೀಕರಿಸುವಲ್ಲಿ 58ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ಹೊರತು, ಲಿಖಿತಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಿಲ್ಲವೆಂಬ ಕಾರಣದ ಮೇಲೆ ಅದೇ ದಾವೆ ಅಥವಾ ವ್ಯವಹರಣೆಯ ಯಾವುದೇ ಹಂತದಲ್ಲಿ ಅಂಥ ಅಂಗೀಕಾರವನ್ನು ಪ್ರಶ್ನಿಸತಕ್ಕದ್ದಲ್ಲ.

**36. ಸರಿಯಾದ ಸ್ಟಾಂಪನ್ನು ಹಚ್ಚಿಲ್ಲದೆ ಇರುವ ಲಿಖಿತಗಳ ಅಂಗೀಕಾರ:–** ಲಿಖಿತವು ಸಾಕಷ್ಟು ಮೊಬಲಗಿನ ಆದರೆ ಸರಿಯಾಗಿಲ್ಲದ ವಿವರಣೆಯ ಸ್ಟಾಂಪನ್ನು ಹೊಂದಿರುವಲ್ಲಿ, ಅದಕ್ಕೆ ವಿಧಿಸಬಹುದಾದ ಸುಂಕವನ್ನು ಸಂದಾಯ ಮಾಡಿದ ಮೇಲೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಲಾಗಿದೆ ಎಂದು ಅದು ಪ್ರಮಾಣೀಕರಿಸಬಹುದೆಂದು ಮತ್ತು ಹಾಗೆ ಪ್ರಮಾಣೀಕರಿಸಿದ ಯಾವುದೇ ಲಿಖಿತವು, ಅದನ್ನು ಬರೆದು ಕೊಟ್ಟ ದಿನಾಂಕದಿಂದ ಕ್ರಮಬದ್ಧವಾಗಿ ಅದಕ್ಕೆ ಸ್ಟಾಂಪನ್ನು ಹಚ್ಚಲಾಗಿದೆ ಎಂದು ಆಗ ಭಾವಿಸತಕ್ಕದ್ದು ಎಂದು ಉಪಬಂಧಿಸುವ ನಿಯಮಗಳನ್ನು ರಾಜ್ಯ ಸರ್ಕಾರವು ರಚಿಸಬಹುದು.

**37. ಪರಿಬದ್ಧಗೊಳಿಸಲಾದ ಲಿಖಿತಗಳೊಡನೆ ವ್ಯವಹರಿಸುವ ಬಗೆ:–** (1) 33ನೇ ಪ್ರಕರಣದ ಮೇರೆಗೆ ಲಿಖಿತವನ್ನು ಪರಿಬದ್ಧಗೊಳಿಸುವ ವ್ಯಕ್ತಿಯು, ಕಾನೂನಿನ ಮೂಲಕ ಅಥವಾ ಪಕ್ಷಕಾರರ ಸಮ್ಮತಿಯಿಂದ ಸಾಕ್ಷ್ಯವನ್ನು ಸ್ವೀಕರಿಸಲು ಅಧಿಕಾರವನ್ನು ಹೊಂದಿರುವಾಗ ಮತ್ತು 34ನೇ ಪ್ರಕರಣದ ಮೂಲಕ ಉಪಬಂಧಿಸಿದಂತೆ ದಂಡವನ್ನು ಅಥವಾ 36ನೇ ಪ್ರಕರಣದ ಮೂಲಕ ಉಪಬಂಧಿಸಿದಂತೆ ಸುಂಕವನ್ನು ಸಂದಾಯ ಮಾಡಿದ ಮೇಲೆ ಅಂಥ ಲಿಖಿತವನ್ನು ಸಾಕ್ಷ್ಯವಾಗಿ ಅಂಗೀಕರಿಸಿದಾಗ ಅವನು ಡೆಪ್ಯುಟಿ ಕಮಿಷನರಿಗೆ ಅಂಥ ಲಿಖಿತದ ಅಧಿಪ್ರಮಾಣಿತ ಪ್ರತಿಯನ್ನು, ಅದರ ಬಗ್ಗೆ ವಿಧಿಸಿದ ಸುಂಕ ಮತ್ತು ದಂಡದ ಮೊಬಲಗನ್ನು ಬರಹದಲ್ಲಿ ನಿರೂಪಿಸುವ ಪ್ರಮಾಣ ಪತ್ರದೊಂದಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಮೊಬಲಗನ್ನು ಡೆಪ್ಯುಟಿ ಕಮೀಷನರಿಗೆ ಅಥವಾ ಈ ಬಗ್ಗೆ ಅವನು ನಿಯಮಿಸಬಹುದಾದಂಥ ವ್ಯಕ್ತಿಗೆ ಕಳುಹಿಸತಕ್ಕದ್ದು.

(2) ಇತರ ಪ್ರತಿಯೊಂದು ಸಂದರ್ಭದಲ್ಲಿ, ಲಿಖಿತವನ್ನು ಹಾಗೆ ಪರಿಬದ್ಧಗೊಳಿಸುವ ವ್ಯಕ್ತಿಯು ಅದರ ಮೂಲ ಪ್ರತಿಯನ್ನು ಡೆಪ್ಯುಟಿ ಕಮಿಷನರಿಗೆ ಕಳುಹಿಸಿಕೊಡತಕ್ಕದ್ದು.

**38. 37ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಿದ ದಂಡವನ್ನು ಮರುಪಾವತಿ ಮಾಡಲು ಡೆಪ್ಯುಟಿ ಕಮಿಷನರನ ಅಧಿಕಾರ:–** (1) 37ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಡೆಪ್ಯುಟಿ ಕಮೀಷನರಿಗೆ ಲಿಖಿತದ ಪ್ರತಿಯನ್ನು ಕಳುಹಿಸಿದಾಗ ಅವನು ಸೂಕ್ತವೆಂದು ಯೋಚಿಸಿದರೆ, ಅಂಥ ಲಿಖಿತಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಿದಂಥ ಐದು ರೂಪಾಯಿಗಳಿಗೆ ಮೀರಿದ ದಂಡದ ಯಾವುದೇ ಭಾಗವನ್ನು ಮರುಪಾವತಿ ಮಾಡಬಹುದು.

(2) ಅಂಥ ಲಿಖಿತವನ್ನು, 13ನೇ ಪ್ರಕರಣ ಅಥವಾ 14ನೇ ಪ್ರಕರಣವನ್ನು ಉಲ್ಲಂಘಿಸಿ ಬರೆಯಲಾಗಿದೆ ಎಂಬ ಕಾರಣ ಮಾತ್ರದಿಂದಲೇ ಪರಿಬದ್ಧಗೊಳಿಸಿರುವಲ್ಲಿ, ಡೆಪ್ಯುಟಿ ಕಮಿಷನರನು ಹಾಗೆ ಸಂದಾಯ ಮಾಡಿದ ಇಡೀ ದಂಡವನ್ನು ಮರುಪಾವತಿ ಮಾಡಬಹುದು.

**39. ಪರಿಬದ್ಧಗೊಳಿಸಿದ ಲಿಖಿತಗಳಿಗೆ ಸ್ಟಾಂಪು ಹಚ್ಚಲು ಡೆಪ್ಯುಟಿ ಕಮಿಷನರನ ಅಧಿಕಾರ:–** (1) ಕೇವಲ ಹದಿನೈದು ಪೈಸೆಯನ್ನು ಮೀರಿದ ಸುಂಕವನ್ನು ವಿಧಿಸಬಹುದಾದ ಅಥವಾ 3ನೇ ಪ್ರಕರಣದ (ಕ) ಅಥವಾ (ಖ)

ಖಂಡದ ಮೇರೆಗೆ ಇಪ್ಪತ್ತೈದು ಪೈಸೆ ಸುಂಕವನ್ನು ವಿಧಿಸಬಹುದಾದ ಫಸಲು ಅಡಮಾನದ (ಅನುಸೂಚಿಯ 35ಕ ಅನುಚ್ಛೇದ) ಲಿಖಿತವಲ್ಲದ 33ನೇ ಪ್ರಕರಣದ ಮೇರೆಗೆ ಯಾವುದೇ ಲಿಖಿತವನ್ನು ಡೆಪ್ಯುಟಿ ಕಮಿಷನರನು ಪರಿಬದ್ಧಗೊಳಿಸಿದಾಗ ಅಥವಾ 37ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅವನಿಗೆ ಕಳುಹಿಸಿದ ಯಾವುದೇ ಲಿಖಿತವನ್ನು ಸ್ವೀಕರಿಸಿದಾಗ, ಅವನು ಈ ಕೆಳಕಂಡ ಪ್ರಕ್ರಿಯೆಯನ್ನು ಅಂಗೀಕರಿಸತಕ್ಕದ್ದು–

(ಕ) ಅಂಥ ಲಿಖಿತಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಲಾಗಿದೆ, ಅಥವಾ ಅದರ ಮೇಲೆ ಸುಂಕವನ್ನು ವಿಧಿಸಬೇಕಾಗಿಲ್ಲ ಎಂದು ಅವನು ಅಭಿಪ್ರಾಯಪಟ್ಟರೆ, ಸಂದರ್ಭಾನುಸಾರ, ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಲಾಗಿದೆ ಅಥವಾ ಹಾಗೆ ವಿಧಿಸಬೇಕಾಗಿಲ್ಲ ಎಂದು ಅದರಲ್ಲಿ ಹಿಂಬರಹದ ಮೂಲಕ ಅವನು ಪ್ರಮಾಣೀಕರಿಸತಕ್ಕದ್ದು;

(ಖ) ಅಂಥ ಲಿಖಿತಕ್ಕೆ ಸುಂಕವನ್ನು ವಿಧಿಸಬಹುದಾಗಿದೆ ಮತ್ತು ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಲಾಗಿಲ್ಲ ಎಂದು ಅವನು ಅಭಿಪ್ರಾಯಪಟ್ಟರೆ, ಅವನು ಐದು ರೂಪಾಯಿಗಳ ದಂಡದೊಂದಿಗೆ ಸರಿಯಾದ ಸುಂಕ ಅಥವಾ ಅದರ ಕೊರತೆಯನ್ನು ತುಂಬಿಕೊಡಲು ಅಗತ್ಯವಾದ ಮೊಬಲಗನ್ನು ಅಥವಾ ಅವನು ಸೂಕ್ತವೆಂದು ಯೋಚಿಸಿದರೆ ಸರಿಯಾದ ಸುಂಕದ ಮೊಬಲಗಿನ ಹತ್ತರಷ್ಟನ್ನು ಮೀರದ ಮೊಬಲಗನ್ನು ಅಥವಾ ಅದರ ಕೊರತೆಯ ಭಾಗವನ್ನು, ಅಂಥ ಮೊಬಲಗು ಐದು ರೂಪಾಯಿಗಳನ್ನು ಮೀರಿದ ಮೊಬಲಗು ಆಗಿರಲಿ ಅಥವಾ ಅದಕ್ಕಿಂತ ಕಡಿಮೆಯದ್ದಾಗಿರಲಿ ಅದನ್ನು ಸಂದಾಯ ಮಾಡಲು ಅಗತ್ಯಪಡಿಸತಕ್ಕದ್ದು:

ಪರಂತು, ಅಂಥ ಲಿಖಿತವನ್ನು 13ನೇ ಪ್ರಕರಣ ಅಥವಾ 14ನೇ ಪ್ರಕರಣವನ್ನು ಉಲ್ಲಂಘಿಸಿ ಬರೆಯಲಾಗಿದೆ ಎಂಬ ಕಾರಣ ಮಾತ್ರದಿಂದಲೇ ಪರಿಬದ್ಧಗೊಳಿಸಿರುವಾಗ ಡೆಪ್ಯುಟಿ ಕಮಿಷನರನು, ಅವನು ಸೂಕ್ತವೆಂದು ಯೋಚಿಸಿದರೆ, ಈ ಪ್ರಕರಣದ ಮೂಲಕ ನಿಯಮಿಸಿದ ಇಡೀ ದಂಡವನ್ನು ಮಾಫಿ ಮಾಡಬಹುದು.

(2) 6ನೇ ಅಧ್ಯಾಯದ ಮೇರೆಗೆ ಮಾಡಿದ ಯಾವುದೇ ಆದೇಶಗಳಿಗೆ ಒಳಪಟ್ಟು, (1)ನೇ ಉಪಪ್ರಕರಣದ (ಕ) ಖಂಡದ ಮೇರೆಗಿನ ಪ್ರತಿಯೊಂದು ಪ್ರಮಾಣ ಪತ್ರವು ಈ ಅಧಿನಿಯಮದ ಉದ್ದೇಶಕ್ಕಾಗಿ, ಅದರಲ್ಲಿ ನಿರೂಪಿಸಿದ ವಿಷಯಗಳ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(3) ಲಿಖಿತವನ್ನು 37ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರನಿಗೆ ಕಳುಹಿಸಲಾಗಿರುವಲ್ಲಿ, ಆ ಡೆಪ್ಯುಟಿ ಕಮಿಷನರನು, ಈ ಪ್ರಕರಣದ ಮೂಲಕ ಉಪಬಂಧಿಸಿದಂತೆ ಅವನು ಅದರೊಡನೆ ವ್ಯವಹರಿಸಿದಾಗ ಅದನ್ನು ಪರಿಬದ್ಧಗೊಳಿಸಿರುವ ಅಧಿಕಾರಿಗೆ ಹಿಂದಿರುಗಿಸತಕ್ಕದ್ದು.

**40. ಆಕಸ್ಮಿಕವಾಗಿ ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲದ ಲಿಖಿತಗಳು:–** ಹದಿನೈದು ಪೈಸೆಯನ್ನು ಮೀರದ ಸುಂಕವನ್ನು ವಿಧಿಸಬಹುದಾದ ಅಥವಾ 3ನೇ ಪ್ರಕರಣದ (ಕ) ಅಥವಾ (ಖ) ಖಂಡದ ಮೇರೆಗೆ ಇಪ್ಪತ್ತೈದು ಪೈಸೆಯ ಸುಂಕವನ್ನು ವಿಧಿಸಬಹುದಾದ ಫಸಲು ಅಡಮಾನದ (ಅನುಸೂಚಿಯ 35ಕ ಅನುಚ್ಛೇದ) ಲಿಖಿತವಲ್ಲದ, ಸುಂಕವನ್ನು ವಿಧಿಸಬಹುದಾದ, ಮತ್ತು ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲದ ಯಾವುದೇ ಲಿಖಿತವನ್ನು, ಯಾವನೇ ವ್ಯಕ್ತಿಯು ತಾನಾಗಿಯೇ ಡೆಪ್ಯುಟಿ ಕಮಿಷನರನ ಮುಂದೆ ಅದನ್ನು ಬರೆದುಕೊಟ್ಟ ಅಥವಾ ಮೊದಲು ಬರೆದುಕೊಟ್ಟ ದಿನಾಂಕದಿಂದ ಒಂದು ವರ್ಷದ ಒಳಗೆ ಹಾಜರುಪಡಿಸಿದರೆ ಮತ್ತು ಅಂಥ ವ್ಯಕ್ತಿಯು ಡೆಪ್ಯುಟಿ ಕಮಿಷನರನ ಗಮನಕ್ಕೆ ಅಂಥ ಲಿಖಿತಕ್ಕೆ ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲವೆಂಬ ಸಂಗತಿಯನ್ನು ತಂದರೆ ಮತ್ತು ಸರಿಯಾದ ಸುಂಕದ ಮೊಬಲಗು ಅಥವಾ ಅದರ ಕೊರತೆಯನ್ನು ತುಂಬಿಕೊಡಲು ಅಗತ್ಯವಿರುವ ಮೊಬಲಗನ್ನು ಡೆಪ್ಯುಟಿ ಕಮಿಷನರನಿಗೆ ಸಂದಾಯ ಮಾಡಲು ಕೊಡ ಮಾಡಿದರೆ ಮತ್ತು ಅಂಥ ಲಿಖಿತಕ್ಕೆ ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿಲ್ಲದೇ ಇರುವುದು ಆಕಸ್ಮಿಕ, ಪ್ರಮಾದ ಅಥವಾ ಜರೂರು ಅವಶ್ಯಕತೆಯಿಂದ ಆಗಿರುವುದಾಗಿ ಮನದಟ್ಟಾದರೆ, ಅವನು 33 ಮತ್ತು 39ನೇ ಪ್ರಕರಣದ ಮೇರೆಗೆ ಮುಂದುವರೆಯುವುದಕ್ಕೆ

ಬದಲಾಗಿ ಅಂಥ ಮೊಬಲಗನ್ನು ಸ್ವೀಕರಿಸಬಹುದು ಮತ್ತು ಇಲ್ಲಿ ಇನ್ನು ಮುಂದೆ ನಿಯಮಿಸಿದಂತೆ ಮುಂದುವರಿಯಬಹುದು.

**41. 34, 39 ಅಥವಾ 40ನೇ ಪ್ರಕರಣಗಳ ಮೇರೆಗೆ ಸುಂಕವನ್ನು ಸಂದಾಯ ಮಾಡಲಾಗಿರುವಂಥ ಲಿಖಿತಗಳ ಮೇಲೆ ಹಿಂಬರಹ:–** (1) ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ಸುಂಕ ಮತ್ತು ದಂಡವನ್ನು (ಯಾವುದಾದರೂ ಇದ್ದರೆ) ಅದನ್ನು 34ನೇ ಪ್ರಕರಣ, 39ನೇ ಪ್ರಕರಣ ಅಥವಾ 40ನೇ ಪ್ರಕರಣದ ಮೇರೆಗೆ ಸಂದಾಯ ಮಾಡಿರುವಾಗ ಸಂದರ್ಭಾನುಸಾರ ಅಂಥ ಲಿಖಿತವನ್ನು ಸಾಕ್ಷ್ಯವಾಗಿ ಅಂಗೀಕರಿಸಿದ ವ್ಯಕ್ತಿ ಅಥವಾ ಡೆಪ್ಯುಟಿ ಕಮಿಷನರರು ಸರಿಯಾದ ಸುಂಕ ಅಥವಾ ಸಂದರ್ಭಾನುಸಾರ ಸರಿಯಾದ ಸುಂಕ ಮತ್ತು ದಂಡವನ್ನು (ಪ್ರತಿಯೊಂದರ ಮೊಬಲಗನ್ನು ನಿರೂಪಿಸಿ) ಅದರ ಬಗ್ಗೆ ವಿಧಿಸಲಾಗಿದೆ ಎಂಬುದನ್ನು ಮತ್ತು ಅವುಗಳನ್ನು ಸಂದಾಯ ಮಾಡುವ ವ್ಯಕ್ತಿಯ ಹೆಸರು ಮತ್ತು ನಿವಾಸವನ್ನು ಅದರ ಮೇಲೆ ಹಿಂಬರಹದ ಮೂಲಕ ಪ್ರಮಾಣೀಕರಿಸತಕ್ಕದ್ದು.

(2) ಹಾಗೆ ಹಿಂಬರಹ ಮಾಡಿದ ಪ್ರತಿಯೊಂದು ಲಿಖಿತವು ಆ ತರುವಾಯ ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಾಗತಕ್ಕದ್ದು ಮತ್ತು ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚಲಾಗಿದ್ದಿದ್ದರೆ ಹೇಗೋ ಹಾಗೆ ಅದನ್ನು ನೋಂದಾಯಿಸಬಹುದು ಮತ್ತು ಅದರ ಬಗ್ಗೆ ವ್ಯವಹರಿಸಬಹುದು ಮತ್ತು ಅದನ್ನು ಅಧಿಪ್ರಮಾಣಿಸಬಹುದು ಮತ್ತು ಯಾರ ಸ್ವಾಧೀನದಿಂದ ಪರಿಬದ್ಧಗೊಳಿಸಿದ ಅಧಿಕಾರಿ ಕೈಗೆ ಅದು ಬಂದಿತೊ ಆ ವ್ಯಕ್ತಿಗೆ ಅಥವಾ ಅಂಥ ವ್ಯಕ್ತಿಯು ನಿರ್ದೇಶಿಸಬಹುದಾದಂತೆ, ಈ ಬಗ್ಗೆ ಅವನು ಮಾಡಿಕೊಂಡ ಅರ್ಜಿಯ ಮೇಲೆ ವಶಾವಣೆ ಮಾಡತಕ್ಕದ್ದು:

ಪರಂತು, (ಕ) 34ನೇ ಪ್ರಕರಣದ ಮೇರೆಗೆ ಸುಂಕ ಮತ್ತು ದಂಡವನ್ನು ಸಂದಾಯ ಮಾಡಿದ ತರುವಾಯ ಸಾಕ್ಷ್ಯವಾಗಿ ಅಂಗೀಕರಿಸಲಾದಂಥ ಯಾವುದೇ ಲಿಖಿತವನ್ನು ಅಂಥ ಪರಿಬದ್ಧಗೊಳಿಸುವಿಕೆಯ ದಿನಾಂಕದಿಂದ ಒಂದು ತಿಂಗಳು ಮುಕ್ತಾಯವಾಗುವುದಕ್ಕೆ ಮುಂಚೆ ಅಥವಾ ಡೆಪ್ಯುಟಿ ಕಮೀಷನರರು ಅದನ್ನು ಮತ್ತಷ್ಟು ತಡೆಹಿಡಿಯುವುದು ಅಗತ್ಯವೆಂದು ಪ್ರಮಾಣೀಕರಿಸಿದರೆ ಮತ್ತು ಅಂಥ ಪ್ರಮಾಣ ಪತ್ರವನ್ನು ರದ್ದುಪಡಿಸದಿದ್ದರೆ ಹಾಗೆ ವಶಾವಣೆ ಮಾಡತಕ್ಕದ್ದಲ್ಲ;

(ಖ) ಈ ಪ್ರಕರಣದಲ್ಲಿರುವುದು ಯಾವುದೂ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೊದಲನೇ ಅನುಸೂಚಿಯ xiiiನೇ ಕ್ರಮಾದೇಶದ 9ನೇ ನಿಯಮವನ್ನು ಬಾಧಕಗೊಳಿಸತಕ್ಕದ್ದಲ್ಲ.

**42. ಸ್ಟಾಂಪು ಕಾನೂನಿನ ವಿರುದ್ಧ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್:–** ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದ ಮೇರೆಗೆ ವ್ಯವಹರಣೆಗಳನ್ನು ಕೈಗೊಳ್ಳುವುದು ಅಥವಾ ದಂಡದ ಸಂದಾಯವು, ಅಂಥ ಲಿಖಿತಕ್ಕೆ ಸಂಬಂಧಿಸಿದಂತೆ ಸ್ಟಾಂಪುಗಳಿಗೆ ಸಂಬಂಧಪಟ್ಟ ಕಾನೂನು ವಿರುದ್ಧ ಅಪರಾಧವನ್ನು ಮಾಡಿರುವ ಹಾಗೆ ಕಂಡುಬಂದ ಯಾವನೇ ವ್ಯಕ್ತಿಯ ಪ್ರಾಸಿಕ್ಯೂಷನನ್ನು ಪ್ರತಿಷೇಧಿಸತಕ್ಕದ್ದಲ್ಲ:

ಪರಂತು, ಯಾವ ಲಿಖಿತಕ್ಕೆ ಸಂಬಂಧಿಸಿದಂತೆ ಅಂಥ ದಂಡವನ್ನು ಸಂದಾಯ ಮಾಡಿದ್ದರೆ ಸರಿಯಾದ ಸುಂಕದ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ ಆ ಅಪರಾಧವನ್ನು ಮಾಡಲಾಗಿತ್ತೆಂದು ಡೆಪ್ಯುಟಿ ಕಮಿಷನರರಿಗೆ ಕಂಡು ಬಂದ ಹೊರತು, ಆ ಯಾವುದೇ ಲಿಖಿತದ ಸಂದರ್ಭದಲ್ಲಿ ಅಂಥ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

**43. ಸುಂಕ ಅಥವಾ ದಂಡವನ್ನು ಸಂದಾಯ ಮಾಡುವ ವ್ಯಕ್ತಿಗಳು ಕೆಲವು ಸಂದರ್ಭಗಳಲ್ಲಿ ಅದನ್ನು ವಸೂಲಿ ಮಾಡಬಹುದು:–** (1) ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯು 34ನೇ ಪ್ರಕರಣ, 36ನೇ ಪ್ರಕರಣ, 39ನೇ ಪ್ರಕರಣ ಅಥವಾ 40ನೇ ಪ್ರಕರಣದ ಮೇರೆಗೆ ಮತ್ತು ಒಪ್ಪಂದದ ಮೂಲಕ ಅಥವಾ 30ನೇ ಪ್ರಕರಣದ ಉಪಬಂಧಗಳು ಅಥವಾ ಅಂಥ ಲಿಖಿತವನ್ನು ಬರೆದುಕೊಟ್ಟ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ

ಇತರ ಅಧಿನಿಯಮಿತಿಯ ಮೇರೆಗೆ ಯಾವುದೇ ಸುಂಕ ಅಥವಾ ದಂಡವನ್ನು ಸಂದಾಯ ಮಾಡಿರುವಾಗ, ಅಂಥ ಲಿಖಿತಕ್ಕಾಗಿ ಸರಿಯಾದ ಸ್ಟಾಂಪನ್ನು ಒದಗಿಸುವ ವೆಚ್ಚವನ್ನು ವಹಿಸಲು ಯಾವನೇ ಇತರ ವ್ಯಕ್ತಿಯು ಬದ್ಧನಾಗಿದ್ದರೆ, ಮೊದಲು ನಮೂದಿಸಿದ ವ್ಯಕ್ತಿಯು ಅಂಥ ಇತರ ವ್ಯಕ್ತಿಯಿಂದ ಹಾಗೆ ಸಂದಾಯ ಮಾಡಿದ ಸುಂಕ ಅಥವಾ ದಂಡದ ಮೊಬಲಗನ್ನು ವಸೂಲು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

(2) ಅಂಥ ವಸೂಲಿ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ಅಂಥ ಲಿಖಿತಕ್ಕೆ ಸಂಬಂಧಿಸಿದಂತೆ ಕೊಡಲಾದ ಯಾವುದೇ ಪ್ರಮಾಣ ಪತ್ರವು ಅದರಲ್ಲಿ ಪ್ರಮಾಣೀಕರಿಸಿದ ವಿಷಯಗಳ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(3) ಅಂಥ ಮೊಬಲಗನ್ನು ನ್ಯಾಯಾಲಯವು ಸೂಕ್ತವೆಂದು ಯೋಚಿಸಿದರೆ, ಅಂಥ ವ್ಯಕ್ತಿಗಳು ಪಕ್ಷಕಾರರಾಗಿರುವಂಥ ಮತ್ತು ಅಂಥ ಲಿಖಿತವನ್ನು ಸಾಕ್ಷ್ಯದಲ್ಲಿ ಕೊಡಮಾಡಿದಂಥ ಯಾವುದೇ ದಾವೆ ಅಥವಾ ವ್ಯವಹರಣೆಗಳಲ್ಲಿ ಖರ್ಚುಗಳ ಬಗೆಗಿನ ಯಾವುದೇ ಆದೇಶದಲ್ಲಿ ಸೇರಿಸಬಹುದು. ನ್ಯಾಯಾಲಯವು ಅಂಥ ಆದೇಶದಲ್ಲಿ ಆ ಮೊಬಲಗನ್ನು ಸೇರಿಸದಿದ್ದರೆ, ಆ ಮೊಬಲಗಿನ ವಸೂಲಿಗಾಗಿ ಯಾವುದೇ ಹೆಚ್ಚಿನ ವ್ಯವಹರಣೆಗಳು ಊರ್ಜಿತವಾಗತಕ್ಕದ್ದಲ್ಲ.

**44. ಕೆಲವು ಸಂದರ್ಭಗಳಲ್ಲಿ ದಂಡ ಅಥವಾ ಹೆಚ್ಚಿನ ಸುಂಕವನ್ನು ಮರುಪಾವತಿ ಮಾಡಲು ರಾಜಸ್ವ ಪ್ರಾಧಿಕಾರಿಯ ಅಧಿಕಾರ:–** (1) 34ನೇ ಪ್ರಕರಣ ಅಥವಾ 39ನೇ ಪ್ರಕರಣಗಳ ಮೇರೆಗೆ ಯಾವುದೇ ದಂಡವನ್ನು ಸಂದಾಯ ಮಾಡಿರುವಲ್ಲಿ, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯು, ಸಂದಾಯ ಮಾಡಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಬರಹದಲ್ಲಿ ಮಾಡಿದ ಅರ್ಜಿಯ ಮೇಲೆ ಅಂಥ ದಂಡವನ್ನು ಪೂರ್ಣವಾಗಿ ಅಥವಾ ಭಾಗಶಃ ಮರುಪಾವತಿ ಮಾಡಬಹುದು.

(2) ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಕಾನೂನು ಸಮ್ಮತವಾಗಿ ಅದಕ್ಕೆ ವಿಧಿಸಬಹುದಾದುದಕ್ಕಿಂತ ಹೆಚ್ಚಿಗೆ ಸ್ಟಾಂಪು ಸುಂಕವನ್ನು ವಿಧಿಸಲಾಗಿರುವಲ್ಲಿ ಮತ್ತು 34ನೇ ಪ್ರಕರಣ ಅಥವಾ 39ನೇ ಪ್ರಕರಣದ ಮೇರೆಗೆ ಅದನ್ನು ಸಂದಾಯ ಮಾಡಲಾಗಿರುವಲ್ಲಿ ಅಂಥ ಪ್ರಾಧಿಕಾರಿಯು ಅದನ್ನು ವಿಧಿಸಿದ ಆದೇಶದ ಮೂರು ತಿಂಗಳೊಳಗೆ ಬರಹದಲ್ಲಿನ ಅರ್ಜಿಯ ಮೇಲೆ ಹೆಚ್ಚಿನದನ್ನು ಮರು ಪಾವತಿ ಮಾಡಬಹುದು:

ಪರಂತು, ರಾಜ್ಯ ಸರ್ಕಾರದ ಮಂಜೂರಾತಿಯೊಂದಿಗೆ, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯು, (1) ಅಥವಾ (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ತರುವಾಯ ಮರುಪಾವತಿಯನ್ನು ಮಾಡಬಹುದು.

**45. 37ನೇ ಪ್ರಕರಣದ ಮೇರೆಗೆ ಕಳುಹಿಸಿದ ಲಿಖಿತಗಳು ಕಳೆದುಹೋಗಿದ್ದಕ್ಕಾಗಿ ಹೊಣೆಗಾರಿಕೆ ಇಲ್ಲದಿರುವುದು:–** (1) 37ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರಿಗೆ ಕಳುಹಿಸಿದ ಯಾವುದೇ ಲಿಖಿತವು ರವಾನೆಯಲ್ಲಿರುವಾಗ ಕಳೆದು ಹೋದರೆ, ನಾಶ ಹೊಂದಿದರೆ ಅಥವಾ ಹಾನಿಗೊಂಡರೆ ಅದನ್ನು ಕಳುಹಿಸುವ ವ್ಯಕ್ತಿಯು ಅಂಥ ಕಳೆದು ಹೋದುದಕ್ಕೆ, ನಾಶಕ್ಕೆ ಅಥವಾ ಹಾನಿಗೆ ಹೊಣೆಗಾರನಾಗತಕ್ಕದ್ದಲ್ಲ.

(2) ಯಾವುದೇ ಲಿಖಿತವನ್ನು ಹಾಗೆ ಕಳುಹಿಸಬೇಕಾಗಿರುವಾಗ, ಯಾವ ವ್ಯಕ್ತಿಯ ಸ್ವಾಧೀನದಿಂದ ಅದನ್ನು ಪರಿಬದ್ಧಗೊಳಿಸಿದ ವ್ಯಕ್ತಿಗೆ ಅದು ಬಂದಿತೋ ಆ ವ್ಯಕ್ತಿಯು, ಅಂಥ ಮೊದಲು ನಮೂದಿಸಿದ ವ್ಯಕ್ತಿಯ ವೆಚ್ಚದಲ್ಲಿ ಅದರ ಪ್ರತಿಯನ್ನು ಮಾಡಿಕೊಡಲು ಮತ್ತು ಅಂಥ ಲಿಖಿತವನ್ನು ಪರಿಬದ್ಧಗೊಳಿಸಿದ ವ್ಯಕ್ತಿಯು ಅಧಿ–ಪ್ರಮಾಣನ ಮಾಡಲು ಅಗತ್ಯಪಡಿಸಬಹುದು.

**45. ಕ. ಕಡಿಮೆ ಮೌಲ್ಯದ ಹಸ್ತಾಂತರಣದ ಲಿಖಿತ, ಇತ್ಯಾದಿಗಳೊಂದಿಗೆ ವ್ಯವಹರಿಸುವ ಬಗೆ:–** (1) ನೋಂದಣಿ ಅಧಿನಿಯಮ, 1908ರ (ಕೇಂದ್ರ ಅಧಿನಿಯಮ 1908ರ XVI) ಮೇರೆಗೆ ನೇಮಕಗೊಂಡ ನೋಂದಣಿ ಅಧಿಕಾರಿಯು, ಹಸ್ತಾಂತರಣ, ವಿನಿಮಯ ಅಥವಾ ದಾನದ ಯಾವುದೇ ಲಿಖಿತವನ್ನು ನೋಂದಾಯಿಸುವಾಗ,

ಹಸ್ತಾಂತರಣ, ವಿನಿಮಯ ಅಥವಾ ದಾನದ ವಸ್ತು ವಿಷಯವಾದಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಆ ಲಿಖಿತದಲ್ಲಿ ಸರಿಯಾಗಿ ನಮೂದಿಸಿಲ್ಲ ಎಂದು ನಂಬಲು ಕಾರಣವಿದ್ದರೆ, ಅವನು ಅಂಥ ಲಿಖಿತವನ್ನು ನೋಂದಾಯಿಸಿದ ತರುವಾಯ, ಅದನ್ನು ಡೆಪ್ಯುಟಿ ಕಮಿಷನರಿಗೆ ಅಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯ ಮತ್ತು ಅದರ ಮೇಲೆ ಸಂದಾಯ ಮಾಡಬೇಕಾದ ಸರಿಯಾದ ಸುಂಕದ ನಿರ್ಧರಣೆಗಾಗಿ ಅದನ್ನು ಒಪ್ಪಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಉಲ್ಲೇಖವನ್ನು ಸ್ವೀಕರಿಸಿದ ಮೇಲೆ ಡೆಪ್ಯುಟಿ ಕಮಿಷನರರು ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ವಿಚಾರಣೆಯನ್ನು ನಡೆಸಿದ ತರುವಾಯ, ಹಸ್ತಾಂತರಣ, ವಿನಿಮಯ ಅಥವಾ ದಾನದ ವಸ್ತು ವಿಷಯವಾದಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಮತ್ತು ಅದರ ಮೇಲೆ ಸಂದಾಯ ಮಾಡಬೇಕಾದ ಸುಂಕವನ್ನು ಆದೇಶದ ಮೂಲಕ ನಿರ್ಧರಿಸತಕ್ಕದ್ದು. ಸುಂಕದ ಮೊಬಲಗಿನಲ್ಲಿ ವ್ಯತ್ಯಾಸ ಯಾವುದಾದರೂ ಇದ್ದರೆ, ಅದನ್ನು ಸುಂಕವನ್ನು ಸಂದಾಯ ಮಾಡಲು ಹೊಣೆಗಾರನಾದ ವ್ಯಕ್ತಿಯು ಸಂದಾಯ ಮಾಡತಕ್ಕದ್ದು.

(3) ಡೆಪ್ಯುಟಿ ಕಮಿಷನರರು, ತಾನಾಗಿಯೇ (1)ನೇ ಉಪಪ್ರಕರಣದ ಮೇರೆಗೆ ಅವನಿಗೆ ಈಗಾಗಲೇ ಒಪ್ಪಿಸಿರದ ನೋಂದಣಿಯ ಹಸ್ತಾಂತರಣ, ವಿನಿಮಯ ಅಥವಾ ದಾನದ ಯಾವುದೇ ಲಿಖಿತದ ದಿನಾಂಕದಿಂದ ಎರಡು ವರ್ಷಗಳೊಳಗೆ ಹಸ್ತಾಂತರಣ, ವಿನಿಮಯ ಅಥವಾ ದಾನದ ವಸ್ತು ವಿಷಯವಾದಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯ ಮತ್ತು ಅದರ ಮೇಲೆ ಸಂದಾಯಮಾಡಬೇಕಾದ ಸುಂಕದ ಸರಿತನದ ಬಗ್ಗೆ ಅವನು ಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಆ ಲಿಖಿತವನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಅಂಥ ಪರೀಕ್ಷೆಯ ತರುವಾಯ ಅಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಆ ಲಿಖಿತದಲ್ಲಿ ಸರಿಯಾಗಿ ನಮೂದಿಸಲಾಗಿಲ್ಲ ಎಂದು ಅವನಿಗೆ ನಂಬಲು ಕಾರಣವಿದ್ದರೆ, ಅವನು ಅಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಮತ್ತು (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವ ಪ್ರಕ್ರಿಯೆಗೆ ಅನುಸಾರವಾಗಿ ಅದರ ಮೇಲೆ ಸಂದಾಯ ಮಾಡಬೇಕಾದ ಸುಂಕವನ್ನು ಆದೇಶದ ಮೂಲಕ ನಿರ್ಧರಿಸಬಹುದು. ಸುಂಕದ ಮೊಬಲಗಿನಲ್ಲಿ ವ್ಯತ್ಯಾಸ ಯಾವುದಾದರೂ ಇದ್ದರೆ ಅದನ್ನು, ಆ ಸುಂಕವನ್ನು ಸಂದಾಯ ಮಾಡಲು ಹೊಣೆಗಾರರಾದ ವ್ಯಕ್ತಿಗಳು ಸಂದಾಯ ಮಾಡತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1975ರ ಪ್ರಾರಂಭಕ್ಕೆ ಮುಂಚೆ ನೋಂದಾಯಿಸಿದ ಯಾವುದೇ ಲಿಖಿತಕ್ಕೆ ಅನ್ವಯವಾಗತಕ್ಕದ್ದಲ್ಲ.

(4) (2) ಅಥವಾ (3)ನೇ ಉಪಪ್ರಕರಣದ ಮೇರೆಗಿನ ಡೆಪ್ಯುಟಿ ಕಮಿಷನರರ ಆದೇಶವನ್ನು, ಆ ಸುಂಕವನ್ನು ಸಂದಾಯ ಮಾಡಲು ಹೊಣೆಗಾರನಾದ ವ್ಯಕ್ತಿಗೆ ತಿಳಿಸತಕ್ಕುದು. ಅಂಥ ಪ್ರತಿಯೊಂದು ಆದೇಶದ ಪ್ರತಿಯನ್ನು ಸಂಬಂಧಿಸಿದ ನೋಂದಣಿ ಅಧಿಕಾರಿಗೆ ಕಳುಹಿಸತಕ್ಕದ್ದು.

(5) (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಮೇರೆಗಿನ ಡೆಪ್ಯುಟಿ ಕಮಿಷನರರ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಜಿಲ್ಲಾ ನ್ಯಾಯಾಧೀಶನ ಮುಂದೆ ಅಪೀಲನ್ನು ಹೂಡಬಹುದು ಮತ್ತು ಎಲ್ಲ ಅಂಥ ಅಪೀಲುಗಳನ್ನು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದಾದಂತಹ ಕಾಲದೊಳಗೆ ಹೂಡತಕ್ಕದ್ದು ಮತ್ತು ಅಂಥ ರೀತಿಯಲ್ಲಿ ಸುನಾವಣೆ ಮಾಡತಕ್ಕುದು ಮತ್ತು ವಿಲೇ ಮಾಡತಕ್ಕದ್ದು.

**ವಿವರಣೆ:–** ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು, ಹಸ್ತಾಂತರಣ, ವಿನಿಮಯ ಅಥವಾ ದಾನದ ಲಿಖಿತವನ್ನು ಬರೆದುಕೊಟ್ಟ ದಿನಾಂಕದಂದು ಅಂಥ ಸ್ವತ್ತನ್ನು ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ಸಂದರ್ಭಾನುಸಾರ ಡೆಪ್ಯುಟಿ ಕಮಿಷನರರ ಅಥವಾ ಅಪೀಲು

ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಅದಕ್ಕೆ ಬರಬಹುದಾಗಿದ್ದ ಅಥವಾ ಬರುವಂಥ ಬೆಲೆ ಎಂಬುದಾಗಿ ಅಂದಾಜು ಮಾಡತಕ್ಕದ್ದು.

**46. ಸುಂಕಗಳು ಮತ್ತು ದಂಡಗಳ ವಸೂಲಿ:–** ಈ ಅಧ್ಯಾಯದ ಮೇರೆಗೆ ಸಂದಾಯ ಮಾಡಬೇಕಾಗಿ ಅಗತ್ಯಪಡಿಸಿದ ಎಲ್ಲ ಸುಂಕಗಳು, ದಂಡಗಳು ಮತ್ತು ಇತರ ಮೊತ್ತಗಳನ್ನು, ಡೆಪ್ಯುಟಿ ಕಮಿಷನರನು, ಅವು ಯಾರಿಂದ ಬಾಕಿಯಾಗಿವೆಯೋ ಆ ವ್ಯಕ್ತಿಯ ಚರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಅಥವಾ ಭೂಕಂದಾಯದ ಬಾಕಿಗಳ ವಸೂಲಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾರ್ಯವಿಧಾನದ ಮೂಲಕ ವಸೂಲು ಮಾಡಬಹುದು.

**46ಕ. ವಿಧಿಸಿಲ್ಲದ ಅಥವಾ ಕಡಿಮೆ ವಿಧಿಸಲಾದ ಸ್ಟಾಂಪು ಸುಂಕದ ವಸೂಲಿ:–** (1) ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಚ್ಚದೇ ಇರುವಲ್ಲಿ, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ, ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಇತರ ಯಾವನೇ ಅಧಿಕಾರಿಯು (ಇಲ್ಲಿ ಇನ್ನು ಮುಂದೆ ಅಧಿಕೃತ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1980ರ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳು ಅಥವಾ ಯಾವ ದಿನಾಂಕದಂದು ಸುಂಕವನ್ನು ಸಂದಾಯ ಮಾಡಬೇಕಾಗಿದೆಯೋ ಆ ದಿನಾಂಕ ಇವೆರಡರಲ್ಲಿ ಯಾವುದು ತರುವಾಯದ್ದೋ ಅದರ ಒಳಗೆ, ಸುಂಕವು ಯಾರಿಂದ ಸಂದಾಯವಾಗಬೇಕಾಗಿದೆಯೋ ಆ ವ್ಯಕ್ತಿಗೆ ಸರಿಯಾದ ಸುಂಕವನ್ನು ಅಥವಾ ಅದರ ಕೊರತೆಯನ್ನು ತುಂಬಿಕೊಡಲು ಅಗತ್ಯವಾದ ಮೊಬಲಗನ್ನು ಅವನಿಂದ ಏಕೆ ಸಂಗ್ರಹಿಸಕೂಡದು ಎಂದು ಬಗ್ಗೆ ಕಾರಣವನ್ನು ತೋರಿಸಲು ಅವನನ್ನು ಅಗತ್ಯಪಡಿಸುವ ನೋಟೀಸನ್ನು ಜಾರಿ ಮಾಡಬಹುದು:

ಪರಂತು, ಸುಂಕದ ಸಂದಾಯವನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಮೋಸ, ಷರೀಕು ಅಥವಾ ಯಾವುದೇ ಉದ್ದೇಶಪೂರ್ವಕ ತಪ್ಪುಹೇಳಿಕೆ ಅಥವಾ ಸಂಗತಿಗಳನ್ನು ಮುಚ್ಚಿಡುವಿಕೆ ಅಥವಾ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧದ ಉಲ್ಲಂಘನೆಯ ಕಾರಣದಿಂದಾಗಿ ಸಂದಾಯ ಮಾಡದೇ ಇರುವಲ್ಲಿ, ಈ ಉಪಪ್ರಕರಣದ ಉಪಬಂಧಗಳು, ಐದು ವರ್ಷಗಳು ಎಂಬ ಪದಗಳಿಗೆ ಬದಲಾಗಿ ಹತ್ತು ವರ್ಷಗಳು ಎಂಬ ಪದಗಳನ್ನು ಪ್ರತ್ಯಾಯೋಜಿಸಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು:

ಮತ್ತೂ ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, 1972ರ ಏಪ್ರಿಲ್ ಮೊದಲನೇ ದಿವಸಕ್ಕೆ ಹಿಂದೆ ಬರೆದುಕೊಟ್ಟ ಲಿಖಿತಗಳಿಗೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ:–** ಈ ಉಪಪ್ರಕರಣದ ಮೇರೆಗಿನ ನೋಟೀಸಿನ ಜಾರಿಯನ್ನು ನ್ಯಾಯಾಲಯದ ಆದೇಶದ ಮೂಲಕ ತಡೆಹಿಡಿದಿರುವಲ್ಲಿ, ಸಂದರ್ಭಾನುಸಾರ, ಹಿಂದೆ ಹೇಳಿದ ಐದು ವರ್ಷಗಳ ಅಥವಾ ಹತ್ತು ವರ್ಷಗಳ ಅವಧಿಯನ್ನು ಲೆಕ್ಕ ಹಾಕುವಲ್ಲಿ ಅಂಥ ತಡೆಹಿಡಿದ ಅವಧಿಯನ್ನು ಬಿಟ್ಟು ಬಿಡತಕ್ಕದ್ದು.

(2) ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ ಅಥವಾ ಅಧಿಕೃತ ಅಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಮನವಿ ಯಾವುದಾದರೂ ಇದ್ದರೆ ಅದನ್ನು ಪರ್ಯಾಲೋಚಿಸಿದ ತರುವಾಯ, ಅಂಥ ವ್ಯಕ್ತಿಯಿಂದ ಬರಬೇಕಾಗಿರುವ ಸುಂಕದ ಮೊಬಲಗನ್ನು ನಿರ್ಧರಿಸತಕ್ಕದ್ದು (ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೊಬಲಗಿನ ಹೆಚ್ಚುವರಿಯಲ್ಲದ್ದು) ಮತ್ತು ಆ ತರುವಾಯ ಅಂಥ ವ್ಯಕ್ತಿಯು ಹಾಗೆ ನಿರ್ಧರಿಸಿದ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ 3 ತಿಂಗಳೊಳಗಾಗಿ ಕರ್ನಾಟಕ ಅಪೀಲು ನ್ಯಾಯಾಧೀಕರಣದ ಮುಂದೆ ಅಪೀಲನ್ನು ಹೂಡಬಹುದು.

(4) ಈ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಸುಂಕವನ್ನು ಭೂ ಕಂದಾಯದ ಬಾಕಿಗಳಂತೆ ವಸೂಲು ಮಾಡತಕ್ಕದ್ದು.

## ಅಧ್ಯಾಯ–V
## ಕೆಲವು ಸಂದರ್ಭಗಳಲ್ಲಿ ಸ್ಟಾಂಪುಗಳಿಗಾಗಿ ರಿಯಾಯಿತಿಗಳು

**47. ಕೆಟ್ಟುಹೋದ ಸ್ಟಾಂಪುಗಳಿಗಾಗಿ ರಿಯಾಯಿತಿಗಳು:–** ಅಗತ್ಯವಾಗಬೇಕಾದ ಸಾಕ್ಷ್ಯ ಅಥವಾ ಮಾಡಬೇಕಾದ ವಿಚಾರಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಡೆಪ್ಯುಟಿ ಕಮಿಷನರನು, 48ನೇ ಪ್ರಕರಣದಲ್ಲಿ ನಿಯಮಿಸಿದ ಅವಧಿಯೊಳಗೆ ಮಾಡಿಕೊಂಡ ಅರ್ಜಿಯ ಮೇಲೆ ಮತ್ತು ಸಂಗತಿಗಳ ಬಗ್ಗೆ ಅವನಿಗೆ ಮನವರಿಕೆಯಾದರೆ, ಇಲ್ಲಿ ಇನ್ನು ಮುಂದೆ ನಮೂದಿಸಿದ ಸಂದರ್ಭಗಳಲ್ಲಿ ಕೆಟ್ಟುಹೋದ ಮುದ್ರೆ ಹಾಕಲಾದ ಸ್ಟಾಂಪುಗಳಿಗೆ ರಿಯಾಯಿತಿಯನ್ನು ಕೊಡಬಹುದು, ಎಂದರೆ:–

(ಕ) ಯಾವುದೇ ಕಾಗದದ ಮೇಲೆ ಬರೆದಿರುವ ಯಾವುದೇ ಲಿಖಿತವನ್ನು ಯಾವನೇ ವ್ಯಕ್ತಿಯು ಬರೆದುಕೊಡುವುದಕ್ಕೆ ಮುಂಚೆ ಅಜಾಗರೂಕತೆಯಿಂದ ಮತ್ತು ಉದ್ದೇಶಪೂರ್ವಕವಾಗಿ ಅಲ್ಲದೇ ಕೆಡಿಸಿದ, ಅಳಿಸಿದ ಅಥವಾ ಬರಹದಲ್ಲಿನ ಯಾವುದೇ ಪ್ರಮಾದದಿಂದ ಅಥವಾ ಇತರ ಯಾವುದೇ ಸಾಧನದಿಂದ ಉದ್ದೇಶಿತ ಉದ್ದೇಶಕ್ಕಾಗಿ ಅನುಪಯುಕ್ತಗೊಳಿಸಿದ ಅದರ ಮೇಲಿನ ಸ್ಟಾಂಪುಗಳು;

(ಖ) ಪೂರ್ಣವಾಗಿ ಅಥವಾ ಭಾಗಶಃ ಬರೆದಿರುವಂಥ ಆದರೆ ಅದಕ್ಕೆ ಯಾವನೇ ಪಕ್ಷಕಾರನು ರುಜು ಮಾಡಿರದ ಅಥವಾ ಬರೆದುಕೊಟ್ಟಿರದಂಥ ಯಾವುದೇ ದಸ್ತಾವೇಜಿನ ಮೇಲಿರುವ ಸ್ಟಾಂಪು;

(ಗ) ಲಿಖಿತಕ್ಕೆ ಯಾವನೇ ಪಕ್ಷಕಾರನು ಅದನ್ನು ಬರೆದುಕೊಟ್ಟಿದ್ದಕ್ಕೆ–

(1) ಪ್ರಾರಂಭದಿಂದಲೂ ಕಾನೂನಿನ ದೃಷ್ಟಿಯಲ್ಲಿ ಸಂಪೂರ್ಣವಾಗಿ ಶೂನ್ಯವಾಗಿರುವುದಾಗಿ ತರುವಾಯ ಕಂಡುಬಂದಂಥ;

(2) ಅದರಲ್ಲಿನ ಯಾವುದೇ ಪ್ರಮಾದ ಅಥವಾ ತಪ್ಪಿನಿಂದಾಗಿ ಮೂಲತಃ ಉದ್ದೇಶಿಸಿದ ಉದ್ದೇಶಕ್ಕಾಗಿ ಅನುಪಯುಕ್ತವೆಂದು ತರುವಾಯ ಕಂಡುಬಂದಂಥ;

(3) ಅದು ಯಾರಿಂದ ಅವಶ್ಯವಾಗಿ ಬರೆದುಕೊಟ್ಟಿರಬೇಕಾಗಿದ್ದಿತೊ ಆ ಯಾವನೇ ವ್ಯಕ್ತಿಯ ಮರಣದ ಕಾರಣದಿಂದ, ಅದನ್ನು ಬರೆದುಕೊಟ್ಟಿರದ ಅಥವಾ ಅದನ್ನು ಯಾವನೇ ಅಂಥ ವ್ಯಕ್ತಿಯು ಬರೆದುಕೊಡಲು ನಿರಾಕರಿಸಿದ ಕಾರಣದಿಂದ, ಉದ್ದೇಶಿಸಿದ ನಮೂನೆಯಿಂದ, ಉದ್ದೇಶಿಸಿದ ವ್ಯವಹಾರವನ್ನು ಪರಿಣಾಮಕಾರಿಯಾಗುವ ಹಾಗೆ ಪೂರ್ಣಗೊಳಿಸಲು ಆಗದಂಥ;

(4) ಯಾವನೇ ಮುಖ್ಯ ಪಕ್ಷಕಾರನಿಂದ ಅದನ್ನು ಬರೆದುಕೊಟ್ಟಿಲ್ಲದ್ದಕ್ಕಾಗಿ ಮತ್ತು ಅದಕ್ಕೆ ರುಜು ಮಾಡಲು ಅಸಮರ್ಥನಾದ ಅಥವಾ ನಿರಾಕರಿಸಿದ್ದಕ್ಕಾಗಿ ಅದನ್ನು ಯಾವ ಉದ್ದೇಶಕ್ಕಾಗಿ ಉದ್ದೇಶಿಸಲಾಗಿತ್ತೋ, ಆ ಉದ್ದೇಶಕ್ಕಾಗಿ ವಸ್ತುತಃ ಅಪೂರ್ಣ ಅಥವಾ ಸಾಕಷ್ಟು ಇಲ್ಲದಂಥ;

(5) ಯಾವನೇ ವ್ಯಕ್ತಿಯು ಅದರ ಮೇರೆಗೆ ಕಾರ್ಯನಿರ್ವಹಿಸಲು ಅಥವಾ ಆ ಮೂಲಕ ಭದ್ರತೆಗೊಳಿಸಲು ಉದ್ದೇಶಿಸಿದ ಯಾವುದೇ ಹಣವನ್ನು ಮುಂಗಡವಾಗಿ ಕೊಡಲು ಅಥವಾ ಅದರ ಮೂಲಕ ಮಂಜೂರ್ಮಾಡಿದ ಯಾವುದೇ ಪದವನ್ನು ನಿರಾಕರಿಸಿದ ಅಥವಾ ಅಂಗೀಕರಿಸದ ಕಾರಣದಿಂದ ಉದ್ದೇಶಿಸಿದ ಉದ್ದೇಶವು ಪೂರ್ಣವಾಗಿ ವಿಫಲವಾದಂಥ;

(6) ಅದರ ಮೂಲಕ ಮಾಡಲು ಉದ್ದೇಶಿಸಿದ ವ್ಯವಹಾರವು ಅದೇ ಪಕ್ಷಕಾರರ ನಡುವೆ ಮತ್ತು ಕಡಿಮೆ ಇಲ್ಲದ ಮೌಲ್ಯದ ಸ್ಟಾಂಪನ್ನು ಹೊಂದಿರುವ ಇತರ ಲಿಖಿತದ ಮೂಲಕ ಮಾಡಿದ, ಪರಿಣಾಮದಿಂದ ಅನುಪಯುಕ್ತವಾಗುವಂಥ;

(7) ಕಡಿಮೆ ಮೌಲ್ಯವುಳ್ಳ, ಮತ್ತು ಅದರ ಮೂಲಕ ಮಾಡಬೇಕೆಂದು ಉದ್ದೇಶಿಸಿದ ವ್ಯವಹಾರವನ್ನು ಅದೇ ಪಕ್ಷಕಾರರ ನಡುವೆ ಮತ್ತು ಕಡಿಮೆಯಿಲ್ಲದ ಮೌಲ್ಯದ ಸ್ಟಾಂಪನ್ನು ಹೊಂದಿರುವ ಬೇರೆ ಇತರ ಲಿಖಿತದ ಮೂಲಕ ಮಾಡಲಾದಂಥ;

(8) ಅಜಾಗರೂಕತೆಯಿಂದ ಮತ್ತು ಉದ್ದೇಶವನ್ನು ಹೊಂದಿಲ್ಲದೆ ಮತ್ತು ಅದಕ್ಕೆ ಬದಲಾಗಿ ಅದೇ ಪಕ್ಷಕಾರರ ನಡುವೆ ಮತ್ತು ಅದೇ ಉದ್ದೇಶಕ್ಕಾಗಿ ಲಿಖಿತವನ್ನು ಮಾಡಿ ಬೇರೆ ಇತರ ಲಿಖಿತವನ್ನು ಬರೆದು ಕೊಟ್ಟಿರುವ ಮತ್ತು ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿರುವಂಥ

– ಉಪಯೋಗಿಸಿದ ಸ್ಟಾಂಪು:

ಪರಂತು, ಬರೆದುಕೊಟ್ಟ ಲಿಖಿತದ ಸಂದರ್ಭದಲ್ಲಿ, ಆ ಲಿಖಿತವನ್ನು ಕೊಟ್ಟಿರಬಹುದಾಗಿದ್ದ ಅಥವಾ ಕೊಡಬಹುದಾಗಿದ್ದಂಥ ಯಾವುದೇ ಕಾನೂನು ವ್ಯವಹರಣೆಯು ಪ್ರಾರಂಭವಾಗಿರಕೂಡದು ಮತ್ತು ಆ ಲಿಖಿತವನ್ನು ರದ್ದುಗೊಳಿಸುವುದಕ್ಕಾಗಿ ಬಿಟ್ಟು ಕೊಟ್ಟಿರಬೇಕು.

**ವಿವರಣೆ:–** ಲಿಖಿತಕ್ಕೆ ವಿಧಿಸಬಹುದಾದ ಪೂರ್ಣ ಸುಂಕವನ್ನು ಸಂದಾಯ ಮಾಡಲಾಗಿದೆ ಎಂಬ, 32ನೇ ಪ್ರಕರಣದ ಮೇರೆಗಿನ, ಡೆಪ್ಯುಟಿ ಕಮಿಷನರನ ಪ್ರಮಾಣ ಪತ್ರವು ಈ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಮುದ್ರೆ ಹಾಕಿದ ಸ್ಟಾಂಪು ಆಗಿರುತ್ತದೆ.

**48. 47ನೇ ಪ್ರಕರಣದ ಮೇರೆಗಿನ ಪರಿಹಾರಕ್ಕಾಗಿ ಯಾವಾಗ ಅರ್ಜಿಮಾಡಿಕೊಳ್ಳಬೇಕು:–** 47ನೇ ಪ್ರಕರಣದ ಮೇರೆಗಿನ ಪರಿಹಾರಕ್ಕಾಗಿ ಅರ್ಜಿಯನ್ನು ಈ ಕೆಳಕಂಡ ಅವಧಿಗಳೊಳಗಾಗಿ ಮಾಡಿಕೊಳ್ಳತಕ್ಕದ್ದು, ಎಂದರೆ:–

(1) ಗ (5)ನೇ ಖಂಡದಲ್ಲಿ ನಮೂದಿಸಿದ ಸಂದರ್ಭಗಳಲ್ಲಿ, ಲಿಖಿತದ ದಿನಾಂಕದಿಂದ ಎರಡು ತಿಂಗಳೊಳಗಾಗಿ;

(2) ಲಿಖಿತದ ಯಾವನೇ ಪಕ್ಷಕಾರನಿಂದ ಯಾವುದೇ ಪತ್ರವನ್ನು ಬರೆದುಕೊಡದಿರುವಂಥ ಸ್ಟಾಂಪು ಹಚ್ಚಿದ ಕಾಗದದ ಸಂದರ್ಭದಲ್ಲಿ, ಆ ಸ್ಟಾಂಪು ಕೆಟ್ಟು ಹೋದ ತರುವಾಯ ಆರು ತಿಂಗಳೊಳಗಾಗಿ;

(3) ಲಿಖಿತದ ಯಾವನೇ ಪಕ್ಷಕಾರನು ಅದನ್ನು ಬರೆದುಕೊಟ್ಟಿರುವಂಥ, ಸ್ಟಾಂಪು ಹಚ್ಚಿದ ಕಾಗದದ ಸಂದರ್ಭದಲ್ಲಿ, ಆ ಲಿಖಿತದ ದಿನಾಂಕದ ತರುವಾಯ ಆರು ತಿಂಗಳೊಳಗಾಗಿ; ಅಥವಾ ಅದಕ್ಕೆ ದಿನಾಂಕವು ಇಲ್ಲದಿದ್ದರೆ, ಅದನ್ನು ಮೊದಲು ಬರೆದುಕೊಟ್ಟ ಅಥವಾ ಒಬ್ಬನೇ ಬರೆದುಕೊಟ್ಟ ವ್ಯಕ್ತಿಯು, ಅದನ್ನು ಬರೆದುಕೊಟ್ಟ ತರುವಾಯ ಆರು ತಿಂಗಳೊಳಗಾಗಿ:

ಪರಂತು,–

(ಕ) ಕೆಟ್ಟುಹೋದ ಲಿಖಿತವನ್ನು, ಸಾಕಷ್ಟು ಕಾರಣಗಳಿಗಾಗಿ ಕರ್ನಾಟಕ ರಾಜ್ಯದ ಹೊರಗೆ ಕಳಿಸಿರುವಾಗ, ಅರ್ಜಿಯನ್ನು ಕರ್ನಾಟಕ ರಾಜ್ಯದಲ್ಲಿ ಅದನ್ನು ವಾಪಸು ಸ್ವೀಕರಿಸಿದ ತರುವಾಯ, ಮಾಡಿಕೊಳ್ಳಬಹುದು;

(ಖ) ಅನಿವಾರ್ಯ ಸನ್ನಿವೇಶಗಳಿಂದಾಗಿ, ಯಾವ ಲಿಖಿತಕ್ಕಾಗಿ ಬೇರೊಂದು ಲಿಖಿತವನ್ನು ಬದಲಾಗಿ ಇಡಲಾಗಿದೆಯೋ ಆ ಯಾವುದೇ ಲಿಖಿತವನ್ನು, ಹಿಂದೆ ಹೇಳಿದ ಅವಧಿಯೊಳಗೆ ರದ್ದುಗೊಳಿಸುವುದಕ್ಕಾಗಿ ಬಿಟ್ಟುಕೊಡಲಾಗದಿರುವಾಗ, ಅರ್ಜಿಯನ್ನು ಬದಲಾಗಿ ಇಟ್ಟ ಲಿಖಿತವನ್ನು ಬರೆದುಕೊಟ್ಟ ದಿನಾಂಕದ ತರುವಾಯ ಆರು ತಿಂಗಳೊಳಗಾಗಿ ಮಾಡಿಕೊಳ್ಳಬಹುದು.

**49. ನಿಗಮಗಳಿಗೆ ಇನ್ನು ಮುಂದೆ ಅಗತ್ಯವಿಲ್ಲದ ಮುದ್ರಿತ ನಮೂನೆಗಳ ಸಂದರ್ಭದಲ್ಲಿ ರಿಯಾಯಿತಿ:–** ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯು ಕಾಲದ ಪರಿಮಿತಿಯಿಲ್ಲದೆ, ಯಾವನೇ ಬ್ಯಾಂಕರ್ ಅಥವಾ ಯಾವುದೇ ನಿಗಮಿತ ಕಂಪನಿ ಅಥವಾ ಇತರ ನಿಗಮಿತ ನಿಕಾಯವು ಲಿಖಿತಗಳ ಮುದ್ರಿತ ನಮೂನೆಗಳಿಗಾಗಿ

ಉಪಯೋಗಿಸಿದ ಸ್ಟಾಂಪು ಹಚ್ಚಿದ ಕಾಗದಗಳಿಗಾಗಿ, ಸದರಿ ಬ್ಯಾಂಕರ್, ಕಂಪನಿ ಅಥವಾ ನಿಗಮಿತ ನಿಕಾಯಕ್ಕೆ ನಮೂನೆಗಳು ಯಾವುದೇ ಸಾಕಷ್ಟು ಕಾರಣಕ್ಕಾಗಿ ಬೇಕಾಗಿಲ್ಲದಿದ್ದರೆ, ರಿಯಾಯಿತಿಯನ್ನು ಕೊಡಬಹುದು:

ಪರಂತು, ಅಂಥ ಪ್ರಾಧಿಕಾರಿಗೆ ಅಂಥ ಸ್ಟಾಂಪು ಹಚ್ಚಿದ ಕಾಗದಗಳಿಗೆ ಸಂಬಂಧಿಸಿದಂತೆ ಸುಂಕವನ್ನು ಕ್ರಮಬದ್ಧವಾಗಿ ಸಂದಾಯ ಮಾಡಲಾಗಿದೆಯೆಂಬುದು ಮನವರಿಕೆಯಾಗಿರಬೇಕು.

**50. ದುರುಪಯೋಗಪಡಿಸಿದ ಸ್ಟಾಂಪುಗಳಿಗೆ ರಿಯಾಯಿತಿ:–** (ಕ) ಸುಂಕವನ್ನು ವಿಧಿಸಬಹುದಾದ ಲಿಖಿತಕ್ಕಾಗಿ ಯಾವನೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿದವುಗಳನ್ನಲ್ಲದೆ ಬೇರೆ ವಿವರಣೆಯ ಸ್ಟಾಂಪನ್ನು ಅಥವಾ ಅವಶ್ಯವಾದುದಕ್ಕಿಂತ ಹೆಚ್ಚಿನ ಮೌಲ್ಯದ ಸ್ಟಾಂಪನ್ನು ಅಜಾಗರೂಕತೆಯಿಂದ ಉಪಯೋಗಿಸಿರುವಾಗ ಅಥವಾ ಯಾವುದೇ ಸುಂಕವನ್ನು ವಿಧಿಸಬೇಕಾಗಿಲ್ಲದಂಥ ಲಿಖಿತಕ್ಕೆ ಯಾವುದೇ ಸ್ಟಾಂಪನ್ನು ಅಜಾಗರೂಕತೆಯಿಂದ ಉಪಯೋಗಿಸಿರುವಾಗ; ಅಥವಾ

(ಖ) ಲಿಖಿತಕ್ಕಾಗಿ ಉಪಯೋಗಿಸಿದ ಯಾವುದೇ ಸ್ಟಾಂಪನ್ನು, 13ನೇ ಪ್ರಕರಣದ ಉಪ–ಬಂಧಗಳನ್ನು ಉಲ್ಲಂಘಿಸಿ ಅಂಥ ಲಿಖಿತವನ್ನು ಬರೆಯಲಾಗಿರುವ ಕಾರಣದಿಂದಾಗಿ 15ನೇ ಪ್ರಕರಣದ ಮೇರೆಗೆ ನಿರುಪಯುಕ್ತಗೊಳಿಸಿದಾಗ

–ಡೆಪ್ಯುಟಿ ಕಮಿಷನರರು, ಲಿಖಿತದ ದಿನಾಂಕದ ತರುವಾಯ ಆರು ತಿಂಗಳೊಳಗಾಗಿ ಅಥವಾ ಅದರಲ್ಲಿ ದಿನಾಂಕವಿರದಿದ್ದರೆ, ಅದನ್ನು ಮೊದಲು ಬರೆದುಕೊಟ್ಟ ಅಥವಾ ಒಬ್ಬನೇ ಬರೆದುಕೊಟ್ಟ ವ್ಯಕ್ತಿಯು ಅದನ್ನು ಬರೆದುಕೊಟ್ಟ ತರುವಾಯ ಆರು ತಿಂಗಳೊಳಗೆ ಮಾಡಿಕೊಂಡ ಅರ್ಜಿಯ ಮೇಲೆ ಮತ್ತು ಸುಂಕವನ್ನು ವಿಧಿಸಬಹುದಾಗಿದ್ದರೆ, ಅದಕ್ಕೆ ಸರಿಯಾದ ಸುಂಕದ ಸ್ಟಾಂಪನ್ನು ಪುನಃ ಹಚ್ಚಿದ ಮೇಲೆ ಹಾಗೆ ದುರುಪಯೋಗಪಡಿಸಿದ ಅಥವಾ ನಿರುಪಯುಕ್ತಗೊಳಿಸಿದ ಸ್ಟಾಂಪನ್ನು ರದ್ದುಗೊಳಿಸಬಹುದಾದ ಮತ್ತು ಅದು ಕೆಟ್ಟುಹೋಗಿದೆ ಎಂದು ಅದಕ್ಕೆ ರಿಯಾಯಿತಿ ಕೊಡಬಹುದು.

**51. ಕೆಟ್ಟು ಹೋದ ಅಥವಾ ದುರುಪಯೋಗಪಡಿಸಿದ ಸ್ಟಾಂಪುಗಳಿಗಾಗಿ ರಿಯಾಯಿತಿಯನ್ನು ಕೊಡುವ ಬಗೆ:–** ಕೆಟ್ಟು ಹೋದ ಅಥವಾ ದುರುಪಯೋಗಪಡಿಸಿದ ಸ್ಟಾಂಪುಗಳಿಗೆ ರಿಯಾಯಿತಿಯನ್ನು ಕೊಟ್ಟಿರುವಂಥ ಯಾವುದೇ ಸಂದರ್ಭದಲ್ಲಿ, ಡೆಪ್ಯುಟಿ ಕಮಿಷನರರು, ಅದಕ್ಕೆ ಬದಲಾಗಿ:–

(ಕ) ಅದೇ ವಿವರಣೆಯ ಮತ್ತು ಮೌಲ್ಯದ ಇತರ ಸ್ಟಾಂಪುಗಳನ್ನು ಕೊಡಬಹುದು; ಅಥವಾ

(ಖ) ಅಗತ್ಯವಾದರೆ ಮತ್ತು ಅವನು ಸೂಕ್ತವೆಂದು ಯೋಚಿಸಿದರೆ ಮೌಲ್ಯದಲ್ಲಿ ಅದೇ ಮೊಬಲಗಿಗೆ ಯಾವುದೇ ಇತರ ವಿವರಣೆಯ ಸ್ಟಾಂಪುಗಳನ್ನು ಕೊಡಬಹುದು; ಅಥವಾ

(ಗ) ಅವನ ವಿವೇಚನೆಯಲ್ಲಿ, ಪ್ರತಿಯೊಂದು ರೂಪಾಯಿಗೆ ಅಥವಾ ರೂಪಾಯಿಯ ಭಾಗಕ್ಕೆ ಹತ್ತು ಪೈಸೆಯನ್ನು ಕಳೆದು, ಹಣದಲ್ಲಿ ಅದೇ ಮೌಲ್ಯವನ್ನು

– ಕೊಡಬಹುದು.

**52. ಉಪಯೋಗಕ್ಕೆ ಬೇಕಾಗಿಲ್ಲದ ಸ್ಟಾಂಪುಗಳಿಗಾಗಿ ರಿಯಾಯಿತಿ:–** ಯಾವನೇ ವ್ಯಕ್ತಿಯು ಕೆಟ್ಟು ಹೋಗಿರದ ಅಥವಾ ಉದ್ದೇಶಿತ ಉದ್ದೇಶಕ್ಕಾಗಿ ಅನುಪಯುಕ್ತ ಅಥವಾ ನಿರುಪಯುಕ್ತವಾಗಿಲ್ಲದಂಥ ಆದರೆ, ತಕ್ಷಣದ ಉಪಯೋಗಕ್ಕೆ ಅವನಿಗೆ ಬೇಕಾಗಿರದಂಥ ಒಂದು ಸ್ಟಾಂಪನ್ನು ಅಥವಾ ಸ್ಟಾಂಪುಗಳನ್ನು ಹೊಂದಿರುವಾಗ, ಡೆಪ್ಯುಟಿ ಕಮಿಷನರರು, ಅಂಥ ವ್ಯಕ್ತಿಗೆ ಅಂಥ ಸ್ಟಾಂಪು ಅಥವಾ ಸ್ಟಾಂಪುಗಳ ಮೌಲ್ಯವನ್ನು, ಪ್ರತಿಯೊಂದು ರೂಪಾಯಿ ಅಥವಾ ರೂಪಾಯಿಯ ಭಾಗಕ್ಕಾಗಿ ಹತ್ತು ಪೈಸೆಯನ್ನು ಕಳೆದು ಅಂಥ ವ್ಯಕ್ತಿಯು ಅದನ್ನು ರದ್ದುಗೊಳಿಸುವುದಕ್ಕಾಗಿ ವಶಾವಣೆ ಮಾಡಿದ ಮೇಲೆ ಮತ್ತು

(ಕ) ಅಂಥ ಸ್ಟಾಂಪು ಅಥವಾ ಸ್ಟಾಂಪುಗಳನ್ನು ಅಂಥ ವ್ಯಕ್ತಿಯು ಅವುಗಳನ್ನು ಉಪಯೋಗಿಸುವ ಪ್ರಾಮಾಣಿಕ ಉದ್ದೇಶದಿಂದ ಖರೀದಿಸಿದ್ದನೆಂದು; ಮತ್ತು

(ಖ) ಅವನು ಅದರ ಪೂರ್ಣ ಬೆಲೆಯನ್ನು ಸಂದಾಯ ಮಾಡಿದ್ದಾನೆಂದು; ಮತ್ತು

(ಗ) ಹಾಗೆ ವಶಾವಣೆ ಮಾಡಿದಂಥ ನಿಕಟಪೂರ್ವದ ಆರು ತಿಂಗಳುಗಳ ಅವಧಿಯಲ್ಲಿ ಹಾಗೆ ಖರೀದಿಸಲಾಗಿತ್ತೆಂದು

– ಡೆಪ್ಯುಟಿ ಕಮಿಷನರಿಗೆ ಮನವರಿಕೆಯಾಗುವಂತೆ ರುಜುವಾತು ಮಾಡಿದ ಮೇಲೆ ಅಂಥ ವ್ಯಕ್ತಿಗೆ ಮರು ಸಂದಾಯ ಮಾಡತಕ್ಕದ್ದು:

ಪರಂತು, ಆ ವ್ಯಕ್ತಿಯು ಲೈಸೆನ್ಸ್ ಪಡೆದಿರುವ ಸ್ಟಾಂಪು ಮಾರಾಟಗಾರನಾಗಿರುವಲ್ಲಿ ಡೆಪ್ಯುಟಿ ಕಮಿಷನರನು, ಅವನು ಸೂಕ್ತವೆಂದು ಯೋಚಿಸಿದರೆ, ಈ ಹಿಂದೆ ಹೇಳಿದಂಥ ಯಾವುದೇ ಕಳೆತ ಮಾಡದೆ, ಮಾರಾಟಗಾರನು ವಾಸ್ತವವಾಗಿ ಸಂದಾಯ ಮಾಡಿದ ಮೊತ್ತವನ್ನು ಮರುಸಂದಾಯ ಮಾಡಬಹುದು.

**52ಕ. ಪರಿಹಾರವನ್ನು ಮಂಜೂರ್ಮಾಡಲು ರಾಜ್ಯ ಸರ್ಕಾರದ ಅಧಿಕಾರ:–** ಈ ಅಧ್ಯಾಯದ ಹಿಂದಿನ ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ರಾಜ್ಯ ಸರ್ಕಾರವು ಮುಖ್ಯ ನಿಯಂತ್ರಣ ರಾಜಸ್ವ ಪ್ರಾಧಿಕಾರಿಯೊಂದಿಗೆ ಸಮಾಲೋಚಿಸಿದ ತರುವಾಯ–

(i) ಯಾವುದೇ ಸದರಿ ಪ್ರಕರಣಗಳು ಅನ್ವಯವಾಗಬಹುದಾದಂಥವುಗಳನ್ನು ಹೊರತು ಪಡಿಸಿ ಇತರ ಯಾವುದೇ ಪ್ರಕರಣ ಅಥವಾ ಪ್ರಕರಣಗಳ ವರ್ಗದಲ್ಲಿ; ಅಥವಾ

(ii) ಸದರಿ ಯಾವುದೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ತರುವಾಯ, ಪರಿಹಾರವನ್ನು ಮಂಜೂರ್ಮಾಡುವುದು ನ್ಯಾಯ ಸಮ್ಮತ ಮತ್ತು ನ್ಯಾಯಯುತವೆಂದು ಅವನಿಗೆ ಮನವರಿಕೆಯಾದರೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪರಿಹಾರವನ್ನು ಮಂಜೂರ್ಮಾಡಲು ನಿರ್ದೇಶಿಸಬಹುದು ಮತ್ತು ಡೆಪ್ಯುಟಿ ಕಮಿಷನರನು ಅಂಥ ಆದೇಶಕ್ಕೆ ಅನುಗುಣವಾಗಿ ಪ್ರಕರಣ ಅಥವಾ ಪ್ರಕರಣಗಳ ವರ್ಗವನ್ನು ವಿಲೆ ಮಾಡತಕ್ಕದ್ದು.

## ಅಧ್ಯಾಯ–VI
## ಅಭಿಪ್ರಾಯ ಕೋರಿಕೆ ಮತ್ತು ಪುನರೀಕ್ಷಣೆ

**53. ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ನಿಯಂತ್ರಣ ಮತ್ತು ಅವನಿಗೆ ಪ್ರಕರಣದ ನಿರೂಪಣೆ:–** (1) ಡೆಪ್ಯುಟಿ ಕಮಿಷನರನು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಉಪಬಂಧದ ಮೇರೆಗೆ ಡೆಪ್ಯುಟಿ ಕಮಿಷನರನು ಚಲಾಯಿಸಬಹುದಾದ ಅಧಿಕಾರಗಳು ಎಲ್ಲ ಪ್ರಕರಣಗಳಲ್ಲಿ ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

(2) 31ನೇ ಪ್ರಕರಣ, 39ನೇ ಪ್ರಕರಣ ಅಥವಾ 40ನೇ ಪ್ರಕರಣದ ಮೇರೆಗೆ ಕಾರ್ಯ ನಿರ್ವಹಿಸುವ ಯಾವನೇ ಡೆಪ್ಯುಟಿ ಕಮಿಷನರನು ಯಾವುದೇ ಲಿಖಿತಕ್ಕೆ ವಿಧಿಸಬಹುದಾದಂಥ ಸುಂಕದ ಮೊಬಲಗಿನ ಬಗ್ಗೆ ಸಂದೇಹವನ್ನು ಹೊಂದಿದ್ದರೆ, ಆ ಪ್ರಕರಣದ ವಿವರವನ್ನು ನಿರೂಪಿಸಬಹುದು ಮತ್ತು ಅದರ ಮೇಲೆ ತನ್ನ ಅಭಿಪ್ರಾಯದೊಂದಿಗೆ ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ತೀರ್ಮಾನಕ್ಕಾಗಿ ಅದನ್ನು ಒಪ್ಪಿಸಬಹುದು.

(3) ಅಂಥ ಪ್ರಾಧಿಕಾರಿಯು ಆ ಪ್ರಕರಣವನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಅವನ ತೀರ್ಮಾನದ ಪ್ರತಿಯನ್ನು ಡೆಪ್ಯುಟಿ ಕಮಿಷನರಿಗೆ ಕಳುಹಿಸತಕ್ಕದ್ದು. ಅವನು, ಅಂಥ ತೀರ್ಮಾನಕ್ಕೆ ಅನುಸಾರ ಸುಂಕ ಯಾವುದಾದರೂ ಇದ್ದರೆ, ಅದನ್ನು ನಿರ್ಧರಿಸಲು ಮತ್ತು ವಿಧಿಸಲು ಮುಂದುವರಿಯತಕ್ಕದ್ದು.

**54. ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯು ಉಚ್ಚ ನ್ಯಾಯಾಲಯಕ್ಕೆ ಪ್ರಕರಣದ ವಿವರವನ್ನು ಕೊಡುವುದು:–** (1) 53ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅವನಿಗೆ ಒಪ್ಪಿಸಿದ ಅಥವಾ ಅವನ ಗಮನಕ್ಕೆ ಅನ್ಯಥಾ ಬರುವ ಇತರ ಯಾವುದೇ ಪ್ರಕರಣದ ಬಗ್ಗೆ ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯು ಯಾವುದೇ ಪ್ರಕರಣದ ವಿವರವನ್ನು ಕೊಟ್ಟು ಅದರ ಮೇಲೆ ಅವನ ಅಭಿಪ್ರಾಯದೊಂದಿಗೆ ಅಂಥ ಪ್ರಕರಣವನ್ನು ಉಚ್ಚ ನ್ಯಾಯಾಲಯಕ್ಕೆ ಒಪ್ಪಿಸಬಹುದು.

(2) ಅಂಥ ಪ್ರತಿಯೊಂದು ಪ್ರಕರಣವನ್ನು ಉಚ್ಚ ನ್ಯಾಯಾಲಯದ ಮೂವರಿಗಿಂತ ಕಡಿಮೆಯಿಲ್ಲದ ನ್ಯಾಯಾಧೀಶರು ತೀರ್ಮಾನಿಸತಕ್ಕದ್ದು ಮತ್ತು ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ಬಹುಮತದ ಅಭಿಪ್ರಾಯವು ಪ್ರಭಾವವುಳ್ಳದ್ದಾಗಿರತಕ್ಕದ್ದು.

**55. ನಿರೂಪಿಸಿದ ಪ್ರಕರಣದ ಬಗ್ಗೆ ಹೆಚ್ಚಿನ ವಿವರಗಳನ್ನು ತರಿಸಿಕೊಳ್ಳಲು ಉಚ್ಚ ನ್ಯಾಯಾಲಯದ ಅಧಿಕಾರ:–** ಪ್ರಕರಣದಲ್ಲಿ ಒಳಗೊಂಡ ವಿವರಗಳು, ಆ ಮೂಲಕ ಎತ್ತಿದ ಪ್ರಶ್ನೆಗಳನ್ನು ನಿರ್ಧರಿಸಲು ಸಾಧ್ಯವಾಗಿಸಲು ಸಾಕಷ್ಟೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾಗದಿದ್ದರೆ, ಆ ನ್ಯಾಯಾಲಯವು ಅದನ್ನು ನಿರೂಪಿಸಿದಂಥ ರಾಜಸ್ವ ಪ್ರಾಧಿಕಾರಿಗೆ ಆ ಪ್ರಕರಣವನ್ನು, ಆ ಬಗ್ಗೆ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ಸೇರ್ಪಡೆಗಳನ್ನು ಅದಕ್ಕೆ ಮಾಡಲು ಅಥವಾ ಅದರಲ್ಲಿ ಬದಲಾವಣೆಗಳನ್ನು ಮಾಡಲು ಹಿಂದಕ್ಕೆ ಕಳಿಸಬಹುದು.

**56. ದಾಖಲು ನಿರೂಪಿಸಿದ ಪ್ರಕರಣವನ್ನು ವಿಲೆ ಮಾಡುವಲ್ಲಿ ಪ್ರಕ್ರಿಯೆ:–** (1) ಉಚ್ಚ ನ್ಯಾಯಾಲಯವು, ಅಂಥ ಯಾವುದೇ ಪ್ರಕರಣವನ್ನು ಸುನಾವಣೆ ಮಾಡಿದ ಮೇಲೆ ಆ ಮೂಲಕ ಎತ್ತಲಾದ ಪ್ರಶ್ನೆಗಳನ್ನು ತೀರ್ಮಾನಿಸತಕ್ಕದ್ದು ಮತ್ತು ಅದರ ಮೇಲೆ ತನ್ನ ತೀರ್ಪುಗಳನ್ನು, ಅಂಥ ತೀರ್ಮಾನಕ್ಕೆ ಆಧಾರವಾದಂಥ ಕಾರಣಗಳನ್ನು ಒಳಗೊಂಡು ಕೊಡತಕ್ಕದ್ದು.

(2) ಆ ನ್ಯಾಯಾಲಯವು, ಪ್ರಕರಣವನ್ನು ನಿರೂಪಿಸಿದಂಥ ರಾಜಸ್ವ ಪ್ರಾಧಿಕಾರಿಗೆ ಅಂಥ ತೀರ್ಪಿನ ಒಂದು ಪ್ರತಿಯನ್ನು ನ್ಯಾಯಾಲಯದ ಮೊಹರು ಹಾಗೂ ರಿಜಿಸ್ಟ್ರಾರನ ರುಜುವಿನೊಂದಿಗೆ ಕಳುಹಿಸತಕ್ಕದ್ದು, ಮತ್ತು ಆ ರಾಜಸ್ವ ಪ್ರಾಧಿಕಾರಿಯು ಅಂಥ ಪ್ರತಿಯನ್ನು ಸ್ವೀಕರಿಸಿದ ಮೇಲೆ ಅಂಥ ತೀರ್ಪಿಗೆ ಅನುಗುಣವಾಗಿ ಪ್ರಕರಣವನ್ನು ವಿಲೆ ಮಾಡತಕ್ಕದ್ದು.

**57. ಇತರ ನ್ಯಾಯಾಲಯಗಳಿಂದ ಉಚ್ಚ ನ್ಯಾಯಾಲಯಕ್ಕೆ ಪ್ರಕರಣದ ನಿರೂಪಣೆ:–** (1) ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಇತರ ಯಾವುದೇ ನ್ಯಾಯಾಲಯಕ್ಕೆ 34ನೇ ಪ್ರಕರಣದ (ಕ) ಪರಂತುಕದ ಮೇರೆಗೆ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಸುಂಕದ ಮೊಬಲಗಿನ ಬಗ್ಗೆ ಸಂದೇಹ ಬಂದರೆ, ಆ ನ್ಯಾಯಾಧೀಶನು ಪ್ರಕರಣದ ವಿವರವನ್ನು ನಿರೂಪಿಸಬಹುದು ಮತ್ತು ಅದರ ಮೇಲೆ ತನ್ನ ಅಭಿಪ್ರಾಯದೊಂದಿಗೆ ಅದನ್ನು ಉಚ್ಚ ನ್ಯಾಯಲಯದ ತೀರ್ಮಾನಕ್ಕಾಗಿ ಒಪ್ಪಿಸಬಹುದು.

(2) ಅಂಥ ನ್ಯಾಯಾಲಯವು ಆ ಪ್ರಕರಣದೊಂದಿಗೆ, ಅದನ್ನು 54ನೇ ಪ್ರಕರಣದ ಮೇರೆಗೆ ಒಪ್ಪಿಸಿದ್ದಿದ್ದರೆ ಹೇಗೋ ಹಾಗೆ ವ್ಯವಹರಿಸತಕ್ಕದ್ದು ಮತ್ತು ತನ್ನ ತೀರ್ಪಿನ ಒಂದು ಪ್ರತಿಯನ್ನು ನ್ಯಾಯಾಲಯದ ಮೊಹರು ಮತ್ತು ರಿಜಿಸ್ಟ್ರಾರನ ರುಜುವಿನೊಂದಿಗೆ ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥದೇ ಇನ್ನೊಂದು ಪ್ರತಿಯನ್ನು, ಅಭಿಪ್ರಾಯ ಕೋರಿಕೆಯನ್ನು ಮಾಡಿದ ನ್ಯಾಯಧೀಶನಿಗೆ ಕಳುಹಿಸತಕ್ಕದ್ದು. ಅವನು ಅಂಥ ಪ್ರತಿಯನ್ನು ಸ್ವೀಕರಿಸಿದ ಮೇಲೆ ಅಂಥ ತೀರ್ಪಿಗೆ ಅನುಗುಣವಾಗಿ ಆ ಪ್ರಕರಣವನ್ನು ವಿಲೆ ಮಾಡತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗೆ ಮಾಡಿದ ಅಭಿಪ್ರಾಯ ಕೋರಿಕೆಗಳನ್ನು ಜಿಲ್ಲಾ ನ್ಯಾಯಾಲಯಕ್ಕೆ ಅಧೀನವಾದ ನ್ಯಾಯಾಲಯವು ಮಾಡಿದಾಗ, ಅದನ್ನು ಜಿಲ್ಲಾ ನ್ಯಾಯಾಲಯದ ಮೂಲಕ ಮಾಡತಕ್ಕದ್ದು ಮತ್ತು

ಯಾವುದೇ ಅಧೀನ ರೆವಿನ್ಯೂ ನ್ಯಾಯಾಲಯವು ಮಾಡಿದಾಗ ತನಗಿಂತ ನಿಕಟ ವರಿಷ್ಠ ನ್ಯಾಯಾಲಯದ ಮೂಲಕ ಮಾಡತಕ್ಕದ್ದು.

**58. ಸ್ಟಾಂಪುಗಳು ಸಾಕಷ್ಟು ಇರುವ ಬಗ್ಗೆ ನ್ಯಾಯಾಲಯಗಳ ಕೆಲವು ತೀರ್ಮಾನಗಳ ಪುನರೀಕ್ಷಣೆ:–** (1) ಅದರ ಸಿವಿಲ್ ಅಥವಾ ರೆವಿನ್ಯೂ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಯಾವುದೇ ನ್ಯಾಯಾಲಯ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 1898ರ XIIನೇ ಅಧ್ಯಾಯ ಅಥವಾ XXXVIನೇ ಅಧ್ಯಾಯದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಯಾವುದೇ ಕ್ರಿಮಿನಲ್ ನ್ಯಾಯಾಲಯವು ಕ್ರಮಬದ್ಧವಾಗಿ ಸ್ಟಾಂಪು ಹಚ್ಚಲಾಗಿದೆ ಎಂದು ಅಥವಾ ಸ್ಟಾಂಪು ಅಗತ್ಯವಿಲ್ಲವೆಂದು ಅಥವಾ 34ನೇ ಪ್ರಕರಣದ ಮೇರೆಗೆ ಸುಂಕ ಮತ್ತು ದಂಡವನ್ನು ಸಂದಾಯ ಮಾಡಿದ ಮೇಲೆ ಸಾಕ್ಷ್ಯವಾಗಿ ಯಾವುದೇ ಲಿಖಿತವನ್ನು ಅಂಗೀಕರಿಸುವ ಯಾವುದೇ ಆದೇಶವನ್ನು ಮಾಡಿದಾಗ, ಯಾವ ನ್ಯಾಯಾಲಯಕ್ಕೆ ಅಂಥ ಮೊದಲು ಹೇಳಿದ ನ್ಯಾಯಾಲಯದಿಂದ ಅಪೀಲು ಇರುವುದೋ ಅಥವಾ ಅಭಿಪ್ರಾಯ ಕೋರಿಕೆಯನ್ನು ಮಾಡಲಾಗುವುದೋ ಆ ನ್ಯಾಯಾಲಯವು, ತಾನಾಗಿಯೇ ಅಥವಾ ಡೆಪ್ಯುಟಿ ಕಮಿಷನರರ ಅರ್ಜಿಯ ಮೇಲೆ ಅಂಥ ಆದೇಶವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದು.

(2) ಅಂಥ ನ್ಯಾಯಾಲಯವು, ಹಾಗೆ ಪರ್ಯಾಲೋಚನೆಯ ತರುವಾಯ, 34ನೇ ಪ್ರಕರಣದ ಮೇರೆಗೆ ಸುಂಕ ಮತ್ತು ದಂಡವನ್ನು ಸಂದಾಯ ಮಾಡದೆ ಅಥವಾ ಹಾಗೆ ಸಂದಾಯ ಮಾಡಿರುವುದಕ್ಕಿಂತ ಹೆಚ್ಚಿನ ಸುಂಕ ಮತ್ತು ದಂಡವನ್ನು ಸಂದಾಯ ಮಾಡದೇ ಸಾಕ್ಷ್ಯವಾಗಿ ಅಂಥ ಲಿಖಿತವನ್ನು ಅಂಗೀಕರಿಸಬಾರದಿತ್ತು ಎಂದು ಅಭಿಪ್ರಾಯ ಪಟ್ಟರೆ, ಅದು ಹಾಗೆಂದು ಘೋಷಣೆಯನ್ನು ದಾಖಲು ಮಾಡಬಹುದು ಮತ್ತು ಅಂಥ ಲಿಖಿತಕ್ಕೆ ವಿಧಿಸಬಹುದಾದಂಥ ಸುಂಕದ ಮೊಬಲಗನ್ನು ನಿರ್ಧರಿಸಬಹುದು ಮತ್ತು ಆಗ ಅಂಥ ಲಿಖಿತವು ಯಾರ ಸ್ವಾಧೀನ ಅಥವಾ ಅಧಿಕಾರದಲ್ಲಿ ಇದೆಯೋ ಆ ಯಾವನೇ ವ್ಯಕ್ತಿಯನ್ನು, ಅದನ್ನು ಹಾಜರುಪಡಿಸಲು ಅಗತ್ಯ ಪಡಿಸಬಹುದು ಮತ್ತು ಅದನ್ನು ಹಾಜರುಪಡಿಸಿದಾಗ ಪರಿಬದ್ಧಗೊಳಿಸಬಹುದು.

(3) (2)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಘೋಷಣೆಯನ್ನು ದಾಖಲು ಮಾಡಿರುವಾಗ, ಅದನ್ನು ದಾಖಲು ಮಾಡುವ ನ್ಯಾಯಾಲಯವು ಅದರ ಪ್ರತಿಯನ್ನು ಡೆಪ್ಯುಟಿ ಕಮಿಷನರರನಿಗೆ ಕಳುಹಿಸತಕ್ಕದ್ದು ಮತ್ತು ಅದು ಯಾವ ಲಿಖಿತಕ್ಕೆ ಸಂಬಂಧಪಟ್ಟಿದೆಯೋ ಆ ಲಿಖಿತವನ್ನು ಪರಿಬದ್ಧಗೊಳಿಸಲಾಗಿರುವಲ್ಲಿ ಅಥವಾ ಅನ್ಯಥಾ ಅಂಥ ನ್ಯಾಯಾಲಯದ ಸ್ವಾಧೀನದಲ್ಲಿದ್ದರೆ ಅಂಥ ಲಿಖಿತವನ್ನು ಅವನಿಗೂ ಸಹ ಕಳುಹಿಸತಕ್ಕದ್ದು.

(4) ಡೆಪ್ಯುಟಿ ಕಮಿಷನರರನು ಆ ತರುವಾಯ, ಸಾಕ್ಷ್ಯವಾಗಿ ಅಂಥ ಲಿಖಿತವನ್ನು ಅಂಗೀಕರಿಸುವ ಆದೇಶದಲ್ಲಿ, ಅಥವಾ 41ನೇ ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ಪ್ರಮಾಣ ಪತ್ರದಲ್ಲಿ, ಅಥವಾ 42ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಂಥ ಲಿಖಿತಕ್ಕೆ ಸಂಬಂಧಿಸಿದಂತೆ ಅವನು ಮಾಡಿದ್ದಾನೆಂದು ಡೆಪ್ಯುಟಿ ಕಮಿಷನರರನು ಪರ್ಯಾಲೋಚಿಸುವಂಥ ಸ್ಟಾಂಪ್ ಕಾನೂನಿನ ವಿರುದ್ಧ ಯಾವುದೇ ಅಪರಾಧಕ್ಕಾಗಿ ಯಾವನೇ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡಬಹುದು:

ಪರಂತು,–

(ಕ) 34ನೇ ಪ್ರಕರಣದ ಮೇರೆಗಿನ ಲಿಖಿತಕ್ಕೆ ಸಂಬಂಧಿಸಿದಂತೆ ಅಂಥ ನ್ಯಾಯಾಲಯದ ನಿರ್ಧರಣೆಗೆ ಅನುಸಾರವಾಗಿ ಸಂದಾಯ ಮಾಡಬೇಕಾಗಿದ್ದಂಥ ಮೊಬಲಗನ್ನು (ಸುಂಕ ಮತ್ತು ದಂಡವೂ ಸೇರಿದಂತೆ) ಡೆಪ್ಯುಟಿ ಕಮಿಷನರರನಿಗೆ ಸಂದಾಯ ಮಾಡಿರುವಲ್ಲಿ ಸರಿಯಾದ ಸುಂಕದ ಸಂದಾಯವನ್ನು ತಪ್ಪಿಸುವ ಉದ್ದೇಶದಿಂದ ಅಪರಾಧವನ್ನು ಮಾಡಲಾಗಿತ್ತೆಂದು ಅವನು ಯೋಚಿಸಿದ ಹೊರತು, ಅಂಥ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ;

(ಖ) ಅಂಥ ಪ್ರಾಸಿಕ್ಯೂಷನ್ನಿನ ಉದ್ದೇಶಕ್ಕಾಗಿ ಹೊರತು, ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಘೋಷಣೆಯು, ಸಾಕ್ಷ್ಯವಾಗಿ ಯಾವುದೇ ಲಿಖಿತವನ್ನು ಅಂಗೀಕರಿಸುವ ಯಾವುದೇ ಆದೇಶದ ಅಥವಾ 41ನೇ ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ಪ್ರಮಾಣ ಪತ್ರದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

## ಅಧ್ಯಾಯ – VII
## ಕ್ರಿಮಿನಲ್ ಅಪರಾಧಗಳು ಮತ್ತು ಪ್ರಕ್ರಿಯೆ

**59. ಕ್ರಮಬದ್ಧವಾಗಿ ಸ್ಟಾಂಪು ಹಚ್ಚದ ಲಿಖಿತವನ್ನು ಬರೆದುಕೊಡುವುದು, ಇತ್ಯಾದಿಗಾಗಿ ದಂಡನೆ:–** (1) ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತಕ್ಕೆ, ಸಾಕ್ಷಿಯಾಗಿ ಅಲ್ಲದೆ ಅನ್ಯಥಾ ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪು ಹಚ್ಚದೆ ಬರೆದುಕೊಡುವ ಅಥವಾ ರವಾನೆ ಮಾಡುವ ಯಾವನೇ ವ್ಯಕ್ತಿಯು, ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

ಪರಂತು, 34ನೇ ಪ್ರಕರಣ, 39ನೇ ಪ್ರಕರಣ ಅಥವಾ 58ನೇ ಪ್ರಕರಣದ ಮೇರೆಗೆ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ಯಾವುದೇ ದಂಡವನ್ನು ಸಂದಾಯ ಮಾಡಿರುವಾಗ ಅಂಥ ದಂಡದ ಮೊಬಲಗನ್ನು ಅಂಥ ದಂಡವನ್ನು ಸಂದಾಯ ಮಾಡಿದ ವ್ಯಕ್ತಿಗೆ ಅದೇ ಲಿಖಿತಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ತರುವಾಯ ವಿಧಿಸಿದ ಜುಲ್ಮಾನೆ (ಯಾವುದಾದರೂ ಇದ್ದರೆ) ಅದರಲ್ಲಿ ಕಳೆಯಲು ಅವಕಾಶ ಮಾಡಿಕೊಡತಕ್ಕದ್ದು.

(2) ಷೇರು ವಾರಂಟನ್ನು ಕ್ರಮಬದ್ಧವಾಗಿ ಸ್ಟಾಂಪು (ಹಚ್ಚದೆ ಹೊರಡಿಸಿದ್ದರೆ, ಅದನ್ನು ಹೊರಡಿಸುವ ಕಂಪನಿ, ಅದನ್ನು ಹೊರಡಿಸಿದ ಕಾಲದಲ್ಲಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅಥವಾ ಕಾರ್ಯದರ್ಶಿ ಅಥವಾ ಇತರ ಮುಖ್ಯ ಅಧಿಕಾರಿಯಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಸಹ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂತಹ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**60. ಅಂಟಿಕೊಳ್ಳುವ ಸ್ಟಾಂಪುಗಳನ್ನು ರದ್ದು ಮಾಡಲು ತಪ್ಪುವುದಕ್ಕಾಗಿ ದಂಡನೆ:–** 12ನೇ ಪ್ರಕರಣದ ಮೂಲಕ ಅಂಟಿಕೊಳ್ಳುವ ಸ್ಟಾಂಪುಗಳನ್ನು ರದ್ದುಗೊಳಿಸಲು ಅಗತ್ಯಪಡಿಸಿದ ಮತ್ತು ಆ ಪ್ರಕರಣ ಮೂಲಕ ನಿಯಮಿಸಿದ ರೀತಿಯಲ್ಲಿ ಅಂಥ ಸ್ಟಾಂಪನ್ನು ರದ್ದುಗೊಳಿಸಲು ತಪ್ಪುವ ಯಾವನೇ ವ್ಯಕ್ತಿಯು ಒಂದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**61. 28ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದ್ದಕ್ಕಾಗಿ ದಂಡನೆ:–** ಸರ್ಕಾರವನ್ನು ವಂಚಿಸುವ ಉದ್ದೇಶದಿಂದ ಯಾವನೇ ವ್ಯಕ್ತಿಯು,–

(ಕ) 28ನೇ ಪ್ರಕರಣದ ಮೂಲಕ ಅಂಥ ಲಿಖಿತದಲ್ಲಿ ನಿರೂಪಿಸಬೇಕಾದ ಎಲ್ಲ ಸಂಗತಿಗಳು ಮತ್ತು ಸಂದರ್ಭಗಳನ್ನು ಪೂರ್ಣವಾಗಿ ಮತ್ತು ಸರಿಯಾಗಿ ನಿರೂಪಿಸಿಲ್ಲದಂಥ ಯಾವುದೇ ಲಿಖಿತವನ್ನು ಬರೆದುಕೊಟ್ಟರೆ; ಅಥವಾ

(ಖ) ಯಾವುದೇ ಲಿಖಿತವನ್ನು ಸಿದ್ಧಪಡಿಸುವಲ್ಲಿ ಅಥವಾ ಸಿದ್ಧಪಡಿಸುವಾಗ ನಿಯೋಜಿತನಾಗಿದ್ದು ಅಥವಾ ಅದಕ್ಕೆ ಸಂಬಂಧಿಸಿದ್ದು ಅದರಲ್ಲಿ ಎಲ್ಲ ಅಂಥ ಸಂಗತಿಗಳು ಮತ್ತು ಸಂದರ್ಭಗಳನ್ನು ಪೂರ್ಣವಾಗಿ ಮತ್ತು ಸರಿಯಾಗಿ ನಿರೂಪಿಸಲು ನಿರ್ಲಕ್ಷಿಸಿದರೆ ಅಥವಾ ತಪ್ಪಿದರೆ; ಅಥವಾ

(ಗ) ಈ ಅಧಿನಿಯಮದ ಮೇರೆಗೆ ಯಾವುದೇ ಸುಂಕ ಅಥವಾ ದಂಡವನ್ನು ಸರ್ಕಾರಕ್ಕೆ ತಪ್ಪಿಸುವ ಉದ್ದೇಶದಿಂದ ಯಾವುದೇ ಇತರ ಕಾರ್ಯವನ್ನು ಮಾಡಿದರೆ

– ಅವನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**62. ರಾಜಸ್ವವನ್ನು ವಂಚಿಸುವ ಉಪಾಯಗಳಿಗಾಗಿ ದಂಡನೆ:–** ಸರ್ಕಾರಕ್ಕೆ ಸುಂಕವನ್ನು ವಂಚಿಸುವ ಉದ್ದೇಶದಿಂದ ಯಾವನೇ ವ್ಯಕ್ತಿಯು, ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ವಿಶೇಷವಾಗಿ ದಂಡನೀಯವಾಗಿರದ ಯಾವುದೇ ಕಾರ್ಯ, ಕುಯುಕ್ತಿ ಅಥವಾ ಉಪಾಯವನ್ನು ಮಾಡಿದರೆ ಅಥವಾ ಅದಕ್ಕೆ ಸಂಬಂಧಿಸಿದವನಾಗಿದ್ದರೆ, ಅವನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**63. ಸ್ಟಾಂಪುಗಳ ಮಾರಾಟಕ್ಕೆ ಸಂಬಂಧಪಟ್ಟ ನಿಯಮದ ಉಲ್ಲಂಘನೆಗಾಗಿ ಮತ್ತು ಅನಧಿಕೃತ ಮಾರಾಟಕ್ಕಾಗಿ ದಂಡನೆ:–**

(ಕ) ಸ್ಟಾಂಪುಗಳ ಮಾರಾಟ ಮಾಡಲು ನೇಮಕಗೊಂಡ ಯಾವೊಬ್ಬ ವ್ಯಕ್ತಿಯು 68ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೆ ನಿಯಮವನ್ನು ಉಲ್ಲಂಘಿಸಿದರೆ, ಮತ್ತು

(ಖ) ಹಾಗೆ ನೇಮಕಗೊಂಡಿರದ ಯಾವನೇ ವ್ಯಕ್ತಿಯು ಹದಿನೈದು ಪೈಸೆ, ಹತ್ತು ಪೈಸೆ ಅಥವಾ ಐದು ಪೈಸೆಯ ಅಂಟಿಕೊಳ್ಳುವ ಸ್ಟಾಂಪಲ್ಲದ ಇತರ ಯಾವುದೇ ಸ್ಟಾಂಪನ್ನು ಮಾರಾಟ ಮಾಡಿದರೆ ಅಥವಾ ಮಾರಾಟಕ್ಕಾಗಿ ಕೊಡಮಾಡಿದರೆ

– ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**63ಕ. ಇತರ ಉಪಬಂಧಗಳ ಉಲ್ಲಂಘನೆಗಾಗಿ ದಂಡ:–** ಈ ಅಧ್ಯಾಯದಲ್ಲಿ ಇತರ ಯಾವುದೇ ಉಪಬಂಧವನ್ನು ಮಾಡಿಲ್ಲದಂಥ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಉದ್ದೇಶಪೂರ್ವಕವಾಗಿ ಕಾರ್ಯ ನಡೆಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**64. ಪ್ರಾಸಿಕ್ಯೂಷನ್‌ಗಳನ್ನು ಹೂಡುವುದು ಮತ್ತು ನಡೆಸುವುದು;–** (1) ಈ ಅಧಿನಿಯಮದ ಅಥವಾ ಈ ಮೂಲಕ ನಿರಸನಗೊಳಿಸಿದ ಯಾವುದೇ ಅಧಿನಿಯಮಿತಿಯ ಮೇರೆಗೆ ದಂಡನೀಯವಾದ ಯಾವುದೆ ಅಪರಾಧಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾಸಿಕ್ಯೂಷನನ್ನು, ಸರ್ಕಾರವು ಸಾಮಾನ್ಯವಾಗಿ ಅಥವಾ ಡೆಪ್ಯುಟಿ ಕಮೀಷನರನು ವಿಶೇಷವಾಗಿ ಅಧಿಕೃತಗೊಳಿಸುವಂಥ ಇತರ ಅಧಿಕಾರಿಯ ಮಂಜೂರಾತಿಯಿಲ್ಲದೆ ಹೂಡತಕ್ಕುದಲ್ಲ.

(2) ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ ಅಥವಾ ಈ ಬಗ್ಗೆ ಅವನಿಂದ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತನಾದ ಯಾವನೇ ಅಧಿಕಾರಿಯು ಅಂತಹ ಯಾವುದೇ ಪ್ರಾಸಿಕ್ಯೂಷನನ್ನು ತಡೆಹಿಡಿಯಬಹುದು ಅಥವಾ ಅಂತಹ ಯಾವುದೇ ಅಪರಾಧವನ್ನು ರಾಜಿ ಮಾಡಿಕೊಳ್ಳಬಹುದು.

(3) ಯಾವುದೇ ಅಂಥ ರಾಜಿಯ ಮೊಬಲಗು 46ನೇ ಪ್ರಕರಣದ ಮೂಲಕ ಉಪಬಂಧಿಸಿರುವ ರೀತಿಯಲ್ಲಿ ವಸೂಲೀಯಾಗತಕ್ಕದ್ದು.

**65. ಮ್ಯಾಜಿಸ್ಟ್ರೇಟರುಗಳ ಅಧಿಕಾರ ವ್ಯಾಪ್ತಿ:–** ಎರಡನೆಯ ದರ್ಜೆಯ ಮ್ಯಾಜಿಸ್ಟ್ರೇಟನ ಅಧಿಕಾರಗಳಿಗಿಂತ ಕಡಿಮೆಯಲ್ಲದ ಅಧಿಕಾರಗಳನ್ನು ಹೊಂದಿರುವ ಮಾಜಿಸ್ಟ್ರೇಟನನ್ನು ಹೊರತುಪಡಿಸಿ, ಯಾವನೇ ಮ್ಯಾಜಿಸ್ಟ್ರೇಟನು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**66. ಅಧಿವಿಚಾರಣೆಯ ಸ್ಥಳ:–** ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ಮಾಡಿದ ಅಂಥ ಪ್ರತಿಯೊಂದು ಅಪರಾಧವನ್ನು ಅಂತಹ ಲಿಖಿತವು ಕಂಡುಬರುವಂಥ ಯಾವುದೇ ಜಿಲ್ಲೆಯಲ್ಲಿ ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ ಮೇರೆಗೆ ಅಂತಹ ಅಪರಾಧವನ್ನು ಅಧಿವಿಚಾರಣೆ ಮಾಡಬಹುದಾದಂಥ ಯಾವುದೇ ಜಿಲ್ಲೆಯಲ್ಲಿ ಅಧಿವಿಚಾರಣೆ ಮಾಡಬಹುದು.

## ಅಧ್ಯಾಯ – VIII
## ಪೂರಕ ಉಪಬಂಧಗಳು

**67. ಪುಸ್ತಕಗಳು, ಮುಂತಾದವು ಪರಿಶೀಲನೆಗೆ ಒಳಗಾಗಿರತಕ್ಕದ್ದು:–** ಯಾವುದರ ಪರಿಶೀಲನೆಯು ಯಾವುದೇ ಸುಂಕವನ್ನು ಪಡೆಯಲು ನೆರವಾಗುತ್ತದೋ ಅಥವಾ ಯಾವುದೇ ಸುಂಕಕ್ಕೆ ಸಂಬಂಧಪಟ್ಟಂತೆ ಯಾವುದೇ ಮೋಸ ಅಥವಾ ಲೋಪವನ್ನು ರುಜುವಾತುಪಡಿಸಲು ಅಥವಾ ಕಂಡುಹಿಡಿಯಲು ಮುಂದಾಗುತ್ತದೋ ಆ ಯಾವುದೇ ರಿಜಿಸ್ಟರುಗಳು, ಪುಸ್ತಕಗಳು, ದಾಖಲೆಗಳು, ಕಾಗದ ಪತ್ರಗಳು, ದಸ್ತಾವೇಜುಗಳು ಅಥವಾ ವ್ಯವಹರಣೆಗಳನ್ನು ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಂಡಿರುವ ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯು, ಡೆಪ್ಯುಟಿ ಕಮಿಷನರನು ಬರಹದಲ್ಲಿ ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಗೆ, ಎಲ್ಲಾ ಯುಕ್ತ ಕಾಲಗಳಲ್ಲಿ, ಅಂತಹ ಉದ್ದೇಶಕ್ಕಾಗಿ ರಿಜಿಸ್ಟರುಗಳು, ಪುಸ್ತಕಗಳು, ಕಾಗದ ಪತ್ರಗಳು, ದಸ್ತಾವೇಜುಗಳು ಮತ್ತು ವ್ಯವಹರಣೆಗಳನ್ನು ಪರಿಶೀಲಿಸಲು ಮತ್ತು ಫೀಜು ಅಥವಾ ವೆಚ್ಚವಿಲ್ಲದೆ ಅವನಿಗೆ ಅವಶ್ಯಕವೆಂದು ಭಾವಿಸುವ ಟಿಪ್ಪಣಿಗಳನ್ನು ಮತ್ತು ಉದ್ಧೃತ ಭಾಗಗಳನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಡತಕ್ಕದ್ದು.

**67ಕ. ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ ಮತ್ತು ಡೆಪ್ಯುಟಿ ಕಮಿಷನರನ ಪ್ರಕ್ರಿಯೆ ಮತ್ತು ತಪ್ಪುಗಳನ್ನು ಸರಿಪಡಿಸುವುದು:–** (1) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಸರಿಯಾದ ಸ್ಟಾಂಪ್ ಸುಂಕಕ್ಕೆ ಸಂಬಂಧಪಟ್ಟ ಯಾವುದೇ ಆದೇಶವನ್ನು, ಅಂಥ ಸುಂಕವನ್ನು ಸಂದಾಯ ಮಾಡಲು ಹೊಣೆಗಾರನಾದ ಯಾವನೇ ವ್ಯಕ್ತಿಗೆ ಬಾಧಕವಾಗುವಂತೆ ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ ಅಥವಾ ಡೆಪ್ಯುಟಿ ಕಮಿಷನರನು ಅಂಥ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ಮಾಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರ, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ ಅಥವಾ ಡೆಪ್ಯುಟಿ ಕಮಿಷನರನು ತಾನಾಗಿಯೇ ಅಥವಾ ಬಾಧಿತನಾದ ಯಾವನೇ ಪಕ್ಷಕಾರನು, ಅದು ಅಥವಾ ಅವನು ಮಾಡಿದ ಯಾವುದೇ ಆದೇಶದ ದಿನಾಂಕದಿಂದ ಮೂರು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಮಾಡಿಕೊಂಡ ಅರ್ಜಿಯ ಮೇಲೆ, ಅಂಥ ಆದೇಶವನ್ನು ಪುನರವಲೋಕನ ಮಾಡಬಹುದು, ಮತ್ತು ದಾಖಲೆಯಿಂದ ಕಂಡುಬರುವ ಯಾವುದೇ ತಪ್ಪನ್ನು ಅಥವಾ ಪ್ರಮಾದವನ್ನು ಸರಿಪಡಿಸಬಹುದು:

ಪರಂತು, ಅಂಥ ಯಾವುದೇ ಸರಿಪಡಿಸುವಿಕೆಯನ್ನು ಯಾವನೇ ವ್ಯಕ್ತಿಗೆ ಪ್ರತಿಕೂಲವಾಗಿ ಅಂತಹ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ಮಾಡತಕ್ಕದ್ದಲ್ಲ.

**67ಖ. ಆವರಣವನ್ನು ಪ್ರವೇಶಿಸಲು ಮತ್ತು ಕೆಲವು ದಸ್ತಾವೇಜುಗಳನ್ನು ಪರಿಶೀಲಿಸಲು ಅಧಿಕಾರಿಗಳನ್ನು ಅಧಿಕೃತಗೊಳಿಸಲು ಡೆಪ್ಯುಟಿ ಕಮಿಷನರನ ಅಧಿಕಾರ:–** ಡೆಪ್ಯುಟಿ ಕಮಿಷನರನು, ಅನುಸೂಚಿಯ 5ನೇ ಮತ್ತು 37ನೇ ಅನುಚ್ಛೇದಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಲಿಖಿತಕ್ಕೆ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕವನ್ನು ವಿಧಿಸಿಯೇ ಇಲ್ಲ ಅಥವಾ ಸರಿಯಾಗಿ ವಿಧಿಸಿಲ್ಲವೆಂದು ಅವನಿಗೆ ನಂಬಲು ಕಾರಣವಿರುವಲ್ಲಿ ಅಂತಹ ಯಾವುದೇ ಲಿಖಿತಕ್ಕೆ ಸಂಬಂಧಪಟ್ಟ ಅಥವಾ ಸಂಬಂಧಿಸಿದ ಯಾವುದೇ ರಿಜಿಸ್ಟರುಗಳು, ಪುಸ್ತಕಗಳು, ದಾಖಲೆಗಳು, ಕಾಗದ ಪತ್ರಗಳು, ದಸ್ತಾವೇಜುಗಳು ಅಥವಾ ವ್ಯವಹರಣೆಗಳನ್ನು ಇಡಲಾಗಿದೆಯೆಂದು ಅವನು ನಂಬಲು ಕಾರಣವಿರುವ ಯಾವುದೇ ಆವರಣವನ್ನು ಪ್ರವೇಶಿಸಲು ಮತ್ತು ಅವುಗಳನ್ನು ಪರಿಶೀಲಿಸಲು ಮತ್ತು ಅಂತಹ ಅಧಿಕಾರಿಯು ಅವಶ್ಯಕವೆಂದು ಭಾವಿಸುವಂಥ ಟಿಪ್ಪಣಿಗಳನ್ನು ಮತ್ತು ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಲು ಯಾವನೇ ಅಧಿಕಾರಿಗೆ ಬರಹದಲ್ಲಿ ಅಧಿಕೃತಗೊಳಿಸಬಹುದು, ಅಂತಹ ರಿಜಿಸ್ಟರುಗಳು,

ಪುಸ್ತಕಗಳು, ದಾಖಲೆಗಳು, ಕಾಗದ ಪತ್ರಗಳು, ದಸ್ತಾವೇಜುಗಳು ಅಥವಾ ವ್ಯವಹರಣೆಗಳನ್ನು ಅವನ ಅಭಿರಕ್ಷೆಯಲ್ಲಿ ಹೊಂದಿರುವ ಅಥವಾ ಇಟ್ಟುಕೊಂಡು ಬಂದಿರುವ ಪ್ರತಿಯೊಬ್ಬ ವ್ಯಕ್ತಿಯು ಎಲ್ಲಾ ಯುಕ್ತ ಕಾಲಗಳಲ್ಲಿ ಡೆಪ್ಯುಟಿ ಕಮಿಷನರನು ಅಧಿಕೃತಗೊಳಿಸಿದ ಅಧಿಕಾರಿಯು ಅವುಗಳನ್ನು ಪರಿಶೀಲಿಸಲು ಮತ್ತು ಅವನು ಅವಶ್ಯವೆಂದು ಭಾವಿಸುವಂಥ ಟಿಪ್ಪಣಿಗಳನ್ನು ಮತ್ತು ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಲು ಅನುಮತಿ ಕೊಡತಕ್ಕದ್ದು.

**68. ನಿಯಮ ರಚನಾಧಿಕಾರ:–** (1) ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಸಾಮಾನ್ಯವಾಗಿ ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳನ್ನು–

(ಕ) ಸ್ಟಾಂಪುಗಳ ಮತ್ತು ಸ್ಟಾಂಪ್ ಹಚ್ಚಿದ ಕಾಗದಗಳ ಸರಬರಾಜು ಮತ್ತು ಮಾರಾಟ,

(ಖ) ಅಂತಹ ಮಾರಾಟವನ್ನು ಯಾರು ಮಾತ್ರವೇ ಮಾಡಬೇಕೋ ಆ ವ್ಯಕ್ತಿಗಳು,

(ಗ) ಅಂತಹ ವ್ಯಕ್ತಿಗಳ ಕರ್ತವ್ಯಗಳು ಮತ್ತು ಪರಿಶ್ರಮ ಧನ,

(ಘ) ಯಾವುದೇ ನಿಯಮದ ಉಲ್ಲಂಘನೆಗೆ ವಹಿಸಬೇಕಾದ ಯಾವುದೇ ಸಂದರ್ಭದಲ್ಲಿ ಐದು ನೂರು ರೂಪಾಯಿಗಳಿಗೆ ಮೀರದಂಥ ಜುಲ್ಮಾನೆಗಳು,

(ಙ) 45ಕ (2)ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುವ ರೀತಿ ಮತ್ತು

(ಚ) ಅಪೀಲನ್ನು ಸಲ್ಲಿಸುವಂಥ ಕಾಲ ಮತ್ತು ಅಂತಹ ಅಪೀಲನ್ನು ಜಿಲ್ಲಾ ನ್ಯಾಯಾಧೀಶನು ಸುನಾವಣೆ ಮಾಡುವ ಮತ್ತು ವಿಲೆ ಮಾಡತಕ್ಕಂಥ ರೀತಿ

– ಇವುಗಳನ್ನು ವಿನಿಯಮಿಸುವುದಕ್ಕಾಗಿ ರಚಿಸಬಹುದು:

ಪರಂತು, ಅಂಥ ನಿಯಮಗಳು ಹದಿನೈದು ಪೈಸೆ, ಹತ್ತು ಪೈಸೆ ಅಥವಾ ಐದು ಪೈಸೆಯ ಅಂಟಿಕೊಳ್ಳುವ ಸ್ಟಾಂಪುಗಳ ಮಾರಾಟವನ್ನು ನಿರ್ಬಂಧಿಸತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**69. ನ್ಯಾಯಾಲಯದ ಫೀಜುಗಳ ಬಗ್ಗೆ ಉಳಿಸುವಿಕೆ:–** ಈ ಅಧಿನಿಯಮದಲ್ಲಿ ಅಡಕವಾಗಿರುವುದಾವುದೂ, ನ್ಯಾಯಾಲಯದ ಫೀಜುಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೇರೆಗೆ ವಿಧಿಸಬಹುದಾದ ಸುಂಕಗಳನ್ನು ಬಾಧಿಸುವುದೆಂದು ಭಾವಿಸತಕ್ಕುದಲ್ಲ.

**70. ಅಧಿನಿಯಮವನ್ನು ಭಾಷಾಂತರಿಸಿ ಅಗ್ಗವಾಗಿ ಮಾರಾಟ ಮಾಡತಕ್ಕದ್ದು:–** ರಾಜ್ಯ ಸರ್ಕಾರವು ಈ ಅಧಿನಿಯಮದ ಕನ್ನಡ ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿನ ಭಾಷಾಂತರವನ್ನು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಪ್ರತಿ ಒಂದಕ್ಕೆ ಗೊತ್ತುಪಡಿಸಬಹುದದಂಥ ಬೆಲೆಯಲ್ಲಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು.

**71. ನಿರಸನ ಮತ್ತು ಉಳಿಸುವಿಕೆಗಳು:–** ಕರ್ನಾಟಕ ಪ್ರದೇಶದಲ್ಲಿ ಜಾರಿಯಲ್ಲಿದ್ದಂತೆ ಕರ್ನಾಟಕ ಸ್ಟಾಂಪು ಅಧಿನಿಯಮ, 1900 (1900ರ ಕರ್ನಾಟಕ ಅಧಿನಿಯಮ II) ಮತ್ತು ಹೈದರಾಬಾದ್ ಪ್ರದೇಶದಲ್ಲಿ ಜಾರಿಯಲ್ಲಿದ್ದಂತೆ ಹೈದರಾಬಾದ್ ಸ್ಟಾಂಪು ಅಧಿನಿಯಮ, 1331 ಫಸಲಿ (1331 ಫಸಲಿಯ ಹೈದರಾಬಾದ್ ಅಧಿನಿಯಮ IV) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು–

(ಕ) ಸದರಿ ಅಧಿನಿಯಮಿತಿಗಳ ಪೂರ್ವ ಪ್ರವರ್ತನೆ ಅಥವಾ ಅವುಗಳ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಅಥವಾ ಅನುಭವಿಸಿದ ಯಾವುದೇ ಕಾರ್ಯವನ್ನು;

(ಖ) ಸದರಿ ಅಧಿನಿಯಮಿತಿಗಳ ಮೇರೆಗೆ ಅರ್ಜಿಸಿದ, ಒದಗಿಬಂದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾದ್ಯತೆ ಅಥವಾ ಹೊಣೆಗಾರಿಕೆಯನ್ನು;

(ಗ) ಸದರಿ ಅಧಿನಿಯಮಿತಿಗಳಿಗೆ ವಿರುದ್ಧವಾಗಿ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ವಹಿಸಿದ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು; ಅಥವಾ

(ಘ) ಈ ಹಿಂದೆ ಹೇಳಿದಂತಹ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಬಾಧಿಸತಕ್ಕದ್ದಲ್ಲ.

– ಮತ್ತು ಈ ಅಧಿನಿಯಮವನ್ನು ಅಂಗೀಕರಿಸಿರದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಯಾವುದೇ ಅಂಥ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದು.

**72. ಭಾರತೀಯ ಸ್ಟಾಂಪು ಅಧಿನಿಯಮ, 1899ರ ಅನ್ವಯ:–** ಮದರಾಸು ಪ್ರದೇಶದಲ್ಲಿ ಜಾರಿಯಲ್ಲಿದ್ದಂತೆ ಭಾರತೀಯ ಸ್ಟಾಂಪು ಅಧಿನಿಯಮ, 1899ವು (1899ರ ಕೇಂದ್ರ ಅಧಿನಿಯಮ II) ಯಾವುದೇ ಕಾನೂನಿನಲ್ಲಿ ಏನೇ ಅಡಕವಾದ್ದಾಗ್ಯೂ, ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು ಮತ್ತು ಸಂವಿಧಾನದ ಏಳನೇ ಅನುಸೂಚಿಯ ಒಂದನೇ ಪಟ್ಟಿಯ 91ನೇ ನಮೂದನೆಯಲ್ಲಿ ನಿರ್ದಿಷ್ಟಪಡಿಸಿದ ದಸ್ತಾವೇಹುಗಳಿಗೆ ಸಂಬಂಧಿಸಿದಂತೆ ಅದರ ಮೂರನೇ ಪಟ್ಟಿಯ 44ನೇ ನಮೂದನೆಯಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಜಾರಿಯಲ್ಲಿರತಕ್ಕದ್ದು.

(2) (1)ನೇ ಉಪ–ಪ್ರಕರಣದಲ್ಲಿ ಉಪಬಂಧಿಸಿದ್ದಂತೆ ಹೊರತು, ಮುಂಬೈ ಪ್ರದೇಶ, ಕೊಡಗು ಜಿಲ್ಲೆ ಮತ್ತು ಮದರಾಸು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಭಾರತೀಯ ಸ್ಟಾಂಪು ಅಧಿನಿಯಮ, 1899ನ್ನು (1899ರ ಕೇಂದ್ರ ಅಧಿನಿಯಮ II) ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 63ನೇ ನಮೂದನೆಯ ಅಡಿಯಲ್ಲಿ ಬರುವ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಅದರ ಮೂರನೇ ಪಟ್ಟಿಯ 44ನೇ ನಮೂದನೆಯಲ್ಲಿ ನಿರ್ದಿಷ್ಟಪಡಿಸಿದ ವಿಷಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು–

(ಕ) ಸದರಿ ಅಧಿನಿಯಮಿತಿಗಳ ಪೂರ್ವ ಪ್ರವರ್ತನೆ ಅಥವಾ ಅವುಗಳ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಅಥವಾ ಅನುಭವಿಸಿದ ಯಾವುದೇ ಕಾರ್ಯವನ್ನು;

(ಖ) ಸದರಿ ಅಧಿನಿಯಮಿತಿಗಳ ಮೇರೆಗೆ ಆರ್ಜಿಸಿದ, ಒದಗಿಬಂದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು;

(ಗ) ಸದರಿ ಅಧಿನಿಯಮಿತಿಗಳಿಗೆ ವಿರುದ್ಧವಾಗಿ ಮಾಡಿದ ಯಾವುದೇ ಅಪರಾದಕ್ಕೆ ಸಂಬಂಧಿಸಿದಂತೆ ವಹಿಸಿದ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು; ಅಥವಾ

(ಘ) ಈ ಹಿಂದೆ ಹೇಳಿದಂತಹ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು

– ಬಾಧಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮವನ್ನು ಅಂಗೀಕರಿಸಿರದಿದ್ದರೆ ಹೇಗೋ ಹಾಗೆ, ಅಂಥ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಯಾವುದೇ ಅಂಥ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದು.

**ಅನುಸೂಚಿ**

**ಲಿಖಿತಗಳ ಮೇಲಿನ ಸ್ಟಾಂಪ್ ಸುಂಕ**

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| 1 | ಋಣದ ಸಾಕ್ಷ್ಯವನ್ನು ಒದಗಿಸಲು ಯಾವುದೇ ಪುಸ್ತಕದಲ್ಲಿ (ಬ್ಯಾಂಕರನ ಪಾಸ್ ಬುಕ್ಕನ್ನು ಹೊರತುಪಡಿಸಿ) ಅಥವಾ ಪ್ರತ್ಯೇಕ ಕಾಗದದ ಮೇಲೆ ಅಂಥ ಪುಸ್ತಕ ಅಥವಾ ಕಾಗದವನ್ನು ಸಾಲ ಕೊಡುವವನ ಸ್ವಾಧೀನದಲ್ಲಿ ಬಿಟ್ಟಾಗ, ಋಣಿಯು ಅಥವಾ ಅವನ ಪರವಾಗಿ ಬರದುಕೊಟ್ಟ ಅಥವಾ ರುಜುಮಾಡಿದಂಥ ಇಪ್ಪತ್ತು ರೂಪಾಯಿಗಳ ಮೊಬಲಗು ಅಥವಾ ಮೌಲ್ಯವನ್ನು ಮೀರಿದ ಋಣದ ಒಪ್ಪಿಗೆ:<br><br>ಪರಂತು, ಅಂಥ ಒಪ್ಪಿಗೆಯು ಆ ಋಣವನ್ನು ಸಂದಾಯ ಮಾಡಲು ಯಾವುದೇ ವಾಗ್ದಾನ ಅಥವಾ ಬಡ್ಡಿಯನ್ನು ಸಂದಾಯ ಮಾಡಲು ಅಥವಾ ಯಾವುವೇ ಸರಕುಗಳು ಅಥವಾ ಸ್ವತ್ತನ್ನು ವಶಾವಣೆ ಮಾಡಲು ಯಾವುದೇ ಷರತ್ತನ್ನು | ಇಪ್ಪತ್ತು ಪೈಸೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| | ಒಳಗೊಂಡಿರಕೂಡದು. | |
| 2 | ಸರ್ಕಾರಿ ಉಳಿತಾಯ ಬ್ಯಾಂಕುಗಳ ಅಧಿನಿಯಮ, 1873ರ (1873ರ ಕೇಂದ್ರಾಧಿನಿಯಮ V) 6ನೇ ಪ್ರಕರಣ ಅಥವಾ ಭಾರತ ಉತ್ತರಾಧಿಕಾರ ಅಧಿನಿಯಮ, 1925ರ (1925ರ ಕೇಂದ್ರಾಧಿನಿಯಮ XXXIX) 289, 291, 375 ಅಥವಾ 376ನೇ ಪ್ರಕರಣದ ಮೇರೆಗೆ ಕೊಟ್ಟ ಬಂಧಪತ್ರವೂ ಸೇರಿದಂತೆ ವಹಿವಾಟು ಬಂಧಪತ್ರ<br>(ಕ) ಮೊಬಲಗು 1,000 ರೂ.ಗಳನ್ನು ಮೀರದಿರುವಲ್ಲಿ<br>(ಖ) ಇತರ ಯಾವುದೇ ಸಂದರ್ಭದಲ್ಲಿ | ಅಂಥ ಮೊಬಲಗಾಗಿ ಬಂಧಪತ್ರದಂತೆ (ನಂ. 12) ಅದೇ ಸುಂಕ,<br>ಮೂವತ್ತು ರೂಪಾಯಿಗಳು |
| 3 | ದತ್ತಕಪತ್ರ ಎಂದರೆ ದತ್ತಕವನ್ನು ದಾಖಲು ಮಾಡುವ, ಅಥವಾ ದತ್ತು ತೆಗೆದುಕೊಳ್ಳಲು ಅಧಿಕಾರವನ್ನು ಪ್ರಧಾನ ಮಾಡುವ ಅಥವಾ ಪ್ರಧಾನ ಮಾಡುವುದಾಗಿ ತಾತ್ಪರ್ಯವಾಗುವ ಯಾವುದೇ ಲಿಖಿತ (ಮರಣ ಶಾಸನವನ್ನು ಹೊರತುಪಡಿಸಿ)<br>ನ್ಯಾಯವಾದಿ:– ನ್ಯಾಯವಾದಿಯಾಗಿ ಪಟ್ಟಿಯಲ್ಲಿ ಸೇರುವ ಪ್ರಮಾಣ ಪತ್ರವನ್ನು ನೋಡಿ. (ಸಂ. 17) | ನಲವತ್ತೈದು ರೂಪಾಯಿಗಳು |
| 4 | ಪ್ರಮಾಣ ಮಾಡುವುದಕ್ಕೆ ಬದಲಾಗಿ ದೃಢೀಕರಿಸಲು ಅಥವಾ ಘೋಷಿಸಲು ಕಾನೂನಿನ ಮೂಲಕ ಅನುಮತಿಸಲಾದ ವ್ಯಕ್ತಿಗಳ ಸಂದರ್ಭದಲ್ಲಿನ ದೃಢೀಕರಣ ಅಥವಾ ಘೋಷಣೆ<br>ವಿನಾಯಿತಿ: | ಐದು ರೂಪಾಯಿಗಳು |
| (ಕ) | ಸಂಘದ ಸಶಸ್ತ್ರ ದಳಗಳಲ್ಲಿ ಸೇರಿಕೊಳ್ಳುವ ಷರತ್ತಾಗಿ; | |
| (ಖ) | ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ನ್ಯಾಯಾಲಯದ ಅಧಿಕಾರಿಯ ಸಮ್ಮುಖದಲ್ಲಿ ದಾಖಲು ಮಾಡುವ ಅಥವಾ ಉಪಯೋಗಿಸುವ ತ್ವರಿತ ಉದ್ದೇಶಕ್ಕಾಗಿ; ಅಥವಾ | |

| ಅನುಚ್ಛೇದ ಸಂಖ್ಯೆ | | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | | 2 | 3 |
| (ಗ) | | ಯಾವುದೇ ಪಿಂಚಣಿ ಅಥವಾ ಧರ್ಮಾರ್ಥ ಭತ್ಯವನ್ನು ಸ್ವೀಕರಿಸಲು ಯಾವನೇ ವ್ಯಕ್ತಿಯನ್ನು ಶಕ್ತಗೊಳಿಸುವ ಏಕ ಮಾತ್ರ ಉದ್ದೇಶಕ್ಕಾಗಿ<br><br>– ಬರಹದಲ್ಲಿ ಶಪಥ ಪತ್ರ ಅಥವಾ ಘೋಷಣೆಯನ್ನು ಮಾಡಿದಾಗ | |
| 5 | | ಒಪ್ಪಂದ ಅಥವಾ ಒಪ್ಪಂದದ ವಿವರಣ ಪತ್ರ– | |
| | (ಕ) | ವಿನಿಮಯ ಪತ್ರದ ಮಾರಾಟಕ್ಕೆ ಸಂಬಂಧಪಟ್ಟಿದ್ದರೆ | ಎಪ್ಪತ್ತೈದು ಪೈಸೆ |
| | (ಖ) | ಸರ್ಕಾರಿ ಭದ್ರತಾ ಪತ್ರದ ಖರೀದಿ ಅಥವಾ ಮಾರಾಟಕ್ಕೆ ಸಂಬಂಧಪಟ್ಟಿದ್ದರೆ | ಸಂದರ್ಭಾನುಸಾರ ಅದರ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಭದ್ರತಾ ಪತ್ರದ ಮೌಲ್ಯದ ಅದರ ಪ್ರತಿ ಹತ್ತುಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತೈದು ಪೈಸೆ ಗರಿಷ್ಠ ಐವತ್ತೈದು ರೂಪಾಯಿಗಳಿಗೊಳಪಟ್ಟು |
| | (ಗ) | ಯಾವುದೇ ನಿಗಮಿತ ಕಂಪನಿ ಅಥವಾ ಇತರ ನಿಗಮಿತ ನಿಕಾಯದಲ್ಲಿ ಅಥವಾ ಅದರ ಷೇರುಗಳು, ಷೇರು ಪ್ರಮಾಣ ಪತ್ರಗಳು, ಸ್ಟಾಕುಗಳು, ಬಂಧಪತ್ರಗಳು, ಡಿಬೆಂಚರ್ ಸ್ಟಾಕುಗಳು ಅಥವಾ ಅದೇ ಸ್ವರೂಪದ ಇತರ ಯಾವುದೇ ಮಾರಬಹುದಾದ ಭದ್ರತಾ ಪತ್ರದ ಖರೀದಿ ಅಥವಾ ಮಾರಾಟಕ್ಕೆ ಸಂಬಂಧಪಟ್ಟಿದ್ದರೆ– | |
| | (i) | ಅಂಥ ಒಪ್ಪಂದ ಅಥವಾ ಒಪ್ಪಂದದ ವಿವರಣ ಪತ್ರವು ಭದ್ರತಾ ಪತ್ರಗಳ ಕರಾರುಗಳ (ವಿನಿಯಮನ) ಅಧಿನಿಯಮ, 1956ರ ಮೇರೆಗೆ ಮನ್ನಣೆ ಪಡೆದ ಸ್ಟಾಕ್ ಎಕ್ಸ್‌ಚೇಂಜಿನ ಸದಸ್ಯನೊಡನೆ ಅಥವಾ ಅವನ ಮೂಲಕ ಅಥವಾ ಸದಸ್ಯರ ನಡುವೆ ಇರುವಲ್ಲಿ | ಸಂದರ್ಭಾನುಸಾರ ಅದರ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಭದ್ರತಾ ಪತ್ರದ ಮೌಲ್ಯದ ಪ್ರತಿ ಎರಡು ಸಾವಿರದ ಐದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಇಪ್ಪತ್ತು ಪೈಸೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | (ii) | ಇತರ ಸಂದರ್ಭಗಳಲ್ಲಿ | ಸಂದರ್ಭಾನುಸಾರ ಅದರ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಭದ್ರತಾ ಪತ್ರದ ಮೌಲ್ಯದ ಪ್ರತಿ ಎರಡು ಸಾವಿರದ ಐದುನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಎಪ್ಪತ್ತೈದು ಪೈಸೆ |
| | (ಫ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 12) ಮೇರೆಗೆ ರಚಿಸಲಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ನಗರ ಮೇಲ್ಪಾಟು ಅಧಿನಿಯಮ, 1903ರ (1903ರ ಮೈಸೂರು ಅಧಿನಿಯಮ III) ಮೇರೆಗೆ ರಚಿಸಿದ ಮೈಸೂರು ನಗರಾಭಿವೃದ್ಧಿ ಮಂಡಲಿ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) ಮೇರೆಗೆ ರಚಿಸಿದ ಕರ್ನಾಟಕ ಗೃಹ ನಿರ್ಮಾಣ ಮಂಡಲಿ, ಕರ್ನಾಟಕ ಮೇಲ್ಪಾಟು ಮಂಡಲಿಗಳ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 11) ಮೇರೆಗೆ ರಚಿಸಿದ ಮೇಲ್ಪಾಟು ಮಂಡಲಿ ಮತ್ತು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಾಧಿಕಾರಗಳ ಮೂಲಕ, ಮಾಡಲಾದ ಕಟ್ಟಡ ನಿವೇಶನದ – ಅದರ ಮೇಲೆ ಕಟ್ಟಡವಿರಲಿ ಅಥವಾ ಇಲ್ಲದಿರಲಿ – ಹಂಚಿಕೆಗೆ ಸಂಬಂಧಿಸಿದ ಬಾಡಿಗೆ ಹಾಗೂ ಮಾರಾಟದ ವ್ಯವಹಾರಕ್ಕೆ ಸಂಬಂಧಪಟ್ಟಿದ್ದರೆ | ಭದ್ರತಾ ಠೇವಣಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿ ಹಸ್ತಾಂತರಣವೆಂಬಂತೆ (20) ಅದೇ ಸುಂಕ ಮತ್ತು ಅಂಥ ಒಪ್ಪಂದದ ಮೇರೆಗೆ ಕಾದಿರಿಸಲಾದ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು |
| | (ಬ) | ಅನ್ಯಥಾ ಉಪಬಂಧಿಸಿಲ್ಲದಿದ್ದರೆ | ಐದು ರೂಪಾಯಿಗಳು |
| | ವಿನಾಯಿತಿಗಳು | | |
| | ಒಪ್ಪಂದ ಅಥವಾ ಒಪ್ಪಂದದ ವಿವರಣಾ ಪತ್ರ– | | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | | |
|---|---|---|---|---|---|
| 1 | 2 | | 3 | | |
| | (ಕ) | 37ನೇ ಅನುಚ್ಛೇದದ ಮೇರೆಗೆ ವಿಧಿಸಬಹುದಾದ ಟಿಪ್ಪಣಿ ಅಥವಾ ವಿವರಣ ಪತ್ರವಲ್ಲದ ಅನನ್ಯವಾಗಿ ಸರಕುಗಳ ಅಥವಾ ವಾಣಿಜ್ಯ ಸರಕುಗಳ ಖರೀದಿ ಅಥವಾ ಮಾರಾಟಕ್ಕಾಗಿ ಅಥವಾ ಅದಕ್ಕೆ ಸಂಬಂಧಪಟ್ಟಿದ್ದು | | | |
| | (ಖ) | ಯಾವುದೇ ಸಾಲಕ್ಕಾಗಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರಕ್ಕೆ ಟೆಂಡರುಗಳ ಸ್ವರೂಪದಲ್ಲಿ ಮಾಡಿದ್ದು | | | |
| 6 | ಸ್ವಾಮ್ಯ ಪತ್ರಗಳು, ಗಿರವಿ ಅಥವಾ ಒತ್ತೆ ಇಡುವುದಕ್ಕೆ ಸಂಬಂಧಪಟ್ಟ ಒಪ್ಪಂದ, ಎಂದರೆ– | | | | |
| | (1) | ಯಾವುದೇ ಆದ ಸ್ವತ್ತಿಗೆ (ಮಾರಬಹುದಾದ ಭದ್ರತಾ ಪತ್ರವನ್ನು ಹೊರತುಪಡಿಸಿ) ಸ್ವಾಮ್ಯವನ್ನು ಉಂಟು ಮಾಡುವ ಅಥವಾ ಅದಕ್ಕೆ ಸಾಕ್ಷ್ಯವಾಗುವ ಸ್ವಾಮ್ಯ ಪತ್ರಗಳ ಅಥವಾ ಲಿಖಿತದ ಠೇವಣಿ: ಅಥವಾ | | | |
| | (2) | ಸಾಲದ ರೂಪದಲ್ಲಿ ಕೊಟ್ಟ ಅಥವಾ ಕೊಡಬೇಕಾದ ಹಣ ಅಥವಾ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯ ಋಣದ ಮರು ಸಂದಾಯಕ್ಕಾಗಿ ಭದ್ರತೆಯ ರೂಪದಲ್ಲಿ ಅಂಥ ಠೇವಣಿ, ಗಿರವಿ ಅಥವಾ ಒತ್ತೆಯನ್ನು ಮಾಡಲಾಗಿರುವಲ್ಲಿ ಚರಸ್ವತ್ತಿನ ಗಿರವಿ ಅಥವಾ ಒತ್ತೆ | | | |
| | –ಇವುಗಳಿಗೆ ಸಂಬಂಧಪಟ್ಟ ಒಪ್ಪಂದವನ್ನು ಸಾಕ್ಷೀಕರಿಸುವ ಯಾವುದೇ ಲಿಖಿತ | | | | |
| | (ಕ) | ಅಂಥ ಸಾಲ ಅಥವಾ ಋಣವನ್ನು ತಗಾದೆ ಮಾಡಿದಾಗ ಅಥವಾ ಒಪ್ಪಂದವನ್ನು ಸಾಕ್ಷೀಕರಿಸುವ ಲಿಖಿತದ ದಿನಾಂಕದಿಂದ ಮೂರು ತಿಂಗಳುಗಳಾದ ಮೇಲೆ ಮರು ಸಂದಾಯವಾಗಬೇಕಾಗಿದ್ದರೆ | ಒಂದನ್ನೇ ಬರೆದರೆ | ಎರಡರ ಜೋಡಿಯಲ್ಲಿ ಬರೆದಿದ್ದರೆ ಜೋಡಿಯ ಪ್ರತಿ ಭಾಗಕ್ಕೆ | ಎರಡರ ಜೋಡಿಯಲ್ಲಿ ಬರೆದಿದ್ದರೆ, ಜೋಡಿಯ ಪ್ರತಿಭಾಗಕ್ಕೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | | |
|---|---|---|---|---|---|
| 1 | 2 | | 3 | | |
| | | | ರೂ.ಪೈ. | ರೂ.ಪೈ. | ರೂ.ಪೈ. |
| | (i) | ಸಾಲದ ಅಥವಾ ಋಣದ ಮೊಬಲಗು 200 ರೂಪಾಯಿಗಳನ್ನು ಮೀರದಿದ್ದರೆ | 1.00 | 0.75 | 0.50 |
| | (ii) | ಅದು 200 ರೂಪಾಯಿಗಳನ್ನು ಮೀರಿದಾಗ ಆದರೆ 400 ರೂಪಾಯಿಗಳನ್ನು ಮೀರದಿದ್ದಾಗ | 2.00 | 1.00 | 0.75 |
| | | ಅದು 400 ರೂಪಾಯಿಗಳನ್ನು ಮೀರಿದ್ದು ಆದರೆ 600 ರೂಪಾಯಿಗಳನ್ನು ಮೀರದಿದ್ದಾಗ | 3.00 | 2.00 | 1.00 |
| | | ಅದು 600 ರೂಪಾಯಿಗಳನ್ನು ಮೀರಿದ್ದು ಆದರೆ 800 ರೂಪಾಯಿಗಳನ್ನು ಮೀರದಿದ್ದಾಗ | 4.00 | 2.50 | 1.50 |
| | | ಅದು 800 ರೂಪಾಯಿಗಳನ್ನು ಮೀರಿದ್ದು ಆದರೆ 1000 ರೂಪಾಯಿಗಳನ್ನು ಮೀರದಿದ್ದಾಗ | 6.00 | 3.00 | 2.00 |
| | | ಅದು 1000 ರೂಪಾಯಿಗಳನ್ನು ಮೀರಿದ್ದು ಆದರೆ 1200 ರೂಪಾಯಿಗಳನ್ನು ಮೀರದಿದ್ದಾಗ | 7.00 | 4.00 | 3.00 |
| | | ಅದು 1200 ರೂಪಾಯಿಗಳನ್ನು ಮೀರಿದ್ದು ಆದರೆ 1600 ರೂಪಾಯಿಗಳನ್ನು ಮೀರದಿದ್ದಾಗ | 9.00 | 5.00 | 4.00 |
| | | ಅದು 1600 ರೂಪಾಯಿಗಳನ್ನು ಮೀರಿದ್ದು ಆದರೆ 2500 ರೂಪಾಯಿಗಳನ್ನು ಮೀರದಿದ್ದಾಗ | 13.00 | 7.00 | 5.00 |
| | | ಅದು 2500 ರೂಪಾಯಿಗಳನ್ನು ಮೀರಿದ್ದು ಆದರೆ 5000 ರೂಪಾಯಿಗಳನ್ನು ಮೀರದಿದ್ದಾಗ | 27.00 | 13.00 | 9.00 |
| | | | ರೂ.ಪೈ. | ರೂ.ಪೈ. | ರೂ.ಪೈ. |
| | (iii) | ಅದು 5,000 ರೂಪಾಯಿಗಳನ್ನು ಮೀರಿದ್ದು ಆದರೆ 7,500 ರೂಪಾಯಿಗಳನ್ನು ಮೀರದಿದ್ದಾಗ | 40.00 | 20.00 | 13.00 |
| | | ಅದು 7,500 ರೂಪಾಯಿಗಳನ್ನು ಮೀರಿದ್ದು ಆದರೆ 10,000 ರೂಪಾಯಿಗಳನ್ನು ಮೀರದಿದ್ದಾಗ | 54.00 | 27.00 | 18.00 |
| | | ಅದು 10,000 ರೂಪಾಯಿಗಳನ್ನು ಮೀರಿದ್ದು ಆದರೆ 15,000 ರೂಪಾಯಿಗಳನ್ನು ಮೀರದಿದ್ದಾಗ | 81.00 | 40.00 | 27.00 |
| | | ಅದು 15,000 ರೂಪಾಯಿಗಳನ್ನು ಮೀರಿದ್ದು | 108.00 | 54.00 | 36.00 |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | | |
|---|---|---|---|---|---|
| 1 | 2 | | 3 | | |
| | | ಆದರೆ 20,000 ರೂಪಾಯಿಗಳನ್ನು ಮೀರದಿದ್ದಾಗ | | | |
| | | ಅದು 20,000 ರೂಪಾಯಿಗಳನ್ನು ಮೀರಿದ್ದು ಆದರೆ 25,000 ರೂಪಾಯಿಗಳನ್ನು ಮೀರದಿದ್ದಾಗ | 135.00 | 67.00 | 45.00 |
| | | ಅದು 25,000 ರೂಪಾಯಿಗಳನ್ನು ಮೀರಿದ್ದು ಆದರೆ 30,000 ರೂಪಾಯಿಗಳನ್ನು ಮೀರದಿದ್ದಾಗ | 162.00 | 81.00 | 54.00 |
| | | ಮತ್ತು 30,000 ರೂಪಾಯಿಗಳಿಗಿಂತ ಹೆಚ್ಚಿನ ಪ್ರತಿ ಹೆಚ್ಚುವರಿ 10,000 ರೂಪಾಯಿಗಳು ಅಥವಾ ಅದರ ಭಾಗಕ್ಕೆ | 54.00 | 27.00 | 18.00 |
| | (ಖ) | ಅಂಥ ಸಾಲ ಅಥವಾ ಋಣವನ್ನು ಅಂಥ ಲಿಖಿತದ ದಿನಾಂಕದಿಂದ ಮೂರು ತಿಂಗಳುಗಳಿಗೆ ಮೀರದೆ ಮರುಸಂದಾಯ–ಭಾಗಬೇಕಾಗಿದ್ದರೆ | (ಕ) (i) ಖಂಡ ಅಥವಾ (ಕ) (ii) ಖಂಡ ಅಥವಾ (ಕ) (iii) ಖಂಡ ಇವುಗಳ ಮೇರೆಗೆ ಭದ್ರತೆಗೊಳಿಸಿದ ಮೊಬಲಗಿಗಾಗಿನ ಅಥವಾ ಋಣದ ಮೇಲೆ ಸಂದಾಯಮಾಡಬೇಕಾದ ಸುಂಕದ ಅರ್ಧ ಭಾಗ | | |
| | ವಿನಾಯಿತಿ: | | | | |
| 7. | ಸರಕುಗಳ ಗಿರವಿ ಅಥವಾ ಒತ್ತೆಯ ಲಿಖಿತ ಸಾಕ್ಷಿ ಹಾಕಿರದಿದ್ದರೆ, ಮರಣ ಶಾಸನವಲ್ಲದ ಯಾವುದೇ ಬರಹದ ಮೂಲಕ ನ್ಯಾಸಧಾರಿಗಳು ಇದ್ದಲ್ಲಿ ಅಥವಾ ಚರ ಅಥವಾ ಸ್ಥಿರ ಸ್ವತ್ತೇ ಆಗಲಿ, ಅಧಿಕಾರದ ನಿರ್ವಹಣೆಯಲ್ಲಿ ಮಾಡಿದ ನೇಮಕಾತಿ | | ಎಪ್ಪತ್ತೈದು ರೂಪಾಯಿಗಳು | | |
| 8 | ದಾವೆಯ ಕ್ರಮದಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಅಲ್ಲದೆ ಅನ್ಯಥಾ ಬೆಲೆ ಕಟ್ಟುವುದು ಅಥವಾ ಮೌಲ್ಯ ನಿರ್ಣಯ ಮಾಡುವುದು | | | | |
| | (ಕ) ಆ ಮೊಬಲಗು 1000 ರೂಪಾಯಿಗಳನ್ನು ಮೀರದಿರುವಲ್ಲಿ | | ಅಂಥ ಮೊಬಲಗಿಗಾಗಿನ ಬಂಧಪತ್ರ (ನಂ.12)ರಂತೆ ಅದೇ ಸುಂಕ | | |
| | (ಖ) ಯಾವುದೇ ಇತರ ಸಂದರ್ಭದಲ್ಲಿ | | ಮೂವತ್ತು ರೂಪಾಯಿಗಳು | | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| ವಿನಾಯಿತಿಗಳು | | |
| | (ಕ) ಒಬ್ಬನೇ ಪಕ್ಷಕಾರನ ಮಾಹಿತಿಗಾಗಿ ಮಾಡಿದ ಮತ್ತು ಒಪ್ಪಂದ ಅಥವಾ ಕಾನೂನಿನ ಪ್ರವರ್ತನೆಯ ಮೂಲಕವಾಗಿಯೇ ಆಗಲಿ ಪಕ್ಷಕಾರರ ನಡುವೆ ಯಾವುದೇ ರೀತಿಯಲ್ಲಿ ನಿರ್ಬಂಧಕವಾಗಿರದ ಬೆಲೆ ಕಟ್ಟುವಿಕೆ ಅಥವಾ ಮೌಲ್ಯ ನಿರ್ಣಯ<br>(ಖ) ಭೂಮಾಲೀಕನಿಗೆ ಬಾಡಿಗೆಯಾಗಿ ಕೊಡಬೇಕಾದ ಮೊಬಲಗನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಫಸಲುಗಳ ಬೆಲೆ ಕಟ್ಟುವಿಕೆ | |
| 9 | ಯಾವುದೇ ವೃತ್ತಿ, ವ್ಯಾಪಾರ ಅಥವಾ ನಿಯೋಜನೆಯನ್ನು ಕಲಿಯಲು ಯಾವನೇ ಮಾಸ್ತರನೊಂದಿಗೆ ಇರಿಸಲಾದ ಯಾವನೇ ಉಮೇದುವಾರ, ಗುಮಾಸ್ತ ಅಥವಾ ಸೇವಕನ ಸೇವೆ ಅಥವಾ ಪಾತಕ್ಕೆ ಸಂಬಂಧಪಟ್ಟ ಪ್ರತಿಯೊಂದು ಬರವಣಿಗೆಯನ್ನು ಒಳಗೊಂಡು ಉಮೇದುವಾರಿಕೆ ಪತ್ರ | ಹದಿನೈದು ರೂಪಾಯಿಗಳು |
| | ವಿನಾಯಿತಿ:<br>ಯಾವುದೇ ಸಾರ್ವಜನಿಕ ದಾನಧರ್ಮದ ಮೂಲಕ ಅಥವಾ ಅದರ ವೆಚ್ಚದಲ್ಲಿ ಒಬ್ಬ ವ್ಯಕ್ತಿಯನ್ನು ಉಮೇದುವಾರನನ್ನಾಗಿ ಮಾಡಿದಂಥ ಉಮೇದುವಾರಿಕೆ ಲಿಖಿತಗಳು | |
| 10 | ಕಂಪೆನಿಗಳ ನಿಯಮಾವಳಿಗಳು | ಎರಡು ನೂರು ರೂಪಾಯಿಗಳು |
| | ವಿನಾಯಿತಿ:<br>ಲಾಭಕ್ಕಾಗಿ ರಚಿಸಿಲ್ಲದ ಮತ್ತು ಕಂಪನಿಗಳ ಅಧಿನಿಯಮ, 1956ರ 25ನೇ ಪ್ರಕರಣದ ಮೇರೆಗೆ ನೋಂದಾಯಿಸಿದ ಯಾವುದೇ ನಿಯಮಾವಳಿ ಕಂಪನಿಯ ಸಂಘದ ವಿವರಣ ಪತ್ರವನ್ನು (ಸಂ. 33) | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | ಸಹ ನೋಡಿ.<br><br>ವಹಿಸಿಕೊಡುವಿಕೆ–ಹಸ್ತಾಂತರಣ (ಸಂ. 20) ವರ್ಗಾವಣೆ (ನಂ. 52) ಮತ್ತು ಸಂದರ್ಭಾನುಸಾರ ಗುತ್ತಿಗೆಯ ವರ್ಗಾವಣೆ (ನಂ. 53) ನೋಡಿ. ದತ್ತು ತೆಗೆದುಕೊಳ್ಳಲು ಅಧಿಕಾರ–ದತ್ತಕ ಪತ್ರ (ನಂ. 3) ನೋಡಿ. | | |
| 11 | ಐತೀರ್ಪು ಎಂದರೆ, ದಾವೆಯ ಕ್ರಮದಲ್ಲಿ ನ್ಯಾಯಾಲಯದ ಆದೇಶದ ಮೂಲಕ ಅಲ್ಲದೆ ಅನ್ಯಥಾ ಮಾಡಿದ ಉಲ್ಲೇಖದ ಮೇಲೆ ವಿಭಜನೆಯನ್ನು ನಿರ್ದೇಶಿಸುವ ಐತೀರ್ಪು ಆಗಿರದ ಮಧ್ಯಸ್ಥ ಅಥವಾ ನ್ಯಾಯ ನಿರ್ಣಾಯಕನು ಕೊಟ್ಟ ಬರಹದಲ್ಲಿನ ಯಾವುದೇ ತೀರ್ಮಾನ | | |
| | (ಕ) | ಐತೀರ್ಪು ಸಂಬಂಧಪಡುವಂಥ ಸ್ವತ್ತಿನ ಮೊಬಲಗು ಅಥವಾ ಮೌಲ್ಯವು 1000 ರೂಪಾಯಿಗಳನ್ನು ಮೀರದಿರುವಲ್ಲಿ | ಅಂತಹ ಮೊಬಲಗಿಗಾಗಿ ಬಂಧ ಪತ್ರದಂತೆ (ನಂ. 12) ಅದೇ ಸುಂಕ |
| | (ಖ) | ಅದು 1000 ರೂಪಾಯಿಗಳನ್ನು ಮೀರಿದ್ದು ಆದರೆ 5000 ರೂಪಾಯಿಗಳನ್ನು ಮೀರದಿದ್ದರೆ ಮತ್ತು | ನಲವತ್ತು ರೂಪಾಯಿಗಳು |
| | | 5000 ರೂಪಾಯಿಗಳಿಗಿಂತ ಹೆಚ್ಚಿನ ಪ್ರತಿ ಹೆಚ್ಚುವರಿ 1000 ರೂಪಾಯಿಗಳು ಅಥವಾ ಅದರ ಭಾಗಕ್ಕೆ | ಎರಡು ರೂಪಾಯಿಗಳು |
| 12 | ಈ ಅಧಿನಿಯಮದಿಂದ ಅಥವಾ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958ರ ಮೂಲಕ ಅನ್ಯಥಾ ಉಪಬಂಧಿಸಿರದ 2(i) (ಖ) ಪ್ರಕರಣದ ಮೂಲಕ ಪರಿಭಾಷಿಸಿದ ಬಂಧ ಪತ್ರ | | ರೂ.ಪೈ. |
| | ಭದ್ರತೆಗೊಳಿಸಿದ ಮೊಬಲಗು ಅಥವಾ ಮೌಲ್ಯವು 100 | | 3.00 |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| | ರೂಪಾಯಿಗಳನ್ನು ಮೀರದಿರುವಲ್ಲಿ | |
| | ಅದು 100 ರೂಪಾಯಿಗಳನ್ನು ಮೀರಿದ್ದು, 200 ರೂಪಾಯಿಗಳನ್ನು ಮೀರದಿರುವಲ್ಲಿ | 6.00 |
| | ಅದು 200 ರೂಪಾಯಿಗಳನ್ನು ಮೀರಿದ್ದು, 300 ರೂಪಾಯಿಗಳನ್ನು ಮೀರದಿರುವಲ್ಲಿ | 9.00 |
| | ಅದು 300 ರೂಪಾಯಿಗಳನ್ನು ಮೀರಿದ್ದು, 400 ರೂಪಾಯಿಗಳನ್ನು ಮೀರದಿರುವಲ್ಲಿ | 12.00 |
| | ಅದು 400 ರೂಪಾಯಿಗಳನ್ನು ಮೀರಿದ್ದು, 500 ರೂಪಾಯಿಗಳನ್ನು ಮೀರದಿರುವಲ್ಲಿ | 15.00 |
| | ಅದು 500 ರೂಪಾಯಿಗಳನ್ನು ಮೀರಿದ್ದು, 600 ರೂಪಾಯಿಗಳನ್ನು ಮೀರದಿರುವಲ್ಲಿ | 18.00 |
| | ಅದು 600 ರೂಪಾಯಿಗಳನ್ನು ಮೀರಿದ್ದು, 700 ರೂಪಾಯಿಗಳನ್ನು ಮೀರದಿರುವಲ್ಲಿ | 21.00 |
| | ಅದು 700 ರೂಪಾಯಿಗಳನ್ನು ಮೀರಿದ್ದು, 800 ರೂಪಾಯಿಗಳನ್ನು ಮೀರದಿರುವಲ್ಲಿ | 24.00 |
| | ಅದು 800 ರೂಪಾಯಿಗಳನ್ನು ಮೀರಿದ್ದು, 900 ರೂಪಾಯಿಗಳನ್ನು ಮೀರದಿರುವಲ್ಲಿ | 27.00 |
| | ಅದು 900 ರೂಪಾಯಿಗಳನ್ನು ಮೀರಿದ್ದು, 1000 ರೂಪಾಯಿಗಳನ್ನು ಮೀರದಿರುವಲ್ಲಿ | 30.00 |
| | ಅದು 1,000 ರೂಪಾಯಿಗಳಿಗೆ ಹೆಚ್ಚಿನ ಪ್ರತಿ 500 ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ | 15.00 |
| | ವಹಿವಾಟು ಬಂಧ ಪತ್ರ (ನಂ. 2) | |
| | ನೌಕಾ ಬಂಧ ಪತ್ರ (ನಂ. 13) | |
| | ಸೀಮಾ ಸುಂಕ ಬಂಧ ಪತ್ರ (ನಂ. 23) | |
| | ನಷ್ಟ ಭರ್ತಿ ಬಂಧ ಪತ್ರ (ನಂ. 29) | |
| | ನೌಕಾ ಸರಕು ಬಂಧ ಪತ್ರ (ನಂ. 46) | |
| | ಭದ್ರತಾ ಬಂಧ ಪತ್ರ (ನಂ. 47) ನೋಡಿ | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| | ವಿನಾಯಿತಿ: ಬಂಧ ಪತ್ರ–ಧರ್ಮಾರ್ಥ ಔಷಧಾಲಯ ಅಥವಾ ಆಸ್ಪತ್ರೆಗೆ ಅಥವಾ ಸಾರ್ವಜನಿಕ ಉಪಯೋಗದ ಇತರ ಯಾವುದೇ ಉದ್ದೇಶಕ್ಕಾಗಿ ಖಾಸಗಿ ಚಂದಾಗಳಿಂದ ಪಡೆದ ಸ್ಥಳೀಯ ಆದಾಯವನ್ನು ಪ್ರತಿ ತಿಂಗಳಿಗೆ ನಿರ್ದಿಷ್ಟಪಡಿಸಿದ ಮೊತ್ತಕ್ಕಿಂತ ಕಡಿಮೆಯಿರತಕ್ಕದ್ದಲ್ಲವೆಂದು ಖಾತರಿ ಕೊಡುವ ಉದ್ದೇಶಕ್ಕಾಗಿ ಯಾವನೇ ವ್ಯಕ್ತಿಯು ಬರೆದುಕೊಟ್ಟಾಗ | |
| 13 | ನೌಕಾ ಬಂಧ ಪತ್ರ ಎಂದರೆ ಯಾವ ಲಿಖಿತದ ಮೇರೆಗೆ ಸಮುದ್ರಯಾನ ಹಡಗಿನ ಒಡೆಯನು, ಸಮುದ್ರ ಪ್ರಯಾಣವನ್ನು ಮುಂದುವರಿಸಲು ಹಡಗನ್ನು ಪರಿರಕ್ಷಿಸಲು ಅವನನ್ನು ಸಾಧ್ಯಗೊಳಿಸಲು ಹಡಗಿನ ಭದ್ರತೆಯ ಮೇಲೆ ಹಣವನ್ನು ಸಾಲ ಪಡೆಯುವನೋ ಆ ಯಾವುದೇ ಲಿಖಿತ | ಅಂಥ ಮೊಬಲಗಿಗಾಗಿರುವ ಬಂಧ ಪತ್ರ (ಸಂ. 12) ದಲ್ಲಿರುವಂತೆ ಅದೇ ಸುಂಕ |
| 14 | ರದ್ದಿಯಾತಿ–ಲಿಖಿತಗಳು (ಹಿಂದೆ ಬರೆದುಕೊಟ್ಟ ಲಿಖಿತವನ್ನು ಯಾವ ಲಿಖಿತದ ಮೂಲಕ ರದ್ದುಗೊಳಿಸಲಾಗಿದೆಯೋ ಆ ಯಾವುದೇ ಲಿಖಿತವನ್ನು ಒಳಗೊಂಡಂತೆ) ಸಾಕ್ಷಿ ಹಾಕಿದ್ದರೆ ಮತ್ತು ಅನ್ಯಥಾ ಉಪಬಂಧಿಸಿಲ್ಲದಿದ್ದರೆ, ಬಿಡುಗಡೆ (ನಂ. 45) ವ್ಯವಸ್ಥಾಪನ ಪತ್ರದ ರದ್ದಿಯಾತಿ (ನಂ. 48ಬಿ) ಗೇಣಿಯನ್ನು ಬಿಟ್ಟು ಕೊಡುವುದು (ನಂ. 51) ನ್ಯಾಸದ ರದ್ದಿಯಾತಿ (ನಂ. 54ಬಿ) – ಇವುಗಳನ್ನು ನೋಡಿ | ಮೂವತ್ತು ರೂಪಾಯಿಗಳು |
| 15 | ಮಾರಾಟ ಪ್ರಮಾಣಪತ್ರ– (ಪ್ರತ್ಯೇಕ ಲಾಟಿನಲ್ಲಿ ಮಾರಾಟ ಮಾಡಿದ ಪ್ರತಿಯೊಂದು ಸ್ವತ್ತಿಗೆ ಸಂಬಂಧಪಟ್ಟಂತೆ) ನ್ಯಾಯಾಲಯ ಅಥವಾ ನ್ಯಾಯಾಧೀಕರಣ ಅಥವಾ ಸರ್ಕಾರಿ ಅಧಿಕಾರಿ ಅಥವಾ ಯಾವುದೇ ಅಧಿನಿಯಮಿತಿಯ ಮೇರೆಗೆ ಯಾವುದೇ ಇತರ ಪ್ರಾಧಿಕಾರವು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಿದ ಯಾವುದೇ ಸ್ವತ್ತಿನ ಖರೀದಿದಾರನಿಗೆ ಮಂಜೂರು ಮಾಡಲಾಗುವುದು | |
| | (ಕ) ಖರೀದಿ ಹಣವು 10 ರೂಪಾಯಿಗಳಿಗೆ | ಒಂದು ರೂಪಾಯಿ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| | ಮೀರದಿರುವಲ್ಲಿ | |
| | (ಖ) ಖರೀದಿ ಹಣವು 10 ರೂಪಾಯಿಗಳಿಗೆ ಮೀರಿದ್ದು ಆದರೆ 25 ರೂಪಾಯಿಗಳಿಗೆ ಮೀರದಿರುವಲ್ಲಿ | ಒಂದು ರೂಪಾಯಿ ಐವತ್ತು ಪೈಸೆ |
| | (ಗ) ಇತರ ಯಾವುದೇ ಸಂದರ್ಭದಲ್ಲಿ | ಖರೀದಿ ಹಣದ ಮೊಬಲಗಿಗೆ ಮಾತ್ರ ಸಮನಾಗಿರುವ ಮಾರುಕಟ್ಟೆ ಮೌಲ್ಯಕ್ಕಾಗಿ ಹಸ್ತಾಂತರಣವೆಂಬಂತೆ (ಸಂ. 20) ಅದೇ ಸುಂಕ |
| 16 | ಯಾವುದೇ ನಿಗಮಿತ ಕಂಪನಿಯಲ್ಲಿ ಅಥವಾ ಇತರ ನಿಗಮಿತ ನಿಕಾಯದಲಿ ಅಥವಾ ಅದರ ಯಾವುದೇ ಷೇರು, ಷೇರು ಪ್ರಮಾಣ ಪತ್ರಗಳು ಅಥವಾ ಸ್ಟಾಕಿಗೆ ಆಗಲಿ ಅಥವಾ ಅಂಥ ಯಾವುದೇ ಕಂಪನಿಯ ಅಥವಾ ನಿಕಾಯದಲ್ಲಿ ಅಥವಾ ಅದರ ಷೇರುಗಳ, ಷೇರು ಪ್ರಮಾಣ ಪತ್ರಗಳ ಅಥವಾ ಸ್ಟಾಕಿನ ಮಾಲೀಕನಾಗುವುದಕ್ಕೆ ಅದರ ಧಾರಕನ ಅಥವಾ ಇತರ ಯಾವನೇ ವ್ಯಕ್ತಿಯ ಹಕ್ಕನ್ನು ಅಥವಾ ಸ್ವಾಮ್ಯವನ್ನು ಸಾಕ್ಷೀಕರಿಸುವ ಪ್ರಮಾಣ ಪತ್ರ ಅಥವಾ ಇತರ ದಸ್ತಾವೇಜು ಷೇರುಗಳ ಹಂಚಿಕೆ ಪತ್ರವನ್ನು ಕೂಡ ನೋಡಿ | ಐವತ್ತು ಪೈಸೆ |
| 17 | ನ್ಯಾಯವಾದಿಗಳ ಅಧಿನಿಯಮ, 1961ರ (1961ರ ಕೇಂದ್ರಾಧಿನಿಯಮ 25) ಮೇರೆಗೆ ರಾಜ್ಯ ಬಾರ್ ಕೌನ್ಸಿಲಿನವರು ತಯಾರಿಸಿದ ಮತ್ತು ಇಟ್ಟುಕೊಂಡು ಬಂದ ನ್ಯಾಯವಾದಿಗಳ ಪಟ್ಟಿಯಲ್ಲಿ ಸೇರಿಸುವಿಕೆಯ ಪ್ರಮಾಣ ಪತ್ರ | ಮೂರುನೂರ ಮೂವತ್ತೈದು ರೂಪಾಯಿಗಳು |
| 18 | ಹಡಗು ಬಾಡಿಗೆ ಕರಾರು, ಎಂದರೆ ಯಾವ ಲಿಖಿತದ ಮೂಲಕ ಹಡಗು ಅಥವಾ ಕೆಲವು ಅದರ ನಿರ್ದಿಷ್ಟ ಮುಖ್ಯ ಭಾಗವನ್ನು ಬಾಡಿಗೆ ಕರಾರಿನ ನಿರ್ದಿಷ್ಟ ಉದ್ದೇಶಗಳಿಗಾಗಿ ಬಿಟ್ಟುಕೊಡಲಾಗಿದೆಯೋ ಆ ಯಾವುದೇ ಲಿಖಿತ – (ಒಂದು ಟಗ್ ಸ್ಟೀಮರಿನ | ಅರವತ್ತು ರೂಪಾಯಿಗಳು |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | |
|---|---|---|---|---|
| 1 | 2 | | 3 | |
| | ಬಾಡಿಗೆಯ ಒಪ್ಪಂದವನ್ನು ಹೊರತುಪಡಿಸಿ) ಅದು ದಂಡವಿಧಿಸುವ ಖಂಡವನ್ನು ಒಳಗೊಂಡಿರಲಿ ಅಥವಾ ಇಲ್ಲದಿರಲಿ | | | |
| 19 | ಒಡಂಬಡಿಕೆ ಪತ್ರ ಎಂದರೆ ಋಣಿಯು ಬರೆದುಕೊಟ್ಟ ಯಾವ ಲಿಖಿತದ ಮೂಲಕ ಅವನು ತನ್ನ ಸ್ವತ್ತನ್ನು ಸಾಲಕೊಟ್ಟವರ ಪ್ರಯೋಜನಕ್ಕಾಗಿ ಹಸ್ತಾಂತರಿಸುವನೋ ಅಥವಾ ಸಾಲ ಕೊಟ್ಟವರಿಗೆ ಅವರ ಋಣಗಳ ಮೇಲೆ ಒಡಂಬಡಿಕೆ ಅಥವಾ ಡಿವಿಡೆಂಡಿನ ಸಂದಾಯವನ್ನು ಭದ್ರಗೊಳಿಸಲಾಗಿದೆಯೋ ಅಥವಾ ಅವನ ಸಾಲಕೊಟ್ಟವರ ಪ್ರಯೋಜನಕ್ಕಾಗಿ ಪರಿಶೀಲಕರ ಮೇಲ್ವಿಚಾರಣೆಯಲ್ಲಿ ಅಥವಾ ಲೈಸೆನ್ಸ್ ಪತ್ರಗಳ ಮೇರೆಗೆ ಋಣಿಯ ವ್ಯವಹಾರವನ್ನು ಮುಂದುವರಿಸುವುದಕ್ಕಾಗಿ ಏರ್ಪಾಡು ಮಾಡಲಾಗಿದೆಯೋ, ಆ ಯಾವುದೇ ಲಿಖಿತ | | ನಲವತ್ತೈದು ರೂಪಾಯಿಗಳು | |
| | | | | ರೂ.ಪೈ. |
| 20 | ಸಂ. 52ರ ಮೇರೆಗೆ ವಿಧಿಸಲಾದ ಅಥವಾ ವಿನಾಯಿತಿಗೊಳಿಸಲಾದ ವರ್ಗಾವಣೆಯಾಗಿರದ, 2(ಫ) ಪ್ರಕರಣದ ಮೂಲಕ ಪರಿಭಾಷಿಸಲಾದಂತೆ ಹಸ್ತಾಂತರಣ | | ಹಸ್ತಾಂತರಣದ ವಿಷಯ ವಸ್ತುವಾಗಿರುವಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವು 50 ರೂಪಾಯಿಗಳನ್ನು ಮೀರದಿರುವಲ್ಲಿ | 5.00 |
| | (ಕ) | ನಗರ ಭೂ (ಪರಿಮಿತಿ ಮತ್ತು ನಿಯಂತ್ರಣ) ಅಧಿನಿಯಮ, 1976ರಲ್ಲಿ (ಕೇಂದ್ರ ಅಧಿನಿಯಮ ಸಂ. 1976ರ 33) ಪರಿಭಾಷಿಸಲಾದಂತೆ ಬೆಂಗಳೂರು ನಗರ ಸಮುಚ್ಚಯದೊಳಗೆ ಇರುವ ಸ್ವತ್ತಿನ ಬಗ್ಗೆ | ಅದು 50 ರೂಪಾಯಿಗಳಿಗೆ ಮೀರಿದ್ದು ಅದರೆ 100 ರೂಪಾಯಿಗಳನ್ನು ಮೀರದಿರುವಲ್ಲಿ | 10.00 |
| | | | ಅದು 100 ರೂಪಾಯಿಗಳಿಗೆ ಮೀರಿದ್ದು ಅದರೆ 200 ರೂಪಾಯಿಗಳನ್ನು ಮೀರದಿರುವಲ್ಲಿ | 20.00 |
| | | | ಅದು 200 ರೂಪಾಯಿಗಳಿಗೆ ಮೀರಿದ್ದು ಅದರೆ 300 | 30.00 |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | |
|---|---|---|---|---|
| 1 | 2 | | 3 | |
| | | | ರೂಪಾಯಿಗಳನ್ನು ಮೀರದಿರುವಲ್ಲಿ | |
| | | | ಅದು 300 ರೂಪಾಯಿಗಳಿಗೆ ಮೀರಿದ್ದು ಅದರೆ 400 ರೂಪಾಯಿಗಳನ್ನು ಮೀರದಿರುವಲ್ಲಿ | 40.00 |
| | | | ಅದು 400 ರೂಪಾಯಿಗಳಿಗೆ ಮೀರಿದ್ದು ಅದರೆ 500 ರೂಪಾಯಿಗಳನ್ನು ಮೀರದಿರುವಲ್ಲಿ | 50.00 |
| | | | ಅದು 500 ರೂಪಾಯಿಗಳಿಗೆ ಮೀರಿದ್ದು ಅದರೆ 600 ರೂಪಾಯಿಗಳನ್ನು ಮೀರದಿರುವಲ್ಲಿ | 60.00 |
| | | | ಅದು 600 ರೂಪಾಯಿಗಳಿಗೆ ಮೀರಿದ್ದು ಅದರೆ 700 ರೂಪಾಯಿಗಳನ್ನು ಮೀರದಿರುವಲ್ಲಿ | 70.00 |
| | | | ಅದು 700 ರೂಪಾಯಿಗಳಿಗೆ ಮೀರಿದ್ದು ಅದರೆ 800 ರೂಪಾಯಿಗಳನ್ನು ಮೀರದಿರುವಲ್ಲಿ | 80.00 |
| | | | ಅದು 800 ರೂಪಾಯಿಗಳಿಗೆ ಮೀರಿದ್ದು ಅದರೆ 900 ರೂಪಾಯಿಗಳನ್ನು ಮೀರದಿರುವಲ್ಲಿ | 90.00 |
| | | | ಅದು 900 ರೂಪಾಯಿಗಳಿಗೆ ಮೀರಿದ್ದು ಅದರೆ 1000 ರೂಪಾಯಿಗಳನ್ನು ಮೀರದಿರುವಲ್ಲಿ | 100.00 |
| | | | ಮತ್ತು 1000 | 50.00 |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | |
|---|---|---|---|---|
| 1 | 2 | | 3 | |
| | | | ರೂಪಾಯಿಗಳಿಗೆ ಮೀರಿದ ಪ್ರತಿ 500 ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ | |
| | (ಖ) | ಈ ಮುಂದೆ ಹೇಳಿದ ಪರಿಮಿತಿಗಳೊಳಗೆ ಇರುವ ಸ್ವತ್ತಿನ ಬಗ್ಗೆ: | ಹಸ್ತಾಂತರಣ ವಸ್ತು ವಿಷಯವಾಗಿರುವಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವು 50 ರೂಪಾಯಿಗಳಿಗೆ ಮೀರದಿರುವಲ್ಲಿ | 4.00 |
| | (1) | ಹುಬ್ಬಳ್ಳಿ-ಧಾರವಾಡ ಮತ್ತು ಮೈಸೂರು ಪೌರಸಭಾ ನಿಗಮಗಳು ಮತ್ತು ನಿಗಮದ ಪರಿಮಿತಿಗಳಿಂದ 5 ಕಿ.ಮೀ. ದೂರದೊಳಗೆ ಬರುವ ಪರಿಧಿ ಪ್ರದೇಶ | 50 ರೂ. ಮೀರಿ ಆದರೆ 100 ರೂ. ಮೀರದಿರುವಲ್ಲಿ ಅದು 100 ರೂಪಾಯಿಗಳಿಗೆ ಮೀರಿದ್ದು ಆದರೆ 200 ರೂಪಾಯಿಗಳನ್ನು ಮೀರದಿರುವಲ್ಲಿ | 8.00<br>16.00 |
| | (2) | ನಗರ ಭೂಮಿ (ಪರಿಮಿತಿ ಮತ್ತು ನಿಯಂತ್ರಣ) ಅಧಿನಿಯಮ, 1976ರಲ್ಲಿ ಪರಿಭಾಷಿಸಲಾದಂತೆ ಬೆಳಗಾಂ ನಗರ ಸಮುಚ್ಚಯ ಮತ್ತು ಮಂಗಳೂರು ನಗರ ಸಮುಚ್ಚಯ | ಅದು 200 ರೂಪಾಯಿಗಳಿಗೆ ಮೀರಿದ್ದು ಆದರೆ 300 ರೂಪಾಯಿಗಳನ್ನು ಮೀರದಿರುವಲ್ಲಿ | 24.00 |
| | | | ಅದು 300 ರೂಪಾಯಿಗಳಿಗೆ ಮೀರಿದ್ದು ಆದರೆ 400 ರೂಪಾಯಿಗಳನ್ನು ಮೀರದಿರುವಲ್ಲಿ | 32.00 |
| | | | ಅದು 400 ರೂಪಾಯಿಗಳಿಗೆ ಮೀರಿದ್ದು ಆದರೆ 500 ರೂಪಾಯಿಗಳನ್ನು ಮೀರದಿರುವಲ್ಲಿ | 40.00 |
| | (3) | ಬಳ್ಳಾರಿ, ಬಿಜಾಪುರ, ದಾವಣಗೆರೆ ಮತ್ತು ಶಿವಮೊಗ್ಗ ನಗರ ಸಭೆಗಳು ಮತ್ತು ಪೌರಸಭಾ ಪರಿಮಿತಿಗಳಿಂದ 1. ಕಿ.ಮೀ. ದೊಳಗಿನ ಪರಿಧಿ ಪ್ರದೇಶ | ಅದು 500 ರೂಪಾಯಿಗಳಿಗೆ ಮೀರಿದ್ದು ಆದರೆ 600 ರೂಪಾಯಿಗಳನ್ನು ಮೀರದಿರುವಲ್ಲಿ | 48.00 |
| | | | ಅದು 600 ರೂಪಾಯಿಗಳಿಗೆ | 56.00 |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | |
|---|---|---|---|---|
| 1 | 2 | | 3 | |
| | | | ಮೀರಿದ್ದು ಆದರೆ 700 ರೂಪಾಯಿಗಳನ್ನು ಮೀರದಿರುವಲ್ಲಿ | |
| | | | ಅದು 700 ರೂಪಾಯಿಗಳಿಗೆ ಮೀರಿದ್ದು ಆದರೆ 800 ರೂಪಾಯಿಗಳನ್ನು ಮೀರದಿರುವಲ್ಲಿ | 64.00 |
| | | | ಅದು 800 ರೂಪಾಯಿಗಳಿಗೆ ಮೀರಿದ್ದು ಆದರೆ 900 ರೂಪಾಯಿಗಳನ್ನು ಮೀರದಿರುವಲ್ಲಿ | 72.00 |
| | (4) | ಭದ್ರಾವತಿ ಮುನಿಸಿಪಲ್ ಕೌನ್ಸಿಲು ಮತ್ತು ಭದ್ರಾವತಿ ನವನಗರ ಮಂಡಲಿಯನ್ನು ಒಳಗೊಂಡ ಭದ್ರಾವತಿ ನಗರ ಸಮುಚ್ಚಯ ಮತ್ತು ಪೌರಸಭೆ ಮತ್ತು ನವನಗರ ಮಂಡಲಿಯ ಪರಿಮಿತಿಗಳಿಂದ ಒಂದು ಕಿ.ಮೀ. ದೂರದೊಳಗಿನ ಪರಿಧಿ ಪ್ರದೇಶ | ಅದು 900 ರೂಪಾಯಿಗಳಿಗೆ ಮೀರಿದ್ದು ಆದರೆ 1000 ರೂಪಾಯಿಗಳನ್ನು ಮೀರದಿರುವಲ್ಲಿ | 40.00 |
| | | | ಮತ್ತು 1000 ರೂಪಾಯಿಗಳಿಗೆ ಮೀರಿದ ಪ್ರತಿ 500 ರೂಪಾಯಿಗಳು ಅಥವಾ ಅದರ ಭಾಗಕ್ಕೆ | |
| | (ಗ) | ಯಾವುದೇ ಇತರ ಪ್ರದೇಶದಲ್ಲಿ ಇರುವ ಸ್ವತ್ತಿನ ಬಗ್ಗೆ | ಹಸ್ತಾಂತರಣ ವಸ್ತು ವಿಷಯವಾಗಿರುವಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವು 50 ರೂಪಾಯಿಗಳಿಗೆ ಮೀರದಿರುವಲ್ಲಿ | 3.50 |
| | | | ಅದು 50 ರೂಪಾಯಿಗಳಿಗೆ ಮೀರಿದ್ದು ಆದರೆ 100 ರೂಪಾಯಿಗಳನ್ನು ಮೀರದಿರುವಲ್ಲಿ | 7.00 |
| | | | ಅದು 100 ರೂಪಾಯಿಗಳಿಗೆ ಮೀರಿದ್ದು ಆದರೆ 200 ರೂಪಾಯಿಗಳನ್ನು ಮೀರದಿರುವಲ್ಲಿ | 14.00 |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | |
|---|---|---|---|---|
| 1 | 2 | | 3 | |
| | | | ಅದು 200 ರೂಪಾಯಿಗಳಿಗೆ ಮೀರಿದ್ದು ಆದರೆ 300 ರೂಪಾಯಿಗಳನ್ನು ಮೀರದಿರುವಲ್ಲಿ | 21.00 |
| | | | ಅದು 300 ರೂಪಾಯಿಗಳಿಗೆ ಮೀರಿದ್ದು ಆದರೆ 400 ರೂಪಾಯಿಗಳನ್ನು ಮೀರದಿರುವಲ್ಲಿ | 28.00 |
| | | | ಅದು 400 ರೂಪಾಯಿಗಳಿಗೆ ಮೀರಿದ್ದು ಆದರೆ 500 ರೂಪಾಯಿಗಳನ್ನು ಮೀರದಿರುವಲ್ಲಿ | 35.00 |
| | | | ಅದು 500 ರೂಪಾಯಿಗಳಿಗೆ ಮೀರಿದ್ದು ಆದರೆ 600 ರೂಪಾಯಿಗಳನ್ನು ಮೀರದಿರುವಲ್ಲಿ | 42.00 |
| | | | ಅದು 600 ರೂಪಾಯಿಗಳಿಗೆ ಮೀರಿದ್ದು ಆದರೆ 700 ರೂಪಾಯಿಗಳನ್ನು ಮೀರದಿರುವಲ್ಲಿ | 49.00 |
| | | | ಅದು 700 ರೂಪಾಯಿಗಳಿಗೆ ಮೀರಿದ್ದು ಆದರೆ 800 ರೂಪಾಯಿಗಳನ್ನು ಮೀರದಿರುವಲ್ಲಿ | 56.00 |
| | | | ಅದು 800 ರೂಪಾಯಿಗಳಿಗೆ ಮೀರಿದ್ದು ಆದರೆ 900 ರೂಪಾಯಿಗಳನ್ನು ಮೀರದಿರುವಲ್ಲಿ | 63.00 |
| | | | ಅದು 900 ರೂಪಾಯಿಗಳಿಗೆ ಮೀರಿದ್ದು ಆದರೆ 1000 ರೂಪಾಯಿಗಳನ್ನು | 70.00 |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | |
|---|---|---|---|---|
| 1 | 2 | | 3 | |
| | | | ಮೀರದಿರುವಲ್ಲಿ<br>ಮತ್ತು 1000 ರೂಪಾಯಿಗಳಿಗೆ ಮೀರಿದ ಪ್ರತಿ 500 ರೂಪಾಯಿಗಳು ಅಥವಾ ಅದರ ಭಾಗಕ್ಕೆ | 35.00 |
| | | | ಪರಂತು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 12) ಮೇರೆಗೆ ಸ್ಥಾಪಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ನಗರ ಮೇಲ್ಪಾಟು ಅಧಿನಿಯಮ, 1903ರ (1903ರ ಮೈಸೂರು ಅಧಿನಿಯಮ 3) ಮೇರೆಗೆ ಸ್ಥಾಪಿತವಾದ ನಗರಾಭಿವೃದ್ಧಿ ಮಂಡಲಿ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) ಮೇರೆಗೆ ಸ್ಥಾಪಿತವಾದ ಕರ್ನಾಟಕ ಗೃಹ ನಿರ್ಮಾಣ ಮಂಡಲಿ, ಕರ್ನಾಟಕ ಮೇಲ್ಪಾಟು ಮಂಡಲಿಗಳ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 11) ಮೇರೆಗೆ ಸ್ಥಾಪಿತವಾದ ಮೇಲ್ಪಾಟು ಮಂಡಲಿಗಳು ಮತ್ತು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಾಧಿಕಾರಗಳಿಂದ | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ | |
|---|---|---|---|---|
| 1 | 2 | | 3 | |
| | | | ಮಾಡಲಾದ ಯಾವುದೇ ಹಸ್ತಾಂತರಣ ಪತ್ರಕ್ಕೆ ಸಂಬಂಧಿಸಿದಂತೆ ಸುಂಕವನ್ನು ಆ ಲಿಖಿತದಲ್ಲಿ ವಿವರಿಸಲಾದಂಥ ಹಸ್ತಾಂತರಣ ಬಗೆಗಿನ ಪ್ರತಿಫಲದ ಮೊಬಲಗು ಅಥವಾ ಮೌಲ್ಯದ ಮೇಲೆ ನಿರ್ದಿಷ್ಟಪಡಿಸಿದ ದರಗಳಲ್ಲಿ ಸಂದಾಯ ಮಾಡತಕ್ಕದ್ದು:<br>ಮತ್ತೂ ಪರಂತು, ಬಾಡಿಗೆ ಹಾಗೂ ಮಾರಾಟದ ಒಪ್ಪಂದವನ್ನು ಮಾಡಿಕೊಟ್ಟಿರುವ ಮತ್ತು 5ನೇ ಅನುಚ್ಛೇದದ (ಫ) ಬಾಬಿನ ಮೇರೆಗೆ ಅಂಥ ಒಪ್ಪಂದಕ್ಕಾಗಿ ಅಗತ್ಯವಾದ ಮೌಲ್ಯಾನುಸಾರವಾದ ಸ್ಟಾಂಪನ್ನು ಅದಕ್ಕೆ ಹಚ್ಚಿರುವ ಮತ್ತು ಅಂಥ ಒಪ್ಪಂದವನ್ನು ಕಾರ್ಯರೂಪಕ್ಕೆ ತರುವಲ್ಲಿ ತರುವಾಯ ಹಸ್ತಾಂತರಣವನ್ನು ಬರೆದುಕೊಟ್ಟಿರುವ ಯಾವುದೇ ಸಂದರ್ಭದಲ್ಲಿ ಅಂಥ ಹಸ್ತಾಂತರಣದ ಮೇಲಿನ ಸುಂಕವು ಹತ್ತು ರೂಪಾಯಿಗಳಿಗೆ ಅಥವಾ ಅಂಥ ಹಸ್ತಾಂತರಣದ ಮೇಲೆ ಸಂದಾಯವಾಗಬೇಕಾದ ಸುಂಕ ಮತ್ತು 5ನೇ ಅನುಚ್ಛೇದದ (ಫ) ಬಾಬಿನ | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | | | ಮೇರೆಗೆ ಭದ್ರತಾ ಠೇವಣಿಯ ಮೇಲೆ ಈಗಾಗಲೇ ಸಂಗ್ರಹಿಸಲಾದ ಸುಂಕ ಇವೆರಡರಲ್ಲಿ ಯಾವುದು ಹೆಚ್ಚೋ ಅಂಥ ವ್ಯತ್ಯಾಸಕ್ಕೆ – ಮೀರತಕ್ಕದ್ದಲ್ಲ. |
| 21 | ಯಾವನೇ ಸರ್ಕಾರಿ ಅಧಿಕಾರಿಯಿಂದ ಅಥವಾ ಅವನ ಆದೇಶದ ಮೂಲಕ ನಿಜವಾದ ಪ್ರತಿ ಅಥವಾ ಉದ್ಧೃತ ಭಾಗ ಎಂಬುದಾಗಿ ಪ್ರಮಾಣೀಕರಿಸಲಾದ ಮತ್ತು ನ್ಯಾಯಾಲಯ ಫೀಜುಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ವಿಧಿಸಬಹುದಾಗಿಲ್ಲದಂಥ ಉದ್ಧೃತ ಭಾಗದ ಪ್ರತಿ | | |
| | (i) | ಮೂಲದ ಮೇಲೆ ಸುಂಕವನ್ನು ವಿಧಿಸಬಹುದಾಗಿಲ್ಲದಿದ್ದರೆ ಅಥವಾ ಅದರ ಮೇಲೆ ವಿಧಿಸಬಹುದಾಗಿದ್ದ ಸುಂಕವು ನಾಲ್ಕು ರೂ. ಐವತ್ತು ಪೈಸೆಗಳಿಗೆ ಮೀರದಿದ್ದರೆ | ಮೂರು ರೂಪಾಯಿಗಳು |
| | (ii) | ಯಾವುದೇ ಇತರ ಸಂದರ್ಭದಲ್ಲಿ | ಆರು ರೂಪಾಯಿಗಳು |
| | ವಿನಾಯಿತಿ: | | |
| | (ಕ) | ಯಾವ ಕಾಗದ ಪತ್ರದ ಪ್ರತಿಯನ್ನು ಮಾಡಲು ಅಥವಾ ಯಾವುದೇ ಸರ್ಕಾರಿ ಕಚೇರಿಯಲ್ಲಿ ದಾಖಲೆಗಾಗಿ ಅಥವಾ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಒದಗಿಸಲು ಕಾನೂನಿನ ಮೂಲಕ ಸರ್ಕಾರಿ ಅಧಿಕಾರಿಯನ್ನು ಸ್ಪಷ್ಟವಾಗಿ ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಕಾಗದ ಪತ್ರದ ಪ್ರತಿ | |
| | (ಖ) | ಜನನಗಳು, ದೀಕ್ಷಾಸ್ನಾನಗಳು, ನಾಮಕರಣಗಳು, ಸಮರ್ಪಣೆಗಳು, ವಿವಾಹಗಳು, ವಿವಾಹ ವಿಚ್ಛೇದನಗಳು, ಮರಣಗಳು ಅಥವಾ ಶವ ಸಂಸ್ಕಾರಗಳಿಗೆ ಸಂಬಂಧಿಸಿದ ಯಾವುದೇ ರಿಜಿಸ್ಟರಿನ ಪ್ರತಿ ಅಥವಾ ಅದರ ಉದ್ಧೃತ ಭಾಗ | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| 22 | ಸುಂಕ ವಿಧಿಸಬಹುದಾದ ಮತ್ತು ಸರಿಯಾದ ಸುಂಕವನ್ನು ಸಂದಾಯ ಮಾಡಿದಂಥ ಯವುದೇ ಲಿಖಿತಗಳ ಪ್ರತಿ ರೂಪ ಅಥವಾ ದ್ವಿಪ್ರತಿ | | |
| | (ಕ) | ಮೂಲಕ ಲಿಖಿತಕ್ಕೆ ವಿಧಿಸಬಹುದಾದ ಸುಂಕವು ನಾಲ್ಕು ರೂಪಾಯಿ ಐವತ್ತು ಪೈಸೆಗೆ ಮೀರದಿದ್ದರೆ | ಮೂಲದ ಮೇಲೆ ಸಂದಾಯ ಮಾಡತಕ್ಕಂಥದೇ ಸುಂಕ |
| | (ಖ) | ಯಾವುದೆ ಇತರ ಸಂದರ್ಭದಲ್ಲಿ | ಆರು ರೂಪಾಯಿಗಳು |
| | ವಿನಾಯಿತಿ:<br><br>ಸಾಗುವಳಿದಾರನಿಗೆ ಕೊಟ್ಟ ಯಾವುದೇ ಗೇಣಿ ಪತ್ರದ ಪ್ರತಿರೂಪ ಅಂಥ ಗೇಣಿ ಪತ್ರಕ್ಕೆ ಸುಂಕದಿಂದ ವಿನಾಯಿತಿಗೊಳಿಸಿರುವಾಗ | | |
| 23 | ಸೀಮಾ ಸುಂಕ, ಬಂಧಪತ್ರ | | |
| | (ಕ) | ಮೊಬಲಗು 1000 ರೂಪಾಯಿಗಳಿಗೆ ಮೀರದಿರುವಲ್ಲಿ | ಅಂಥ ಮೊಬಲಗಿಗಾಗಿ ಬಂಧಪತ್ರವೆಂಬಂತೆ ಅದೇ ಸುಂಕ (ಸಂಖ್ಯೆ 12) |
| | (ಖ) | ಯಾವುದೇ ಇತರ ಸಂದರ್ಭದಲ್ಲಿ ಯಾವುದೇ ನ್ಯಾಸದ ಘೋಷಣೆ ನ್ಯಾಸ (ಸಂ. 54) ನೋಡಿ | ನಲವತ್ತು ರೂ.ಗಳು |
| 24 | ಯಾವ ಲಿಖಿತವು, ಅದರಲ್ಲಿ ಹೆಸರಿಸಿದ ಯಾವನೇ ವ್ಯಕ್ತಿ ಅಥವಾ ಅವನ ಹಸ್ತಾಂತರ ಪಡೆದವ ಅಥವಾ ಅದರ ಧಾರಕನನ್ನು ಯಾವುದೇ ಬಂದರುಕಟ್ಟೆ ಅಥವಾ ಬಂದರಿನಲ್ಲಿ ಬಾಡಿಗೆ ಅಥವಾ ತಾತ್ಕಾಲಿಕ ಬಾಡಿಗೆ ಮೇಲೆ ಸಂಗ್ರಹಿಸಲಾಗಿಡುವ ಅಥವಾ ಇಡಲಾಗುವ ಯಾವುದೇ ದಾಸ್ತಾನು ಮಳಿಗೆಯಲ್ಲಿ ಅಥವಾ ಹಡಗು ಕಟ್ಟೆಯ ಮೇಲೆ ಇರುವಂಥ ಯಾವುದೇ ಸರಕುಗಳ ವಶಾವಣೆಗೆ ಹಕ್ಕುಳ್ಳವನನ್ನಾಗಿಸುವುದೋ ಮತ್ತು ಅದರಲ್ಲಿನ ಸ್ವತ್ತಿನ ಮಾರಾಟ ಅಥವಾ ವರ್ಗಾವಣೆಯಾದ ಮೇಲೆ ಅಥವಾ ಸರಕುಗಳ ಒಡೆಯನು ಅಥವಾ ಅವನ ಪರವಾಗಿ ಯಾವ | | ಇಪ್ಪತ್ತು ಪೈಸೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟ್ಯಾಂಪ್ ಸುಂಕ |
|---|---|---|
| 1 | 2 | 3 |
| | ಲಿಖಿತಕ್ಕೆ ರುಜು ಮಾಡಲಾಗಿರುವುದೋ ಅಂಥ ಲಿಖಿತ; ಅಂಥ ಸರಕುಗಳ ಮೌಲ್ಯವು ಇಪ್ಪತ್ತು ರೂಪಾಯಿಗಳಿಗೆ ಮೀರಿದಾಗ,<br>ಸ್ವಾಮ್ಯ ಪತ್ರಗಳು, ಗಿರವಿ ಅಥವಾ ಒತ್ತೆ ಇಡುವುದಕ್ಕೆ ಸಂಬಂಧಪಟ್ಟ ಒಪ್ಪಂದ – ನೋಡಿ (ಸಂ.6)<br>ಪಾಲುಗಾರಿಕೆಯ ವಿಘಟನೆ– ಪಾಲುಗಾರಿಕೆ (ಸಂ. 40) ನೋಡಿ | |
| 25 | ವಿವಾಹ ವಿಚ್ಛೇದನ–ಲಿಖಿತ–ಯಾವ ಲಿಖಿತದ ಮೂಲಕ ಯಾವನೇ ವ್ಯಕ್ತಿಯು ತನ್ನ ವಿವಾಹವನ್ನು ವಿಘಟಿಸಿಕೊಳ್ಳುತ್ತಾನೋ ಆ ಯಾವುದೇ ಲಿಖಿತ<br>ವಧುದಕ್ಷಿಣೆ ಲಿಖಿತ–ವ್ಯವಸ್ಥೆ (ಸಂಖ್ಯೆ 48)ನ್ನು ನೋಡಿ<br>ದ್ವಿಪ್ರತಿ–ಪ್ರತಿರೂಪ (ಸಂಖ್ಯೆ 22) ನೋಡಿ | ಹತ್ತು ರೂ.ಗಳು |
| 26 | ಸ್ವತ್ತಿನ ವಿನಿಮಯದ ಲಿಖಿತ–ಉದ್ಧೃತ ಭಾಗ–ಪ್ರತಿ (ಸಂ.21) ನೋಡಿ | ವಿನಿಮಯದ ವಸ್ತು ವಿಷಯವಾಗಿರುವಂಥ ಅತ್ಯಧಿಕ ಮೌಲ್ಯದ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಮಾನವಾದ ಮಾರುಕಟ್ಟೆ ಮೌಲ್ಯಕ್ಕಾಗಿ ಹಸ್ತಾಂತರಣವೆಂಬಂತೆ ಅದೇ ಸುಂಕ (ಸಂ.20) |
| 27 | ಮತ್ತಷ್ಟು ಋಣಭಾರದ ಲಿಖಿತ ಎಂದರೆ ಅಡಮಾನ ಮಾಡಿದ ಸ್ವತ್ತಿನ ಮೇಲೆ ಮತ್ತಷ್ಟು ಋಣಭಾರವನ್ನು ವಿಧಿಸುವ ಯಾವುದೇ ಲಿಖಿತ<br>(ಕ) ಮೂಲ ಅಡಮಾನವು 34ನೇ ಅನುಚ್ಛೇದದ (ಕ) ಖಂಡದಲ್ಲಿ ಉಲ್ಲೇಖಿಸಿದ ವಿವರಣೆಯದ್ದು ಆಗಿರುವಾಗ (ಎಂದರೆ, ಸ್ವಾಧೀನದೊಂದಿಗೆ)<br>(ಖ) ಅಂಥ ಅಡಮಾನವು 34ನೇ ಸಂಖ್ಯೆಯ ಅನುಚ್ಛೇದದ (ಖ) ಖಂಡದಲ್ಲಿ ಉಲ್ಲೇಖಿಸಿದ ವಿವರಣೆಯದ್ದು ಆಗಿರುವಾಗ (ಎಂದರೆ | ಅಂಥ ಲಿಖಿತದ ಮೂಲಕ ಭದ್ರಗೊಳಿಸಿದ ಮತ್ತಷ್ಟು ಋಣಭಾರದ ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣವೆಂಬಂತೆ (ಸಂಖ್ಯೆ 20) ಅದೇ ಸುಂಕ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | | ಸ್ವಾಧೀನವಿಲ್ಲದ) | |
| | (i) | ಮತ್ತಷ್ಟು ಋಣ ಭಾರದ ಲಿಖಿತವನ್ನು ಬರೆದು ಕೊಡುವ ಕಾಲದಲ್ಲಿ ಅಂಥ ಲಿಖಿತ ಪತ್ರದ ಮೇರೆಗೆ ಸ್ವತ್ತಿನ ಸ್ವಾಧೀನವನ್ನು ಕೊಟ್ಟಿದ್ದರೆ ಅಥವಾ ಕೊಡಲು ಒಪ್ಪಿದ್ದರೆ | ಋಣ ಭಾರದ ಒಟ್ಟು ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣವೆಂಬಂತೆ (ಸಂ.20) ಮೂಲ ಅಡಮಾನ ಮತ್ತು ಈಗಾಗಲೇ ಮಾಡಿದ ಯಾವುದೇ ಮತ್ತಷ್ಟು ಋಣ ಭಾರವೂ ಒಳಗೊಂಡಂತೆ) ಅಂಥ ಮೂಲ ಅಡಮಾನ ಮತ್ತು ಮತ್ತಷ್ಟು ಋಣ ಭಾರದ ಮೇಲೆ ಈಗಾಗಲೇ ಸಂದಾಯ ಮಾಡಿದ ಸುಂಕವನ್ನು ಕಳೆದು ಅದೇ ಸುಂಕ |
| | (ii) | ಸ್ವಾಧೀನವನ್ನು ಕೊಡದಿದ್ದರೆ | ಅಂಥ ಲಿಖಿತದ ಮೂಲಕ ಭದ್ರಗೊಳಿಸಿದ ಮತ್ತಷ್ಟು ಋಣಭಾರದ ಮೊಬಲಗಿಗಾಗಿನ ಬಂಧ ಪತ್ರವೆಂಬಂತೆ (ಸಂಖ್ಯೆ 12) ಅದೇ ಸುಂಕ |
| 28 | ವ್ಯವಸ್ಥಾ ಪತ್ರ (ಸಂಖ್ಯೆ 48) ಅಥವಾ ಮರಣ ಶಾಸನ ಅಥವಾ ವರ್ಗಾವಣೆ (ಸಂಖ್ಯೆ 52) ಆಗಿರದ ದಾನಲಿಖಿತ | | ದಾನದ ವಸ್ತು ವಿಷಯವಾಗಿರುವಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣವೆಂಬಂತೆ (ಸಂ. 20) ಅದೇ ಸುಂಕ: |
| | ಬಾಡಿಗೆ ಕೊಡುವುದು–ಒಪ್ಪಂದ ಅಥವಾ ಸೇವೆಗಾಗಿನ ಒಪ್ಪಂದ (ಸಂ.5) ನೋಡಿ | | ಪರಂತು, ದಾನದ ಲಿಖಿತವು, ದಾನದ ರದ್ದಿಯಾತಿಗಾಗಿ ಯಾವುದೇ ಉಪಬಂಧವನ್ನು ಒಳಗೊಂಡಿರುವಲ್ಲಿ, ದಾನದ ವಸ್ತು ವಿಷಯವಾಗಿರುವಂಥ ಸ್ವತ್ತಿನ ಮೌಲ್ಯವನ್ನು, ಲಿಖಿತದಲ್ಲಿ ಅಂಥ ಯಾವುದೇ ಉಪಬಂಧವು ಒಳಗೊಂಡಿರದಿದ್ದರೆ ಹೇಗೋ ಹಾಗೆ ಸುಂಕದ ಉದ್ದೇಶಕ್ಕಾಗಿ ನಿರ್ಧರಿಸತಕ್ಕದ್ದು. |
| 29 | ನಷ್ಟ ಭರ್ತಿ ಬಂಧ ಪತ್ರ ಪರಿಶೀಲನಾ ಪತ್ರ ಒಡಂಬಡಿಕೆ ಪತ್ರ (ಸಂಖ್ಯೆ 19) ನೋಡಿ | | ಅದೇ ಮೊಬಲಗಿಗಾಗಿ ಭದ್ರತಾ ಬಂಧ ಪತ್ರವೆಂಬಂತೆ (ಸಂಖ್ಯೆ 47) ಅದೇ |

| ಅನುಚ್ಛೇದ ಸಂಖ್ಯೆ | | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | | 2 | 3 |
| | | | ಸುಂಕ |
| 30 | | ಒಳಗೇಣಿ ಅಥವಾ ಉಪಗೇಣಿಯನ್ನು ಒಳಗೊಂಡಂತೆ ಗೇಣಿ ಮತ್ತು ಬಾಡಿಗೆ ಅಥವಾ ಒಳಬಾಡಿಗೆಗೆ ಕೊಡಲು ಯಾವುದೇ ಒಪ್ಪಂದ | |
| | (ಕ) | ಅಂಥ ಗೇಣಿಯ ಮೂಲಕ ಬಾಡಿಗೆಯನ್ನು ನಿಗದಿಪಡಿಸಿರುವಲ್ಲಿ ಮತ್ತು ಯಾವುದೇ ಪ್ರೀಮಿಯಂ ಅನ್ನು ಸಂದಾಯ ಅಥವಾ ವಶಾವಣೆ ಮಾಡಿಲ್ಲದಿರುವಲ್ಲಿ | |
| | (i) | ಗೇಣಿಯು ಒಂದು ವರ್ಷಕ್ಕಿಂತ ಕಡಿಮೆ ಅವಧಿಗಾಗಿ ಇರುವುದೆಂದು ತಾತ್ಪರ್ಯವಾಗುವಲ್ಲಿ | ಅಂಥ ಗೇಣಿಯ ಮೇರೆಗೆ ಸಂದಾಯ ಮಾಡಬೇಕಾದ ಅಥವಾ ವಶಾವಣೆ ಮಾಡಬೇಕಾದ ಪೂರ್ಣ ಮೊಬಲಗಿಗಾಗಿನ ಬಂಧಪತ್ರವೆಂಬಂತೆ (ಸಂಖ್ಯೆ 12) ಅದೇ ಸುಂಕ |
| | (ii) | ಗೇಣಿಯು ಒಂದು ವರ್ಷಕ್ಕಿಂತ ಕಡಿಮೆಯಲ್ಲದ ಆದರೆ ಐದು ವರ್ಷಗಳಿಗಿಂತ ಹೆಚ್ಚಿಲ್ಲದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ | ಕಾದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯಕ್ಕಾಗಿ ಬಂಧ ಪತ್ರವೆಂಬಂತೆ ಅದೇ ಸುಂಕ |
| | (iii) | ಗೇಣಿಯು ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಆದರೆ ಹತ್ತು ವರ್ಷಗಳನ್ನು ಮೀರದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ | ಕಾದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ. 20) ಎಂಬಂತೆ ಅದೇ ಸುಂಕ |
| | (iv) | ಗೇಣಿಯು ಹತ್ತು ವರ್ಷಗಳಿಗೆ ಮೀರಿದ ಆದರೆ ಇಪ್ಪತ್ತು ವರ್ಷಗಳನ್ನು ಮೀರದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ | ಕಾದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯದ ಎರಡರಷ್ಟಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂಖ್ಯೆ 20) ಎಂಬಂತೆ ಅದೇ ಸುಂಕ |
| | (v) | ಗೇಣಿಯು ಇಪ್ಪತ್ತು ವರ್ಷಗಳಿಗೆ ಮೀರಿದ, ಆದರೆ ಮೂವತ್ತು ವರ್ಷಗಳನ್ನು ಮೀರದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ | ಕಾದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯದ ಮೂರರಷ್ಟಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂಖ್ಯೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | | | 20) ಎಂಬಂತೆ ಅದೇ ಸುಂಕ |
| | (vi) | ಗೇಣಿಯು ಮೂವತ್ತು ವರ್ಷಗಳಿಗೆ ಮೀರಿದ ಆದರೆ ಒಂದು ನೂರು ವರ್ಷಗಳಿಗೆ ಮೀರದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುಲ್ಲಿ | ಕಾದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯದ ನಾಲ್ಕರಷ್ಟಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂಖ್ಯೆ 20) ಎಂಬಂತೆ ಅದೇ ಸುಂಕ |
| | (vii) | ಗೇಣಿಯು ಒಂದು ನೂರು ವರ್ಷಗಳಿಗೆ ಮೀರಿದ ಅವಧಿ ಅಥವಾ ಶಾಶ್ವತವಾಗಿ ಇರುವುದಾಗಿ ತಾತ್ಪರ್ಯವಾಗುವಲ್ಲಿ | ಗೇಣಿಯ ಮೊದಲ ಐವತ್ತು ವರ್ಷಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾಗುವಂಥ ಅಥವಾ ವಶಾವಣೆ ಮಾಡಬೇಕಾಗುವಂಥ ಬಾಡಿಗೆಗಳ ಪೂರ್ಣ ಮೊಬಲಗಿನ ಆರನೇ ಒಂದು ಭಾಗಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂಖ್ಯೆ 20) ಎಂಬಂತೆ ಅದೇ ಸುಂಕ |
| | (viii) | ಗೇಣಿಯು ಯಾವುದೇ ನಿಶ್ಚಿತ ಅವಧಿಗಾಗಿ ಇರುವುದೆಂದು ತಾತ್ಪರ್ಯವಾಗದಿರುವಲ್ಲಿ | ಗೇಣಿಯು ಹತ್ತು ವರ್ಷಗಳ ಕಾಲ ಮುಂದುವರೆದರೆ ಆ ಮೊದಲ ಹತ್ತು ವರ್ಷಕ್ಕಾಗಿ ಸಂದಾಯ ಮಾಡಬೇಕಾಗುವ ಅಥವಾ ವಶಾವಣೆ ಮಾಡಬೇಕಾಗುವಂಥ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗಿನ ಅಥವಾ ಮೌಲ್ಯದ ಮೂರರಷ್ಟಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ. 20) ಎಂಬಂತೆ ಅದೇ ಸುಂಕ |
| | (ಖ) | ಗೇಣಿಯನ್ನು ರುಸುಮು ಅಥವಾ ಪ್ರೀಮಿಯಂ ಅಥವಾ ಮುಂಗಡವಾಗಿ ಕೊಟ್ಟ ಹಣಕ್ಕೆ ಮಂಜೂರು ಮಾಡಿರುವಲ್ಲಿ ಮತ್ತು ಯಾವುದೇ ಬಾಡಿಗೆಯನ್ನು ಕಾಯ್ದಿರಿಸದೆ ಇರುವಲ್ಲಿ | ಗೇಣಿಯಲ್ಲಿ ವಿವರಿಸಲಾದಂಥ ರುಸುಮು ಅಥವಾ ಪ್ರೀಮಿಯಂ ಅಥವಾ ಮುಂಗಡದ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ.20) ಎಂಬಂತೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | (ಗ) | ಗೇಣಿಯನ್ನು ರುಸುಮು ಅಥವಾ ಪ್ರೀಮಿಯಂ ಅಥವಾ ಕಾಯ್ದಿಟ್ಟ ಬಾಡಿಗೆಯ ಜೊತೆಗೆ ಕೊಟ್ಟ ಹಣಕ್ಕಾಗಿ ಕೊಟ್ಟಿರುವಲ್ಲಿ | ಅದೇ ಸುಂಕ<br><br>ಯಾವುದೇ ರುಸುಮು ಅಥವಾ ಪ್ರೀಮಿಯಂ ಅಥವಾ ಮುಂಗಡವನ್ನು ಸಂದಾಯ ಅಥವಾ ವಶಾವಣೆ ಮಾಡದಿದ್ದರೆ, ಅಂಥ ಗೇಣಿಯ ಮೇಲೆ ಸಂದಾಯ ಮಾಡಬಹುದಾಗಿದ್ದಂಥ ಸುಂಕದ ಜೊತೆಗೆ, ಗೇಣಿಯಲ್ಲಿ ಹೇಳಲಾದಂತೆ ಅಂಥ ರುಸುಮು ಅಥವಾ ಪ್ರೀಮಿಯಂ ಅಥವಾ ಮುಂಗಡದ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ. 20) ಎಂಬಂತೆ ಅದೇ ಸುಂಕ<br><br>ಪರಂತು, ಗೇಣಿಯ ಒಪ್ಪಂದಕ್ಕೆ, ಗೇಣಿಗೆ ಅಗತ್ಯವಾದ ಮೌಲ್ಯಾನುಸಾರವಾದ ಸ್ಟಾಂಪನ್ನು ಹಚ್ಚಿರುವಾಗ ಮತ್ತು ಅಂಥ ಒಪ್ಪಂದದ ಅನುಸರಣೆಯಲ್ಲಿ ಗೇಣಿಯನ್ನು ತರುವಾಯದಲ್ಲಿ ಬರೆದುಕೊಟ್ಟಿರುವ ಯಾವುದೇ ಸಂದರ್ಭದಲ್ಲಿ ಅಂಥ ಗೇಣಿಯ ಮೇಲಿನ ಸುಂಕವು ಎರಡು ರೂಪಾಯಿ ಇಪ್ಪತ್ತೈದು ಪೈಸೆಗಳನ್ನು ಮೀರತಕ್ಕದ್ದಲ್ಲ. |
| | ವಿನಾಯಿತಿ:<br><br>ಒಂದು ನಿಶ್ಚಿತ ಅವಧಿಯನ್ನು ವ್ಯಕ್ತಪಡಿಸಿರುವಾಗ ಮತ್ತು ಅಂಥ ಅವಧಿಯು ಒಂದು ವರ್ಷವನ್ನು ಮೀರದಿರುವಾಗ ಅಥವಾ ಕಾಯ್ದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯು ಒಂದು ನೂರು ರೂಪಾಯಿಗಳನ್ನು ಮೀರದಿರುವಾಗ ಯಾವುದೇ ರುಸುಮು ಅಥವಾ ಪ್ರೀಮಿಯಂನ್ನು ಸಂದಾಯ ಅಥವಾ ವಶಾವಣೆ ಮಾಡದೆ ಸಾಗುವಳಿದಾರನ ಸಂದರ್ಭದಲ್ಲಿ ಮತ್ತು ಸಾಗುವಳಿಯ ವ್ಯವಸಾಯದ ಉದ್ದೇಶಗಳಿಗಾಗಿ | | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | (ಆಹಾರ ಅಥವಾ ಪಾನೀಯದ ಉತ್ಪಾದನೆಗಾಗಿ ಮರಗಳ ಗೇಣಿಯನ್ನು ಒಳಗೊಂಡಂತೆ) ಬರೆದುಕೊಟ್ಟ ಗೇಣಿ<br><br>**ವಿವರಣೆ:** ಗೇಣಿಗೆ ಕೊಡುವವನಿಂದ ಕಾನೂನಿನ ಮೂಲಕ ವಸೂಲಿಯಾಗಬಹುದಾದಂಥ ಸರ್ಕಾರದ ರಾಜಸ್ವ, ಭೂ ಮಾಲೀಕನ ಉಪಕರಗಳ ಅಥವಾ ಪೌರಸಭಾ ದರಗಳು ಅಥವಾ ತೆರಿಗೆಗಳಲ್ಲಿ ಒಡೆಯನ ಪಾಲುಗಳಂಥ ಯಾವುದೇ ಆವರ್ತಕ ವೆಚ್ಚವನ್ನು ಗೇಣಿದಾರನು ಸಂದಾಯ ಮಾಡಲು ಜವಾಬ್ದಾರಿ ವಹಿಸಿಕೊಂಡಾಗ, ಗೇಣಿದಾರನು ಸಂದಾಯ ಮಾಡುವುದಾಗಿ ಹಾಗೆ ಒಪ್ಪಿಕೊಂಡ ಮೊಬಲಗನ್ನು ಬಾಡಿಗೆಯ ಭಾಗವಾಗಿರುವುದಾಗಿ ಭಾವಿಸತಕ್ಕದ್ದು. | | |
| 31 | ಯಾವುದೇ ಕಂಪನಿ ಅಥವಾ ಉದ್ದೇಶಿತ ಕಂಪನಿಯಲ್ಲಿನ ಅಥವಾ ಯಾವುದೇ ಕಂಪನಿ ಅಥವಾ ಉದ್ದೇಶಿತ ಕಂಪನಿಯು ಎತ್ತಬೇಕಾದ ಯಾವುದೇ ಸಾಲಕ್ಕೆ ಸಂಬಂಧಿಸಿದಂತೆ ಷೇರುಗಳ ಹಂಚಿಕೆ ಪತ್ರ<br><br>ಪ್ರಮಾಣ ಪತ್ರ ಅಥವಾ ಇತರ ದಸ್ತಾವೇಜನ್ನು (ಸಂಖ್ಯೆ 16) ಸಹ ನೋಡಿ<br><br>ಖಾತರಿ ಪತ್ರ– ಒಪ್ಪಂದವನ್ನು (ಸಂಖ್ಯೆ 5) ನೋಡಿ | | ಐವತ್ತು ಪೈಸೆ |
| 32 | ಲೈಸೆನ್ಸ್ ಪತ್ರ – ಎಂದರೆ ಋಣಿ ಮತ್ತು ಅವನಿಗೆ ಸಾಲ ಕೊಟ್ಟವರ ನಡುವೆ ತರುವಾಯದವನು ನಿರ್ದಿಷ್ಟ ಕಾಲಕ್ಕಾಗಿ ಅವರ ಕ್ಲೇಮುಗಳನ್ನು ತಡೆಹಿಡಿಯತಕ್ಕದ್ದು ಮತ್ತು ಋಣಿಯು ಅವನ ವಿವೇಚನಾನುಸಾರ ವ್ಯವಹಾರವನ್ನು ನಡೆಸಲು ಅವಕಾಶ ಕೊಡತಕ್ಕದ್ದು ಎಂಬ ಬಗ್ಗೆ ಯಾವುದೇ ಒಪ್ಪಂದ | | ನಲವತ್ತೈದು ರೂಪಾಯಿಗಳು |
| 33 | ಕಂಪನಿಯ ಸಂಘದ ವಿವರಣಾ ಪತ್ರ | | |
| | (ಕ) | ಕಂಪನಿಗಳ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ I) 26ನೇ ಪ್ರಕರಣದ ಮೇರೆಗೆ ಸಂಘದ ನಿಯಮಾವಳಿಗಳ ಜೊತೆಗೆ ಇದ್ದರೆ | ನೂರ ಇಪ್ಪತ್ತೈದು ರೂಪಾಯಿಗಳು |
| | (ಖ) | ಹಾಗೆ ಜೊತೆಗೆ ಇಲ್ಲದಿದ್ದರೆ<br><br>ವಿನಾಯಿತಿ: | ಮುನ್ನೂರ ಇಪ್ಪತ್ತು ರೂಪಾಯಿಗಳು |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | | ಲಾಭಕ್ಕಾಗಿ ರಚಿಸಿಲ್ಲದ ಮತ್ತು ಕಂಪನಿಗಳ ಅಧಿನಿಯಮ, 1956ರ 25ನೇ ಪ್ರಕರಣದ ಮೇರೆಗೆ ನೋಂದಾಯಿಸಲಾದ ಯಾವುದೇ ಸಂಘದ ವಿವರಣಾ ಪತ್ರ | |
| 34 | ಹಕ್ಕು ಪತ್ರಗಳನ್ನಿಡುವುದು, ಗಿರವಿ ಅಥವಾ ಒತ್ತೆ (ಸಂಖ್ಯೆ 6), ನೌಕಾ ಬಂಧಪತ್ರ (ಸಂಖ್ಯೆ 13), ಫಸಲಿನ ಅಡಮಾನ (ಸಂಖ್ಯೆ 35), ನೌಕಾ ಸರಕುಗಳ ಬಂಧಪತ್ರ (ಸಂಖ್ಯೆ 46) ಅಥವಾ ಭದ್ರತಾ ಬಂಧಪತ್ರ (ಸಂಖ್ಯೆ 47) ಇವುಗಳಿಗೆ ಸಂಬಂಧಪಟ್ಟ ಒಪ್ಪಂದವಲ್ಲದ ಅಡಮಾನ ಪತ್ರ | | |
| | (ಕ) | ಅಂಥ ಪತ್ರದಲ್ಲಿ ಒಳಗೊಂಡ ಸ್ವತ್ತಿನ ಅಥವಾ ಸ್ವತ್ತಿನ ಯಾವುದೇ ಭಾಗದ ಸ್ವಾಧೀನವನ್ನು ಅಡಮಾನಕಾರನು ಕೊಟ್ಟಿರುವಾಗ ಅಥವಾ ಕೊಡಲು ಒಪ್ಪಿರುವಾಗ | ಅಂಥ ಪತ್ರದ ಮೂಲಕ ಭದ್ರತೆಗೊಳಿಸಿದ ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ. 20) ಎಂಬಂತೆ ಅದೇ ಸುಂಕ |
| | (ಖ) | ಹಿಂದೆ ಹೇಳಿದಂತೆ ಸ್ವಾಧೀನವನ್ನು ಕೊಟ್ಟಿಲ್ಲದಿರುವಾಗ ಅಥವಾ ಕೊಡಲು ಒಪ್ಪಿಲ್ಲದಿರುವಾಗ | ಅಂಥ ಪತ್ರದ ಮೂಲಕ ಭದ್ರತೆಗೊಳಿಸಿದ ಮೊಬಲಗಿಗಾಗಿನ ಬಂಧಪತ್ರ (ಸಂಖ್ಯೆ 12) ಎಂಬಂತೆ ಅದೇ ಸುಂಕ |
| | **ವಿವರಣೆ:** ಬಾಡಿಗೆ ಸಂಗ್ರಹಿಸಲು ಅಡಮಾನ ಪಡೆದವನಿಗೆ ಮುಖ್ತ್ಯಾರನಾಮೆ ಕೊಟ್ಟಿರುವ ಅಥವಾ ಅಡಮಾನ ಮಾಡಿದ ಸ್ವತ್ತಿನ ಅಥವಾ ಅದರ ಭಾಗದ ಗೇಣಿಯನ್ನು ಕೊಡುವ ಅಡಮಾನಕಾರನು ಈ ಅನುಚ್ಛೇದದ ಅರ್ಥವ್ಯಾಪ್ತಿಯೊಳಗೆ ಅದರ ಸ್ವಾಧೀನವನ್ನು ಕೊಡುವುದಾಗಿ ಭಾವಿಸತಕ್ಕದ್ದು. | | |
| | (ಗ) | ಪ್ರತಿಯೊಂದು ಮೂಲ ಅಥವಾ ಪ್ರಾಥಮಿಕ ಭದ್ರತೆಗೆ ಕ್ರಮಬದ್ಧವಾಗಿ ಸ್ಟಾಂಪು ಹಚ್ಚಿರುವಲ್ಲಿ ಪಾರ್ಶ್ವಿಕ ಅಥವಾ ಸಹಾಯಕ ಅಥವಾ ಅಧಿಕ ಅಥವಾ ಪ್ರತ್ಯಾಯೋಜಿತ ಭದ್ರತೆ ಅಥವಾ ಮೇಲೆ ಹೇಳಿದ ಉದ್ದೇಶಕ್ಕಾಗಿ ಮತ್ತಷ್ಟು ಖಾತರಿ | ಮೂರು ರೂಪಾಯಿ ಐವತ್ತು ಪೈಸೆಗಳು |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | | ರೂಪದ್ದಾಗಿರುವಾಗ 1000 ರೂಪಾಯಿಗಳಿಗೆ ಮೀರದ ಭದ್ರತೆಗೊಳಿಸಿದ ಪ್ರತಿಯೊಂದು ಮೊತ್ತಕ್ಕಾಗಿ | |
| | | ಮತ್ತು 1000 ರೂಪಾಯಿಗಳಿಗೆ ಮೀರಿ ಭದ್ರತೆಗೊಳಿಸಿದ ಪ್ರತಿಯೊಂದು 1000 ರೂಪಾಯಿ ಅಥವಾ ಅದರ ಭಾಗಕ್ಕಾಗಿ | ಮೂರು ರೂಪಾಯಿ ಐವತ್ತು ಪೈಸೆಗಳು |
| | ವಿನಾಯಿತಿ: | | |
| | (1) | ಕರ್ನಾಟಕ ಭೂ ಮೇಲ್ಪಾಟು ಸಾಲಗಳ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 16), ಕರ್ನಾಟಕ ಕೃಷಿಕರ ಸಾಲಗಳ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 17) ಮೇರೆಗೆ ಮುಂಗಡಗಳನ್ನು ಪಡೆಯುವ ವ್ಯಕ್ತಿಗಳು ಅಥವಾ ಅವರ ಜಾಮೀನುದಾರರು ಅಂಥ ಮುಂಗಡಗಳ ಮರು ಪಾವತಿಗಾಗಿ ಭದ್ರತೆಗಾಗಿ ಬರೆದುಕೊಟ್ಟ ಲಿಖಿತಗಳು. | |
| | (2) | ವಿನಿಮಯ ಪತ್ರದೊಂದಿಗೆ ಇರುವ ಆಧಾರ ಪತ್ರ. | |
| 35 | ಅಡಮಾನ ಕಾಲದಲ್ಲಿ ಫಸಲು ಇರಲಿ ಅಥವಾ ಇಲ್ಲದಿರಲಿ ಫಸಲಿನ ಯಾವುದೇ ಅಡಮಾನದ ಮೇಲೆ ಮಾಡಿದ ಸಾಲದ ಮರು ಪಾವತಿಯನ್ನು ಭದ್ರತೆಗೊಳಿಸುವ ಒಪ್ಪಂದವನ್ನು ಸಾಕ್ಷೀಕರಿಸುವ ಯಾವುದೇ ಲಿಖಿತವನ್ನು ಒಳಗೊಂಡು ಫಸಲಿನ ಅಡಮಾನ | | |
| | (ಕ) | ಲಿಖಿತದ ದಿನಾಂಕದಿಂದ ಮೂರು ತಿಂಗಳಿಗೆ ಹೆಚ್ಚಲ್ಲದ ಸಾಲವನ್ನು ಮರುಸಂದಾಯ ಮಾಡಬೇಕಾಗಿರುವಾಗ | ಐವತ್ತು ಪೈಸೆ |
| | | – 200 ರೂಪಾಯಿಗಳಿಗೆ ಮೀರಿದ ಭದ್ರತೆಗೊಳಿಸಿದ ಪ್ರತಿಯೊಂದು ಮೊತ್ತಕ್ಕೆ | ಐವತ್ತು ಪೈಸೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | | 200 ರೂಪಾಯಿಗಳಿಗೆ ಮೀರಿದ ಭದ್ರತೆಗೊಳಿಸಿದ ಪ್ರತಿ 200 ರೂಪಾಯಿಗಳು ಅಥವಾ ಅದರ ಭಾಗಕ್ಕಾಗಿ | |
| | (ಖ) | ಸಾಲವನ್ನು ಲಿಖಿತದ ದಿನಾಂಕದಿಂದ ಮೂರು ತಿಂಗಳಿಗೆ ಮೀರಿ ಆದರೆ ಹದಿನೆಂಟು ತಿಂಗಳಿಗೆ ಮೀರದೆ ಸಾಲವನ್ನು ಮರು ಸಂದಾಯ ಮಾಡಬೇಕಾಗಿರುವಾಗ 100 ರೂಪಾಯಿಗಳಿಗೆ ಮೀರದ ಭದ್ರತೆಗೊಳಿಸಿದ ಪ್ರತಿಯೊಂದು ಮೊತ್ತಕ್ಕೆ | ಒಂದು ರೂಪಾಯಿ |
| | | ಮತ್ತು 100 ರೂಪಾಯಿಗಳನ್ನು ಮೀರಿ ಭದ್ರತೆಗೊಳಿಸಿದ ಪ್ರತಿ 100 ರೂಪಾಯಿಗಳು ಅಥವಾ ಅದರ ಭಾಗಕ್ಕಾಗಿ | ಒಂದು ರೂಪಾಯಿ |
| 36 | ನೋಟರಿ ಕಾರ್ಯ ಎಂದರೆ ನೋಟರಿ ಪಬ್ಲಿಕನಂ ಅವನ ಪದದ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ನೋಟರಿ ಪಬ್ಲಿಕನೆಂದು ಕಾನೂನು ಬದ್ಧವಾಗಿ ಕಾರ್ಯ ನಿರ್ವಹಿಸುತ್ತಿರುವ ಯಾವನೇ ಇತರ ವ್ಯಕ್ತಿಯು ಮಾಡಿದ ಅಥವಾ ರುಜು ಮಾಡಿದ ಪ್ರಸಾಕ್ಷ್ಯ (ಸಂ. 42) ಅಲ್ಲದ ಯಾವುದೇ ಲಿಖಿತ, ಹಿಂಬರಹ, ಟಿಪ್ಪಣಿ, ಅನುಪ್ರಮಾಣನ, ಪ್ರಮಾಣ ಪತ್ರ ಅಥವಾ ನಮೂದು, ಹುಂಡಿ ಅಥವಾ ನೋಟರಿ ಪ್ರಸಾಕ್ಷ್ಯ (ಸಂ. 42) ಸಹ ನೋಡಿ | | ಐದು ರೂಪಾಯಿ |
| 37 | ಯಜಮಾನನಿಗಾಗಿ ಖರೀದಿ ಅಥವಾ ಮಾರಾಟವನ್ನು ಸೂಚಿಸಿ ಅಂಥ ಅವನ ಯಜಮಾನನಿಗೆ ದಲ್ಲಾಳಿ ಅಥವಾ ಏಜೆಂಟನು ಕಳುಹಿಸಿದ ಟಿಪ್ಪಣಿ ಅಥವಾ ವಿವರಣ ಪತ್ರ | | |
| | (ಕ) | ಇಪ್ಪತ್ತು ರೂಪಾಯಿಗಳ ಮೌಲ್ಯವನ್ನು ಮೀರುವ ಯಾವುವೇ ಸರಕುಗಳ ಬಗ್ಗೆ | ಒಂದು ರೂಪಾಯಿ |
| | (ಖ) | ಸರ್ಕಾರದ ಭದ್ರತೆ ಪತ್ರವಲ್ಲದ, ಇಪ್ಪತ್ತು ರೂಪಾಯಿಗಳ ಮೌಲ್ಯ ಮೀರುವ ಅದೇ ಬಗೆಯ ಯಾವುದೇ ಷೇರು, ಷೇರು ಪ್ರಮಾಣ | ಸಂದರ್ಭಾನುಸಾರ ಅದರ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಭದ್ರತೆಯ ಮೌಲ್ಯದ ಪ್ರತಿ ಎರಡು |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| | ಪತ್ರ, ಸ್ಟಾಕು ಬಂಧ ಪತ್ರ, ಡಿಬೆಂಚರ್ ಸ್ಟಾಕು ಅಥವಾ ಇತರ ಮಾರಬಹುದಾದ ಭದ್ರತೆಯ ಬಗ್ಗೆ | ಸಾವಿರದ ಐದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಇಪ್ಪತ್ತು ಪೈಸೆ |
| | (ಗ) ಸರ್ಕಾರಿ ಭದ್ರತಾ ಪತ್ರದ ಬಗ್ಗೆ | ಸಂದರ್ಭಾನುಸಾರ ಭದ್ರತೆಯ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಅದರ ಮೌಲ್ಯದ ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕಾಗಿ ಐವತ್ತೈದು ರೂಪಾಯಿ ಮತ್ತು ಐವತ್ತು ಪೈಸೆ ಗರಿಷ್ಠಕ್ಕೊಳಪಟ್ಟು |
| 38 | ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯ ಪತ್ರ, ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯ (ಸಂ. 43) ಸಹ ನೋಡಿ | ಎರಡು ರೂಪಾಯಿಗಳು |
| 39 | 2(1)(ಟ) ಪ್ರಕರಣದ ಮೂಲಕ ಪರಿಭಾಷಿಸಿದಂತೆ ವಿಭಜನೆಯ ಲಿಖಿತ | ಸ್ವತ್ತಿನ ಪ್ರತ್ಯೇಕಿಸಿದ ಪಾಲು ಅಥವಾ ಪಾಲುಗಳ ಮೌಲ್ಯದ ಮೊಬಲಗಿಗಾಗಿನ ಬಂಧ ಪತ್ರ (ಸಂ. 12) ಎಂಬಂತೆ ಅದೇ ಸುಂಕ<br><br>**ವಿ.ಸೂ.–** ಸ್ವತ್ತನ್ನು ವಿಭಜಿಸಿದ ತರುವಾಯ ಉಳಿಯುವ ಅತಿ ಹೆಚ್ಚಿನ ಪಾಲನ್ನು (ಅಥವಾ ಸಮಾನ ಮೌಲ್ಯದ ಎರಡು ಅಥವಾ ಹೆಚ್ಚಿನ ಷೇರುಗಳು ಮತ್ತು ಇತರ ಯಾವುದೇ ಪಾಲುಗಳಿಗಿಂತ ಕಡಿಮೆಯಲ್ಲದ ಪಾಲುಗಳು ಇದ್ದರೆ, ಆಗ ಅಂಥ ಸಮ ಪಾಲುಗಳಲ್ಲಿ ಒಂದನ್ನು) ಯಾವುದರಿಂದ ಇತರ ಪಾಲುಗಳನ್ನು ಪ್ರತ್ಯೇಕಿಸಲಾಯಿತೋ ಆ ಪಾಲು ಎಂಬುದಾಗಿ ಭಾವಿಸತಕ್ಕದ್ದು.<br><br>(ಕ) ಪರಂತು, ಯಾವಾಗಲೂ, ಸ್ವತ್ತನ್ನು ಪ್ರತ್ಯೇಕವಾಗಿ ವಿಭಾಗಿಸಲು ಒಪ್ಪಂದವನ್ನು ಒಳಗೊಂಡಿರುವ ವಿಭಜನೆಯ ಲಿಖಿತವನ್ನು ಬರೆದು |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟ್ಯಾಂಪ್ ಸುಂಕ | |
|---|---|---|---|
| 1 | 2 | 3 | |
| | | | ಕೊಟ್ಟಿರುವಾಗ ಮತ್ತು ಅಂಥ ಒಪ್ಪಂದದ ಅನುಸರಣೆಯಲ್ಲಿ ವಿಭಜನೆಯನ್ನು ಮಾಡಿರುವಾಗ, ಅಂಥ ವಿಭಜನೆಯನ್ನು ಮಾಡುವ ಲಿಖಿತದ ಮೇಲೆ ವಿಧಿಸಬಹುದಾದ ಸುಂಕವನ್ನು ಮೊದಲನೇ ಲಿಖಿತಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಿದ ಸುಂಕದ ಮೊಬಲಗಿನಿಂದ ಕಳೆಯತಕ್ಕದ್ದು. ಆದರೆ ಅದು ಮೂರು ರೂಪಾಯಿಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ: |
| | | (ಖ) | ಮೂವತ್ತು ವರ್ಷಗಳನ್ನು ಮೀರದ ಅವಧಿಗಾಗಿನ ಕಂದಾಯ ವ್ಯವಸ್ಥೆಯ ಮೇಲೆ ಭೂಮಿಯನ್ನು ಹೊಂದಿರುವಾಗ ಮತ್ತು ಪೂರ್ಣ ಕಂದಾಯವನ್ನು ಸಂದಾಯ ಮಾಡುತ್ತಿರುವಾಗ ಸುಂಕದ ಉದ್ದೇಶಕ್ಕಾಗಿ ಮೌಲ್ಯವನ್ನು ವಾರ್ಷಿಕ ಕಂದಾಯದ ಇಪ್ಪತ್ತೈದರಷ್ಟರಂತೆ ಲೆಕ್ಕ ಹಾಕತಕ್ಕದ್ದು:<br><br>ಯಾವನೇ ರೆವಿನ್ಯೂ ಪ್ರಾಧಿಕಾರಿ ಅಥವಾ ಯಾವುದೇ ಸಿವಿಲ್ ನ್ಯಾಯಾಲಯವು ವಿಭಜನೆಯನ್ನು ಮಾಡುವುದಕ್ಕಾಗಿ ಅಂತಿಮ ಆದೇಶ ಅಥವಾ ವಿಭಜನೆಯನ್ನು ನಿರ್ದೇಶಿಸಿ ಮಧ್ಯಸ್ಥಗಾರನು ಕೊಟ್ಟ |
| | | (ಗ) | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| | | ಐತೀರ್ಪಿಗೆ ವಿಭಜನೆಯ ಲಿಖಿತಕ್ಕಾಗಿ ಅಗತ್ಯಪಡಿಸಿದ ಸ್ಟಾಂಪನ್ನು ಹಚ್ಚಿರುವಲ್ಲಿ ಮತ್ತು ಅಂಥ ಆದೇಶ ಅಥವಾ ಐತೀರ್ಪಿನ ಅನುಸರಣೆಯಲ್ಲಿ ವಿಭಜನೆಯ ಲಿಖಿತವನ್ನು ತರುವಾಯ ಬರೆದುಕೊಟ್ಟಿರುವಲ್ಲಿ ಅಂಥ ಲಿಖಿತದ ಮೇಲಿನ ಸುಂಕವು ಮೂರು ರೂಪಾಯಿಗಳನ್ನು ಮೀರತಕ್ಕದ್ದಲ್ಲ. |
| 40 | ಪಾಲುಗಾರಿಕೆ– | |
| | ಕ. ಲಿಖಿತ ಪತ್ರವು– | |
| | (ಕ) ಪಾಲುಗಾರಿಕೆಯ ಬಂಡವಾಳವು 500 ರೂಪಾಯಿಗಳನ್ನು ಮೀರದಿರುವಲ್ಲಿ | ಇಪ್ಪತ್ತು ರೂಪಾಯಿಗಳು |
| | (ಖ) ಯಾವುದೇ ಇತರ ಸಂದರ್ಭದಲ್ಲಿ | ಎಂಬತ್ತು ರೂಪಾಯಿಗಳು |
| | ಖ. ವಿಘಟನೆ– | ನಲವತ್ತು ರೂಪಾಯಿಗಳು |
| | ಗಿರವಿ ಅಥವಾ ಒತ್ತೆ ಹಕ್ಕು ಪತ್ರಗಳನ್ನು ಇಡುವಿಕೆಗೆ ಸಂಬಂಧಪಟ್ಟ ಒಪ್ಪಂದವನ್ನು ಗಿರವಿ ಅಥವಾ ಒತ್ತೆ (ಸಂಖ್ಯೆ 6) ನೋಡಿ | |
| 41 | ಮೊಖ್ತ್ಯಾರನಾಮೆಗಳು– ಪ್ರತಿನಿಧಿ ಪತ್ರವಲ್ಲದ (2(1) (ತ) ಪ್ರಕರಣದ ಮೂಲಕ ಪರಿಭಾಷಿಸಿದಂತೆ).– | |
| | (ಕ) ಒಂದೇ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಅಥವಾ ಒಂದು ಅಥವಾ ಹೆಚ್ಚು ಅಂಥ ದಸ್ತಾವೇಜುಗಳನ್ನು ಬರೆದು ಕೊಟ್ಟಿರುವುದನ್ನು ಅಂಗೀಕರಿಸುವುದಕ್ಕಾಗಿ ಒಂದು ಅಥವಾ ಹೆಚ್ಚು ದಸ್ತಾವೇಜುಗಳ ನೋಂದಣಿಯನ್ನು ದೊರಕಿಸಿಕೊಳ್ಳುವ ಏಕೈಕ ಉದ್ದೇಶಕ್ಕಾಗಿ ಬರೆದು | ಒಂದು ರೂಪಾಯಿ ಐವತ್ತು ಪೈಸೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | | ಕೊಟ್ಟಿರುವಾಗ; | |
| | (ಖ) | (ಕ) ಖಂಡದಲ್ಲಿ ನಮೂದಿಸಿದ ಸಂದರ್ಭವನ್ನು ಹೊರತುಪಡಿಸಿ ಒಂದೇ ವ್ಯವಹಾರದಲ್ಲಿ ಕಾರ್ಯ ನಿರ್ವಹಿಸಲು ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ಅಧಿಕೃತಗೊಳಿಸಿರುವಾಗ; | ಮೂರು ರೂಪಾಯಿಗಳು |
| | (ಗ) | ಒಂದಕ್ಕಿಂತ ಹೆಚ್ಚು ವ್ಯವಹಾರದಲ್ಲಿ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಅಥವಾ ಸಾಮಾನ್ಯವಾಗಿ ಕಾರ್ಯನಿರ್ವಹಿಸಲು ಐದಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ಅಧಿಕೃತಗೊಳಿಸಿರುವಾಗ; | ಇಪ್ಪತ್ತು ರೂಪಾಯಿಗಳು |
| | (ಘ) | ಒಂದಕ್ಕಿಂತ ಹೆಚ್ಚು ವ್ಯವಹಾರದಲ್ಲಿ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಅಥವಾ ಸಾಮಾನ್ಯವಾಗಿ ಕಾರ್ಯನಿರ್ವಹಿಸಲು ಐದಕ್ಕಿಂತ ಹೆಚ್ಚು ಆದರೆ ಹತ್ತಕ್ಕಿಂತ ಹೆಚ್ಚಿಲ್ಲದ ವ್ಯಕ್ತಿಗಳನ್ನು ಅಧಿಕೃತಗೊಳಿಸಿರುವಾಗ; | ನಲವತ್ತೊಂದು ರೂಪಾಯಿಗಳು |
| | (ಙ) | ಪ್ರತಿಫಲಕ್ಕಾಗಿ ಮತ್ತು ಯಾವುದೇ ಸ್ಥಿರ ಸ್ವತ್ತನ್ನು ಮಾರಾಟ ಮಾಡಲು ಅಟಾರ್ನಿಯನ್ನು ಅಧಿಕೃತಗೊಳಿಸಿರುವಾಗ | ಪ್ರತಿಫಲದ ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿ ಹಸ್ತಾಂತರಣ (ಸಂಖ್ಯೆ 20) ಎಂಬಂತೆ ಅದೇ ಸುಂಕ |
| | (ಚ) | ಇತರ ಯಾವುದೇ ಸಂದರ್ಭದಲ್ಲಿ<br>ವಿ.ಸೂ.– **"ನೋಂದಣಿ"** ಎಂಬ ಪದವು ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ ಸಂ. 16)ರ ಮೇರೆಗೆ ನೋಂದಣಿಗೆ ಪ್ರಾಸಂಗಿಕವಾದ ಪ್ರತಿಯೊಂದು ಕಾರ್ಯ ನಿರ್ವಹಣೆಯನ್ನು ಒಳಗೊಳ್ಳುತ್ತದೆ.<br>ವಿವರಣೆ:– ಈ ಅನುಚ್ಛೇದದ ಉದ್ದೇಶಗಳಿಗಾಗಿ ಒಂದೇ ಫರ್ಮಿಗೆ ಸೇರಿದ ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳನ್ನು ಒಬ್ಬ ವ್ಯಕ್ತಿ ಎಂಬುದಾಗಿ ಭಾವಿಸತಕ್ಕದ್ದು. | ಐದು ರೂಪಾಯಿಗಳು |
| 42 | ಹುಂಡಿಯ ಅಥವಾ ನೋಟಿನ ಪ್ರಸಾಕ್ಷ್ಯ ಎಂದರೆ ನೋಟರಿ ಪಬ್ಲಿಕ್ ಅಥವಾ ಹಾಗೆಂದು ಕಾನೂನು | | ಐದು ರೂಪಾಯಿಗಳು |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| | ಬದ್ಧವಾಗಿ ಕಾರ್ಯ ನಿರ್ವಹಿಸುತ್ತಿರುವ ಇತರ ವ್ಯಕ್ತಿಯು, ವಿನಿಮಯಪತ್ರ ಅಥವಾ ಪ್ರಾಮಿಸರಿ ನೋಟಿನ ಅನಾದರಣೆಯನ್ನು ಅನುಪ್ರಮಾಣಿಸಿ ಬರಹದಲ್ಲಿ ಮಾಡಿದ ಯಾವುದೇ ಘೋಷಣೆ | |
| 43 | ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯ – ಎಂದರೆ, ನಷ್ಟಗಳ ಹೊಂದಾಣಿಕೆ ಅಥವಾ ಸರಾಸರಿಗಳ ಲೆಕ್ಕ ಹಾಕುವಿಕೆಯ ದೃಷ್ಟಿಯಿಂದ ಅವನು ಬರೆದಿರುವ ಹಡಗಿನ ಯಾನದ ವಿವರಗಳ ಯಾವುದೇ ಘೋಷಣೆ ಮತ್ತು ಘೋಷಣೆಯನ್ನು ನೋಟರಿ ಪಬ್ಲಿಕ್ ಅಥವಾ ಹಾಗೆಂದು ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುವ ಇತರ ವ್ಯಕ್ತಿಯು ಅನುಪ್ರಮಾಣಿಸಿರುವಾಗ ಅಥವಾ ಪ್ರಮಾಣೀಕರಿಸಿರುವಾಗ, ಹಡಗಿಗೆ ಹೇರದೆ ಅಥವಾ ಭಾರ ಇಳಿಸದೆ ಇರುವುದಕ್ಕಾಗಿ, ಬಾಡಿಗೆ ತೆಗೆದುಕೊಂಡಿರುವವರ ಅಥವಾ ಸರಕು ಪಡೆಯುವವರ ವಿರುದ್ಧ ಅವನು ಬರಹದಲ್ಲಿ ಮಾಡಿದ ಅಂಥ ಪ್ರತಿಯೊಂದು ಘೋಷಣೆ, ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯಪತ್ರ (ಸಂ. 38) ಸಹ ನೋಡಿ | ಐದು ರೂಪಾಯಿಗಳು |
| 44 | ಅಡಮಾನ ಸ್ವತ್ತಿನ ಮರು ಹಸ್ತಾಂತರಣ– | |
| | (ಕ) ಯಾವ ಪ್ರತಿಫಲಕ್ಕಾಗಿ ಸ್ವತ್ತನ್ನು ಅಡಮಾನ ಮಾಡಲಾಗಿದೆಯೋ ಆ ಪ್ರತಿಫಲವು 1,000 ರೂಪಾಯಿಗಳನ್ನು ಮೀರದಿದ್ದರೆ– | ಹಸ್ತಾಂತರಣದಲ್ಲಿ ಹೇಳಿರುವಂಥ ಪ್ರತಿಫಲದ ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ. 20) ಎಂಬಂತೆ ಅದೇ ಸುಂಕ |
| | (ಖ) ಯಾವುದೇ ಇತರ ಸಂದರ್ಭದಲ್ಲಿ | |
| | (i) 20 (ಕ) ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶಗಳಲ್ಲಿ | ಒಂದು ನೂರು ರೂಪಾಯಿಗಳು |
| | (ii) 20 (ಖ) ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶಗಳಲ್ಲಿ | ಎಂಬತ್ತು ರೂಪಾಯಿಗಳು |
| | (iii) 20 (ಗ) ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶಗಳಲ್ಲಿ | ಎಪ್ಪತ್ತು ರೂಪಾಯಿಗಳು |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| 45 | ಬಿಡುಗಡೆ– ಎಂದರೆ, ಯಾವ ಲಿಖಿತದ ಮೂಲಕ (24ನೇ ಪ್ರಕರಣದ ಮೂಲಕ ಉಪಬಂಧಿಸಿದಂಥ ಬಿಡುಗಡೆಯಲ್ಲದ್ದು) ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಮೇಲಿನ ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಸ್ವತ್ತಿನ ವಿರುದ್ಧ ಕ್ಲೇಮನ್ನು ಬಿಟ್ಟುಕೊಡುವುದು | |
| | (ಕ) ಕ್ಲೇಮಿನ ಮೊಬಲಗು ಅಥವಾ ಮೌಲ್ಯವು 1,000 ರೂ. ಗಳನ್ನು ಮೀರದಿದ್ದರೆ | ಬಿಡುಗಡೆಯಲ್ಲಿ ಹೇಳಿರುವಂಥ ಮೊಬಲಗು ಅಥವಾ ಮೌಲ್ಯಕ್ಕಾಗಿನ ಬಂಧಪತ್ರವೆಂಬಂತೆ (ಸಂ. 12) ಅದೇ ಸುಂಕ |
| | (ಖ) ಯಾವುದೇ ಇತರ ಸಂದರ್ಭದಲ್ಲಿ | ಮೂವತ್ತು ರೂಪಾಯಿಗಳು |
| 46 | ನೌಕಾ ಸರಕುಗಳ ಬಂಧ ಪತ್ರ ಎಂದರೆ ಹಡಗಿನ ಮೇಲೆ ಹೇರಿದ ಅಥವಾ ಹೇರಬೇಕಾದ ಸರಕಿನ ಮೇಲೆ ಸಾಲ ಪಡೆಯುವ ಮತ್ತು ತಲುಪಬೇಕಾದ ಬಂದರಿನಲ್ಲಿ ಸರಕುಗಳು ತಲುಪುವುದರ ಮೇಲೆ ಅವಲಂಬಿತವಾದ ಮರು ಸಂದಾಯವನ್ನು ಮಾಡುವ ಯಾವುದೇ ಲಿಖಿತ<br><br>ಯಾವುದೇ ನ್ಯಾಸ ಅಥವಾ ವ್ಯವಸ್ಥಾಪನಾ ಪತ್ರವನ್ನು ರದ್ದು ಮಾಡುವುದು ವ್ಯವಸ್ಥೆ (ಸಂಖ್ಯೆ 48) ನ್ಯಾಸ (ಸಂಖ್ಯೆ 54) ನೋಡಿ | ಭದ್ರತೆಗೊಳಿಸಿದ ಸಾಲದ ಮೊಬಲಗಿಗಾಗಿ ಬಂಧಪತ್ರದಂತೆ (ಸಂ.12) ಅದೇ ಸುಂಕ |
| 47 | ಪದದ ಯುಕ್ತ ನಿರ್ವಹಣೆಗಾಗಿ ಭದ್ರತೆಯೆಂದು ಅಥವಾ ಅದರಿಂದಾಗಿ ಸ್ವೀಕರಿಸಿದ ಹಣ ಅಥವಾ ಇತರ ಸ್ವತ್ತಿಗೆ ಲೆಕ್ಕ ಕೊಡಲು ಬರೆದುಕೊಟ್ಟ ಅಥವಾ ಕರಾರಿನ ಯುಕ್ತ ನೆರವೇರಿಕೆಯನ್ನು ಸುನಿಶ್ಚಿತಗೊಳಿಸಲು ಜಾಮೀನುದಾರನು ಬರೆದು ಕೊಡುವ ಭದ್ರತಾ ಬಂಧಪತ್ರ ಅಥವಾ ಅಡಮಾನ ಪತ್ರ | |
| | (ಕ) ಭದ್ರತೆಯ ಮೇಲೆ ಕೊಡಲಾದ ಮೊಬಲಗು 1000 ರೂಪಾಯಿಗಳಿಗೆ ಮೀರದಿರುವಾಗ | ಭದ್ರತೆಯ ಮೇಲೆ ಕೊಡಲಾದ ಮೊಬಲಗಿಗಾಗಿನ ಬಂಧಪತ್ರ (ಸಂ.12) ಎಂಬಂತೆ ಅದೇ ಸುಂಕ |
| | (ಖ) ಯಾವುದೇ ಇತರ ಸಂದರ್ಭದಲ್ಲಿ | ಮೂವತ್ತು ರೂಪಾಯಿಗಳು |
| | ವಿನಾಯಿತಿ: ಬಂಧಪತ್ರ ಅಥವಾ ಇತರ ಲಿಖಿತ,– | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | (ಕ) | ಧರ್ಮಾರ್ಥ ಔಷಧಾಲಯ, ಆಸ್ಪತ್ರೆ ಅಥವಾ ಯಾವುದೇ ಇತರ ಸಾರ್ವಜನಿಕ ಉಪಯೋಗದ ಇತರ ಯಾವುದೇ ಉದ್ದೇಶಕ್ಕೆ ಖಾಸಗಿ ಚಂದಾಗಳಿಂದ ಒದಗಿ ಬರುವ ಸ್ಥಳೀಯ ಆದಾಯವು ತಿಂಗಳೊಂದಕ್ಕೆ ನಿರ್ದಿಷ್ಟಪಡಿಸಿದ ಮೊತ್ತಕ್ಕಿಂತ ಕಡಿಮೆ ಇರತಕ್ಕುದಲ್ಲ ಎಂಬುದನ್ನು ಖಾತರಿಪಡಿಸುವ ಉದ್ದೇಶಕ್ಕಾಗಿ ಯಾವನೇ ವ್ಯಕ್ತಿಯು | |
| | (ಖ) | ಮುಂಬೈ ನೀರಾವರಿ ಅಧಿನಿಯಮ, 1879ರ 70ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಸಂಖ್ಯೆ: 3ಕ ಮೇರೆಗೆ | |
| | (ಗ) | ಕರ್ನಾಟಕ ಭೂ ಮೇಲ್ಪಾಟು ಸಾಲಗಳ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 16)ರ ಅಥವಾ ಕರ್ನಾಟಕ ಕೃಷಿಕರ ಸಾಲಗಳ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 17)ರ ಮೇರೆಗೆ ಮುಂಗಡಗಳನ್ನು ಪಡೆಯುವ ವ್ಯಕ್ತಿಗಳು ಅಥವಾ ಅಂಥ ಮುಂಗಡಗಳ ಮರು ಪಾವತಿಗಾಗಿನ ಭದ್ರತೆಗಾಗಿ ಅವರ ಜಾಮೀನುದಾರರು | |
| | (ಘ) | ಸರ್ಕಾರಿ ಅಧಿಕಾರಿಗಳು ಅಥವಾ ಪದದ ಯುಕ್ತ ನಿರ್ವಹಣೆಯ ಭದ್ರತೆಗಾಗಿ ಅವರ ಜಾಮೀನುದಾರರು ಅಥವಾ ಅದರಿಂದಾಗಿ ಸ್ವೀಕರಿಸಿದ ಹಣ ಅಥವಾ ಇತರ ಸ್ವತ್ತಿಗೆ ಯುಕ್ತವಾಗಿ ಲೆಕ್ಕ ಕೊಡಲು–<br>ಅದನ್ನು ಬರೆದು ಕೊಟ್ಟಿರುವಾಗ | |
| 48 | ವ್ಯವಸ್ಥಾಪನಾ ಪತ್ರ: | | |
| | (ಕ) | ವ್ಯವಸ್ಥಾಪನಾ ಪತ್ರ (ಮೆಹರ್ ವಿಲೇಖವನ್ನು ಒಳಗೊಂಡು) | ವ್ಯವಸ್ಥಾಪನಾ ಪತ್ರದ ವಸ್ತು ವಿಷಯವಾಗಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟ್ಯಾಂಪ್ ಸುಂಕ | | |
|---|---|---|---|---|---|
| 1 | 2 | | 3 | | |
| | | | ಮೌಲ್ಯಕ್ಕಾಗಿನ ಹಸ್ತಾಂತರಣ ಸಂಖ್ಯೆ (20) ಎಂಬಂತೆ ಅದೇ ಸುಂಕ:<br>ಪರಂತು, ವ್ಯವಸ್ಥೆಯ ಒಪ್ಪಂದಕ್ಕೆ ವ್ಯವಸ್ಥಾಪನಾ ಪತ್ರಕ್ಕಾಗಿ ಅಗತ್ಯವಾಗಿರುವ ಸ್ಟ್ಯಾಂಪ್ ಹಚ್ಚಿರುವಲ್ಲಿ ಮತ್ತು ವ್ಯವಸ್ಥಾಪನಾ ಪತ್ರವನ್ನು ಅಂಥ ಒಪ್ಪಂದದ ಅನುಸರಣೆಯಲ್ಲಿ ತರುವಾಯ ಬರೆದುಕೊಟ್ಟಿರುವಲ್ಲಿ, ಅಂಥ ಲಿಖಿತದ ಮೇಲಿನ ಸುಂಕವು ಮೂರು ರೂಪಾಯಿಗಳನ್ನು ಮೀರತಕ್ಕುದಲ್ಲ | | |
| | ವಿನಾಯಿತಿ:<br>ಮಹಮ್ಮದೀಯರ ನಡುವೆ ವಿವಾಹದ ಸಂದರ್ಭದಲ್ಲಿ ಬರೆದುಕೊಟ್ಟ ಮೆಹರ್ ವಿಲೇಖ, ನ್ಯಾಸ (ಸಂ. 54) ಸಹ ನೋಡಿ | | ರದ್ದಿಯಾತಿ ಲಿಖಿತದಲ್ಲಿ ಸಂಬಂಧಿಸಿದ ಸ್ವತ್ತಿನ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದಷ್ಟು ಮೊತ್ತಕ್ಕಾಗಿನ ಹಸ್ತಾಂತರಣ (ಸಂ.20) ಎಂಬಂತೆ ಅದೇ ಸುಂಕ, ಆದರೆ | | |
| | (ಖ) | ರದ್ದಿಯಾತಿ | (ಕ) | 20 (ಕ) ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ | ಎರಡು ನೂರು ರೂಪಾಯಿಗಳು |
| | | | (ಖ) | 20 (ಖ) ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ | ಒಂದು ನೂರ ಅರವತ್ತು ರೂಪಾಯಿಗಳು |
| | | | (ಗ) | 20 (ಗ) ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ | ಒಂದು ನೂರ ನಲವತ್ತು ರೂಪಾಯಿಗಳು ಮೀರಲಾಗದು |
| 49 | ಷೇರು ವಾರಂಟುಗಳು– ಕಂಪನಿಗಳ ಅಧಿನಿಯಮ, | | ವಾರಂಟ್‌ನಲ್ಲಿ ನಿರ್ದಿಷ್ಟಪಡಿಸಿದ | | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | 1956 (1956ರ ಕೇಂದ್ರಾಧಿನಿಯಮ 1)ರ ಮೇರೆಗೆ ಧಾರಕನಿಗೆ ಕೊಡಲಾದವುಗಳು<br>ವಿನಾಯಿತಿಗಳು:<br>ಕಂಪನಿಗಳ ಅಧಿನಿಯಮ, 1956ರ 114ನೇ ಪ್ರಕರಣದ ಅನುಸರಣೆಯಲ್ಲಿ– | | ಷೇರುಗಳು ನಾಮಪತ್ರದ ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣದ (ಸಂಖ್ಯೆ 20) ಮೇಲೆ ಸಂದಾಯ ಮಾಡಬೇಕಾದ ಸುಂಕದ ಒಂದೂವರೆಯಷ್ಟು |
| | (ಕ) | ಆ ಕಂಪನಿಯು ಕೊಡಲು ಒಪ್ಪಿಕೊಂಡ ಪೂರ್ಣ ಬಂಡವಾಳದ ಶೇಕಡಾ ಒಂದೂವರೆಯಷ್ಟು, ಅಥವಾ | |
| | (ಖ) | ಸದರಿ ಸುಂಕ ಅಥವಾ ರಾಜಿಸುಂಕವನ್ನು ಪೂರ್ಣವಾಗಿ ಸಂದಾಯ ಮಾಡಿರುವಂಥ ಯಾವುದೇ ಕಂಪನಿಯು ತರುವಾಯ ಕೊಡಲು ಒಪ್ಪಿಕೊಂಡ ಅದರ ಬಂಡವಾಳಕ್ಕೆ ಹೆಚ್ಚಿನದನ್ನು ಹೊರಡಿಸಿದರೆ, ಹಾಗೆ ಹೊರಡಿಸಿದ ಹೆಚ್ಚಿನ ಬಂಡವಾಳದ ಶೇಕಡಾ ಒಂದೂವರೆಯಷ್ಟರ ರಾಜಸ್ವವನ್ನು ಸ್ಟಾಂಪುಗಳ ಡೆಪ್ಯುಟಿ ಕಮಿಷನರನಿಗೆ ಆ ಸುಂಕಕ್ಕಾಗಿ ರಾಜಿಯಂತೆ ಸಂದಾಯ ಮಾಡಿದ ಮೇಲೆ ಮಾತ್ರ ಪರಿಣಾಮ ಹೊಂದುವ ಹಾಗೆ ಕಂಪನಿಯ ಷೇರುವಾರಂಟನ್ನು ಹೊರಡಿಸಿದಾಗ | |
| 50 | ಯಾವುದೇ ನೌಕೆಯ ಮೇಲೆ ಸರಕುಗಳನ್ನು ಸಾಗಿಸುವುದಕ್ಕಾಗಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಹಡಗು ಸಾಗಣೆ ಆದೇಶ | | ಇಪ್ಪತ್ತು ಪೈಸೆ |
| 51 | ಗೇಣಿಯನ್ನು ಬಿಟ್ಟು ಕೊಡುವುದು: | | |
| | (ಕ) | ಗೇಣಿಗೆ ವಿಧಿಸಬಹುದಾದಂಥ ಸುಂಕವು ಇಪ್ಪತ್ತೆರಡು ರೂಪಾಯಿ ಐವತ್ತು ಪೈಸೆಗಳನ್ನು ಮೀರದಿದ್ದಾಗ | ಅಂತಹ ಗೇಣಿಯ ಮೇಲೆ ವಿಧಿಸಬಹುದಾದಂಥ ಸುಂಕ |
| | (ಖ) | ಯಾವುದೇ ಇತರ ಸಂದರ್ಭದಲ್ಲಿ | ಮೂವತ್ತು ರೂಪಾಯಿಗಳು |
| | ವಿನಾಯಿತಿ:<br>ಅಂಥ ಗೇಣಿಯು ಸುಂಕದಿಂದ ವಿನಾಯಿತಿ | | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | ಹೊಂದಿದಾಗ ಗೇಣಿಯನ್ನು ಬಿಟ್ಟುಕೊಡುವುದು | | |
| 52 | ಇವುಗಳ ವರ್ಗಾವಣೆ: (ಪ್ರತಿಫಲ ಸಹಿತ ಅಥವಾ ಅದಿಲ್ಲದೆ) | | |
| | (ಕ) | ಮಾರಬಹುದಾದ ಭದ್ರತೆಗಳಾಗಿರುವ, ಡಿಬೆಂಚರುಗಳು– ಆ ಡಿಬೆಂಚರು ಸುಂಕಕ್ಕೆ ಗುರಿಯಾಗಿರಲಿ ಅಥವಾ ಇಲ್ಲದಿರಲಿ | ಡಿಬೆಂಚರಿನ ಮುಖ ಮೊಬಲಗಿಗೆ ಸಮನಾದ ಪ್ರತಿಫಲಕ್ಕಾಗಿನ ಹಸ್ತಾಂತರಣ (ಸಂ. 20)ರ ಮೇಲೆ ಸಂದಾಯ ಮಾಡಬೇಕಾದ ಸುಂಕದ ಅರ್ಧ |
| | (ಖ) | ಬಂಧ ಪತ್ರ, ಅಡಮಾನ ಪತ್ರ ಅಥವಾ ವಿಮಾ ಪಾಲಿಸಿಯ ಮೂಲಕ ಭದ್ರತೆಗೊಳಿಸದ ಯಾವುದೇ ಹಿತಾಸಕ್ತಿ | |
| | (i) | ಅಂತಹ ಬಂಧಪತ್ರ, ಅಡಮಾನ ಪತ್ರ ಅಥವಾ ಪಾಲಿಸಿಯ ಮೇಲಿನ ಸುಂಕವು ಇಪ್ಪತ್ತೆರಡು ರೂಪಾಯಿ ಐವತ್ತು ಪೈಸೆಯನ್ನು ಮೀರದಿದ್ದರೆ | ಅಂತಹ ಬಂಧಪತ್ರ, ಅಡಮಾನ ಪತ್ರ ಅಥವಾ ವಿಮಾಪಾಲಿಸಿಯ ಮೇಲೆ ವಿಧಿಸಬಹುದಾದಂಥ ಸುಂಕ |
| | (ii) | ಯಾವುದೇ ಇತರ ಸಂದರ್ಭದಲ್ಲಿ | ಮೂವತ್ತು ರೂಪಾಯಿಗಳು |
| | (ಗ) | ಅಡ್ಮಿನಿಸ್ಟ್ರೇಟರ್ ಜನರಲ್ಲುಗಳ ಅಧಿನಿಯಮ, 1963ರ 25ನೇ ಪ್ರಕರಣದ ಮೇರೆಗಿನ ಸ್ವತ್ತು | ನಲವತ್ತೈದು ರೂಪಾಯಿಗಳು |
| | (ಘ) | ಒಬ್ಬ ನ್ಯಾಸಧಾರಿಯಿಂದ ಇನ್ನೊಬ್ಬ ನ್ಯಾಸಧಾರಿಗೆ ಅಥವಾ ನ್ಯಾಸಧಾರಿಯಿಂದ ಫಲಾನುಭವಿಗೆ ಯಾವುದೇ ನ್ಯಾಸದ ಸ್ವತ್ತು<br>ವಿನಾಯಿತಿಗಳು:<br>ಹಿಂಬರಹದ ಮೂಲಕ ಇವುಗಳ ವರ್ಗಾವಣೆಗಳು: | ಹದಿನೈದು ರೂಪಾಯಿಗಳು |
| | (ಕ) | ವಿನಿಮಯ ಪತ್ರ, ಚೆಕ್ಕು ಅಥವಾ ಪ್ರಾಮಿಸರಿ ನೋಟು | |
| | (ಖ) | ವಹನ ಪತ್ರ, ವಶಾವಣೆ ಆದೇಶ ಸರಕುಗಳು ಅಥವಾ ಸರಕುಗಳ ಬಗೆಗಿನ ಸ್ವಾಮ್ಯದ ವಾಣಿಜ್ಯ ದಸ್ತಾವೇಜಿಗಾಗಿನ ವಾರೆಂಟ್ | |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | | ಸರಿಯಾದ ಸ್ಟಾಂಪ್ ಸುಂಕ |
|---|---|---|---|
| 1 | 2 | | 3 |
| | (ಗ) | ವಿಮಾ ಪಾಲಿಸಿ | |
| | (ಘ) | ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಭದ್ರತೆಗಳು 8ನೇ ಪ್ರಕರಣವನ್ನು ಸಹ ನೋಡಿ | |
| 53 | ವಹಿಸಿಕೊಡುವ ಮೂಲಕ ಮತ್ತು ಒಳಗೇಣಿಯ ಮೂಲಕವಲ್ಲದ ಗೇಣಿಯ ವರ್ಗಾವಣೆ<br><br>ವಿನಾಯಿತಿಗಳು:<br>ಸುಂಕದಿಂದ ವಿನಾಯಿತಿ ಹೊಂದಿದ ಯಾವುದೇ ಗೇಣಿಯ ವರ್ಗಾವಣೆ | | ವರ್ಗಾವಣೆಗಾಗಿನ ಪ್ರತಿಫಲದ ಮೊಬಲಗಿಗೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ.20 ಎಂಬಂತೆ ಅದೇ ಸುಂಕ |
| 54 | ನ್ಯಾಸ | | |
| | (ಕ) | ಮರಣ ಶಾಸನವಲ್ಲದ ಯಾವುದೇ ಬರಹದ ಮೂಲಕ ಯಾವುದೇ ಸ್ವತ್ತಿನ ಅಥವಾ ಅದಕ್ಕೆ ಸಂಬಂಧಪಟ್ಟ ಘೋಷಣೆಯನ್ನು ಮಾಡಿರುವಾಗ | ಲಿಖಿತದಲ್ಲಿ ಹೇಳಿರುವಂತೆ ಸಂಬಂಧಿಸಿದ ಸ್ವತ್ತಿನ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮೊತ್ತಕ್ಕಾಗಿನ ಬಂಧಪತ್ರ (ಸಂ.12) ಎಂಬಂತೆ ಅದೇ ಸುಂಕ ಆದರೆ, ಅದು ತೊಂಬತ್ತು ರೂಪಾಯಿಗಳನ್ನು ಮೀರಕೂಡದು |
| | (ಖ) | ಮರಣ ಶಾಸನವನ್ನು ಹೊರತುಪಡಿಸಿ ಯಾವುದೇ ಲಿಖಿತದ ಮೂಲಕ ಯಾವುದೇ ಸ್ವತ್ತಿನ ಅಥವಾ ಅದಕ್ಕೆ ಸಂಬಂಧಿಸಿದ ರದ್ದಿಯಾತಿಯನ್ನು ಮಾಡಿರುವಾಗ<br>ವ್ಯವಸ್ಥಾಪನಾ ಪತ್ರ (ಸಂ.47) ಸಹ ನೋಡಿ. ಮೌಲ್ಯ ನಿರ್ಣಯ – ಬೆಲೆಕಟ್ಟುವಿಕೆಯನ್ನು ನೋಡಿ | ಲಿಖಿತದಲ್ಲಿ ಹೇಳಿರುವಂತೆ ಸಂಬಂಧಿಸಿದ ಸ್ವತ್ತಿನ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮೊತ್ತಕ್ಕಾಗಿನ ಬಂಧಪತ್ರ (ಸಂ.12) ಎಂಬಂತೆ ಅದೇ ಸುಂಕ ಆದರೆ, ಅದು ತೊಂಬತ್ತು ರೂಪಾಯಿಗಳನ್ನು ಮೀರಕೂಡದು |
| 55 | ಸರಕುಗಳಿಗಾಗಿ ವಾರಂಟ್ ಎಂದರೆ, ಯಾವುದೇ ಹಡಗುಕಟ್ಟೆ, ಸರಕುಗಳ ಉಗ್ರಾಣ ಅಥವಾ ಬಂದರು ಕಟ್ಟೆಯಲ್ಲಿ ಅಥವಾ ಅದರ ಮೇಲೆ ಇರುವ ಯಾವುದೇ ಸರಕುಗಳಲ್ಲಿನ ಸ್ವಾಮ್ಯಕ್ಕೆ ಅದರಲ್ಲಿ ಹೆಸರಿಸಿದ ಯಾವನೇ ವ್ಯಕ್ತಿ ಅಥವಾ ಅವನ ಹಸ್ತಾಂತರಿಗಳ | | ಒಂದು ರೂಪಾಯಿ ಐವತ್ತು ಪೈಸೆ |

| ಅನುಚ್ಛೇದ ಸಂಖ್ಯೆ | ಲಿಖಿತದ ವಿವರ | ಸರಿಯಾದ ಸ್ಟಾಂಪ್ ಸುಂಕ |
|---|---|---|
| 1 | 2 | 3 |
| | ಅಥವಾ ಅದರ ಧಾರಕನ ಸ್ವಾಮ್ಯವನ್ನು ಸಾಕ್ಷೀಕರಿಸುವ ಯಾವುದೇ ಲಿಖಿತ, ಅಂಥ ಲಿಖಿತಕ್ಕೆ ಅಂಥ ಸರಕುಗಳ ಅಭಿರಕ್ಷೆಯನ್ನು ಹೊಂದಿರಬಹುದಾದ ವ್ಯಕ್ತಿಯು ಅಥವಾ ಅವನ ಪರವಾಗಿ ರುಜು ಮಾಡಿರಬೇಕು ಅಥವಾ ಪ್ರಮಾಣೀಕರಿಸಿರಬೇಕು | |
| ಟಿಪ್ಪಣಿ: | ಸಂದೇಹಗಳ ನಿವಾರಣೆಗಾಗಿ ಹಸ್ತಾಂತರಣದಂತೆ ಅದೇ ಸುಂಕವನ್ನು ವಿಧಿಸಬಹುದಾದಂಥ ಮತ್ತು 20ನೇ ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಿದ ಬೇರೆ ಬೇರೆ ಪ್ರದೇಶಗಳಲ್ಲಿ ಇರುವ ಸ್ವತ್ತುಗಳಿಗೆ ಸಂಬಂಧಪಟ್ಟಂಥ 15, 27, 28, 30, 34, 41, 48, 49 ಮತ್ತು 53ನೇ ಅನುಚ್ಛೇದಗಳಲ್ಲಿ ಉಲ್ಲೇಖಿಸಿದಂಥ, ಲಿಖಿತಗಳಿಗೆ ಆ ಪ್ರದೇಶಗಳಿಗಾಗಿ ಅದರಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ವಿಧಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ. | |

**ಕರ್ನಾಟಕ ಸರ್ಕಾರ**

**ವಿಧಾಯೀ ಇಲಾಖೆ**
**ಕರ್ನಾಟಕ ಅಧಿನಿಯಮ 1958ರ ಸಂಖ್ಯೆ 8**

**(1958ರ ಮಾರ್ಚ್ ಇಪ್ಪತ್ತೊಂಬತ್ತನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)**
**ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1958**

**(1958ರ ಮಾರ್ಚ್ ಇಪ್ಪತ್ತೊಂಬತ್ತನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)**
**ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವ ಅಧಿನಿಯಮ**

**ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;**

ಭಾರತ ಗಣರಾಜ್ಯದ ಒಂಬತ್ತನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು:-** (1) ಈ ಅಧಿನಿಯಮವನ್ನು, ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1958 ಎಂದು ಕರೆಯತಕ್ಕುದು.

(2 ರಿಂದ 5ರವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ.)

**ಕರ್ನಾಟಕ ಸರ್ಕಾರ**
**ವಿಧಾಯೀ ಇಲಾಖೆ**
**ಕರ್ನಾಟಕ ಅಧಿನಿಯಮ 1962ರ ಸಂಖ್ಯೆ 29**

(1962ರ ಸೆಪ್ಟೆಂಬರ್ ಇಪ್ಪತ್ತೈದನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು.)

ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1962

(1962ರ ಸೆಪ್ಟೆಂಬರ್ ಇಪ್ಪತ್ತೈದನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿಮೂರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1962 ಎಂದು ಕರೆಯತಕ್ಕದ್ದು.

(2) ಇದು 1962ರ ಅಕ್ಟೋಬರ್ ಮೊದಲನೆಯ ದಿವಸದಂದು ಜಾರಿಗೆ ಬರತಕ್ಕದ್ದು.

(2 ರಿಂದ 22ರವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ).

**ಕರ್ನಾಟಕ ಅಧಿನಿಯಮ 1966ರ ಸಂಖ್ಯೆ 17**
**(1966ರ ಮೇ ಇಪ್ಪತ್ತಾರನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿತವಾಯಿತು.)**
**ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1966**

**(1966ರ ಮೇ ಆರನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿಮಾಡುವ ಅಧಿನಿಯಮ.

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1966 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(2 ರಿಂದ 6ರ ವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ).

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1971
## ರಾಷ್ಟ್ರಪತಿಯ ಅಧಿನಿಯಮದ ಸಂಖ್ಯೆ 1971ರ 17

ಭಾರತ ಗಣರಾಜ್ಯದ ಇಪ್ಪತ್ತೆರಡನೆಯ ವರ್ಷದಲ್ಲಿ ರಾಷ್ಟ್ರಪತಿಯಿಂದ ಅಧಿನಿಯಮಿತವಾಗಿದೆ.

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಕರ್ನಾಟಕ ರಾಜ್ಯ ವಿಧಾನ ಮಂಡಲ (ಅಧಿಕಾರಿಗಳ ಪ್ರತ್ಯಾಯೋಜನೆ) ಅಧಿನಿಯಮ, 1971 (1971ರ 23) 3ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ರಾಷ್ಟ್ರಪತಿಯು ಈ ಕೆಳಕಂಡಂತೆ ಅಧಿನಿಯಮಿಸಿದ್ದಾರೆ:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1971 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ).

## ಕರ್ನಾಟಕ ಅಧಿನಿಯಮ 1972ರ ಸಂಖ್ಯೆ 12

(1972ರ ಡಿಸೆಂಬರ್ ಇಪ್ಪತ್ತೊಂಬತ್ತನೆಯ ದಿನಾಂಕದ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)

ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1972

(1972ರ ಡಿಸೆಂಬರ್ ಇಪ್ಪತ್ತೂರನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೂರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1972 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ.)

## ಕರ್ನಾಟಕ ಅಧಿನಿಯಮ 1973ರ ಸಂಖ್ಯೆ 4

(1973ರ ಮಾರ್ಚ್ ಹತ್ತೊಂಬತ್ತನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)

ಕರ್ನಾಟಕ ಪುನಃ ಅಧಿನಿಯಮಿಸುವ ಅಧಿನಿಯಮ, 1973.

(1973ರ ಮಾರ್ಚ್ ಹತ್ತೊಂಬತ್ತನೆಯ ದಿವಸದಂದು ರಾಜ್ಯಪಾಲರ ಅನುಮತಿ ಪಡೆಯಿತು).

ರಾಷ್ಟ್ರಪತಿಯ ಕೆಲವು ಅಧಿನಿಯಮಗಳನ್ನು ಪುನಃ ಅಧಿನಿಯಮಿಸುವ ಅಧಿನಿಯಮ.

ಕರ್ನಾಟಕ ರಾಜ್ಯ ಸಂಬಂಧಪಟ್ಟಂತೆ ಭಾರತ ಸಂವಿಧಾನದ 356ನೆಯ ಅನುಚ್ಛೇದದ ಮೇರೆಗೆ ಭಾರತದ ರಾಷ್ಟ್ರಪತಿಯು ಹೊರಡಿಸಿದ 1971ರ ಮಾರ್ಚ್ ಇಪ್ಪತ್ತೇಳನೆಯ ದಿನಾಂಕದ ಉದ್ಘೋಷಣೆಯ ಪ್ರವರ್ತನೆಯ ಅವಧಿಯಲ್ಲಿ, ಕರ್ನಾಟಕ ಮನೋರಂಜನೆಗಳ ತೆರಿಗೆ ಅಧಿನಿಯಮ, 1958 (ಕರ್ನಾಟಕ ಅಧಿನಿಯಮ 1958ರ 30), ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957 (ಕರ್ನಾಟಕ ಅಧಿನಿಯಮ 1957ರ 35), ಕರ್ನಾಟಕ ಸ್ಟಾಂಪು ಅಧಿನಿಯಮ, 1957 (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) ಮತ್ತು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 25) ಇವುಗಳಿಗೆ ಅನುಕ್ರಮವಾಗಿ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯ ಅಧಿನಿಯಮ 1971ರ 14). ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯ ಅಧಿನಿಯಮ 1971ರ 16), ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯ ಅಧಿನಿಯಮ 1971ರ 17) ಮತ್ತು ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯ ಅಧಿನಿಯಮ 1971ರ 18) ಇವುಗಳ ಮೂಲಕ ಕೆಲವು ತಿದ್ದುಪಡಿಗಳನ್ನು ಮಾಡಿರುವುದರಿಂದ;

ಮತ್ತು ಸದರಿ ರಾಷ್ಟ್ರಪತಿಯ ಅಧಿನಿಯಮಗಳನ್ನು ಪುನಃ ಅಧಿನಿಯಮಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತನಾಲ್ಕನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಇದು ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು, ಪ್ರಾರಂಭ ಮತ್ತು ಅವಧಿ:–** (1) ಈ ಅಧಿನಿಯಮವನ್ನು ಕರ್ನಾಟಕ ಪುನಃ ಅಧಿನಿಯಮಿಸುವ ಅಧಿನಿಯಮ, 1973 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(3) ಇದು 1974ರ ಮಾರ್ಚ್ 31ರವರೆಗೆ ಮತ್ತು ಅದೂ ಸೇರಿದಂತೆ ಜಾರಿಯಲ್ಲಿರತಕ್ಕದ್ದು.

(2 ಮತ್ತು 3ನೇ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)

## ಕರ್ನಾಟಕ ಅಧಿನಿಯಮ 1974ರ ಸಂಖ್ಯೆ 17

(1974ರ ಮೇ ಇಪ್ಪತ್ತನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1974

(1974ರ ಮೇ ಹದಿನೆಂಟನೇ ದಿವಸದಂದು, ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (ಕರ್ನಾಟಕ ಅಧಿನಿಯಮ 1957ರ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1974 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ.)

## ಕರ್ನಾಟಕ ಅಧಿನಿಯಮ 1975ರ ಸಂಖ್ಯೆ 12

(1975ರ ಏಪ್ರಿಲ್ ಇಪ್ಪತ್ತೊಂಬತ್ತನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು).

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1975

(1975ರ ಏಪ್ರಿಲ್ ಇಪ್ಪತ್ತೊಂಬತ್ತನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು).

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ, ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (ಕರ್ನಾಟಕ ಅಧಿನಿಯಮ 1957ರ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತಾರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1975 ಎಂದು ಕರೆಯತಕ್ಕದ್ದು.

(2) (ಕ) ಈ ಪ್ರಕರಣ ಮತ್ತು 5ನೆಯ ಪ್ರಕರಣವನ್ನು ಹೊರತುಪಡಿಸಿ ಈ ಅಧಿನಿಯಮದ ಎಲ್ಲಾ ಪ್ರಕರಣಗಳು 1975ರ ಮೇ ಮೊದಲನೆಯ ದಿವಸದಂದು ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬರತಕ್ಕದ್ದು.

(ಖ) 5ನೇ ಪ್ರಕರಣವು ಬೆಂಗಳೂರು ನಗರ, ಹುಬ್ಬಳ್ಳಿ–ಧಾರವಾಡ ನಗರ ಮತ್ತು ಮೈಸೂರು, ಮಂಗಳೂರು, ಬೆಳಗಾಂವಿ, ಕಲ್ಬುರ್ಗಿ, ಬಳ್ಳಾರಿ, ದಾವಣಗೆರೆ, ಬಿಜಾಪುರ, ಶಿವಮೊಗ್ಗ ಮತ್ತು ಭದ್ರಾವತಿ ನಗರ ಪೌರಸಭೆಗಳಲ್ಲಿ ಸದರಿ ದಿನಾಂಕದಂದು ಮತ್ತು ರಾಜ್ಯದ ಇತರ ಪ್ರದೇಶಗಳಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

(2 ರಿಂದ 8ನೇ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)

## ಕರ್ನಾಟಕ ಅಧಿನಿಯಮ 1976ರ ಸಂಖ್ಯೆ 37

**(1976ರ ಮೇ ಮೂರನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)**

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1976

**(1976ರ ಏಪ್ರಿಲ್ ಇಪ್ಪತ್ತೊಂಬತ್ತನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ, ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (ಕರ್ನಾಟಕ ಅಧಿನಿಯಮ 1957ರ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) 2ನೆಯ ಪ್ರಕರಣದ (i) ಮತ್ತು (iii)ನೇ ಖಂಡಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಉಳಿದ ಉಪಬಂಧಗಳು 1976ರ ಏಪ್ರಿಲ್ ಮೊದಲನೆಯ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2ನೆಯ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ.)

## ಕರ್ನಾಟಕ ಅಧಿನಿಯಮ 1979ರ ಸಂಖ್ಯೆ 9

**(1979ರ ಫೆಬ್ರವರಿ ಇಪ್ಪತ್ತೆರಡನೆಯ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)**

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1979

(1979ರ ಫೆಬ್ರವರಿ ಇಪ್ಪತ್ತನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು).

ಇದರಲ್ಲಿ, ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1979 ಎಂದು ಕರೆಯತಕ್ಕದ್ದು.

(2) ಇದು 1978ರ ಡಿಸೆಂಬರ್ ಇಪ್ಪತ್ತೇಳನೆಯ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ.)

**3. ಕರ್ನಾಟಕ ಅಧ್ಯಾದೇಶ 1978ರ ಸಂಖ್ಯೆ 14ರ ನಿರಸನ:** (1) ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 1978ನ್ನು (ಕರ್ನಾಟಕ ಅಧ್ಯಾದೇಶ 1978ರ ಸಂಖ್ಯೆ 14) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಇದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ಆದೇಶ, ಪರಿಯೋಜನೆ, ನಿಯಮ, ನಮೂನೆ ಅಥವಾ ಉಪವಿಧಿಯನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಕೈಗೊಳ್ಳಲಾದುದು, ಮಾಡಲಾದುದು ಅಥವಾ ಹೊರಡಿಸಲಾದುದು ಎಂದು ಭಾವಿಸತಕ್ಕುದು. ನೇಮಕಾತಿ ಮತ್ತು ಅವುಗಳು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ಆದೇಶ, ಪರಿಯೋಜನೆ, ನಿಯಮ, ನಮೂನೆ ಅಥವಾ ಉಪ–ವಿಧಿಯ ಮೂಲಕ ರದ್ದುಗೊಳಿಸಿದ ಹೊರತು ಮತ್ತು ಅಲ್ಲಿಯವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

## ಕರ್ನಾಟಕ ಅಧಿನಿಯಮ 1979ರ ಸಂಖ್ಯೆ 21

## (1979ರ ಮಾರ್ಚ್ ಮೂವತ್ತೊಂದನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು).

## ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1979

## (1979ರ ಮಾರ್ಚ್ ಮೂವತ್ತೊಂದನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂತೆ ತೆರಿಗೆ ನಿರ್ಧರಣೆ ಮತ್ತು ಇತರ ಕೆಲವು ಕಾನೂನುಗಳನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ, ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂತೆ ತೆರಿಗೆ ನಿರ್ಧರಣೆ ಮತ್ತು ಇತರ ಕಾನೂನುಗಳಿಗೆ ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1978 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(2 ರಿಂದ 9ರವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ).

**10. ಕರ್ನಾಟಕ ಅಧಿನಿಯಮ 1975ರ ಸಂಖ್ಯೆ 34ರ ನಿರಸನ:–** ಕರ್ನಾಟಕ ಪೌರಸಭೆಗಳ (ಚುನಾವಣೆಗಳ ಮುಂದೂಡುವಿಕೆ) ಅಧಿನಿಯಮ, 1975ನ್ನು (ಕರ್ನಾಟಕ ಅಧಿನಿಯಮ 1975ರ ಸಂಖ್ಯೆ 34) 1979ರ ಮಾರ್ಚ್ ಹದಿನಾಲ್ಕನೆಯ ದಿವಸದಂದು ಮತ್ತು ಅಂದಿನಿಂದ ಪರಿಣಾಮವುಳ್ಳಂತೆ ನಿರಸನಗೊಳ್ಳತಕ್ಕದ್ದು ಮತ್ತು ನಿರಸನಗೊಳಿಸಿರುವುದಾಗಿ ಭಾವಿಸತಕ್ಕದ್ದು:

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (ಕರ್ನಾಟಕ ಅಧಿನಿಯಮ 1899ರ ಸಂಖ್ಯೆ 3) 6ನೆಯ ಪ್ರಕರಣದ ಉಪಬಂಧಗಳು ಅಂಥ ನಿರಸನಕ್ಕೆ ಅನ್ವಯವಾಗತಕ್ಕದ್ದಲ್ಲ ಮತ್ತು ಅದರ 3ನೇ

ಪ್ರಕರಣದ ಪರಂತುಕದ ಮೇರೆಗೆ ಅಧಿಕಾರದಲ್ಲಿ ಮುಂದುವರಿದಿದ್ದ ಸದಸ್ಯರು ಮತ್ತು ಆಡಳಿತಗಾರರು ಸದರಿ ದಿನಾಂಕದಿಂದ ಪರಿಣಾಮವುಳ್ಳಂತೆ ಅಂಥ ಪದವನ್ನು ಧಾರಣ ಮಾಡುವುದು ನಿಂತು ಹೋಗತಕ್ಕದ್ದು.

**11. ಉಳಿಸುವಿಕೆಗಳು:–** (1) ಸಂದೇಹಗಳ ನಿವಾರಣೆಗಾಗಿ ಈ ಮೂಲಕ–

(i) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ, ಕರ್ನಾಟಕ ಗ್ರಾಮ ಪಂಚಾಯತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ, 1959 (ಕರ್ನಾಟಕ ಅಧಿನಿಯಮ 1959ರ ಸಂಖ್ಯೆ 10), ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ ಸಂಖ್ಯೆ 22) ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1977ರ ಸಂಖ್ಯೆ 14) ಇವುಗಳ ಮೇರೆಗೆ ಯಾವುದೇ ಆಕ್ಟ್ರಾಯನ್ನು ವಿಧಿಸತಕ್ಕದ್ದಲ್ಲ;

(ii) ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (ಕರ್ನಾಟಕ ಅಧಿನಿಯಮ 1899ರ ಸಂಖ್ಯೆ 3) ಉಪಬಂಧಗಳು, (i) ನೆಯ ಖಂಡದಲ್ಲಿ ಉಲ್ಲೇಖಿಸಲಾಗಿರುವ ಅಧಿನಿಯಮಗಳಲ್ಲಿನ ಆಕ್ಟ್ರಾಯ್‌ಗೆ ಸಂಬಂಧಪಟ್ಟ ಉಪಬಂಧಗಳ ನಿರಸನಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದು.

(2) ಒಂದು ಮೋಟಾರು ವಾಹನಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದ ಮೇರೆಗೆ ಒಂದು ವರ್ಷಕ್ಕೆ, ಅರ್ಧ ವರ್ಷಕ್ಕೆ ಅಥವಾ ಮೂರು ತಿಂಗಳಿಗೆ ಸಂದಾಯ ಮಾಡಬೇಕಾದ ತೆರಿಗೆಯನ್ನು, ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1979ರ ಪ್ರಾರಂಭಕ್ಕೆ ಮುಂಚೆ ಸಂದಾಯ ಮಾಡಿರುವಲ್ಲಿ ಆಗ ಅದಕ್ಕಾಗಿ ತೆರಿಗೆಯ ನಿರ್ಧರಣೆ ಕಾರ್ಡನ್ನು ಕೊಟ್ಟಿದ್ದಾಗ್ಯೂ, 4ನೇ ಪ್ರಕರಣದ ಮೇರೆಗೆ ಸದರಿ ವರ್ಷಕ್ಕೆ, ಅರ್ಧ ವರ್ಷಕ್ಕೆ ಅಥವಾ ಮೂರು ತಿಂಗಳಿಗೆ ಸಂದಾಯ ಮಾಡಬೇಕಾದ ಪರಿಷ್ಕೃತ ತೆರಿಗೆ ಮತ್ತು ಹೆಚ್ಚುವರಿ ಅಧಿಭಾರವನ್ನು ಸದರಿ ದಿನಾಂಕದಿಂದ ಅರವತ್ತು ದಿವಸಗಳೊಳಗಾಗಿ ಸಂದಾಯ ಮಾಡತಕ್ಕದ್ದು.

**12. ತೊಂದರೆಗಳನ್ನು ನಿವಾರಿಸಲು ಅಧಿಕಾರ:–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅದಕ್ಕೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ಮಾಡಬಹುದು.

## ಕರ್ನಾಟಕ ಅಧಿನಿಯಮ 1983ರ ಸಂಖ್ಯೆ 16

(1983ರ ಮೇ ಮೂವತ್ತನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1963

**(1983ರ ಮೇ ಮೂವತ್ತನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ, ಇನ್ನ ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1983 ಎಂದು ಕರೆಯತಕ್ಕದ್ದು.

(2) ಇದು 1982ರ ಡಿಸೆಂಬರ್ ಇಪ್ಪತ್ತೇಳನೆಯ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ).

**3. ನಿರಸನ ಮತ್ತು ಉಳಿಸುವಿಕೆಗಳು:-** (1) ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 1983ನ್ನು (ಕರ್ನಾಟಕ ಅಧ್ಯಾದೇಶ 1983ರ 6) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

## ಕರ್ನಾಟಕ ಅಧಿನಿಯಮ 1980ರ ಸಂಖ್ಯೆ 15

(1980ರ ಏಪ್ರಿಲ್ ಹದಿನೇಳನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1980

(1980ರ ಏಪ್ರಿಲ್ ಹದಿನೈದನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು).

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ, ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೊಂದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1980 ಎಂದು ಕರೆಯತಕ್ಕದ್ದು.

(2) ಇದು 1979ರ ಡಿಸೆಂಬರ್ ಮೂರನೆಯ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2 ಮತ್ತು 3ನೇ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)

**4. ಕರ್ನಾಟಕ ಅಧ್ಯಾದೇಶ 1979ರ ಸಂಖ್ಯೆ 22ರ ನಿರಸನ:-** (1) ಕರ್ನಾಟಕ ಸ್ಟಾಂಪು (ಎರಡನೆಯ ತಿದ್ದುಪಡಿ) ಅಧ್ಯಾದೇಶ, 1979ನ್ನು (ಕರ್ನಾಟಕ ಅಧ್ಯಾದೇಶ 1979ರ ಸಂಖ್ಯೆ 22) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಕರ್ನಾಟಕ ಅಧಿನಿಯಮ 1981ರ ಸಂಖ್ಯೆ 16

**(1981ರ ಏಪ್ರಿಲ್ ಏಳನೆಯ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)**

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1981

**(1981ರ ಏಪ್ರಿಲ್ ಆರನೆಯ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (ಕರ್ನಾಟಕ ಅಧಿನಿಯಮ 1957ರ 34) ಇನ್ನಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆರಡನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1981 ಎಂದು ಕರೆಯತಕ್ಕದ್ದು.

2. ಇದು 1980ರ ಸೆಪ್ಟೆಂಬರ್ ಹತ್ತನೆಯ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**3. ನಿರಸನ ಮತ್ತು ಉಳಿಸುವಿಕೆಗಳು:–** (1) ಕರ್ನಾಟಕ ಸ್ಟಾಂಪು (ಎರಡನೆಯ ತಿದ್ದುಪಡಿ) ಅಧ್ಯಾದೇಶ, 1980ನ್ನು (ಕರ್ನಾಟಕ ಅಧ್ಯಾದೇಶ 1980ರ 6) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಕರ್ನಾಟಕ ಸ್ಟಾಂಪು ನಿಯಮಗಳು, 1958

## ವಿಷಯಗಳ ಅನುಕ್ರಮಣಿಕೆ

### ಅಧ್ಯಾಯ – I

### ಪ್ರಾರಂಭಿಕ

**ನಿಯಮಗಳು**


1. ಚಿಕ್ಕ ಹೆಸರು
2. ಪ್ರಾರಂಭ
3. ಪರಿಭಾಷೆಗಳು
4. ಸ್ಟಾಂಪುಗಳ ವಿವರಣೆ



### ಅಧ್ಯಾಯ – II


5. ಮುದ್ರೆ ಹಾಕಲಾದ ಸ್ಟಾಂಪುಗಳು

6. ಕಾಗದದ ಒಂದೇ ಹಾಳೆಯು ಸಾಕಾಗದಿರುವಲ್ಲಿ ಉಪಬಂಧಗಳು

6ಕ. ಮುದ್ರೆ ಹಾಕಲಾದ ಸ್ಟಾಂಪನ್ನು ಹೊಂದಿರುವ ಕಾಗದವನ್ನು ಕೊಡುವುದು

7. ಸ್ಟಾಂಪುಗಳು

8. ಯುಕ್ತ ಅಧಿಕಾರಿ

9. ಕೆಲವು ಸಂದರ್ಭಗಳಲ್ಲಿ ಯುಕ್ತ ಅಧಿಕಾರಿಯು ಲೇಬಲ್ಲುಗಳನ್ನು ಅಂಟಿಸುವುದು ಮತ್ತು ಅವುಗಳ ಮೇಲೆ ಮುದ್ರೆ ಹಾಕುವುದಕ್ಕೆ ಅವಕಾಶ ಮಾಡಲಾಗಿದೆ

9ಕ. ಬರದುಕೊಟ್ಟಿರದ ಲಿಖಿತಗಳ ಮುದ್ರಿತ ನಮೂನೆಗಳ ಮೇಲೆ ದಶಮಾಂಶ ನಾಣ್ಯದ ಪದ್ಧತಿಯಲ್ಲಿ ಲೇಬಲುಗಳನ್ನು ಮುದ್ರಿಸುವುದು

10. ಲೇಬಲುಗಳನ್ನು ಅಂಟಿಸುವ ಮತ್ತು ಮುದ್ರಿಸುವ ವಿಧಾನ

11. ಕೆಲವು ಲಿಖಿತಗಳಿಗೆ ಮುದ್ರೆ ಹಾಕಲಾದ ಲೇಬಲುಗಳನ್ನು ಹಚ್ಚತಕ್ಕದ್ದು

11ಕ. ಸುಂಕಗಳ ಬಗ್ಗೆ ರಾಜಿ ಅಥವಾ ಒಟ್ಟುಗೂಡಿಸುವುದು


### ಅಧ್ಯಾಯ – III

### ಅಂಟಿಸುವ ಸ್ಟಾಂಪುಗಳು


12. ಕೆಲವು ಲಿಖಿತ ಪತ್ರಗಳ ಮೇಲೆ ಅಂಟಿಸುವ ಸ್ಟಾಂಪುಗಳ ಉಪಯೋಗ

13. ಹತ್ತು ಪೈಸೆ ಸುಂಕವನ್ನು ಸೂಚಿಸುವ, ಅಂಟಿಸುವ ಸ್ಟಾಂಪುಗಳು ಅಥವಾ ಸ್ಟಾಂಪುಗಳು

14 ಕೆಲವು ಸಂದರ್ಭಗಳಲ್ಲಿ ವಿಶೇಷ ಅಂಟಿಸುವ ಸ್ಟಾಂಪುಗಳನ್ನು ಉಪಯೋಗಿಸಬೇಕು

## ಅಧ್ಯಾಯ – III ಕ

## ಲೈಸೆನ್ಸುಗಳು

14ಕ. ಸ್ಟಾಂಪುಗಳು ಮತ್ತು ಸ್ಟಾಂಪು ಹಾಕಿದ ಕಾಗದಗಳ ಮಾರಾಟ

14ಖ. ಖಜಾನೆ ಅಧಿಕಾರಿಗಳು ಪದನಿಮಿತ್ತ ಸ್ಟಾಂಪ್‌ವೆಂಡರುಗಳಾಗಿರತಕ್ಕದ್ದು

14ಗ. ಲೈಸೆನ್ಸುಗಳನ್ನು ಮಂಜೂರ್ಮಾಡುವ ಪ್ರಾಧಿಕಾರಿ

14ಘ. ಲೈಸೆನ್ಸಿನ ಮಂಜೂರಾತಿ

14ಙ. ಲೈಸೆನ್ಸಿನ ಅಮಾನತು ಅಥವಾ ರದ್ದಿಯಾತಿ

14ಚ. ಲೈಸೆನ್ಸುದಾರನ ಕರ್ತವ್ಯಗಳು

14ಛ. ಲೈಸೆನ್ಸುದಾರನ ಪರಿಶ್ರಮ ಧನ

14ಜ. ಸ್ಟಾಂಪುಗಳನ್ನು ಹಿಂದಿರುಗಿಸುವುದು

14ಝ. ಪರಿಶೀಲನೆ

## ಅಧ್ಯಾಯ – IV

## ಸಂಕೀರ್ಣ

15. ಸರಿಯಲ್ಲದ ವಿವರಣೆಯ ಸ್ಟಾಂಪುಗಳನ್ನು ಉಪಯೋಗಿಸಿದಂಥ ಪ್ರಕರಣಗಳಿಗಾಗಿ ಉಪಬಂಧಗಳು

15ಕ. ಸ್ವತ್ತಿನ ಮೌಲ್ಯವನ್ನು ನೋಡತಕ್ಕದ್ದು

16. ಮರುಪಾವತಿ ಅಥವಾ ನವೀಕರಣದ ಕ್ಲೇಮಿನ ಸಂದರ್ಭಗಳ ಬಗೆಗಿನ ಸಾಕ್ಷ್ಯ

17. ಕೆಟ್ಟುಹೋದ ಅಥವಾ ದುರುಪಯೋಗಪಡಿಸಿದ ಸ್ಟಾಂಪುಗಳಿಗೆ ಸಂಬಂಧಿಸಿದಂತೆ ರಿಯಾಯಿತಿಗಳ ಸಂದಾಯ

18. 16ನೇ ಪ್ರಕರಣದ ಮೇರೆಗೆ ಅರ್ಜಿ ಮತ್ತು ಸ್ಟಾಂಪ್ ಸುಂಕದ ಸಂದಾಯವನ್ನು ಸೂಚಿಸುವ ರೀತಿ

19. ಕೆಲವು ಲಿಖಿತಗಳಲ್ಲಿ ಒದಗಿಸಬೇಕಾದ ವಿವರಗಳು

ಪರಿಶಿಷ್ಟಗಳು

## ಅಧಿಸೂಚನೆ

## ಸಂ. ಆರ್‌ಡಿ 6 ಎಸ್‌ಪಿಎಸ್ 58, ಬೆಂಗಳೂರು ದಿನಾಂಕ 1.4.1958

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) 10, 18, 36, 47 ಮತ್ತು 68ನೇ ಪ್ರಕರಣಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ.

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು:–** ಈ ನಿಯಮಗಳನ್ನು ಕರ್ನಾಟಕ ಸ್ಟಾಂಪು ನಿಯಮಗಳು, 1958 ಎಂದು ಕರೆಯತಕ್ಕದ್ದು.

**2. ಪ್ರಾರಂಭ:–** ಇವು ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**3. ಪರಿಭಾಷೆಗಳು:–** ಈ ನಿಯಮಗಳಲ್ಲಿ

(ಕ) "ಅಧಿನಿಯಮ" ಎಂದರೆ ಕರ್ನಾಟಕ ಸ್ಟಾಂಪು ಅಧಿನಿಯಮ, 1957 (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) ;

(ಖ) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ;

(ಗ) "ಅನುಸೂಚಿ" ಎಂದರೆ ಅಧಿನಿಯಮದ ಅನುಸೂಚಿ;

(ಘ) "ಸ್ಟಾಂಪುಗಳ ಸೂಪರಿಂಟೆಂಡೆಂಟ್" ಎಂದರೆ ಸ್ಟಾಂಪುಗಳ ಸೂಪರಿಂಟೆಂಡೆಂಟ್, ಕರ್ನಾಟಕ, ಬೆಂಗಳೂರು ಮತ್ತು ಸ್ಟಾಂಪುಗಳ ಸೂಪರಿಂಟೆಂಡೆಂಟನ ಪ್ರಕಾರ್ಯಗಳನ್ನು ನೆರವೇರಿಸಲು ರಾಜ್ಯ ಸರ್ಕಾರವು ನೇಮಕ ಮಾಡಿದ ಇತರ ಯಾವನೇ ಅಧಿಕಾರಿ;

(ಙ) "ಸರ್ಕಾರ" ಎಂದರೆ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ಕರ್ನಾಟಕ ಸರ್ಕಾರ".

**4. ಸ್ಟಾಂಪುಗಳ ವಿವರಣೆ:–** (1) ಅಧಿನಿಯಮದ ಅಥವಾ ಈ ನಿಯಮಗಳ ಮೂಲಕ ಅನ್ಯಥಾ ಉಪಬಂಧಿಸಿದಂತೆ ಹೊರತು,–

(i) ಯಾವುದೇ ಲಿಖಿತಕ್ಕೆ ವಿಧಿಸಬಹುದಾದಂಥ ಎಲ್ಲಾ ಸುಂಕಗಳನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯವನ್ನು ಸರ್ಕಾರವು, ಈ ಅಧಿನಿಯದ ಉದ್ದೇಶಗಳಿಗಾಗಿ ಹೊರಡಿಸಿರುವ ಸ್ಟಾಂಪುಗಳ ಮೂಲಕ ಅಂಥ ಲಿಖಿತಗಳ ಮೇಲೆ ಸೂಚಿಸತಕ್ಕದ್ದು, ಮತ್ತು

---

1. ಈ ನಿಯಮಗಳು 1958ರ ಜೂನ್ ಒಂದರಂದು ಜಾರಿಗೆ ಬಂದಿವೆ. (12.5.1958ನೇ ದಿನಾಂಕದ ಸಂ. ಆರ್‌ಡಿ (ಎ) ಎಸ್‌ಪಿಎಸ್ 58 ಈ ಅಧಿಸೂಚನೆಯನ್ನು ನೋಡಿ)

(ii) ಯಾವ ಸ್ಟಾಂಪನ್ನು ಅದರ ಮೇಲಿನ ಯಾವುದೇ ಪದ ಅಥವಾ ಪದಗಳ ಮೂಲಕ ಯಾವುದೇ ವಿಶಿಷ್ಟ ಬಗೆಯ ಲಿಖಿತಕ್ಕೆ ವಿನಿಯೋಗಿಸಲಾಗಿದೆಯೋ ಆ ಸ್ಟಾಂಪನ್ನು ಯಾವುದೇ ಇತರ ಬಗೆಯ ಲಿಖಿತಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(2) ಲಿಖಿತಗಳಿಗೆ ವಿಧಿಸಬಹುದಾದಂಥ ಸುಂಕದ ಸಂದಾಯವನ್ನು ಸೂಚಿಸುವುದಕ್ಕಾಗಿ ಎರಡು ಬಗೆಯ ಸ್ಟಾಂಪುಗಳು ಇರತಕ್ಕದ್ದು, ಎಂದರೆ:–

(ಕ) ಮುದ್ರೆ ಹಾಕಲಾದ ಸ್ಟಾಂಪುಗಳು, ಮತ್ತು

(ಖ) ಅಂಟಿಕೊಳ್ಳುವ ಸ್ಟಾಂಪುಗಳು

(3) ಎಲ್ಲಾ ಸ್ಟಾಂಪುಗಳು ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಮಾದರಿಯಲ್ಲಿರತಕ್ಕದ್ದು. ಮತ್ತು ಕರ್ನಾಟಕ ರಾಜ್ಯದಲ್ಲಿನ ಯಾವುದೇ ರಾಜ್ಯ ಖಜಾನೆಯಿಂದ (ಅಥವಾ ಈ ನಿಯಮಗಳ ಮೇರೆಗೆ ಲೈಸೆನ್ಸ್‌ನ್ನು ಪಡೆದಿರುವಂಥ ವ್ಯಕ್ತಿಯಿಂದ) ಖರೀದಿಸಿದಂಥವುಗಳು ಮಾತ್ರ ಆಗಿರತಕ್ಕದ್ದು.

## ಅಧ್ಯಾಯ – II

**5. ಮುದ್ರೆ ಹಾಕಲಾದ ಸ್ಟಾಂಪುಗಳು:–** ಸುಂಕವನ್ನು ವಿಧಿಸಬಹುದಾದ ಪ್ರತಿಯೊಂದು ಲಿಖಿತವನ್ನು ಈ ಅಧಿನಿಯಮದ 11ನೇ ಪ್ರಕರಣದ ಮೂಲಕ ಅಥವಾ ಈ ನಿಯಮಗಳ ಮೂಲಕ ಉಪಬಂಧಿಸಿದಂತೆ ಹೊರತು, ಸರಿಯಾದ ಮೌಲ್ಯದ ಸ್ಟಾಂಪನ್ನು ಕೆತ್ತಲಾದ ಅಥವಾ ಉಬ್ಬಚ್ಚು ಮಾಡಿದ ಕಾಗದದ ಮೇಲೆ ಬರೆಯತಕ್ಕದ್ದು.

**6. ಕಾಗದದ ಒಂದೇ ಹಾಳೆಯು ಸಾಕಾಗದಿರುವಲ್ಲಿ ಉಪಬಂಧಗಳು:–** (1) ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ಸುಂಕದ ಮೊಬಲಗನ್ನು ಸರಿದೂಗಿಸಲು ಸ್ಟಾಂಪುಗಳನ್ನು ಕೆತ್ತಿರುವ ಅಥವಾ ಉಬ್ಬಚ್ಚು ಮಾಡಿರುವಂಥ ಕಾಗದದ ಎರಡು ಅಥವಾ ಹೆಚ್ಚಿನ ಹಾಳೆಗಳನ್ನು ಉಪಯೋಗಿಸಿರುವಲ್ಲಿ, ಅಂಥ ಲಿಖಿತದ ಭಾಗವನ್ನು, ಹಾಗೆ ಉಪಯೋಗಿಸಿದ ಪ್ರತಿಯೊಂದು ಹಾಳೆಯ ಮೇಲೆ ಬರೆಯತಕ್ಕದ್ದು.

(2) ಮುದ್ರೆ ಹಾಕಲಾದ ಸ್ಟಾಂಪನ್ನು ಹೊಂದಿರುವ ಕಾಗದದ ಒಂದೇ ಹಾಳೆಯು, ಸ್ಟಾಂಪನ್ನು ಹೊಂದಿರುವಂಥ ಕಾಗದದ ಪಕ್ಕದ ಮೇಲೆ ಇಡೀ ಲಿಖಿತವನ್ನು ಬರೆಯಲು ಸಾಕಷ್ಟಿಲ್ಲದಿರುವಲ್ಲಿ, ಅಂಥ ಲಿಖಿತವನ್ನು ಪೂರ್ಣವಾಗಿ ಬರೆಯಲು ಅವಶ್ಯವಾಗಬಹುದಾದಷ್ಟು ಸಾದಾ ಕಾಗದವನ್ನು ಅದಕ್ಕೆ ಸೇರಿಸಿಕೊಳ್ಳಬಹುದು:

ಪರಂತು, ಅಂಥ ಪ್ರತಿಯೊಂದು ಸಂದರ್ಭದಲ್ಲಿ ಲಿಖಿತದ ಗಣನೀಯ ಭಾಗವನ್ನು ಹಾಗೆ ಸೇರಿಸಿದ ಸಾದಾ ಕಾಗದದ ಮೇಲೆ ಯಾವುದೇ ಭಾಗವನ್ನು ಬರೆಯುವುದಕ್ಕೆ ಮುಂಚೆ, ಸ್ಟಾಂಪನ್ನು ಹೊಂದಿರುವಂಥ ಹಾಳೆಯ ಮೇಲೆ ಬರೆಯತಕ್ಕದ್ದು.

(ಕ) ಮುದ್ರೆ ಹಾಕಲಾದ ಸ್ಟಾಂಪನ್ನು ಹೊಂದಿರುವ ಕಾಗದವನ್ನು ಕೊಡುವುದು:–

(1) ನಿರ್ದಿಷ್ಟ ಮೌಲ್ಯದ ಮುದ್ರೆ ಹಾಕಲಾದ ಸ್ಟಾಂಪನ್ನು ಹೊಂದಿರುವ ಕಾಗದದ ಒಂದು ಹಾಳೆಯನ್ನು ಕೊಡುವುದಕ್ಕಾಗಿ ಖಜಾನೆ ಅಧಿಕಾರಿಗೆ ಅಥವಾ ಲೈಸೆನ್ಸ್‌ದಾರನಿಗೆ ಅರ್ಜಿಯನ್ನು ಮಾಡಿಕೊಂಡಾಗ, ಆ ಖಜಾನೆ ಅಧಿಕಾರಿ ಅಥವಾ ಲೈಸೆನ್ಸ್‌ದಾರನು ಸಾಧ್ಯವಿರುವಲ್ಲಿ ಆ ಮೌಲ್ಯದ ಮುದ್ರೆ ಹಾಕಲಾದ ಸ್ಟಾಂಪನ್ನು ಹೊಂದಿರುವ ಒಂದು ಹಾಳೆಯನ್ನು ಕೊಡತಕ್ಕದ್ದು. ಅಂಥ ಹಾಳೆಯು ಲಭ್ಯವಿಲ್ಲದಿದ್ದರೆ ಅಗತ್ಯ ಮೌಲ್ಯವನ್ನು ಸರಿದೂಗಿಸಲು ಬೇಕಾಗುವಂಥ ಕನಿಷ್ಠ ಸಂಖ್ಯೆಯ ಹಾಳೆಗಳನ್ನು ಮಾತ್ರ ಕೊಡತಕ್ಕದ್ದು. ಅಂಥ ಸಂದರ್ಭಗಳಲ್ಲಿ ಆ ಖಜಾನೆ ಅಧಿಕಾರಿ ಅಥವಾ ಲೈಸೆನ್ಸ್‌ದಾರನು ಅಂಥ ಪ್ರತಿಯೊಂದು ಹಾಳೆಯ ಮೇಲೆ ಅಗತ್ಯ ಮೌಲ್ಯದ ಅಂಥ

ಹಾಳೆಯು ಲಭ್ಯವಿಲ್ಲವೆಂದು ಮತ್ತು ಅಗತ್ಯವಾದ ಕನಿಷ್ಠ ಸಂಖ್ಯೆಯ ಅಂಥ ಹಾಳೆಗಳನ್ನು ಮಾತ್ರ ಕೊಡಲಾಗಿದೆ ಎಂದು ಪ್ರಮಾಣೀಕರಿಸತಕ್ಕದ್ದು.

(2) ಕೇಳಲಾದ ಅಂಥ ಹಾಳೆಯ ಮೌಲ್ಯವು, ಆ ಲೈಸೆನ್ಸ್‌ದಾರನು ಮಾರಾಟ ಮಾಡಲು ಲೈಸೆನ್ಸ್ ಪಡೆದಿರುವಂಥ ಗರಿಷ್ಠ ಮೌಲ್ಯದ ಅಂಥ ಹಾಳೆಗಿಂತ ಹೆಚ್ಚಾಗಿರುವಲ್ಲಿ, ಆ ಲೈಸೆನ್ಸ್‌ದಾರನು, ಕಡಿಮೆ ಮೌಲ್ಯದ ಅಂಥ ಹಾಳೆಗಳನ್ನು ಅಗತ್ಯ ಮೌಲ್ಯದಷ್ಟಕ್ಕೆ ಮಾರಾಟ ಮಾಡತಕ್ಕದ್ದಲ್ಲ.

**7. ಸ್ಟಾಂಪುಗಳು:–** ಈ ಅಧಿನಿಯಮದ ಮೇರೆಗೆ ಹದಿನೈದು ಪೈಸೆ ಅಥವಾ ಅನುಸೂಚಿಯ 16 ಮತ್ತು 31ನೇ ಅನುಚ್ಛೇದದ ಮೇರೆಗೆ ಮೂವತ್ತು ಪೈಸೆ ಸುಂಕವನ್ನು ವಿಧಿಸಬಹುದಾದ ಯಾವುದೇ ಲಿಖಿತದ ಮೇಲಿನ ಸುಂಕವನ್ನು ಸ್ಟಾಂಪುಗಳ ಸೂಪರಿಂಟೆಂಡೆಂಟನು ಅಂಥ ಲಿಖಿತದ ಸ್ಥೂಲ ನಮೂನೆಯ ಮೇಲೆ ಹಾಕಿದ ಬಣ್ಣದ ಮುದ್ರೆಯ ಮೂಲಕ ಸೂಚಿಸಬಹುದು.

**8. ಯುಕ್ತ ಅಧಿಕಾರಿ:–** ಸ್ಟಾಂಪುಗಳ ಸೂಪರಿಂಟೆಂಡೆಂಟನು ಮತ್ತು ಈ ಬಗ್ಗೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಅಧಿಕಾರಿಗಳನ್ನು, ಲೇಬಲ್ಲುಗಳನ್ನು ಮತ್ತು ಅವುಗಳ ಮೇಲೆ ಮುದ್ರೆ ಹಾಕಲು ಶಕ್ತಗೊಳಿಸಲಾಗಿದೆ ಮತ್ತು ಅಧಿನಿಯಮದ ಮತ್ತು ಈ ನಿಯಮಗಳ ಉದ್ದೇಶಗಳಿಗಾಗಿ ಅವರನ್ನು "ಯುಕ್ತ ಅಧಿಕಾರಿ" ಎಂದು ಭಾವಿಸತಕ್ಕದ್ದು.

**9. ಕೆಲವು ಸಂದರ್ಭಗಳಲ್ಲಿ ಯುಕ್ತ ಅಧಿಕಾರಿಯು ಲೇಬಲ್ಲುಗಳನ್ನು ಅಂಟಿಸುವುದು ಮತ್ತು ಅವುಗಳ ಮೇಲೆ ಮುದ್ರೆ ಹಾಕುವುದಕ್ಕೆ ಅವಕಾಶ ಮಾಡಲಾಗಿದೆ:–** (1) ಕ ಪರಿಶಿಷ್ಟದಲ್ಲಿ ನಮೂದಿಸಿದ ಯಾವುದೇ ಲಿಖಿತದ ಮತ್ತು ಅದರ ಪ್ರತಿರೂಪಗಳ ಸಂದರ್ಭದಲ್ಲಿ ಯುಕ್ತ ಅಧಿಕಾರಿಯು ಲೇಬಲ್ಲುಗಲನ್ನು ಅಂಟಿಸಬಹುದು ಮತ್ತು ಅವುಗಳ ಮೇಲೆ ಮುದ್ರೆಯನ್ನು ಹಾಕಬಹುದು.

(2) ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಬರೆದಿರುವಾಗ 'ಖ' ಪರಿಶಿಷ್ಟದಲ್ಲಿ ನಮೂದಿಸಿದ ಯಾವುದೇ ಲಿಖಿತ, ಮತ್ತು ಇತರ ಯಾವುದೇ ಭಾಷೆಯಲ್ಲಿ ಬರೆದಿದ್ದರೆ, ಇಂಗ್ಲೀಷ್ ಅಥವಾ ಕನ್ನಡ ಅನುವಾದದೊಂದಿಗೆ ಇರುವ ಸಂದರ್ಭದಲ್ಲಿ ಯುಕ್ತ ಅಧಿಕಾರಿಯು ಲೇಬಲ್ಲುಗಳನ್ನು ಅದೇ ರೀತಿಯಾಗಿ ಅಂಟಿಸಬಹುದು ಮತ್ತು ಅವುಗಳ ಮೇಲೆ ಮುದ್ರೆ ಹಾಕಬಹುದು.

**9ಕ. ಬರೆದು ಕೊಟ್ಟಿರದ ಲಿಖಿತಗಳ ಮುದ್ರಿತ ನಮೂನೆಗಳ ಮೇಲೆ ದಶಮಾಂಶ ನಾಣ್ಯದ ಪದ್ಧತಿಯಲ್ಲಿ ಲೇಬಲ್ಲುಗಳನ್ನು ಮುದ್ರಿಸುವುದು:–** ಆಣೆಗಳಲ್ಲಿ ವ್ಯಕ್ತಪಡಿಸಿದ ಮೌಲ್ಯದ ಸ್ಟಾಂಪ್ ಸುಂಕವನ್ನು ಸೂಚಿಸುವ ಮುದ್ರಿತ ಲೇಬಲ್ಲುಗಳನ್ನು ಈಗಾಗಲೇ ಹೊಂದಿರುವ ಬರೆದು ಕೊಟ್ಟಿರದ ಲಿಖಿತಗಳ ಮುದ್ರಿತ ನಮೂನೆಗಳಿಗೆ, ಅಂಥ ಲೇಬಲ್ಲುಗಳನ್ನು ರದ್ದುಪಡಿಸಿದ ತರುವಾಯ, 10ನೇ ನಿಯಮದಲ್ಲಿ ಹೇಳಲಾದ ರೀತಿಯಲ್ಲಿ ದಶಮಾಂಶ ನಾಣ್ಯ ಪದ್ಧತಿಯಲ್ಲಿ ಸರಿಯಾದ ಮೌಲ್ಯದ ಲೇಬಲ್ಲುಗಳನ್ನು ಮುದ್ರಿಸಬಹುದು.

**10. ಲೇಬಲ್ಲುಗಳನ್ನು ಅಂಟಿಸುವ ಮತ್ತು ಮುದ್ರಿಸುವ ವಿಧಾನ:–** (1) ಯುಕ್ತ ಅಧಿಕಾರಿಯು, 9ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಲಿಖಿತವನ್ನು, ಅದನ್ನು ಬರೆದುಕೊಡುವುದಕ್ಕೆ ಮುಂಚೆ ಅವನ ಮುಂದೆ ಹಾಜರುಪಡಿಸಿದ ಮೇಲೆ ಮತ್ತು ಆ ಉದ್ದೇಶಕ್ಕಾಗಿ ಅವನಿಗೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಅರ್ಜಿದಾರನು ಇಚ್ಛಿಸಬಹುದಾದ ಮತ್ತು ಅದಕ್ಕಾಗಿ ಸಂದಾಯ ಮಾಡಿದಂಥ ಮೌಲ್ಯದ ಲೇಬಲ್ಲು ಅಥವಾ ಲೇಬಲ್ಲುಗಳನ್ನು ಅದಕ್ಕೆ ಅಂಟಿಸತಕ್ಕದ್ದು ಅಥವಾ ಅಂಟಿಸುವಂತೆ ಮಾಡತಕ್ಕದ್ದು ಮತ್ತು ಅಂಥ ಲೇಬಲು ಅಥವಾ ಲೇಬಲ್ಲುಗಳಿಗೆ ಸ್ಟಾಂಪ್ ಮಾಡುವ ಯಂತ್ರದ ಮೂಲಕ ಮುದ್ರೆ ಹಾಕತಕ್ಕದ್ದು ಮತ್ತು ಲಿಖಿತವನ್ನು ಅರ್ಜಿದಾರನಿಗೆ ಹಿಂದಿರುಗಿಸುವುದಕ್ಕೆ ಮುಂಚೆ ಅದಕ್ಕೆ ಪ್ರತಿ ಮುದ್ರೆಯನ್ನು ಸಹ ಹಾಕತಕ್ಕದ್ದು. ಚರ್ಮದ ಕಾಗದದ ಮೇಲೆ ಬರೆದಿರುವ ಲಿಖಿತ ಪತ್ರಗಳ ಸಂದರ್ಭದಲ್ಲಿ ಲೇಬಲ್ಲುಗಳನ್ನು ಲೋಹದ ಸಣ್ಣ ರಂಧ್ರಗಳ ಮೂಲಕ ಇನ್ನಷ್ಟು ಭದ್ರಪಡಿಸತಕ್ಕದ್ದು:

ಪರಂತು, ಈ ಉಪ–ನಿಯಮದಲ್ಲಿ ಉಲ್ಲೇಖಿಸಿದ ಪ್ರತಿ ಮುದ್ರೆ ಹಾಕುವುದು, ಸೂಕ್ತ ಯಂತ್ರದ ಮೂಲಕ ಸೂಕ್ತ ಅಧಿಕಾರಿಯು ಮುದ್ರೆ ಹಾಕಿದ ಅಥವಾ ಒಡುತಿ ಮುದ್ರೆ ಹಾಕಿದ ಲಿಖಿತಕ್ಕೆ ಸಂಬಂಧಿಸಿದಂತೆ ಅಗತ್ಯವಿರುವುದಿಲ್ಲ.

(2) (ಕ) 9ನೇ ನಿಯಮದಲ್ಲಿ ಉಲ್ಲೇಖಿಸಲಾಗಿರುವ ಲೇಬಲ್ಲುಗಳ ಮೌಲ್ಯವನ್ನು ಸರ್ಕಾರಿ ಖಜಾನೆಗೆ ಭಾರತದ ರಿಸರ್ವ್ ಬ್ಯಾಂಕ್‌ಗೆ ಅಥವಾ ಅದರ ಏಜೆಂಟ್ ಬ್ಯಾಂಕಿಗೆ, ಭಾರತದ ಸ್ಟೇಟ್ ಬ್ಯಾಂಕ್ ಅಥವಾ ಅದರ ಶಾಖೆಗಳಿಗೆ ಜಮೆ ಮಾಡತಕ್ಕದ್ದು ಮತ್ತು ಅದಕ್ಕಾಗಿ ಕೊಟ್ಟ ಸ್ವೀಕೃತಿಯನ್ನು (1)ನೇ ಉಪನಿಯಮದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಅರ್ಜಿಗೆ ಲಗತ್ತಿಸತಕ್ಕದ್ದು, ಅಥವಾ

(ಖ) ಅಕೌಂಟೆಂಟ್ ಜನರಲ್‌ನು ಕೊಟ್ಟ ಜಮೆಯ ಪ್ರಮಾಣ ಪತ್ರವನ್ನು (1)ನೇ ಉಪ–ನಿಯಮದಲ್ಲಿ ಉಲ್ಲೇಖಿಸಿದ ಪ್ರತಿಯೊಂದು ಅರ್ಜಿಗೆ ಲಗತ್ತಿಸತಕ್ಕದ್ದು. ಅಥವಾ

(ಗ) (1)ನೇ ಉಪ–ನಿಯಮದ ಮೇರೆಗೆ ಅಂಟಿಸಬೇಕಾದ ಮತ್ತು ಮುದ್ರೆ ಹಾಕಬೇಕಾದ ಲೇಬಲ್ಲುಗಳ ಮೌಲ್ಯವು ಐದು ನೂರು ರೂಪಾಯಿಗಳನ್ನು ಮೀರದಿರುವಲ್ಲಿ ಸದರಿ ಮೌಲ್ಯವನ್ನು ಸೂಕ್ತ ಅಧಿಕಾರಿಗೆ ನಗದು ರೂಪದಲ್ಲಿ ಸಹ ಸಂದಾಯ ಮಾಡಬಹುದು.

(3) ಈ ನಿಯಮದ ಮೇರೆಗೆ ಯಾವುದೇ ಲೇಬಲ್ ಅಥವಾ ಲೇಬಲ್ಲುಗಳನ್ನು ಅಂಟಿಸಿದ ಮೇಲೆ ಯುಕ್ತ ಅಧಿಕಾರಿಯು ಸುಂಕದ ಮೊಬಲಗು ಐದು ರೂಪಾಯಿಗಳು ಅಥವಾ ಅದಕ್ಕೂ ಹೆಚ್ಚಾಗಿರುವಲ್ಲಿ ಲೇಬಲ್ಲು ಅಥವಾ ಲೇಬಲ್ಲುಗಳ ಮೇಲೆ ಅವನ ಚಿಕ್ಕ ಸಹಿಯನ್ನು ಬರೆಯತಕ್ಕುದು ಮತ್ತು ಸುಂಕದ ಮೊಬಲಗು ಇಪ್ಪತ್ತು ರೂಪಾಯಿಗಳು ಅಥವಾ ಅದಕ್ಕೂ ಹೆಚ್ಚಾಗಿರುವಲ್ಲಿ ಲೇಬಲ್ಲು ಅಥವಾ ಲೇಬಲ್ಲುಗಳ ನಿಕಟ ಅಡಿಯಲ್ಲಿ ಲಿಖಿತಕ್ಕೆ ಅವನ ಮಾಮೂಲು ರುಜುವನ್ನು ಸಹ ಹಾಕತಕ್ಕುದು.

(4) (x x x)

**11. ಕೆಲವು ಲಿಖಿತಗಳಿಗೆ ಮುದ್ರೆ ಹಾಕಲಾದ ಲೇಬಲ್ಲುಗಳನ್ನು ಹಚ್ಚತಕ್ಕದ್ದು:–** (1) ಕರ್ನಾಟಕದ ಹೊರಗೆ ಬರೆದುಕೊಟ್ಟ ಮತ್ತು ಅವುಗಳನ್ನು ಕರ್ನಾಟಕದಲ್ಲಿ ಸ್ವೀಕರಿಸಿದ ತರುವಾಯ ಸ್ಟಾಂಪು ಹಚ್ಚಬೇಕೆಂದು ಅಗತ್ಯಪಡಿಸುವ ಲಿಖಿತಗಳಿಗೆ (ಅಧಿನಿಯಮದ 11ನೇ ಪ್ರಕರಣದ ಮೇರೆಗೆ ಅಂಟಿಸುವ ಸ್ಟಾಂಪುಗಳನ್ನು ಹಚ್ಚಬೇಕಾಗಿರುವಂಥ ಲಿಖಿತಗಳನ್ನು ಹೊರತುಪಡಿಸಿ) ಮುದ್ರೆ ಹಾಕಲಾದ ಲೇಬಲ್ಲುಗಳನ್ನು ಹಚ್ಚತಕ್ಕದ್ದು.

(2) ಹಿಂದೆ ಹೇಳಿದಂಥ ಯಾವುದೇ ಲಿಖಿತವನ್ನು ಅಧಿನಿಯಮದ 18ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರ್ ಬಳಿ ತೆಗೆದುಕೊಂಡು ಹೋದಲ್ಲಿ, ಡೆಪ್ಯುಟಿ ಕಮಿಷನರನು ಆ ಲಿಖಿತವನ್ನು, ಅದಕ್ಕೆ ಸಂಬಂಧಿಸಿದ ಸುಂಕದ ಮೊಬಲಗಿನ ಜಮೆಯ ಪ್ರಮಾಣೀಕೃತ ಚಲನ್‌ನೊಂದಿಗೆ ಯುಕ್ತ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು; ಮತ್ತು ಯುಕ್ತ ಅಧಿಕಾರಿಯು 10ನೇ ನಿಯಮದಲ್ಲಿ ನಿಯಮಿಸಿದ ರೀತಿಯಲ್ಲಿ ಆ ಲಿಖಿತಕ್ಕೆ ಸ್ಟಾಂಪನ್ನು ಹಚ್ಚತಕ್ಕದ್ದು ಹಾಗೂ ಅದನ್ನು ಹಾಜರುಪಡಿಸಿದ ಆ ವ್ಯಕ್ತಿಗೆ ವಶಾವಣೆ ಮಾಡಲು ಡೆಪ್ಯುಟಿ ಕಮಿಷನರುನಿಗೆ ಹಿಂತಿರುಗಿಸತಕ್ಕದ್ದು.

**11ಕ. ಸುಂಕಗಳ ಬಗ್ಗೆ ರಾಜಿ ಅಥವಾ ಒಟ್ಟುಗೂಡಿಸುವುದು:–** (1) ರಾಜ್ಯದಲ್ಲಿನ ಯಾವುದೇ ನಿಗಮಿತ ಕಂಪನಿ ಅಥವಾ ಇತರ ನಿಗಮಿತ ನಿಕಾಯವು, ಅದು ಹೊರಡಿಸಬೇಕಾದ ಷೇರುಗಳ ಪ್ರಮಾಣ ಪತ್ರಗಳು ಅಥವಾ ಹಂಚಿಕೆ ಪತ್ರಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಅದಕ್ಕೆ ಸಂದಾಯ ಮಾಡಬೇಕಾದ ಸುಂಕಗಳನ್ನು ಒಟ್ಟುಗೂಡಿಸುವುದಕ್ಕಾಗಿ ಮತ್ತು ಒಟ್ಟುಗೂಡಿಸಲಾದ ಸುಂಕಗಳನ್ನು ಸಂದಾಯ ಮಾಡಲು ಅನುಮತಿಗಾಗಿ ರಾಜ್ಯ ಸರ್ಕಾರಕ್ಕೆ ಬರಹದಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಷೇರುಗಳ ಪ್ರಮಾಣ ಪತ್ರಗಳ

ಅಥವಾ ಹಂಚಿಕೆ ಪತ್ರಗಳ ಒಟ್ಟು ಸಂಖ್ಯೆ ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಸುಂಕದ ಮೊಬಲಗಿನ ಬಗ್ಗೆ ಪೂರ್ಣ ವಿವರಗಳನ್ನು ಅರ್ಜಿಯಲ್ಲಿ ಒದಗಿಸತಕ್ಕದ್ದು. ಅಂಥ ಪ್ರತಿಯೊಂದು ಅರ್ಜಿಯ ಪ್ರತಿಯನ್ನು ಏಕಕಾಲದಲ್ಲಿ ಸ್ಟಾಂಪುಗಳ ಸೂಪರಿಂಟೆಂಡೆಟ್, ಬೆಂಗಳೂರು ಇವರಿಗೆ ಕಳುಹಿಸಿಕೊಡತಕ್ಕದ್ದು.

(2) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಸರಿಯಾದ ಸುಂಕದ ಬಗ್ಗೆ ಸ್ಟಾಂಪುಗಳ ಸೂಪರಿಂಟೆಂಡೆಂಟ್‌ನಿಂದ ವರದಿಯನ್ನು ಪಡೆದುಕೊಂಡ ತರುವಾಯ ರಾಜ್ಯ ಸರ್ಕಾರವು ಅಂಥ ಷೇರುಗಳ ಪ್ರಮಾಣ ಪತ್ರ ಅಥವಾ ಪತ್ರಗಳು ಅಥವಾ ಹಂಚಿಕೆ ಪತ್ರಗಳಿಗೆ ಸಂದಾಯ ಮಾಡಬೇಕಾದ ಒಟ್ಟುಗೂಡಿಸಿದ ಸುಂಕವಾಗಿರುವ ಅದು ನಿರ್ದಿಷ್ಟಪಡಿಸಲಾದ ಮೊಬಲಗನ್ನು ಸ್ಟಾಂಪುಗಳ ಸೂಪರಿಂಟೆಂಡೆಂಟ್, ಬೆಂಗಳೂರು ಇವರ ಕಚೇರಿಯಲ್ಲಿ ಜಮೆ ಮಾಡಲು ಅಂಥ ಕಂಪನಿ ಅಥವಾ ನಿಕಾಯಕ್ಕೆ ತಿಳಿಸಬಹುದು. ಅಂಥ ಮೊಬಲಗನ್ನು ಸಂದಾಯ ಮಾಡಿದ ಮೇಲೆ, ಸ್ಟಾಂಪುಗಳ ಸೂಪರಿಂಟೆಂಡೆಂಟನು ಕೂಡಲೇ ಆ ಮೊಬಲಗನ್ನು ಭಾರತದ ರಿಸರ್ವ್ ಬ್ಯಾಂಕಿಗೆ ಸಮುಚಿತ ಲೆಕ್ಕ ಶೀರ್ಷಿಕೆಗೆ ಜಮೆ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ಚಲನ್ ಸಂಖ್ಯೆ ಮತ್ತು ದಿನಾಂಕದೊಂದಿಗೆ ಮೊಬಲಗನ್ನು ಜಮೆ ಮಾಡಿದ ಸಂಗತಿಯನ್ನು ರಾಜ್ಯ ಸರ್ಕಾರಕ್ಕೆ ತಿಳಿಸತಕ್ಕದ್ದು.

(3) ಆ ತರುವಾಯ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಷೇರುಗಳ ಪ್ರಮಾಣ ಪತ್ರಗಳು ಅಥವಾ ಹಂಚಿಕೆ ಪತ್ರಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಮೇರೆಗೆ ಒಟ್ಟುಗೂಡಿಸಿದ ಸುಂಕವನ್ನು ಸದರಿ ಕಂಪನಿ ಅಥವಾ ನಿಗಮಿತ ನಿಕಾಯವು ಸಂದಾಯ ಮಾಡಿದೆ ಎಂಬುದನ್ನು ಅಧಿಸೂಚಿಸತಕ್ಕದ್ದು. ಅಂಥ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಸದರಿ ಕಂಪನಿ ಅಥವಾ ನಿಗಮಿತ ನಿಕಾಯವು, ಅಂಥ ಷೇರುಗಳ ಪ್ರಮಾಣ ಪತ್ರ ಅಥವಾ ಹಂಚಿಕೆ ಪತ್ರಗಳನ್ನು "ಅವುಗಳ ಮೇಲೆ" ಒಟ್ಟುಗೂಡಿಸಿದ ಸ್ಟಾಂಪ್ ಸುಂಕವನ್ನು ಸಂದಾಯ ಮಾಡಲಾಗಿದೆ. ನೋಡಿ ಅಧಿಸೂಚನೆ ಸಂಖ್ಯೆ ಆರ್‌ಡಿ ...................... ದಿನಾಂಕ .......................... ಎಂಬ ಪದಗಳನ್ನು ಮುದ್ರಿಸುವ ಮೂಲಕ ಹೊರಡಿಸಬಹುದು.

## ಅಧ್ಯಾಯ – III
## ಅಂಟಿಸುವ ಸ್ಟಾಂಪುಗಳು

**12. ಕೆಲವು ಲಿಖಿತ ಪತ್ರಗಳ ಮೇಲೆ ಅಂಟಿಸುವ ಸ್ಟಾಂಪುಗಳ ಉಪಯೋಗ:–** ಈ ನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಸ್ಟಾಂಪ್ ಸುಂಕವನ್ನು ಅವಶ್ಯವಾದ ಸ್ಟಾಂಪುಗಳು ಚಲಾವಣೆಯಲ್ಲಿಲ್ಲ ಎಂಬ ಸಂಗತಿಯ ಕಾರಣದಿಂದಾಗಿ ಖಚಿತವಾಗಿ ಸಂದಾಯ ಮಾಡಲಾಗದೆ ಇರುವಾಗಲೆಲ್ಲ, ಆ ಕಾರಣದಿಂದಾಗಿ ಕಡಿಮೆ ಇರುವ ಸುಂಕದ ಸಂದಾಯದ ಮೊಬಲಗನ್ನು, 13ನೇ ನಿಯಮದಲ್ಲಿ ವಿವರಿಸಿರುವಂಥ ಹತ್ತು ಪೈಸೆ ಮತ್ತು ಐದು ಪೈಸೆ ಅಂಟಿಸುವ ಸ್ಟಾಂಪುಗಳನ್ನು ಹಚ್ಚುವ ಮೂಲಕ ಸರಿದೂಗಿಸತಕ್ಕದ್ದು.

**13. ಹತ್ತು ಪೈಸೆ ಸುಂಕವನ್ನು ಸೂಚಿಸುವ ಅಂಟಿಸುವ ಸ್ಟಾಂಪು ಅಥವಾ ಸ್ಟಾಂಪುಗಳು:–** ಈ ನಿಯಮಗಳ ಮೂಲಕ ಅನ್ಯಥಾ ಉಪಬಂಧಿಸಿದಂತೆ ಹೊರತು, ಹತ್ತು ಪೈಸೆ ಮತ್ತು ಐದು ಪೈಸೆ ಸುಂಕವನ್ನು ಸೂಚಿಸಲು ಉಪಯೋಗಿಸಿದ ಅಂಟಿಸುವ ಸ್ಟಾಂಪು ಅಥವಾ ಸ್ಟಾಂಪುಗಳು ಕ್ರಮವಾಗಿ "ಹತ್ತು ಪೈಸೆ" ಮತ್ತು "ಐದು ಪೈಸೆ" ಎಂಬ ಪದಗಳನ್ನು ಹೊಂದಿರತಕ್ಕದ್ದು.

**14. ಕೆಲವು ಸಂದರ್ಭಗಳಲ್ಲಿ ವಿಶೇಷ ಅಂಟಿಸುವ ಸ್ಟಾಂಪುಗಳನ್ನು ಉಪಯೋಗಿಸಬೇಕು:–** ಈ ಕೆಳಕಂಡ ಲಿಖಿತಗಳಿಗೆ ಅಂಟಿಸುವ ಸ್ಟಾಂಪುಗಳನ್ನು ಹಚ್ಚಿರುವಾಗ, ಇಲ್ಲಿ ಇನ್ನು ಮುಂದೆ ನಿಯಮಿಸಿದ ರೀತಿಯಲ್ಲಿ ಸ್ಟಾಂಪನ್ನು ಹಚ್ಚತಕ್ಕದ್ದು, ಎಂದರೆ:–

(ಕ) ನೋಟರಿಯ ಕಾರ್ಯಗಳಿಗೆ "ನೋಟರಿಯ ಪ್ರಮಾಣಕ" ಎಂಬ ಪದಗಳನ್ನು ಹೊಂದಿರುವ ಅಂಟಿಸುವ ಸ್ಟಾಂಪುಗಳನ್ನು ಹಚ್ಚತಕ್ಕದ್ದು;

(ಖ) ನಿಜ ಪ್ರತಿಗಳೆಂದು ಪ್ರಮಾಣೀಕರಿಸಿದ ಭೂಪಟಗಳ ಅಥವಾ ನಕ್ಷೆಗಳ ಪ್ರತಿಗಳಿಗೆ ಅಂಟಿಸುವ ನ್ಯಾಯಾಲಯದ ಫೀಜಿನ ಸ್ಟಾಂಪುಗಳನ್ನು ಹಚ್ಚತಕ್ಕದ್ದು;

(ಗ) ಅನುಸೂಚಿಯ 37ನೇ ಅನುಚ್ಛೇದದ ಮೇರೆಗೆ ಸ್ಟಾಂಪ್ ಸುಂಕವನ್ನು ವಿಧಿಸಬಹುದಾದ ಲಿಖಿತಗಳಿಗೆ "ದಳ್ಳಾಳಿ ಪತ್ರ" ಎಂಬ ಪದವನ್ನು ಹೊಂದಿರುವ ಅಂಟಿಕೊಳ್ಳುವ ಸ್ಟಾಂಪ್‌ಗಳನ್ನು ಹಚ್ಚತಕ್ಕದ್ದು;

(ಘ) ಹುಂಡಿ ಲಿಖಿತಗಳಿಗೆ "ಹುಂಡಿಗಳು" ಎಂಬ ಮೇಲ್ಬರಹದ ಅಂಟಿಕೊಳ್ಳುವ ವಿಶೇಷ ಸ್ಟಾಂಪುಗಳನ್ನು ಹಚ್ಚತಕ್ಕದ್ದು.

## ಅಧ್ಯಾಯ – III ಕ
## ಲೈಸೆನ್ಸುಗಳು

**14ಕ. ಸ್ಟಾಂಪುಗಳು ಮತ್ತು ಸ್ಟಾಂಪು ಹಾಕಿದ ಕಾಗದಗಳ ಮಾರಾಟ:–** ಸ್ಟಾಂಪುಗಳು ಮತ್ತು ಸ್ಟಾಂಪು ಹಾಕಿದ ಕಾಗದಗಳನ್ನು ರಾಜ್ಯದಲ್ಲಿನ ಎಲ್ಲಾ ಖಜಾನೆಗಳಲ್ಲಿ ಮತ್ತು ಈ ನಿಯಮಗಳ ಮೇರೆಗೆ ಲೈಸೆನ್ಸು ಪಡೆದಿರುವಂಥ ವ್ಯಕ್ತಿಗಳು ಮಾತ್ರ ಮಾರಾಟ ಮಾಡತಕ್ಕದ್ದು.

**14ಖ. ಖಜಾನೆ ಅಧಿಕಾರಿಗಳು ಪದನಿಮಿತ್ತ ಸ್ಟಾಂಪ್ ವೆಂಡರುಗಳಾಗಿರತಕ್ಕದ್ದು:–**

(1) ಪ್ರತಿಯೊಂದು ಖಜಾನೆಯ ಖಜಾನೆ ಅಧಿಕಾರಿಯು, ಪದನಿಮಿತ್ತ ಸ್ಟಾಂಪ್ ವೆಂಡರ್ ಆಗಿರತಕ್ಕದ್ದು.

(2) ಯಾವನೇ ಪದನಿಮಿತ್ತ ಸ್ಟಾಂಪ್‌ವೆಂಡರನು ಸಾರ್ವಜನಿಕರಿಗೆ ಮಾರಾಟ ಮಾಡುವುದಕ್ಕಾಗಿ ತನ್ನ ಸ್ವಂತ ಲೆಕ್ಕದಲ್ಲಿ ಸೋಡಿಯಲ್ಲಿ ಸ್ಟಾಂಪುಗಳನ್ನು ಖರೀದಿಸತಕ್ಕದ್ದಲ್ಲ.

**14ಗ. ಲೈಸೆನ್ಸುಗಳನ್ನು ಮಂಜೂರ್ಮಾಡುವ ಪ್ರಾಧಿಕಾರಿ:–** ರೆವಿನ್ಯೂ ಉಪ–ವಿಭಾಗದ ಪ್ರಭಾರದಲ್ಲಿರುವ ಅಸಿಸ್ಟೆಂಟ್ ಕಮಿಷನರನು (ಇಲ್ಲಿ ಇನ್ನು ಮುಂದೆ ಲೈಸನ್ಸು ಕೊಡುವ ಪ್ರಾಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಅವನ ಅಧಿಕಾರ ವ್ಯಾಪ್ತಿಯಲ್ಲಿ ಈ ನಿಯಮಗಳ ಮೇರೆಗೆ ಲೈಸನ್ಸುಗಳನ್ನು ಮಂಜೂರ್ಮಾಡುವ ಪ್ರಾಧಿಕಾರಿಯಾಗಿರತಕ್ಕದ್ದು.

**14ಘ. ಲೈಸೆನ್ಸಿನ ಮಂಜೂರಾತಿ:–** (1) ಲೈಸೆನ್ಸನ್ನು ಪಡೆದುಕೊಳ್ಳಲು ಇಚ್ಛಿಸುವ ಯಾವನೇ ವ್ಯಕ್ತಿಯು, ಪರಿಶಿಷ್ಟ ಖಖ ದಲ್ಲಿ ನಿಯಮಿಸಿದ ನಮೂನೆಯಲ್ಲಿ ಆತನು ಯಾರ ಅಧಿಕಾರ ವ್ಯಾಪ್ತಿಯೊಳಗೆ ವ್ಯವಹಾರವನ್ನು ನಡೆಸಲು ಉದ್ದೇಶಿಸಿರುವನೋ ಆ ಲೈಸನ್ಸು ಕೊಡುವ ಪ್ರಾಧಿಕಾರಿಗೆ ಬರಹದಲ್ಲಿ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು. ಲೈಸನ್ಸು ಕೊಡುವ ಪ್ರಾಧಿಕಾರಿಗೆ, ಅರ್ಜಿದಾರನು ಕಾರ್ಯಗಳನ್ನು ತೃಪ್ತಿಕರವಾಗಿ ಹಾಗೂ ಯುಕ್ತ ಶ್ರದ್ಧೆಯಿಂದ ನೆರವೇರಿಸಲು ಸಕ್ಷಮನಾಗಿದ್ದಾನೆಂದು ಅವನಿಗೆ ಮನದಟ್ಟಾದರೆ, ಆತನು ಪರಿಶಿಷ್ಟ ಖ ಗ ದಲ್ಲಿ ನಿಯಮಿಸಿದ ನಮೂನೆಯಲ್ಲಿ ಲೈಸನ್ಸ್‌ನ್ನು ಮಂಜೂರು ಮಾಡಬಹುದು. ಅಂಥ ಪ್ರತಿಯೊಂದು ಲೈಸೆನ್ಸುದಾರನ ಹೆಸರು, ಆತನು ಮಾರಬಹುದಾದಂಥ ಸ್ಟಾಂಪುಗಳ ಮತ್ತು ಸ್ಟಾಂಪ್ ಹಾಕಿದ ಕಾಗದಗಳ

ವಿವರಣೆಯನ್ನು ಅದನ್ನು ಮಾರತಕ್ಕಂಥ ಸ್ಥಳ ಮತ್ತು ಲೈಸನ್ಸು ಕೊಡುವ ಪ್ರಾಧಿಕಾರಿಯು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಇತರ ವಿಷಯಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಲೈಸನ್ಸನ್ನು ಮಂಜೂರು ಮಾಡಲು ನಿರಾಕರಿಸುವ ಲೈಸನ್ಸು ಕೊಡುವ ಪ್ರಾಧಿಕಾರಿಯ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಡೆಪ್ಯುಟಿ ಕಮಿಷನರನಿಗೆ ಅಪೀಲನ್ನು ಮಾಡಿಕೊಳ್ಳಬಹುದು.

(3) ಮಂಜೂರು ಮಾಡಲಾದ ಪ್ರತಿಯೊಂದು ಲೈಸನ್ಸು, ಅದನ್ನು ಮಂಜೂರ್ಮಾಡಿದಂಥ ಹಣಕಾಸು ವರ್ಷದ ಕೊನೆಯ ದಿನದಂದು ಮುಕ್ತಾಯವಾಗತಕ್ಕದ್ದು.

**ವಿವರಣೆ:–** ಈ ಉಪನಿಯಮದ ಉದ್ದೇಶಕ್ಕಾಗಿ "ಆರ್ಥಿಕ ವರ್ಷ" ಎಂದರೆ ಏಪ್ರಿಲ್ ಮೊದಲನೇ ದಿವಸದಂದು ಪ್ರಾರಂಭವಾಗುವ ವರ್ಷ.

(4) ಲೈಸನ್ಸನ್ನು ನವೀಕರಿಸುವುದಕ್ಕಾಗಿನ ಅರ್ಜಿಯನ್ನು, ಪರಿಶಿಷ್ಟ ಖ ಖ ದಲ್ಲಿ ನಿಯಮಿಸಿದ ನಮೂನೆಯಲ್ಲಿ ಆ ಲೈಸನ್ಸು ಮುಕ್ತಾಯವಾಗುವ ದಿನಾಂಕಕ್ಕೆ ಎರಡು ತಿಂಗಳುಗಳ ಮುಂಚಿತವಾಗಿ, ಲೈಸನ್ಸು ಕೊಡುವ ಪ್ರಾಧಿಕಾರಿಗೆ ಮಾಡಿಕೊಳ್ಳತಕ್ಕದ್ದು.

**14ಜ. ಲೈಸನ್ಸಿನ ಅಮಾನತು ಅಥವಾ ರದ್ದಿಯಾತಿ:–** ಲೈಸನ್ಸು ಕೊಡುವ ಪ್ರಾಧಿಕಾರಿಯು, ಲೈಸೆನ್ಸುದಾರನಿಂದ ಯಾವುದೇ ನಿಯಮದ ಆಪಾದಿಸಲಾದ ಉಲ್ಲಂಘನೆಯ ಬಗ್ಗೆ ವಿಚಾರಣೆಯು ಇತ್ಯರ್ಥದಲ್ಲಿರುವಾಗ, ಅವನ ಲೈಸನ್ಸನ್ನು ಅಮಾನತುಗೊಳಿಸಬಹುದು.

(2) ಲೈಸನ್ಸು ಕೊಡುವ ಪ್ರಾಧಿಕಾರಿಯು ಈ ನಿಯಮಗಳ ಪೈಕಿ ಯಾವುದೇ ನಿಯಮದ ಉಲ್ಲಂಘನೆಗಾಗಿ ಮತ್ತು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಆದೇಶದ ಮೂಲಕ ಲೈಸನ್ಸನ್ನು ರದ್ದುಗೊಳಿಸಬಹುದು:

ಪರಂತು, ಲೈಸನ್ಸುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಡದೆಯೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(3) (2)ನೇ ಉಪ–ನಿಯಮದ ಮೇರೆಗಿನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಡೆಪ್ಯುಟಿ ಕಮಿಷನರನಿಗೆ ಅಪೀಲು ಮಾಡಿಕೊಳ್ಳಬಹುದು.

**14ಚ. ಲೈಸೆನ್ಸುದಾರನ ಕರ್ತವ್ಯಗಳು:–** (1) ಲೈಸನ್ಸುದಾರನು, ಅವನ ಲೈಸನ್ಸಿನಲ್ಲಿ ನಿರ್ದಿಷ್ಟಪಡಿಸಿದ ವಿವರಣೆಯ ಸ್ಟಾಂಪುಗಳನ್ನು ಅಥವಾ ಸ್ಟಾಂಪು ಹಾಕಿದ ಕಾಗದಗಳನ್ನು ಮತ್ತು ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಅಲ್ಲದೆ, ಯಾವುದೇ ವಿವರಣೆಯ ಸ್ಟಾಂಪುಗಳು ಅಥವಾ ಸ್ಟಾಂಪು ಹಾಕಿದ ಕಾಗದಗಳನ್ನು ಇತರ ಯಾವುದೇ ಸ್ಥಳದಲ್ಲಿ ಮಾರಾಟ ಮಾಡತಕ್ಕುದಲ್ಲ.

(2) ಸಕ್ಷಮ ಪ್ರಾಧಿಕಾರಿಯು, ಯಾವ ಸ್ಟಾಂಪಿನ ಉಪಯೋಗವನ್ನು ಮುಂದುವರಿಸದಿರುವಂತೆ ಆದೇಶಿಸಿರುವನೋ ಆ ಯಾವುದೇ ಸ್ಟಾಂಪನ್ನು ಲೈಸೆನ್ಸುದಾರನು ಮಾರತಕ್ಕದ್ದಲ್ಲ.

(3) ಲೈಸೆನ್ಸುದಾರನು ಸ್ಟಾಂಪ್ ಅಥವಾ ಸ್ಟಾಂಪ್ ಹಾಕಿದ ಕಾಗದವನ್ನು ಪದ ನಿಮಿತ್ತ ಸ್ಟಾಂಪ್ ವೆಂಡರ್‌ನಿಂದ ಅಲ್ಲದೆ ಇತರ ಯಾರಿಂದಲೂ ಪಡೆಯತಕ್ಕದ್ದಲ್ಲ.

(4) ಪ್ರತಿಯೊಬ್ಬ ಲೈಸೆನ್ಸುದಾರನು, ಎಲ್ಲ ಕಾಲಗಳಲ್ಲಿಯೂ "ಸ್ಟಾಂಪ್ ಮತ್ತು ಸ್ಟಾಂಪ್ ಹಾಕಿದ ಕಾಗದಗಳ ಲೈಸನ್ಸು ಪಡೆದಿರುವ ವೆಂಡರ್" ಎಂಬ ಪದಗಳೊಂದಿಗೆ ಅವನ ಹೆಸರನ್ನು ಹೊಂದಿರುವ ಗುರುತು

ಹಲಗೆಯನ್ನು ಅವನ ವ್ಯವಹಾರ ಸ್ಥಳದಲ್ಲಿ, ಎದ್ದು ಕಾಣುವ ರೀತಿಯಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಅದರಲ್ಲಿ ಅವನ ವ್ಯವಹಾರದ ವೇಳೆಯನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು. ಆ ಗುರುತು ಹಲಗೆಯು ಇಂಗ್ಲೀಷ್ ಅಥವಾ ಹಿಂದಿ ಮತ್ತು ಕನ್ನಡದಲ್ಲಿರತಕ್ಕದ್ದು.

(5) ಪ್ರತಿಯೊಬ್ಬ ಲೈಸೆನ್ಸುದಾರನು ಉಲ್ಲೇಖದ ಉದ್ದೇಶಕ್ಕಾಗಿ, ಈ ನಿಯಮಗಳ ಪ್ರತಿಯನ್ನು ಅವನ ಬಳಿ ಇಟ್ಟುಕೊಂಡಿರತಕ್ಕದ್ದು.

(6) ಪ್ರತಿಯೊಬ್ಬ ಲೈಸೆನ್ಸುದಾರನು, ಅವನು ಮಾರಲು ಲೈಸೆನ್ಸು ಪಡೆದಂಥ ಮತ್ತು ಸಾರ್ವಜನಿಕ ಬೇಡಿಕೆಯನ್ನು ಪೂರೈಸಲು ಸಾಕಷ್ಟು ಆಗಿರುವಂಥ ಸ್ಟಾಂಪುಗಳು ಮತ್ತು ಸ್ಟಾಂಪು ಹಾಕಿದ ಕಾಗದಗಳ ದಾಸ್ತಾನನ್ನು ಇಟ್ಟುಕೊಂಡಿರತಕ್ಕುದು.

(7) ಲೈಸೆನ್ಸುದಾರನಲ್ಲದ ಇತರ ಯಾವನೇ ವ್ಯಕ್ತಿಗೆ ಮಾರುವ ಪ್ರತಿಯೊಬ್ಬ ಪದನಿಮಿತ್ತ ಸ್ಟಾಂಪ್‌ವೆಂಡರನು ಮತ್ತು ಪ್ರತಿಯೊಬ್ಬ ಲೈಸೆನ್ಸುದಾರನು ಅವನು ಮಾರಿದ ಪ್ರತಿಯೊಂದು ಸ್ಟಾಂಪ್ ಮತ್ತು ಸ್ಟಾಂಪ್ ಹಾಕಿದ ಕಾಗದದ ಹಿಂದೆ ಮಾರಾಟದ ಕ್ರಮ ಸಂಖ್ಯೆ, ಮಾರಾಟದ ದಿನಾಂಕ, ಖರೀದಿಸುವವನ ಹೆಸರು ಮತ್ತು ನಿವಾಸ, ಪದಗಳಲ್ಲಿ ಸ್ಟಾಂಪುಗಳ ಮೌಲ್ಯ ಇವುಗಳನ್ನು ಬರೆಯತಕ್ಕದ್ದು ಮತ್ತು ಅದರ ಮೇಲೆ ಅವನ ರುಜುವನ್ನು ಸಹ ಹಾಕತಕ್ಕದ್ದು. ಇನ್ನೊಬ್ಬ ವ್ಯಕ್ತಿಯ ಉಪಯೋಗಕ್ಕಾಗಿ ಒಬ್ಬ ವ್ಯಕ್ತಿಯು ಸ್ಟಾಂಪ್ ಅಥವಾ ಸ್ಟಾಂಪ್ ಹಾಕಿದ ಕಾಗದವನ್ನು ಖರೀದಿಸುವಲ್ಲಿ, ಅಂಥ ಇನ್ನೊಬ್ಬ ವ್ಯಕ್ತಿಯ ಹೆಸರು, ಉದ್ಯೋಗ ಮತ್ತು ನಿವಾಸದ ವಿಳಾಸ ಮತ್ತು ಸ್ಟಾಂಪುಗಳ ಪೂರ್ತಿ ಮೌಲ್ಯವನ್ನು (ಪದಗಳಲ್ಲಿ) ಅಂಥ ಸ್ಟಾಂಪ್ ಅಥವಾ ಸ್ಟಾಂಪ್ ಹಾಕಿದ ಕಾಗದದ ಮೇಲೆ ಬರೆಯತಕ್ಕದ್ದು. ಅಂಥ ಖರೀದಿದಾರನ ಆಕ್ಷೇಪಣೆ ಇರದಿದ್ದರೆ, ಅಂಥ ಸ್ಟಾಂಪ್ ಅಥವಾ ಸ್ಟಾಂಪ್ ಹಾಕಿದ ಕಾಗದದ ಮೇಲೆ ಅವನ ರುಜು ಅಥವಾ ಹೆಬ್ಬೆಟ್ಟಿನ ಗುರುತನ್ನು ಸಹ ತೆಗೆದುಕೊಳ್ಳತಕ್ಕದ್ದು. ಪ್ರತಿಯೊಬ್ಬ ಲೈಸೆನ್ಸುದಾರನು, ಪರಿಶಿಷ್ಟ–ಖಫದಲ್ಲಿ ನಿಯಮಿಸಿದ ನಮೂನೆಯಲ್ಲಿ ಅವನು ಇಟ್ಟುಕೊಂಡಿರುವ ರಿಜಿಸ್ಟರಿನಲ್ಲಿ ಸಂವಾದಿ ನಮೂದುಗಳನ್ನು ಸಹ ಮಾಡತಕ್ಕದ್ದು.

(8) ಪ್ರತಿಯೊಬ್ಬ ಲೈಸೆನ್ಸುದಾರನು, ಯಾವನೇ ವ್ಯಕ್ತಿಯ ಬೇಡಿಕೆಯ ಮೇಲೆ ಮತ್ತು ಅದಕ್ಕಾಗಿನ ಮೌಲ್ಯವನ್ನು ಸಲ್ಲಿಸಿದ ಮೇಲೆ ಮಾರಾಟಕ್ಕಾಗಿ ಅವನ ಸ್ವಾಧೀನದಲ್ಲಿರುವಂಥ ಯಾವುದೇ ಸ್ಟಾಂಪ್ ಅಥವಾ ಸ್ಟಾಂಪ್ ಹಾಕಿದ ಕಾಗದವನ್ನು ಅನುಚಿತ ವಿಳಂಬವಿಲ್ಲದೆ ವಶಾವಣೆ ಮಾಡತಕ್ಕದ್ದು.

(9) ಯಾವನೇ ಲೈಸೆನ್ಸುದಾರನು ಯಾವುದೇ ಸ್ಟಾಂಪು ಅಥವಾ ಸ್ಟಾಂಪ್ ಹಾಕಿದ ಕಾಗದಕ್ಕಾಗಿ ಅದರಲ್ಲಿ ಸೂಚಿಸಿರುವ ಮುಖ ಬೆಲೆಗಿಂತ ಹೆಚ್ಚಿನ ಯಾವುದೇ ಹಣವನ್ನು ತಗಾದೆ ಮಾಡತಕ್ಕದ್ದಲ್ಲ ಅಥವಾ ಸ್ವೀಕರಿಸತಕ್ಕದ್ದಲ್ಲ.

(10) ಪ್ರತಿಯೊಬ್ಬ ಲೈಸೆನ್ಸುದಾರನು, ಪರಿಶಿಷ್ಟ–ಖಫದಲ್ಲಿ ನಿಯಮಿಸಿದ ನಮೂನೆಯಲ್ಲಿ ಅವನು ಇಡಬೇಕಾದ ರಿಜಿಸ್ಟರಿನಲ್ಲಿ ಮಾರಾಟಗಳ ದೈನಂದಿನ ಲೆಕ್ಕವನ್ನು ಇಡತಕ್ಕದ್ದು.

(11) ಪ್ರತಿಯೊಬ್ಬ ಲೈಸೆನ್ಸುದಾರನು, ಪ್ರತಿದಿವಸದ ಕೊನೆಯಲ್ಲಿ ಅಂಥ ರಿಜಿಸ್ಟರಿನಲ್ಲಿ ಆ ದಿವಸದಂದು ವಾಸ್ತವಿಕವಾಗಿ ಮಾರಾಟ ಮಾಡಿದ ಸ್ಟಾಂಪುಗಳ ಮತ್ತು ಸ್ಟಾಂಪ್ ಹಾಕಿದ ಕಾಗದಗಳ ಉದ್ಧೃತಿಯನ್ನು ಮತ್ತು ಅವನ ಸ್ವಾಧೀನದಲ್ಲಿ ಉಳಿದಿರುವ ಶಿಲ್ಕನ್ನು ದಾಖಲು ಮಾಡತಕ್ಕದ್ದು.

(12) ಪ್ರತಿಯೊಬ್ಬ ಪದನಿಮಿತ್ತ ಸ್ಟಾಂಪ್ ವೆಂಡರನು, ಲೈಸೆನ್ಸ್‌ದಾರನಿಗೆ ಅಥವಾ ಇತರ ವ್ಯಕ್ತಿಗೆ, ಸ್ಟಾಂಪುಗಳು ಅಥವಾ ಸ್ಟಾಂಪ್ ಹಾಕಿದ ಕಾಗದಗಳನ್ನು ಕೊಡುವಾಗ ಕೊಡುವ ದಿನಾಂಕದೊಂದಿಗೆ ಖಜಾನೆಯ ಮೊಹರನ್ನು ಹಾಕತಕ್ಕದ್ದು.

(13) ಪ್ರತಿಯೊಬ್ಬ ಲೈಸೆನ್ಸ್‌ದಾರನು, ಅವನ ವ್ಯವಹಾರದ ವೇಳೆಯಲ್ಲಿ ಅವನ ಬಳಿ ಲಭ್ಯವಿರುವ ಬೇರೆ ಬೇರೆ ವಿವರಣೆಯ ಸ್ಟಾಂಪುಗಳ ಅಥವಾ ಸ್ಟಾಂಪ್ ಹಾಕಿದ ಕಾಗದಗಳ ದಾಸ್ತಾನನ್ನು ಮಾರಾಟ ಮಾಡಲು ಅವನಿಗೆ ಲೈಸೆನ್ಸು ಕೊಟ್ಟಿರುವ ಸ್ಥಳದಲ್ಲಿ ಎದ್ದು ಕಾಣುವಂತೆ ಪರಿಶಿಷ್ಟ–ಖಜ ದಲ್ಲಿ ನಿಯಮಿಸಿದ ನಮೂನೆಯಲ್ಲಿ ಪ್ರದರ್ಶಿಸತಕ್ಕದ್ದು.

**14ಛ. ಲೈಸೆನ್ಸುದಾರನ ಪರಿಶ್ರಮ ಧನ:–** ಪ್ರತಿಯೊಬ್ಬ ಲೈಸೆನ್ಸುದಾರನು, ಖಜಾನೆಯಿಂದ ಅವನು ಖರೀದಿಸಿದ ಸ್ಟಾಂಪ್ ಮೌಲ್ಯದ ಮೇಲೆ ಸೋಡಿ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

ನ್ಯಾಯಿಕೇತರ ಸ್ಟಾಂಪುಗಳಿಗೆ ಸಂಬಂಧಿಸಿದಂತೆ ಸ್ಟಾಂಪ್ ವೆಂಡರುಗಳ ಎರಡು ವರ್ಗಗಳು ಇರತಕ್ಕುದು:– (1) 'ಎ' ವರ್ಗದ ವೆಂಡರ್‌ಗಳು ಮತ್ತು (2) 'ಬಿ' ವರ್ಗದ ವೆಂಡರುಗಳು ಹಾಗೂ 'ಎ' ವರ್ಗದಲ್ಲಿರುವವರಿಗೆ ಶೇಕಡಾ 2ರಂತೆ ದಳ್ಳಾಳಿಯೊಡನೆ ಒಂದು ವ್ಯವಹಾರದಲ್ಲಿ 5,000 ರೂಪಾಯಿಗಳವರೆಗೆ ಸಾಮಾನ್ಯ ಸ್ಟಾಂಪ್ ಕಾಗದಗಳನ್ನು ಮಾರಲು ಅನುಮತಿಸತಕ್ಕದ್ದು ಮತ್ತು 'ಬಿ' ವರ್ಗದ ವೆಂಡರುಗಳಿಗೆ ಶೇಕಡಾ 3 ರಂತೆ ದಳ್ಳಾಳಿಯೊಡನೆ ಒಂದು ವ್ಯವಹಾರದಲ್ಲಿ ಮೌಲ್ಯದಲ್ಲಿ 2,500 ರೂಪಾಯಿಗಳನ್ನು ಮೀರದ ಸಾಮಾನ್ಯ ಸ್ಟಾಂಪ್ ಕಾಗದಗಳನ್ನು ಮಾರಲು ಅಧಿಕೃತಗೊಳಿಸತಕ್ಕದ್ದು.

**14ಜ. ಸ್ಟಾಂಪುಗಳನ್ನು ಹಿಂದಿರುಗಿಸುವುದು:–** (1) ಲೈಸೆನ್ಸುದಾರನು ರಾಜೀನಾಮೆಯನ್ನು ಕೊಟ್ಟಾಗ ಅಥವಾ ಅವನ ಲೈಸೆನ್ಸನ್ನು ರದ್ದುಪಡಿಸಿದಾಗ ಅವನಲ್ಲಿ ಮಾರಾಟವಾಗದೆ ಉಳಿದಿರುವ ಎಲ್ಲಾ ಸ್ಟಾಂಪುಗಳು ಮತ್ತು ಸ್ಟಾಂಪ್ ಹಾಕಿದ ಕಾಗದಗಳನ್ನು ಖಜಾನೆ ಅಧಿಕಾರಿಗೆ ಹಿಂದಿರುಗಿಸತಕ್ಕದ್ದು. ಖಜಾನೆಗೆ ಹಿಂದಿರುಗಿಸಿದ ಸ್ಟಾಂಪುಗಳು ಮತ್ತು ಸ್ಟಾಂಪ್ ಹಾಕಿದ ಕಾಗದಗಳ ಪೂರ್ತಿ ಮೌಲ್ಯವನ್ನು, ಈಗಾಗಲೇ ಸಂದಾಯ ಮಾಡಿದ ಸೋಡಿಯನ್ನು ಕಳೆದು ಅವನಿಗೆ ಸಂದಾಯ ಮಾಡತಕ್ಕದ್ದು.

(2) ಲೈಸೆನ್ಸುದಾರನು ಮೃತನಾದರೆ, ಸ್ಟಾಂಪುಗಳು ಮತ್ತು ಸ್ಟಾಂಪು ಕಾಗದಗಳ ಕಾನೂನು ಸಮ್ಮತ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಯು, ಅವುಗಳನ್ನು ಖಜಾನೆಗೆ ಹಿಂದಿರುಗಿಸತಕ್ಕದ್ದು. ಖಜಾನೆ ಅಧಿಕಾರಿಯು ಸ್ಟಾಂಪುಗಳು ಮತ್ತು ಸ್ಟಾಂಪ್ ಹಾಕಿದ ಕಾಗದಗಳನ್ನು ಹಿಂದಿರುಗಿಸುವ ವ್ಯಕ್ತಿಗೆ, ಹಿಂದಿರುಗಿಸಿದ ಸ್ಟಾಂಪುಗಳು ಮತ್ತು ಸ್ಟಾಂಪು ಹಾಕಿದ ಕಾಗದಗಳನ್ನು ಕೆಡಿಸಿಲ್ಲ ಅಥವಾ ಹಾನಿಗೊಳಿಸಿಲ್ಲವೆಂದು ಮತ್ತು ಅವುಗಳನ್ನು ಪುನಃ ಕೊಡಲು ಯೋಗ್ಯವಾದ ಸ್ಥಿತಿಯಲ್ಲಿ ಇವೆಯೆಂದು ಅವನಿಗೆ ಮನದಟ್ಟಾದರೆ, ಲೈಸನ್ಸುದಾರನು ಸಂದಾಯ ಮಾಡಿದ ವಾಸ್ತವ ಮೊತ್ತವನ್ನು ಮರುಪಾವತಿ ಮಾಡತಕ್ಕದ್ದು.

(3) ಲೈಸೆನ್ಸುದಾರನು, ಸ್ಟಾಂಪುಗಳನ್ನು ಹಿಂದಿರುಗಿಸಿದ ಸಂದರ್ಭದಲ್ಲಿ ಯಾವುದೇ ಇತರ ಸ್ಟಾಂಪುಗಳನ್ನು ವಾಪಸು ಕೊಡಲು ಅನುಮತಿಗಾಗಿ ಅವನು ಮಾಡಿಕೊಂಡ ಅರ್ಜಿಯ ಮೇಲೆ, ಹಿಂತಿರುಗಿಸಿದ ಸ್ಟಾಂಪುಗಳ ಪೂರ್ಣ ಮೌಲ್ಯವನ್ನು, ಹಿಂತಿರುಗಿಸಿದ ಸ್ಟಾಂಪುಗಳನ್ನು ಕೆಡಿಸಿಲ್ಲ ಅಥವಾ ಹಾನಿಗೊಳಿಸಿಲ್ಲ ಮತ್ತು ಅವುಗಳನ್ನು ಪುನಃ ಕೊಡುವುದಕ್ಕಾಗಿ ಯೋಗ್ಯವಾದ ಸ್ಥಿತಿಯಲ್ಲಿವೆಯೆಂದು ಖಜಾನೆ ಅಧಿಕಾರಿಗೆ ಮನದಟ್ಟಾದರೆ, ಸಂದಾಯ ಮಾಡತಕ್ಕದ್ದು.

**14ಝ. ಪರಿಶೀಲನೆ:–** ಲೈಸೆನ್ಸುದಾರನ ಲೆಕ್ಕದ ಪುಸ್ತಕಗಳನ್ನು ಖಜಾನೆ ಅಧಿಕಾರಿಯು ಮೂರು ತಿಂಗಳಿಗೊಮ್ಮೆ ಪರಿಶೀಲಿಸತಕ್ಕುದು ಮತ್ತು ಪರಿಶೀಲನೆಯಲ್ಲಿ ಕಂಡು ಬಂದ ಯಾವುದೇ ಕ್ರಮ ದೋಷಗಳನ್ನು ಸ್ಟಾಂಪುಗಳ ಕಮಿಷನರನಿಗೆ ವರದಿ ಮಾಡತಕ್ಕದ್ದು.

# ಅಧ್ಯಾಯ – IV

## ಸಂಕೀರ್ಣ

**15. ಸರಿಯಲ್ಲದ ವಿವರಣೆಯ ಸ್ಟಾಂಪುಗಳನ್ನು ಉಪಯೋಗಿಸಿದಂಥ ಪ್ರಕರಣಗಳಿಗಾಗಿ ಉಪಬಂಧಗಳು:–** ಲಿಖಿತವು ಸಾಕಷ್ಟು ಮೊಬಲಗಿನ, ಆದರೆ ಸರಿಯಲ್ಲದ ವಿವರಣೆಯ ಸ್ಟಾಂಪನ್ನು ಹೊಂದಿರುವಾಗ, ಡೆಪ್ಯುಟಿ ಕಮಿಷನರನು, ಅದಕ್ಕೆ ವಿಧಿಸಬಹುದಾದ ಸುಂಕವನ್ನು ಸಂದಾಯ ಮಾಡಿದ ಮೇಲೆ, ಅದಕ್ಕೆ ಕ್ರಮಬದ್ಧವಾಗಿ ಸ್ಟಾಂಪನ್ನು ಹಾಕಲಾಗಿದೆಯೆಂದು ಲಿಖಿತದ ಮೇಲೆ ಷರಾ ಮಾಡುವ ಮೂಲಕ ಪ್ರಮಾಣೀಕರಿಸಬಹುದು:

ಪರಂತು, ಲಿಖಿತವನ್ನು ಬರೆದುಕೊಟ್ಟ ಮೂರು ತಿಂಗಳ ಒಳಗೆ ಅರ್ಜಿಯನ್ನು ಮಾಡಿಕೊಂಡರೆ, ಮತ್ತು ಸರಿಯಾದ ವಿವರಣೆಯ ಸ್ಟಾಂಪನ್ನು ಪಡೆಯುವಲ್ಲಿನ ತೊಂದರೆ ಅಥವಾ ಅನಾನುಕೂಲತೆಯ ಮಾತ್ರದಿಂದ, ಸರಿಯಲ್ಲದ ವಿವರಣೆಯ ಸ್ಟಾಂಪನ್ನು ಉಪಯೋಗಿಸಲಾಗಿತ್ತು ಎಂದು ಡೆಪ್ಯುಟಿ ಕಮಿಷನರಿಗೆ ಮನದಟ್ಟಾದರೆ, ಅವನು ಈ ನಿಯಮದಲ್ಲಿ ನಿಯಮಿಸಿದ ಸುಂಕದ ಹೆಚ್ಚಿನ ಸಂದಾಯವನ್ನು ಮಾಫಿ ಮಾಡಬಹುದು.

**15ಕ. ಸ್ವತ್ತಿನ ಮೌಲ್ಯವನ್ನು ನೋಡತಕ್ಕದ್ದು:–** 28ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ನಮೂದಿಸಿದ ಬಗೆಯ ಯಾವುದೇ ಲಿಖಿತವನ್ನು, 33ನೇ ಪ್ರಕರಣದಲ್ಲಿ ನಮೂದಿಸಿದ ಯಾವ ವ್ಯಕ್ತಿಯ ಮುಂದೆ ಹಾಜರ್ಪಡಿಸಲಾಗಿದೆಯೋ ಅಥವಾ ಅವನ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಬರುವುದೋ, ಆ ಪ್ರತಿಯೊಬ್ಬ ವ್ಯಕ್ತಿಯು, ಪ್ರತಿಯೊಂದು ಸಂದರ್ಭದಲ್ಲಿ ಲಿಖಿತದಲ್ಲಿ ನಿರೂಪಿಸಿದಂಥ ಮತ್ತು ಅಂಥ ಭೂಮಿ, ಕಟ್ಟಡದ ಅಥವಾ ತೋಟದ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿ ಲಭ್ಯವಾಗಬಹುದಾದಂಥ ಸಂಗತಿಗಳಿಂದ, ಸಂದರ್ಭಾನುಸಾರ ಆ ಭೂಮಿ ಕಟ್ಟಡ ಅಥವಾ ತೋಟದ ಮೌಲ್ಯವನ್ನು ಸರಿ ನೋಡತಕ್ಕದ್ದು:

ಪರಂತು, ಅಂಥ ವ್ಯಕ್ತಿ ಅಥವಾ ಡೆಪ್ಯುಟಿ ಕಮಿಷನರನು, ಸ್ಥಳೀಯ ವಿಚಾರಣೆ ಅಥವಾ ಸ್ವತಂತ್ರ ಸಾಕ್ಷ್ಯಗಳಿಲ್ಲದೆ ಸಂಬಂಧಿಸಿದ ಸ್ಥಿರ ಸ್ವತ್ತಿನ ಸರಿಯಾದ ಮೌಲ್ಯವನ್ನು ನಿರ್ಣಯಿಸಲು ಆಗುವುದಿಲ್ಲವೆಂದು ಪರ್ಯಾಲೋಚಿಸಿದರೆ, ಸಂಬಂಧಪಟ್ಟ ಪಕ್ಷಕಾರನಿಗೆ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಅವಶ್ಯಕವಾಗಬಹುದಾದಂಥ ವಿಚಾರಣೆಯನ್ನು ಮಾಡಬಹುದು ಅಥವಾ ಅಂಥ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು. ಆ ಪಕ್ಷಕಾರನಿಗೆ ಅಂಥ ಸಾಕ್ಷ್ಯವನ್ನು ಖಂಡಿಸಲು ಹಕ್ಕಿರತಕ್ಕದ್ದು.

**16. ಮರು ಪಾವತಿ ಅಥವಾ ನವೀಕರಣದ ಕ್ಲೇಮಿನ ಸಂದರ್ಭಗಳ ಬಗೆಗಿನ ಸಾಕ್ಷ್ಯ:–** ಈ ಅಧಿನಿಯಮದ Vನೇ ಅಧ್ಯಾಯದ ಮೇರೆಗೆ ಮರುಪಾವತಿ ಅಥವಾ ನವೀಕರಣವನ್ನು ಕ್ಲೇಮು ಮಾಡುವ ಯಾವನೇ ವ್ಯಕ್ತಿ ಅಥವಾ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಏಜೆಂಟನನ್ನು ಕ್ಲೇಮು ಉದ್ಭವಿಸಿರುವಂಥ ಸಂದರ್ಭಗಳನ್ನು ನಿರೂಪಿಸಿ, ಪ್ರಮಾಣದ ಮೇಲೆ ಅಥವಾ ದೃಢೀಕರಣದ ಮೇಲೆ ಮೌಖಿಕ ಸಾಕ್ಷ್ಯವನ್ನು ಕೊಡಲು ಅಥವಾ ಶಪಥ ಪತ್ರವನ್ನು ದಾಖಲು ಮಾಡಲು ಅಗತ್ಯಪಡಿಸಬಹುದು ಮತ್ತು ಅವನು ಸೂಕ್ತವೆಂದು ಯೋಚಿಸಿದರೆ, ಹಿಂದೆ ಹೇಳಿದಂಥ ಯಾವುದೇ ಸಾಕ್ಷ್ಯ ಅಥವಾ ಶಪಥ ಪತ್ರದಲ್ಲಿ ನಿರೂಪಿಸಿದ ಹೇಳಿಕೆಯ ಸಮರ್ಥನೆಯಲ್ಲಿ ಸಾಕ್ಷಿದಾರರ ಸಾಕ್ಷ್ಯಕ್ಕಾಗಿ ಕೋರಬಹುದು.

**17. ಕೆಟ್ಟುಹೋದ ಅಥವಾ ದುರುಪಯೋಗಪಡಿಸಿದ ಸ್ಟಾಂಪುಗಳಿಗೆ ಸಂಬಂಧಿಸಿದಂತೆ ರಿಯಾಯಿತಿಗಳ ಸಂದಾಯ:–** ಕೆಟ್ಟುಹೋದ ಅಥವಾ ದುರುಪಯೋಗಪಡಿಸಿದಂಥ ಅಥವಾ ಅರ್ಜಿದಾರನಿಗೆ ಕೂಡಲೇ ಉಪಯೋಗಕ್ಕೆ ಬಾರದಂಥ ಸ್ಟಾಂಪಿಗೆ ಸಂಬಂಧಿಸಿದಂತೆ ರಿಯಾಯಿತಿಯನ್ನು ಈ ಅಧಿನಿಯಮದ Vನೇ ಅಧ್ಯಾಯದ ಮೇರೆಗೆ ಸಂದಾಯಕ್ಕಾಗಿ ಅರ್ಜಿಯನ್ನು ಮಾಡಿಕೊಂಡಿರುವಾಗ, ಮತ್ತು ರಿಯಾಯಿತಿಯನ್ನು ಮಂಜೂರ್ಮಾಡುವ ಅಥವಾ ಅರ್ಜಿಯ ಸಮರ್ಥನೆಯಲ್ಲಿ ಮತ್ತಷ್ಟು ಸಾಕ್ಷ್ಯವನ್ನು ಕೋರುವ ಆದೇಶವನ್ನು ಡೆಪ್ಯುಟಿ ಕಮಿಷನರನು ಹೊರಡಿಸಿರುವಾಗ, ಆಗ ಹಿಂದೆ ಹೇಳಿದ ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿದಾರನು, ಸಂದರ್ಭಾನುಸಾರ ರಿಯಾಯಿತಿ ಮೊಬಲಗು ಅಥವಾ ಅದಕ್ಕೆ ಬದಲಾಗಿ

ಕೊಟ್ಟ ಸ್ಟಾಂಪನ್ನು ತೆಗೆದುಕೊಳ್ಳದಿದ್ದರೆ ಅಥವಾ ಅಗತ್ಯಪಡಿಸಿದ ಮತ್ತಷ್ಟು ಸಾಕ್ಷ್ಯವನ್ನು ಒದಗಿಸದಿದ್ದರೆ, ಅರ್ಜಿಯನ್ನು ವಜಾ ಮಾಡತಕ್ಕದ್ದು ಮತ್ತು ಕೆಟ್ಟುಹೋದ ಅಥವಾ ದುರುಪಯೋಗಪಡಿಸಿದ ಸ್ಟಾಂಪು ಯಾವುದಾದರೂ ಇದ್ದರೆ, ಅದನ್ನು ನೋಂದಣಿ ಇನ್ಸ್‌ಪೆಕ್ಟರ್ ಜನರಲ್‌ನಿಗೆ ನಾಶಪಡಿಸುವುದಕ್ಕಾಗಿ ಕಳುಹಿಸತಕ್ಕದ್ದು.

**18. 16ನೇ ಪ್ರಕರಣದ ಮೇರೆಗೆ ಅರ್ಜಿ ಮತ್ತು ಸ್ಟಾಂಪ್ ಸುಂಕದ ಸಂದಾಯವನ್ನು ಸೂಚಿಸುವ ರೀತಿ:–** (1) 16ನೇ ಪ್ರಕರಣದ ಉದ್ದೇಶಕ್ಕಾಗಿನ ಅರ್ಜಿಯನ್ನು ಪರಿಶಿಷ್ಟ 'ಗ' ದಲ್ಲಿ ನಿಯಮಿಸಿದ ನಮೂನೆಯಲ್ಲಿ ಡೆಪ್ಯುಟಿ ಕಮಿಷನರಿಗೆ ಮಾಡಿಕೊಳ್ಳತಕ್ಕದ್ದು.

(2) (1)ನೇ ಉಪನಿಯಮದ ಮೇರೆಗೆ ಮಾಡಿಕೊಂಡ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಡೆಪ್ಯುಟಿ ಕಮಿಷನರರು–

(ಕ) ಅಡಮಾನಕ್ಕೆ ಒಳಪಟ್ಟ ಸ್ವತ್ತಿನ ಹಸ್ತಾಂತರಣ ಸಂದರ್ಭದಲ್ಲಿ ಅಡಮಾನ ಪಡೆದವನಿಗೆ ಈ ಕೆಳಕಂಡ ನಮೂನೆಯಲ್ಲಿ, ಎಂದರೆ:–

"ಅಡಮಾನ ಪತ್ರದಲ್ಲಿ ವಿವರಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ಖರೀದಿದಾರನ ಹೆಸರಿಗೆ ಬರೆದುಕೊಟ್ಟ ಆ ಪತ್ರವನ್ನು ಹಾಜರುಪಡಿಸಿದ ಮೇಲೆ ............................................... ರೂಪಾಯಿಗಳ (ಇಲ್ಲಿ ಮೊಬಲಗನ್ನು ನಮೂದಿಸಬೇಕು) ಸ್ಟಾಂಪ್ ಸುಂಕವನ್ನು ಅದರ ಮೇಲೆ ಸಂದಾಯ ಮಾಡಲಾಗಿದೆ ಎಂದು ನಾನು ಮನದಟ್ಟು ಮಾಡಿಕೊಂಡಿದ್ದೇನೆಂದು ನಾನು, ಈ ಮೂಲಕ ಪ್ರಮಾಣೀಕರಿಸುತ್ತೇನೆ" ಎಂದು ಹಿಂಬರಹ ಮಾಡತಕ್ಕದ್ದು.

(ಖ) ಈ ಮುಂದಿನ ಸಂದರ್ಭಗಳಲ್ಲಿ–

(i) ಪ್ರತಿರೂಪಗಳು

(ii) ದ್ವಿಪ್ರತಿ

(iii) ಪೂರಕ ಪತ್ರಗಳು

(iv) ಸಾದಾ ಅಡಮಾನದ ಮೇಲೆ ಸ್ವಾಧೀನದೊಡನೆ ಮತ್ತಷ್ಟು ಋಣಭಾರ

(v) ಸಹಾಯಕ, ಪಾರ್ಶ್ವಿಕ ಮತ್ತು ಹೆಚ್ಚಿನ ಭದ್ರತೆ

(vi) ಅಧಿನಿಯಮದ ಅನುಸೂಚಿಯ 30, 39 ಮತ್ತು 48ನೇ ಅನುಚ್ಛೇದಗಳ ಪರಂತುಕಗಳ ಮೇರೆಗೆ ಸ್ಟಾಂಪ್ ಹಾಕಿದ ಗೇಣಿಗೆ, ವಿಭಜನೆ ಮತ್ತು ವ್ಯವಸ್ಥಾಪನಾ ಪತ್ರ – ಇವುಗಳ ಸಂದರ್ಭದಲ್ಲಿ ಈ ಕೆಳಕಂಡ ನಮೂನೆಯಲ್ಲಿ ಎಂದರೆ:–

"ಮೂಲ ದಸ್ತಾವೇಜನ್ನು ಹಾಜರುಪಡಿಸಿದ ಮೇಲೆ, ಅದರ ಮೇಲೆ ............................ ರೂಪಾಯಿಗಳ (ಇಲ್ಲಿ ಮೊಬಲಗನ್ನು ನಮೂದಿಸುವುದು) ಸ್ಟಾಂಪ್ ಸುಂಕವನ್ನು ಸಂದಾಯ ಮಾಡಲಾಗಿದೆಯೆಂದು ನಾನು ಮನದಟ್ಟು ಮಾಡಿಕೊಂಡಿದ್ದೇನೆಂದು ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ" ಎಂದು ಹಿಂಬರಹ ಮಾಡತಕ್ಕದ್ದು.

**19. ಕೆಲವು ಲಿಖಿತಗಳಲ್ಲಿ ಒದಗಿಸಬೇಕಾದ ವಿವರಗಳು:–** ಹಸ್ತಾಂತರಣ, ವಿನಿಮಯ ಅಥವಾ ದಾನ ಲಿಖಿತಗಳು 28ನೇ ಪ್ರಕರಣದಲ್ಲಿ ನಮೂದಿಸಿದ ಸಂಗತಿಗಳ ಜೊತೆಗೆ ಈ ಕೆಳಕಂಡ ಹೆಚ್ಚಿನ ವಿವರಗಳನ್ನು ನಿರೂಪಿಸತಕ್ಕದ್ದು, ಎಂದರೆ:–

(1) ಸ್ವತ್ತಿನ ವಿಸ್ತೀರ್ಣ ಮತ್ತು ಅದರ ಚಕ್ಕುಬಂದಿಗಳು;

(2) ಸ್ವತ್ತು ಭೂಮಿಯಾಗಿದ್ದು, ಅದು ಯಾವುದೇ ರಚನೆಯನ್ನು ಒಳಗೊಂಡಿದ್ದರೆ ಆ ರಚನೆಯ ಮೇಲ್ಭಾಗದ ವಿಸ್ತೀರ್ಣ; ಮತ್ತು ರಚನೆಯಲ್ಲಿನ ಅಂತಸ್ತುಗಳ ಸಂಖ್ಯೆ;

(3) ಅಂಥ ಪ್ರತಿಯೊಂದು ಅಂತಸ್ತಿನ ಮಾಳಿಗೆ ವಿಸ್ತೀರ್ಣ;

(4) ಅಂಥ ಪ್ರತಿಯೊಂದು ಅಂತಸ್ತಿನ ಗೋಡೆಯ ಸಾಮಗ್ರಿಗಳು ಮತ್ತು ಮಾಳಿಗೆಯ ಸಾಮಗ್ರಿಗಳು;

(5) ಗ್ಯಾರೇಜ್, ಬಾವಿ, ನೀರು ಸರಬರಾಜು (ನಿಗಮದಿಂದಲೇ ಆಗಲಿ ಅಥವಾ ಜಲಮಂಡಲಿಯಿಂದಲೇ ಆಗಲಿ) ಮತ್ತು ಒಳಚರಂಡಿ ವ್ಯವಸ್ಥೆ ಯಾವುದಾದರೂ ಇದ್ದರೆ ಅದು ಮತ್ತು ವಿದ್ಯುಚ್ಛಕ್ತಿ (ದೀಪದ ವ್ಯವಸ್ಥೆ ಅಥವಾ ಸರ್ವ ವಿದ್ಯುತ್ ವ್ಯವಸ್ಥೆ ಮಾತ್ರ) – ಅಂತಹ ಒದಗಿಸಲಾದ ಸೌಕರ್ಯಗಳು;

(6) ಕಟ್ಟಡದ ರಚನೆಯ ವರ್ಷ ಅಥವಾ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ವರ್ಷಗಳಲ್ಲಿ ಕಟ್ಟಿಸಿದ್ದರೆ ಅಂಥ ಪ್ರತಿಯೊಂದು ಭಾಗವನ್ನು ಕಟ್ಟಿಸಿದ ವರ್ಷ ಅಥವಾ ವರ್ಷಗಳು.

## ಪರಿಶಿಷ್ಟ 'ಕ'

## ನಿಯಮಗಳ 9(1)ನೇ ನಿಯಮದಲ್ಲಿ ಉಲ್ಲೇಖಿಸಿದ ಲಿಖಿತಗಳ ಪಟ್ಟಿ

| | | ಅಧಿನಿಯಮದ ಅನುಸೂಚಿಯಲ್ಲಿನ ಅನುಚ್ಛೇದದ ಸಂಖ್ಯೆ |
|---|---|---|
| (ಕ) | ಆಡಳಿತ ಬಂಧ ಪತ್ರಗಳು | 2 |
| (ಖ) | ಶಪಥ ಪತ್ರಗಳು | 4 |
| (ಗ) | ಅಧಿಕಾರದ ನಿರ್ವಹಣೆಯಲ್ಲಿ ಮಾಡಿದ ನೇಮಕಾತಿ | 7 |
| (ಘ) | ಕಂಪನಿಯ ಸಂಘದ ನಿಯಮಾವಳಿಗಳು | 10 |
| (ಙ) | ಹಡಗು ಬಾಡಿಗೆ ಕರಾರು | 18 |
| (ಚ) | ನ್ಯಾಸದ ಘೋಷಣೆ | 54ಕ |
| (ಛ) | (1) ಯಾವುದೇ ಸ್ವತ್ತಿಗೆ ಆಗಲಿ (ಮಾರಾಟ ಮಾಡಬಹುದಾದ ಭದ್ರತೆಯನ್ನು ಹೊರತುಪಡಿಸಿ) ಅದರ ಸ್ವಾಮ್ಯದ ಸಾಕ್ಷ್ಯವಾಗುವ ಅಥವಾ ಸಾಕ್ಷ್ಯವಾಗಿರುವ ಹಕ್ಕು ಪತ್ರಗಳ ಅಥವಾ ಲಿಖಿತಗಳ ಠೇವಣಿಗೆ ಅಥವಾ (2) ಚರಸ್ವತ್ತಿನ ಗಿರವಿ ಅಥವಾ ಒತ್ತೆಗೆ ಸಂಬಂಧಪಟ್ಟ ಒಪ್ಪಂದವನ್ನು ಸಾಕ್ಷೀಕರಿಸುವ ಲಿಖಿತಗಳು | 6 |
| (ಜ) | ಮುದ್ರಿತ ವಿಷಯದ ನಾಲ್ಕನೇ ಒಂದು ಭಾಗವನ್ನು ಮೀರದ ಬರೆದ ವಿಷಯವನ್ನು ಭರ್ತಿ ಮಾಡಿದಾಗ ಪ್ರಾಚ್ಯ ಭಾಷೆಯಲ್ಲಿ ಮುದ್ರಿಸಲಾದ ಅಥವಾ ಕಲ್ಲಚ್ಚು ಮಾಡಲಾದ ಗೇಣಿಗಳು | 30 |
| (ಝ) | ಕಂಪನಿಗಳ ಸಂಘದ ವಿವರಣಾ ಪತ್ರ | 33 |
| (ಞ) | ಫಸಲುಗಳ ಅಡಮಾನಗಳು | 35 |
| (ಟ) | ಹಡಗಿನ ಮಾಸ್ಟರ್‌ನಿಂದ ಪ್ರಸಾಕ್ಷ್ಯ ಪತ್ರಗಳು | 38 |
| (ಠ) | ನ್ಯಾಸದ ರದ್ದಿಯಾತಿಗಳು | 54ಖ |
| (ಡ) | ಕಂಪನಿಗಳ ಅಧಿನಿಯಮ, 1956ರ ಅನುಸಾರವಾಗಿ ಕಂಪನಿಯು ಹೊರಡಿಸಿದ ಷೇರ್ ವಾರಂಟ್‌ಗಳು | 49 |
| (ಢ) | ಸರಕುಗಳಿಗಾಗಿ ವಾರಂಟ್ | 55 |

**ಪರಿಶಿಷ್ಟ 'ಖ'**

**ನಿಯಮಗಳ 9(2) ನಿಯಮದಲ್ಲಿ ಉಲ್ಲೇಖಿಸಿದ ಲಿಖಿತಗಳ ಪಟ್ಟಿ:**

| | | ಅಧಿನಿಯಮದ ಅನುಸೂಚಿಯಲ್ಲಿನ ಅನುಚ್ಛೇದದ ಸಂಖ್ಯೆ |
|---|---|---|
| (ಕ) | ಯುಕ್ತ ಅಧಿಕಾರಿಯ ಅಭಿಪ್ರಾಯದಲ್ಲಿ, ಸ್ಟಾಂಪುಗಳನ್ನು ಕೆತ್ತಿದ ಅಥವಾ ಉಬ್ಬಚ್ಚು ಮಾಡಿದಂಥ ಕಾಗದದ ಹಾಳೆಗಳ ಮೇಲೆ ಅನುಕೂಲಕರವಾಗಿ ಬರೆಯಲಾಗದಂಥ ಒಪ್ಪಂದ ಅಥವಾ ಒಪ್ಪಂದಗಳ ವಿವರಣ ಪತ್ರಗಳು | 5 |
| (ಖ) | ಅಂಥ ಅಧಿಕಾರಿಯ ಅಭಿಪ್ರಾಯದಲ್ಲಿ ಸ್ಟಾಂಪುಗಳನ್ನು ಕೆತ್ತಿದ ಅಥವಾ ಉಬ್ಬಚ್ಚು ಮಾಡಿದಂಥ ಕಾಗದದ ಹಾಳೆಗಳ ಮೇಲೆ ಆಂಗ್ಲ ಪದ್ಧತಿಯಲ್ಲಿ ಅನುಕೂಲಕರವಾಗಿ ಬರೆಯಲಾಗದಂಥ ಚರ್ಮದ ಕಾಗದದ ಮೇಲೆ ಕಾನೂನಿನ ಅನುಸಾರವಾಗಿ ರಚಿಸಿದ ಅಥವಾ ಬರೆದ ಲಿಖಿತಗಳು | 5 |
| (ಗ) | ಐತೀರ್ಪುಗಳು | 11 |
| (ಘ) | ಬಂಧ ಪತ್ರಗಳು | 2, 12 |
| (ಙ) | ನೌಕಾ ಬಂಧಪತ್ರಗಳು | 13 |
| | (i) ಸೀಮಾ ಸುಂಕಗಳ ಬಂಧಪತ್ರಗಳು | 23 |
| | (ii) ಸ್ವಾಧೀನವನ್ನು ಕೊಟ್ಟಿಲ್ಲದಿದ್ದರೆ, ಅಡಮಾನ ಮಾಡಿದ ಸ್ವತ್ತಿನ ಮೇಲೆ ಮತ್ತಷ್ಟು ಋಣಭಾರಗಳನ್ನು ಹೇರುವ ಲಿಖಿತಗಳು | 27 (ಖ) (ii) |
| | (iii) ನಷ್ಟ ಭರ್ತಿ ಬಂಧಪತ್ರ | 29 |
| | (iv) ಗೇಣಿ | 30(ಕ)(i) ಮತ್ತು (ii) |
| | (v) ಸ್ವಾಧೀನವನ್ನು ಕೊಡದಿರುವಾಗ, ಅಡಮಾನ ಪತ್ರ | 34 (ಖ) |
| | (vi) ಕ್ಲೇಮಿನ ಮೌಲ್ಯವು ಒಂದು ಸಾವಿರ ರೂಪಾಯಿಗಳನ್ನು ಮೀರದಿರುವಲ್ಲಿ ಬಿಡುಗಡೆ | 45 (ಕ) |
| | (vii) ನೌಕಾ ಸರಕುಗಳ ಬಂಧಪತ್ರ | 46 |
| | (viii) ಭದ್ರತಾ ಪತ್ರ ಅಥವಾ ಭದ್ರತೆಗಾಗಿ ಬರೆದುಕೊಟ್ಟ ಅಡಮಾನ ಪತ್ರ | 47 (ಕ) |
| | (ix) ನ್ಯಾಸಗಳ ಘೋಷಣೆ ಅಥವಾ ರದ್ದಿಯಾತಿ | 54(ಕ) ಮತ್ತು (ಖ) |

| | | |
|---|---|---|
| (ಚ) | ಮಾರಾಟದ ಪ್ರಮಾಣ ಪತ್ರಗಳು | 15 |
| (ಛ) | ಒಡಂಬಡಿಕೆ ಪತ್ರಗಳು | 19 |
| (ಜ) | ಹಸ್ತಾಂತರಣಗಳು | 20 |
| (ಝ) | ಅಡಮಾನದ ಸ್ವತ್ತಿನ ಮೇಲೆ ಮತ್ತಷ್ಟು ಋಣಭಾರವನ್ನು ಹೊರಿಸುವ ಲಿಖಿತಗಳು | 27(ಕ) ಮತ್ತು (ಖ) |
| (ಞ) | ಉಮೇದುವಾರಿಕೆಗಳ ಲಿಖಿತಗಳು | 9 |
| (ಟ) | ಪಾಲುದಾರಿಕೆಗಳ ಲಿಖಿತಗಳು | 40 ಕ |
| (ಠ) | ಪಾಲುದಾರಿಕೆಯ ವಿಘಟನೆಯ ಲಿಖಿತಗಳು | 40 ಖ |
| (ಡ) | ವಿನಿಮಯದ ಲಿಖಿತಗಳು | 26 |
| (ಢ) | ದಾನಗಳ ಲಿಖಿತಗಳು | 28 |
| (ಣ) | ವಿಭಜನೆಯ ಲಿಖಿತಗಳು | 39 |
| (ತ) | ಗೇಣಿಗಳು | 30 – ಬಾಬುಗಳು (ಕ) (i) ಮತ್ತು (ii)ನ್ನು ಹೊರತುಪಡಿಸಿ |
| (ಥ) | ಲೈಸನ್ಸು ಪತ್ರಗಳು | 32 |
| (ದ) | ಅಡಮಾನ ಪತ್ರಗಳು | 24 |
| (ಧ) | ಮೊಖ್ತ್ಯಾರನಾಮೆಗಳು | 41 |
| (ನ) | ಅಡಮಾನ ಮಾಡಿದ ಸ್ವತ್ತಿನ ಮರುಹಸ್ತಾಂತರಣೆ | 44 |
| (ಪ) | ಬಿಡುಗಡೆಗಳು | 45(ಖ) |
| (ಫ) | ವ್ಯವಸ್ಥೆ | 48 |
| (ಬ) | ವರ್ಗಾವಣೆಗಳು | 52 |

## ಪರಿಶಿಷ್ಟ 'ಖ ಖ'

## (14 ಘ (1) ಮತ್ತು (4)ನೇ ನಿಯಮವನ್ನು ನೋಡಿ)

## ಸ್ಟಾಂಪ್ ವೆಂಡರನ ಲೈಸನ್ಸು ಮಂಜೂರಾತಿ / ನವೀಕರಣಕ್ಕಾಗಿನ ಅರ್ಜಿಯ ನಮೂನೆ

## ಲೈಸನ್ಸು ಕೊಡುವ ಪ್ರಾಧಿಕಾರಿಗೆ

1 ಅರ್ಜಿದಾರನ ಪೂರ್ಣ ಹೆಸರು

2 ಅರ್ಜಿದಾರನ ಪೂರ್ಣ ವಿಳಾಸ

3 ಅರ್ಜಿದಾರನ ತಂದೆಯ ಹೆಸರು

4 ಅರ್ಜಿದಾರನ ವಯಸ್ಸು ಮತ್ತು ಹುಟ್ಟಿದ ತಾರೀಖು

5 ಅರ್ಜಿದಾರನ ವಿದ್ಯಾರ್ಹತೆ

6 ಸ್ಟಾಂಪುಗಳನ್ನು ಮಾರಾಟ ಮಾಡುವ ಅಂಗಡಿ ಅಥವಾ ಸ್ಥಳದ ವಿಳಾಸ

7. ಅರ್ಜಿಯು ಎ ವರ್ಗದ ವೆಂಡರನಿಗಾಗಿ ಇದೆಯೋ ಅಥವಾ ಬಿ ವರ್ಗದ ವೆಂಡರನಿಗಾಗಿ ಇದೆಯೋ ಹೇಗೆ.

8. ಅರ್ಜಿಯು ಹೊಸ ಲೈಸನ್ಸ್‌ನ ಮಂಜೂರಾತಿಗಾಗಿಯೋ ಅಥವಾ ಹಿಂದಿನ ವರ್ಷದಲ್ಲಿ ಮಂಜೂರು ಮಾಡಿದ ಲೈಸೆನ್ಸ್‌ನ ನವೀಕರಣಕ್ಕಾಗಿಯೋ ಹೇಗೆ (ಲೈಸೆನ್ಸ್ ನವೀಕರಣಕ್ಕಾಗಿ ಇದ್ದರೆ, ಅದರ ಸಂಖ್ಯೆ ಮತ್ತು ಅದು ಮುಕ್ತಾಯಗೊಂಡ ದಿನಾಂಕವನ್ನು ತಿಳಿಸಬೇಕು).

9. ಯಾವ ಹಣಕಾಸಿನ ವರ್ಷಕ್ಕಾಗಿ ಲೈಸನ್ಸಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆ.

10. ಅರ್ಜಿದಾರನಿಗೆ ಹಿಂದೆ ಮಂಜೂರು ಮಾಡಿದ್ದ ಲೈಸನ್ಸನ್ನು ರದ್ದುಪಡಿಸಲಾಗಿದೆಯೋ ಅಥವಾ ಅಮಾನತುಗೊಳಿಸಲಾಗಿದೆಯೋ ಹೇಗೆ ಹಾಗಿದ್ದರೆ, ವಿವರವನ್ನು ಒದಗಿಸಬೇಕು.

ಅರ್ಜಿದಾರನ ಹೆಸರು.

## ಘೋಷಣೆ

........................................................ ಆದ ನಾನು, ಇದರಲ್ಲಿ ಒದಗಿಸಿದ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಾನು ನಂಬುವಷ್ಟರ ಮಟ್ಟಿಗೆ ನಿಜವಾಗಿವೆ ಮತ್ತು ಸರಿಯಾಗಿವೆ ಎಂದು ಮತ್ತು ನಾನು ಯಾವ ಲೈಸೆನ್ಸಿಗಾಗಿ ಈ ಮೂಲಕ ಅರ್ಜಿ ಸಲ್ಲಿಸಿರುವೆನೋ ಆ ಲೈಸೆನ್ಸನ್ನು ನಾನು ಮಾತ್ರ ಉಪಯೋಗಿಸುತ್ತೇನೆಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.

ಈ ಅರ್ಜಿಯ ಆಧಾರದ ಮೇಲೆ ಕೊಡಲಾದ ಲೈಸೆನ್ಸು ಈ ಅರ್ಜಿಯಲ್ಲಿ ಒದಗಿಸಿದ ಯಾವುದೇ ವಿವರವು ಸುಳ್ಳು ಅಥವಾ ನಿಜವಲ್ಲ ಅಥವಾ ಸರಿಯಾಗಿಲ್ಲ ಎಂದು ಯಾವುದೇ ಕಾಲದಲ್ಲಿ ಕಂಡುಬಂದರೆ ಅದು ಅಮಾನತ್ತಿಗೆ ಅಥವಾ ರದ್ದಿಯಾತಿಗೆ ಗುರಿಯಾಗುವುದೆಂದು ನಾನು ಮತ್ತೂ ಘೋಷಿಸುತ್ತೇನೆ.

ಸ್ಥಳ: ಅರ್ಜಿದಾರನ ರುಜು

ದಿನಾಂಕ:

**ಪರಿಶಿಷ್ಟ "ಖ ಗ"**
**(14 ಘ (1) ನಿಯಮವನ್ನು ನೋಡಿ)**
**ಲೈಸೆನ್ಸ್‌ನ ನಮೂನೆ**

.................................................. ಲೈಸೆನ್ಸ್‌ನ ಸಂಖ್ಯೆ ...........................

(ಇಲ್ಲಿ ಲೈಸೆನ್ಸುದಾರನ ಹೆಸರನ್ನು ನಮೂದಿಸಬೇಕು) ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ಮೇರೆಗೆ ಮಂಜೂರ್ಮಾಡಲಾಗಿದೆ.

ದಿನಾಂಕ: ................................

.................................................... ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು, ಕೆಳಕಂಡ ವಿವರಣೆಯ ಸ್ಟಾಂಪುಗಳು ಮತ್ತು ಸ್ಟಾಂಪು ಹಾಕಿದ ಕಾಗದಗಳನ್ನು ಎಂದರೆ (ಇಲ್ಲಿ ಸ್ಟಾಂಪುಗಳ ವಿವರಣೆಯನ್ನು ಸೇರಿಸಿ)

..................................................... (ಇಲ್ಲಿ ಅವುಗಳನ್ನು ಮಾರಾಟ ಮಾಡಬೇಕಾದಂಥ ಸ್ಥಳದ ಪೂರ್ಣ ವಿಳಾಸವನ್ನು ಸೇರಿಸಿ) ಮಾರಾಟ ಮಾಡಲು ನಿಮ್ಮನ್ನು ಈ ಮೂಲಕ ಅಧಿಕೃತಗೊಳಿಸಲಾಗಿದೆ.

ರುಜು

ಲೈಸೆನ್ಸು ಕೊಡುವ ಪ್ರಾಧಿಕಾರಿ

## ಪರಿಶಿಷ್ಟ 'ಖ ಫ'

**(14 ಚ (7) (10) ಮತ್ತು (11)ನೇ ನಿಯಮವನ್ನು ನೋಡಿ)**

**ರಿಜಿಸ್ಟರಿನ ನಮೂನೆ**

| ದಿನಾಂಕ | ಕ್ರಮ ಸಂಖ್ಯೆ | ಸ್ಟಾಂಪುಗಳ ವಿವರಣೆ | ಸ್ಟಾಂಪು ಮೌಲ್ಯ | ಯಾರ ಹೆಸರಿನಲ್ಲಿ ಸ್ಟಾಂಪುಗಳನ್ನು ಖರೀದಿಸಲಾಗಿದೆ | ಖರೀದಿದಾರನ ಅಥವಾ ಅವನ ಏಜೆಂಟನ ಹೆಸರು | ಖರೀದಿದಾರನ ಅಥವಾ ಅವನ ಏಜೆಂಟನ ವಿಳಾಸ | ಖರೀದಿದಾರನ ಅಥವಾ ಅವನ ಏಜೆಂಟನ ರುಜು ಅಥವಾ ಎಡಗೈ ಹೆಬ್ಬೆಟ್ಟು ಗುರುತು |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |
| | | | | | | | |

## ಪರಿಶಿಷ್ಟ 'ಖ ಜ'

**(14 ಚ (13)ನೇ ನಿಯಮವನ್ನು ನೋಡಿ)**

...................................... ರಂದು (ಇಲ್ಲಿ ದಿನಾಂಕ .................. ತಿಂಗಳು ಮತ್ತು ವರ್ಷವನ್ನು ನಿರ್ದಿಷ್ಟಪಡಿಸಿ) ಮಾರಾಟಕ್ಕಾಗಿ ಲಭ್ಯವಿರುವ ಸ್ಟಾಂಪುಗಳು ಮತ್ತು ಸ್ಟಾಂಪ್ ಹಾಕಿದ ಕಾಗದಗಳ ದಾಸ್ತಾನನ್ನು ತೋರಿಸುವ ವಿವರ ಪತ್ರ

ಸ್ಟಾಂಪುಗಳ ಪ್ರವರ್ಗ ಮತ್ತು ಹೆಸರು — ಒಟ್ಟು ಮೌಲ್ಯ

ಕ್ರಮ ಸಂಖ್ಯೆ .................................... — .............................

| ನ್ಯಾಯಿಕ | ನ್ಯಾಯಿಕೇತರ | ರೆವೆನ್ಯೂ | ನ್ಯಾಯಿಕ | ನ್ಯಾಯಿಕೇತರ | ರೆವೆನ್ಯೂ |
|---|---|---|---|---|---|
| 1 | 2 | | | 3 | |
| | | | | | |

ಲೈಸೆನ್ಸುದಾರನ ಹೆಸರು

## ಪರಿಶಿಷ್ಟ 'ಗ'
## (ನಿಯಮಗಳ 18ನೇ ನಿಯಮ ನೋಡಿ)
## ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 16ನೇ ಪ್ರಕರಣದ ಮೇರೆಗಿನ ಅರ್ಜಿ ನಮೂನೆ

ಸ್ಥಳ:

ದಿನಾಂಕ:

..........................................ನ ರಿಜಿಸ್ಟ್ರಾರ್; ಸಬ್ ರಿಜಿಸ್ಟ್ರಾರ್‌ಗೆ,

ಮಾನ್ಯರೆ,

ನಾನು ಇದರೊಂದಿಗೆ ............................................ ಪತ್ರವನ್ನು ಹಾಜರುಪಡಿಸುತ್ತೇನೆ ಮತ್ತು ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 16ನೇ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೊದಲು ನಮೂದಿಸಿದ ದಸ್ತಾವೇಜಿನ ಮೇಲೆ ಕ್ರಮಬದ್ಧವಾಗಿ ಸಂದಾಯ ಮಾಡಿರುವ ಸ್ಟಾಂಪನ್ನು ಎರಡನೆಯದರ ಮೇಲೆ ಸೂಚಿಸಬೇಕೆಂದು ಕೋರುತ್ತೇನೆ.

(ದಸ್ತಾವೇಜಿನ ಸ್ವರೂಪ ಮತ್ತು ದಿನಾಂಕವನ್ನು ನಿರ್ದಿಷ್ಟಪಡಿಸಬೇಕು)

ತಮ್ಮ ವಿಶ್ವಾಸಿ

ರುಜು

## ಕರ್ನಾಟಕ ಸ್ಟಾಂಪು (ಲಿಖಿತಗಳ ಕಡಿಮೆ ಮೌಲ್ಯಮಾಪನವನ್ನು ತಡೆಗಟ್ಟುವ) ನಿಯಮಗಳು, 1977
## ವಿಷಯಗಳ ಅನುಕ್ರಮಣಿಕೆ


1. ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮಾರುಕಟ್ಟೆ ಮೌಲ್ಯದ ವಿವರವನ್ನು ಒದಗಿಸುವುದು
4. 45ಕ ಪ್ರಕರಣದ ಮೇರೆಗಿನ ಉಲ್ಲೇಖವನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ
5. ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿನ ತತ್ವಗಳು
6. ತಾತ್ಕಾಲಿಕ ಮಾರುಕಟ್ಟೆ ಮೌಲ್ಯವನ್ನು ನಿರ್ಣಯಿಸಿದ ತರುವಾಯದ ಪ್ರಕ್ರಿಯೆ
7. ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವ ಅಂತಿಮ ಆದೇಶ
8. ನ್ಯಾಯವಾದಿ ಅಥವಾ ಅಧಿಕೃತ ಏಜೆಂಟನ ಮೂಲಕ ಹಾಜರಾಗುವುದು
9. ಅಪೀಲುಗಳು
10. ಅಪೀಲಿನ ವಿಲೆಗಾಗಿನ ಪ್ರಕ್ರಿಯೆ
11. ಅಪೀಲಿನ ಸುನಾವಣೆ

12. ಅಪೀಲಿನಲ್ಲಿನ ಆದೇಶ

13. ಡೆಪ್ಯುಟಿ ಕಮೀಷನರನಿಗೆ ದಾಖಲೆಗಳನ್ನು ಹಿಂತಿರುಗಿಸುವುದು

14. ಪ್ರಕ್ರಿಯಾ ನಿಯಮಗಳು

15. ಪಕ್ಷಕಾರರಿಗೆ ನೋಟೀಸು ಮತ್ತು ಆದೇಶಗಳನ್ನು ನೀಡುವ ರೀತಿ
    ನಮೂನೆಗಳು

**ಅಧಿಸೂಚನೆ ಸಂಖ್ಯೆ ಆರ್‌ಡಿ 73, ಇಎಸ್‌ಟಿ 74**
**ಕರ್ನಾಟಕ ರಾಜ್ಯಪತ್ರ ದಿನಾಂಕ: 10ನೇ ಮಾರ್ಚ್ 1977**
**ಬೆಂಗಳೂರು, ದಿನಾಂಕ 2ನೇ ಮಾರ್ಚ್ 1977**

**ಜಿ.ಎಸ್.ಆರ್. 81:–** ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 34) 45–ಕ ಮತ್ತು 68ನೇ ಪ್ರಕರಣಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸುತ್ತದೆ, ಎಂದರೆ:–

**1. ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಸ್ಟ್ಯಾಂಪ್ (ಲಿಖಿತಗಳ ಕಡಿಮೆ ಮೌಲ್ಯ ಮಾಪನವನ್ನು ತಡೆಗಟ್ಟುವ) ನಿಯಮಗಳು, 1977 ಎಂದು ಕರೆಯತಕ್ಕದ್ದು.

(2) ಅವು ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:–** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) "ಅಧಿನಿಯಮ" ಎಂದರೆ ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ ಕ್ರಮಾಂಕ 34);

(ಖ) "ಅಧಿಕೃತ ಏಜೆಂಟ್" ಎಂದರೆ–

(i) ತನ್ನ ಯಜಮಾನನ ಪರವಾಗಿ ಕಾರ್ಯನಿರ್ವಹಿಸಲು ಅವನನ್ನು ಅಧಿಕೃತಗೊಳಿಸುವ ಮುಖ್ತ್ಯಾರ ನಾಮೆಯನ್ನು ಪಡೆದಿರುವ ವ್ಯಕ್ತಿ; ಅಥವಾ

(ii) ತನ್ನ ಯಜಮಾನನ ಹಸ್ತಾಕ್ಷರದೊಂದಿಗೆ ಬರಹದಲ್ಲಿನ ಅಧಿಕಾರದ ಮೂಲಕ ಶಕ್ತಗೊಳಿಸಿದ ಏಜೆಂಟ್;

(ಗ) "ನಮೂನೆ" ಎಂದರೆ ಈ ನಿಯಮಗಳಿಗೆ ಜೋಡಿಸಿದ ನಮೂನೆ;

(ಘ) "ನೋಂದಾಯಿಸುವ ಅಧಿಕಾರಿ" ಎಂದರೆ ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ XVI) ಮೇರೆಗೆ ನೇಮಕಗೊಂಡ ನೋಂದಣಿ ಅಧಿಕಾರಿ;

(ಙ) "ಪ್ರಕರಣ" ಎಂದರೆ ಈ ಅಧಿನಿಯಮದ ಒಂದು ಪ್ರಕರಣ.

**ಮಾರುಕಟ್ಟೆ ಮೌಲ್ಯದ ವಿವರವನ್ನು ಒದಗಿಸುವುದು:–** (1) ಲಿಖಿತವು ಸ್ವತ್ತುಗಳ ಹಲವಾರು ಬಾಬುಗಳಿಗೆ ಸಂಬಂಧಪಟ್ಟಿದ್ದರೆ, ಪ್ರತಿಯೊಂದು ಬಾಬಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಮಾರುಕಟ್ಟೆ ಮೌಲ್ಯವನ್ನು ನಿರ್ದಿಷ್ಟಪಡಿಸತಕ್ಕದ್ದು. ಈ ಉದ್ದೇಶಕ್ಕಾಗಿ, ದಸ್ತಾವೇಜನ್ನು ಬರೆದುಕೊಡುವ ಪಕ್ಷಕಾರನು, ಅದರಲ್ಲಿ ಒಳಗೊಂಡ ಸ್ವತ್ತುಗಳ ಹಲವಾರು ಬಾಬುಗಳ ಬಗ್ಗೆ ಮಾಹಿತಿಯನ್ನು ಮತ್ತು ಈ ಪ್ರತಿಯೊಂದು ಬಾಬುಗಳ ಬಗ್ಗೆ ಪ್ರತ್ಯೇಕವಾಗಿ ಮಾರುಕಟ್ಟೆ ಮೌಲ್ಯದ ತನ್ನ ಸ್ವಂತ ನಿರ್ಧರಣೆಯನ್ನು (1ನೇ ಸಂಖ್ಯೆಯ ನಮೂನೆಯಲ್ಲಿ) ಒದಗಿಸಿ, ಲಿಖಿತಕ್ಕೆ ಪ್ರತ್ಯೇಕ ವಿವರ ಪತ್ರವನ್ನು ಲಗತ್ತಿಸತಕ್ಕದ್ದು.

**ವಿವರಣೆ:–** (1) ಲಿಖಿತವು ಹಲವಾರು ಸರ್ವೆ ನಂಬರುಗಳನ್ನು ಅಥವಾ ಉಪ–ವಿಭಾಗ ನಂಬರುಗಳನ್ನು ಒಳಗೊಂಡಿದ್ದರೆ, ಸಂದರ್ಭಾನುಸಾರ ಪ್ರತಿಯೊಂದು ಸರ್ವೆ ನಂಬರು ಅಥವಾ ಉಪ ವಿಭಾಗ ನಂಬರಿನಲ್ಲಿ ಒಳಗೊಂಡ ಭೂಮಿಗಾಗಿ ಮಾರುಕಟ್ಟೆ ಮೌಲ್ಯವನ್ನು ಪ್ರತ್ಯೇಕವಾಗಿ ನಿರ್ದಿಷ್ಟಪಡಿಸತಕ್ಕದ್ದು.

(2) ನೋಂದಾಯಿಸುವ ಅಧಿಕಾರಿಯು, ಲಿಖಿತವನ್ನು ನೋಂದಾಯಿಸುವುದಕ್ಕೆ ಮುಂಚೆ, ಪಕ್ಷಕಾರನು ಲಿಖಿತದ ಜೊತೆಗೆ, (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಿದಂತೆ ಪ್ರತಿಯೊಂದು ಸ್ವತ್ತಿನ ಮಾರುಕಟ್ಟೆ

ಮೌಲ್ಯವನ್ನು ಪ್ರತ್ಯೇಕವಾಗಿ ತೋರಿಸುವ ಒಂದು ವಿವರ ಪತ್ರವನ್ನು ಲಗತ್ತಿಸಿದ್ದಾನೆಂದು ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು.

(3) ನೋಂದಾಯಿಸುವ ಅಧಿಕಾರಿಯು, ಲಿಖಿತದಲ್ಲಿ ಮಾರುಕಟ್ಟೆ ಮೌಲ್ಯವನ್ನು ಸರಿಯಾಗಿ ಒದಗಿಸಲಾಗಿದೆಯೇ ಎಂಬುದನ್ನು ಕಂಡುಕೊಳ್ಳುವ ಉದ್ದೇಶಕ್ಕಾಗಿ, ತನಗೆ ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಬಹುದು. ಅವನು, ಸಂಬಂಧಪಟ್ಟ ಪಕ್ಷಕಾರನಿಂದ ಆ ವಿಷಯದ ಬಗ್ಗೆ ಯಾವುದೇ ಮಾಹಿತಿಯನ್ನು ಪಡೆಯಬಹುದು ಮತ್ತು ಯಾವನೇ ಸರ್ಕಾರಿ ಅಧಿಕಾರಿ ಅಥವಾ ಪ್ರಾಧಿಕಾರಿಯ ಬಳಿ ಇಟ್ಟಿರುವ ಯಾವುದೇ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು.

(4) ಈ ನಿಯಮದ ಉದ್ದೇಶಕ್ಕಾಗಿ, ಮಾರುಕಟ್ಟೆ ಮೌಲ್ಯದ ವಿವರ ಪತ್ರವು, ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 45–ಕ ಪ್ರಕರಣದಲ್ಲಿ ನಮೂದಿಸಿದ ಹಸ್ತಾಂತರಣ, ವಿನಿಮಯ ಅಥವಾ ದಾನ ಲಿಖಿತಗಳಿಗೆ ಮಾತ್ರ ಅನ್ವಯವಾಗತಕ್ಕದ್ದು.

**4. 45–ಕ ಪ್ರಕರಣದ ಮೇರೆಗಿನ ಉಲ್ಲೇಖವನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ:–** (1) ನೋಂದಾಯಿಸುವ ಅಧಿಕಾರಿಯಿಂದ 45–ಕ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಉಲ್ಲೇಖವನ್ನು ಸ್ವೀಕರಿಸಿದ ಮೇಲೆ ಡೆಪ್ಯುಟಿ ಕಮಿಷನರನು,–

(i) ಯಾವ ವ್ಯಕ್ತಿಯು ಲಿಖಿತವನ್ನು ಬರೆದುಕೊಟ್ಟಿರುವನೋ ಆ ಪ್ರತಿಯೊಬ್ಬ ವ್ಯಕ್ತಿಗೆ, ಮತ್ತು

(ii) ಯಾವ ವ್ಯಕ್ತಿಯು ಹೆಸರಿಗೆ ಲಿಖಿತವನ್ನು ಬರೆದುಕೊಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಗೆ

– IIನೇ ನಮೂನೆಯಲ್ಲಿ ಒಂದು ನೋಟೀಸನ್ನು, ಆ ನೋಟೀಸು ಜಾರಿಯಾದ ದಿನಾಂಕದಿಂದ 21 ದಿನಗಳೊಳಗಾಗಿ, ಉಲ್ಲೇಖವನ್ನು ಅವನು ಸ್ವೀಕರಿಸುವುದರ ಬಗ್ಗೆ ತಿಳಿಸುವ ಮತ್ತು ಲಿಖಿತದಲ್ಲಿ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಸತ್ಯವಾಗಿ ತಿಳಿಸಲಾಗಿದೆಯೆಂಬುದನ್ನು ತೋರಿಸಲು ಬರಹದಲ್ಲಿ, ಅವನ ಮನವಿ ಯಾವುದಾದರೂ ಇದ್ದರೆ ಅದನ್ನು ತನಗೆ ಒಪ್ಪಿಸಬೇಕೆಂದು ಕೇಳುವ ಮತ್ತು ಅವನ ಮನವಿಯನ್ನು ಸಮರ್ಥಿಸಲು ಅವನಲ್ಲಿರುವ ಎಲ್ಲ ಸಾಕ್ಷ್ಯವನ್ನು ಸಹ ಹಾಜರುಪಡಿಸಲು ಕೊಡತಕ್ಕದ್ದು.

(2) ಡೆಪ್ಯುಟಿ ಕಮಿಷನರನು, ಅವನು ಸೂಕ್ತವೆಂದು ಯೋಚಿಸಿದರೆ, (1)ನೇ ಉಪ–ನಿಯಮದ ಮೇರೆಗೆ ಯಾರಿಗೆ ನೋಟೀಸನ್ನು ಕೊಡಲಾಗಿದೆಯೋ ಆ ಯಾವನೇ ವ್ಯಕ್ತಿಯ ಹೇಳಿಕೆಯನ್ನು ದಾಖಲು ಮಾಡಬಹುದು.

(3) ಡೆಪ್ಯುಟಿ ಕಮಿಷನರನು, ಅವನ ವಿಚಾರಣೆಯ ಉದ್ದೇಶಕ್ಕಾಗಿ,–

(i) ಯಾವುದೇ ಸಾರ್ವಜನಿಕ ಕಛೇರಿ, ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿರುವ ಅಧಿಕಾರಿ ಅಥವಾ ಪ್ರಾಧಿಕಾರಿಯಿಂದ ಯಾವುದೇ ಮಾಹಿತಿ ಅಥವಾ ದಾಖಲೆಯನ್ನು ತರಿಸಿಕೊಳ್ಳಬಹುದು;

(ii) ಯಾವನೇ ಸಾರ್ವಜನಿಕ ವ್ಯಕ್ತಿ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿರುವ ಅಧಿಕಾರಿ ಅಥವಾ ಪ್ರಾಧಿಕಾರಿಯನ್ನು ಪರೀಕ್ಷಿಸಬಹುದು ಮತ್ತು ಅವರ ಹೇಳಿಕೆಗಳನ್ನು ದಾಖಲು ಮಾಡಬಹುದು; ಮತ್ತು

(iii) ಸಂಬಂಧಪಟ್ಟ ಪಕ್ಷಕಾರರಿಗೆ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಸ್ವತ್ತನ್ನು ಪರಿಶೀಲಿಸಬಹುದು.

(4) (i)ನೇ ಉಪ–ನಿಯಮದ ಮೇರೆಗೆ ಯಾರಿಗೆ ನೋಟೀಸನ್ನು ಕೊಡಲಾಗಿದೆಯೋ ಆ ವ್ಯಕ್ತಿಯಿಂದ ಸ್ವೀಕರಿಸಿದ ಮನವಿಗಳು, ಯಾವುದಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಅವನ ಮುಂದೆ ಇರುವ ದಾಖಲೆಗಳನ್ನು ಮತ್ತು ಸಾಕ್ಷ್ಯಗಳನ್ನು ಪರೀಕ್ಷಿಸಿದ ತರುವಾಯ, ಡೆಪ್ಯುಟಿ ಕಮಿಷನರನು, ಸ್ವತ್ತುಗಳ ಮಾರುಕಟ್ಟೆ ಮೌಲ್ಯವನ್ನು ಮತ್ತು ಸಂದಾಯ ಮಾಡಬೇಕಾದ ಸುಂಕವನ್ನು ತಾತ್ಕಾಲಿಕವಾಗಿ ನಿರ್ಧರಿಸಿ,

ಬರಹದಲ್ಲಿ ಆದೇಶವನ್ನು ಮಾಡತಕ್ಕದ್ದು. ಆ ತಾತ್ಕಾಲಿಕ ಮಾರುಕಟ್ಟೆ ಮೌಲ್ಯವನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಯಿತೋ ಆ ಆಧಾರವನ್ನು ಆ ಆದೇಶದಲ್ಲಿ ಸ್ಪಷ್ಟವಾಗಿ ಸೂಚಿಸತಕ್ಕದ್ದು.

**5. ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿನ ತತ್ವಗಳು:–** ಡೆಪ್ಯುಟಿ ಕಮಿಷನರನು ಸಾಧ್ಯವಾದಷ್ಟು ಮಟ್ಟಿಗೆ ತಾತ್ಕಾಲಿಕ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವಾಗ ಈ ಕೆಳಕಂಡ ಅಂಶಗಳಿಗೂ ಸಹ ಗಮನ ಕೊಡತಕ್ಕದ್ದು:–

(1) ಭೂಮಿಗಳ ಸಂದರ್ಭದಲ್ಲಿ–

(i) ಖುಷ್ಕಿ, ಬಾಗಾಯ್ತು, ತರಿ ಮತ್ತು ಅಂಥದೇ ಭೂಮಿಯ ವರ್ಗೀಕರಣ;

(ii) ಮೋಜಣಿ ದಾಖಲೆಗಳಲ್ಲಿನ ಮಣ್ಣಿನ ಹಲವಾರು ವರ್ಗಗಳ ಮೇರೆಗೆ ವರ್ಗೀಕರಣ;

(iii) ಪ್ರತಿಯೊಂದು ವರ್ಗೀಕರಣಕ್ಕಾಗಿ ಕಂದಾಯ ನಿರ್ಧರಣೆಯ ದರ;

(iv) ಸಂಬಂಧಪಟ್ಟ ಭೂಮಿಯ ಮೌಲ್ಯ ನಿರ್ಣಯವನ್ನು ಪ್ರಭಾವಿತಗೊಳಿಸುವ ಇತರ ಅಂಶಗಳು;

(v) ಲಿಖಿತದ ಪಕ್ಷಕಾರನು ಅಥವಾ ಇತರ ವ್ಯಕ್ತಿಯು ನಮೂದಿಸಿದ, ವಿಶೇಷವಾಗಿ ಪರ್ಯಾಲೋಚಿಸಬೇಕಾದಂಥ ಅಂಶಗಳು, ಯಾವುದಾದರೂ ಇದ್ದರೆ, ಅವು;

(vi) ಹೊಂದಿಕೊಂಡಿರುವ ಭೂಮಿಯ ಅಥವಾ ಆಸುಪಾಸಿನಲ್ಲಿರುವ ಭೂಮಿಗಳ ಮೌಲ್ಯ;

(vii) ನಿರ್ಧರಣೆ ಮಾಡುವವರೆಗೆ ಒಂದಾದ ಮೇಲೊಂದರಂತೆ ಬರುವ ಐದು ವರ್ಷಗಳಿಗಾಗಿನ ಭೂಮಿಯಿಂದ ಬರುವ ವಾರ್ಷಿಕ ಸರಾಸರಿ ಹುಟ್ಟುವಳಿ, ರಸ್ತೆ ಮತ್ತು ಮಾರುಕಟ್ಟೆಗೆ ಇರುವ ಸಾಮೀಪ್ಯ, ಗ್ರಾಮದ ನಿವೇಶನದಿಂದ ಇರುವ ದೂರ, ಸಾಮಾನ್ಯವಾಗಿ ಅದು ಇರುವ ಸ್ಥಳ, ಭೂಮಿಯ ಮಟ್ಟ, ಸಾರಿಗೆ ಸೌಲಭ್ಯಗಳು, ಕೆರೆಗಳು, ಬಾವಿಗಳು ಮತ್ತು ಪಂಪ್‌ಸೆಟ್‌ಗಳಂಥ ನೀರಾವರಿಗಾಗಿ ಲಭ್ಯವಿರುವ ಸೌಲಭ್ಯಗಳು;

(viii) ಭೂಮಿಯ ಮೇಲೆ ಬೆಳೆಸಿದ ಬೆಳೆಗಳ ಸ್ವರೂಪ;

(2) ಮನೆ ನಿವೇಶನಗಳ ಸಂದರ್ಭದಲ್ಲಿ,–

(i) ಆ ಸ್ಥಳದಲ್ಲಿನ ಮನೆ ನಿವೇಶನಗಳ ಸಾಮಾನ್ಯ ಮೌಲ್ಯ;

(ii) ರಸ್ತೆ, ರೈಲ್ವೆ ನಿಲ್ದಾಣ, ಬಸ್ ಮಾರ್ಗಗಳಿಗೆ ಇರುವ ಸಾಮೀಪ್ಯ;

(iii) ಮಾರುಕಟ್ಟೆ, ಅಂಗಡಿ ಮತ್ತು ಅಂತಹವುಗಳಿಗೆ ಇರುವ ಸಾಮೀಪ್ಯ;

(iv) ಸರ್ಕಾರಿ ಕಚೇರಿಗಳು, ಆಸ್ಪತ್ರೆಗಳು ಮತ್ತ ಶೈಕ್ಷಣಿಕ ಸಂಸ್ಥೆಗಳಂಥ ಸ್ಥಳಗಳಲ್ಲಿ ಲಭ್ಯವಿರುವ ಸೌಕರ್ಯಗಳು;

(v) ಆಸುಪಾಸಿನಲ್ಲಿನ ಅಭಿವೃದ್ಧಿ ಚಟುವಟಿಕೆಗಳು, ಔದ್ಯಮಿಕ ಮೇಲ್ಪಾಟುಗಳು;

(vi) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳ ತೆರಿಗೆ ನಿರ್ಧರಣೆಯನ್ನು ಉಲ್ಲೇಖಿಸಿ, ಭೂಮಿ ತೆರಿಗೆ ಮತ್ತು ನಿವೇಶನಗಳ ಮೌಲ್ಯ ನಿರ್ಣಯ;

(vii) ನಿವೇಶನದ ಮೌಲ್ಯ ನಿರ್ಣಯಕ್ಕೆ ವಿಶೇಷವಾಗಿ ಸಂಬಂಧಪಟ್ಟಿರುವ ಇತರ ಯಾವುದೇ ವೈಶಿಷ್ಟ್ಯ; ಮತ್ತು

(viii) ಪಕ್ಷಕಾರರು ನಿವೇದಿಸಿದ, ಪ್ರಕರಣದ ಯಾವುದೇ ವಿಶೇಷ ವೈಶಿಷ್ಟ್ಯಗಳು;

(3) ಕಟ್ಟಡಗಳ ಸಂದರ್ಭದಲ್ಲಿ,–

(i) ಭೂಮಿಯ ವಿಸ್ತೀರ್ಣ;

(ii) ಪ್ರತಿಯೊಂದು ಮಹಡಿಯ ಮೇಲುಪಾಯದ ವಿಸ್ತೀರ್ಣ ಮತ್ತು ಕಟ್ಟಿದ ಭಾಗ;

(iii) ಕಟ್ಟಿದ ವರ್ಷ;

(iv) ಗೋಡೆಯ ಸಾಮಗ್ರಿ ಮತ್ತು ಮೇಲ್‌ಚಾವಣಿಯ ಸಾಮಗ್ರಿ;

(v) ಕಟ್ಟಿರುವಂಥ ಸ್ಥಳ;

(vi) ನೀರು ಸರಬರಾಜು, ವಿದ್ಯುತ್ ಸರಬರಾಜು (ಸಾಮಾನ್ಯ ಅಥವಾ ಸರ್ವ ವಿದ್ಯುತ್), ಗ್ರಾಮಸಾರ ಚರಂಡಿ, ಬಾವಿ ಮತ್ತು ಗ್ಯಾರೇಜುಗಳಂಥ ಒದಗಿಸಿದ ಸೌಕರ್ಯಗಳು;

(vii) ಇಳಿತಾಯದ ದರ;

(viii) ದರಗಳಲ್ಲಿನ ಏರಿಳಿತ;

(ix) ಮೌಲ್ಯದ ಮೇಲೆ ಸಂಬಂಧವನ್ನು ಹೊಂದಿರುವ ಇತರ ಯಾವುದೇ ವೈಶಿಷ್ಟ್ಯಗಳು;

(x) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ತೆರಿಗೆ ನಿರ್ಧರಣೆ ದಾಖಲೆಗಳಿಗೆ ಸಂಬಂಧಿಸಿದ ಸ್ವತ್ತು ತೆರಿಗೆ;

(xi) ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸಲಾಗುತ್ತಿದೆಯೋ ಆ ಉದ್ದೇಶ ಮತ್ತು ಕಟ್ಟಡದಿಂದ ಬಾಡಿಗೆ ರೂಪದಲ್ಲಿ ಪ್ರತಿವರ್ಷ ಪಡೆದ ಆದಾಯ, ಯಾವುದಾದರೂ ಇದ್ದರೆ, ಅದು;

(xii) ಮೌಲ್ಯ ನಿರ್ಣಯದ ಮೇಲೆ ಸಂಬಂಧವನ್ನು ಹೊಂದಿರುವ ಯಾವುದೇ ವಿಶೇಷ ವೈಶಿಷ್ಟ್ಯ;

(4) ಭೂಮಿಗಳು, ಮನೆ ನಿವೇಶನಗಳು ಮತ್ತು ಕಟ್ಟಡಗಳನ್ನು ಹೊರತುಪಡಿಸಿ ಇತರ ಸ್ವತ್ತುಗಳು–

(i) ಆ ಸ್ವತ್ತಿನ ಸ್ವರೂಪ ಮತ್ತು ಸ್ಥಿತಿಗತಿಗಳು;

(ii) ಸ್ವತ್ತನ್ನು ಉಪಯೋಗಿಸಲಾಗುತ್ತಿರುವಂಥ ಉದ್ದೇಶ; ಮತ್ತು

(iii) ಸ್ವತ್ತಿನ ಮೌಲ್ಯ ನಿರ್ಣಯದ ಮೇಲೆ ಸಂಬಂಧವನ್ನು ಹೊಂದಿರುವ ಯಾವುದೇ ಇತರ ವಿಶೇಷ ವೈಶಿಷ್ಟ್ಯಗಳು;

**6. ತಾತ್ಕಾಲಿಕ ಮಾರುಕಟ್ಟೆ ಮೌಲ್ಯವನ್ನು ನಿರ್ಣಯಿಸಿದ ತರುವಾಯದ ಪ್ರಕ್ರಿಯೆ:–** ಡೆಪ್ಯುಟಿ ಕಮಿಷನರನು, ಸ್ವತ್ತುಗಳ ಮಾರುಕಟ್ಟೆ ಮೌಲ್ಯವನ್ನು ಮತ್ತು ಸಂದಾಯ ಮಾಡಬೇಕಾದ ಸುಂಕವನ್ನು ತಾತ್ಕಾಲಿಕವಾಗಿ ನಿರ್ಧರಿಸುವ ಅವನ ಆದೇಶದ ಒಂದು ಪ್ರತಿಯನ್ನು; IIIನೇ ನಮೂನೆಯಲ್ಲಿನ ಒಂದು ನೋಟೀಸಿನ ಜೊತೆಗೆ ಸುಂಕವನ್ನು ಸಂದಾಯ ಮಾಡಲು ಹೊಣೆಗಾರರಾಗಿರುವ ಎಲ್ಲಾ ವ್ಯಕ್ತಿಗಳಿಗೆ ಕಳುಹಿಸತಕ್ಕದ್ದು ಮತ್ತು ನೋಟೀಸಿನಲ್ಲಿ ಸ್ಪಷ್ಟಪಡಿಸಿದ ಕಾಲದೊಳಗೆ ಅಂಥ ಮಾರುಕಟ್ಟೆ ಮೌಲ್ಯದ ಅಂಥ ನಿರ್ಧರಣೆಗೆ ಅವರ ಆಕ್ಷೇಪಣೆಗಳೇನಾದರೂ ಇದ್ದರೆ, ಅವುಗಳನ್ನು ದಾಖಲ್ಮಾಡಲು ಪಕ್ಷಕಾರರನ್ನು ಕೋರತಕ್ಕದ್ದು. ಡೆಪ್ಯುಟಿ ಕಮಿಷನರನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅವನು ನಿಗದಿಪಡಿಸಬಹುದಾದಂಥ ಇತರ ದಿನದಂದು ಪಕ್ಷಕಾರರ

ಸುನಾವಣೆಯನ್ನು ಸಹ ಮಾಡತಕ್ಕದ್ದು, ಹಾಗೂ ಸದರಿ ನೋಟೀಸು ತಲುಪಿದ ತರುವಾಯ ಪಕ್ಷಕಾರರು ಹಾಜರಾಗಲು ತಪ್ಪಿದರೆ, ಏಕಪಕ್ಷೀಯವಾಗಿಯೂ ಸಹ ಮುಂದುವರಿಯಬಹುದು.

**7. ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವ ಅಂತಿಮ ಆದೇಶ:–** (1) ಡೆಪ್ಯುಟಿ ಕಮಿಷನರನು, ಬರಹದಲ್ಲಿ ಸ್ವೀಕರಿಸಿದ ಮತ್ತು ಸುನಾವಣೆ ಕಾಲದಲ್ಲಿ ಮಂಡಿಸಿದ ಮನವಿಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಅವನ ಮುಂದೆ ಇರಿಸಿದ ಎಲ್ಲಾ ಸುಸಂಗತ ಅಂಶಗಳನ್ನು ಮತ್ತು ಸಾಕ್ಷ್ಯವನ್ನು ಜಾಗರೂಕತೆಯಿಂದ ಪರ್ಯಾಲೋಚಿಸಿದ ತರುವಾಯ, ಸ್ವತ್ತುಗಳ ಮಾರುಕಟ್ಟೆ ಮೌಲ್ಯವನ್ನು ಮತ್ತು ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸುಂಕವನ್ನು ನಿರ್ಧರಿಸಿ ಆದೇಶವನ್ನು ಮಾಡತಕ್ಕದ್ದು; ಆ ಆದೇಶವನ್ನು ಪಕ್ಷಕಾರರಿಗೆ ತಿಳಿಸತಕ್ಕದ್ದು ಮತ್ತು ಸ್ಟಾಂಪ್ ಸುಂಕದ ಮೊಬಲಗಿನಲ್ಲಿ ವ್ಯತ್ಯಾಸ ಯಾವುದಾದರೂ ಇದ್ದರೆ, ಅದನ್ನು ಸಂಗ್ರಹಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಆದೇಶದ ಒಂದು ಪ್ರತಿಯನ್ನು ಸಂಬಂಧಪಟ್ಟ ನೋಂದಾಯಿಸುವ ಅಧಿಕಾರಿಗೆ ಅವನ ದಾಖಲೆಗಾಗಿ ಕಳುಹಿಸತಕ್ಕದ್ದು.

**8. ನ್ಯಾಯವಾದಿ ಅಥವಾ ಅಧಿಕೃತ ಏಜೆಂಟನ ಮೂಲಕ ಹಾಜರಾಗುವುದು:–** ಈ ಹಿಂದೆ ಹೇಳಿದ ನಿಯಮಗಳ ಮೇರೆಗಿನ ವಿಚಾರಣೆಯಲ್ಲಿ ಲಿಖಿತದ ಯಾವನೇ ಪಕ್ಷಕಾರನು, ಖುದ್ದಾಗಿಯಾಗಲಿ ಅಥವಾ ನ್ಯಾಯವಾದಿ ಅಥವಾ ಅಧಿಕೃತ ಏಜೆಂಟನ ಮೂಲಕವಾಗಿಯಾಗಲಿ ಹಾಜರಾಗಬಹುದು.

**9. ಅಪೀಲುಗಳು:–** (1) 45–ಕ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗಿನ ಅಪೀಲನ್ನು 7ನೇ ನಿಯಮದ ಮೇರೆಗೆ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವ ಡೆಪ್ಯುಟಿ ಕಮಿಷನರನ ಆದೇಶಗಳನ್ನು ತಿಳಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ಎಲ್ಲಾ ನ್ಯಾಯಾಧೀಶರಿಗೆ ಸಲ್ಲಿಸತಕ್ಕದ್ದು.

(2) ಅಪೀಲು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಅಪೀಲುದಾರನ ಪೂರ್ಣ ಹೆಸರು, ತಂದೆಯ ಹೆಸರು, ಅಥವಾ ಗಂಡನ ಹೆಸರು, ಉದ್ಯೋಗ ಮತ್ತು ವಿಳಾಸ;

(ii) ಲಿಖಿತವನ್ನು ಬರೆದುಕೊಡುವ ಪ್ರತಿಯೊಬ್ಬ ವ್ಯಕ್ತಿಯ ಪೂರ್ಣ ಹೆಸರು, ತಂದೆಯ ಹೆಸರು, ಅಥವಾ ಗಂಡನ ಹೆಸರು, ಉದ್ಯೋಗ ಮತ್ತು ವಿಳಾಸ;

(iii) ಲಿಖಿತದ ಮೇರೆಗೆ ಕ್ಲೇಮು ಮಾಡುವ ಪ್ರತಿಯೊಬ್ಬ ವ್ಯಕ್ತಿಯ ಪೂರ್ಣ ಹೆಸರು, ತಂದೆಯ ಹೆಸರು, ಅಥವಾ ಗಂಡನ ಹೆಸರು, ಉದ್ಯೋಗ ಮತ್ತು ವಿಳಾಸ;

(iv) ಲಿಖಿತದ ದಿನಾಂಕ ಮತ್ತು ಸ್ವರೂಪ;

(v) ನೋಂದಾಣಿ ಸಂಖ್ಯೆ, ನೋಂದಣಿ ದಿನಾಂಕ ಮತ್ತು ಲಿಖಿತವನ್ನು ನೋಂದಾಯಿಸಿದ ಕಛೇರಿಯ ಹೆಸರು;

(vi) ತಾಲ್ಲೂಕು ಮತ್ತು ನೋಂದಣಿ ಉಪ ಜಿಲ್ಲೆಯ ಹೆಸರಿನೊಂದಿಗೆ ಸ್ವತ್ತು ಇರುವಂಥ ನಗರ, ಪಟ್ಟಣ ಅಥವಾ ಗ್ರಾಮದ ಹೆಸರು;

(vii) ಯಾವ ಆದೇಶದ ವಿರುದ್ಧ ಅಪೀಲನ್ನು ಮಾಡಲಾಗಿದೆಯೋ ಆ ಡೆಪ್ಯುಟಿ ಕಮಿಷನರನ ಆ ಆದೇಶದ ಸಂಖ್ಯೆ ಮತ್ತು ದಿನಾಂಕ;

(viii) ಲಿಖಿತ ಪತ್ರದಲ್ಲಿ ಹೇಳಿದ ಸ್ವತ್ತಿನ ಮಾರುಕಟ್ಟೆ ಮೌಲ್ಯ;

(ix) ಡೆಪ್ಯುಟಿ ಕಮಿಷನರನು ನಿರ್ಧರಿಸಿದಂತೆ ಮಾರುಕಟ್ಟೆ ಮೌಲ್ಯ

**3. ಪ್ರತಿಯೊಂದು ಅಪೀಲಿನ ಜೊತೆಗೆ:–**

(i) ಯಾವ ಆದೇಶದ ವಿರುದ್ಧ ಅಪೀಲನ್ನು ಮಾಡಲಾಗಿದೆಯೋ ಆ ಆದೇಶದ ಮೂಲಪ್ರತಿ ಅಥವಾ ಪ್ರಮಾಣಿತ ಪ್ರತಿ;

(ii) ಲಿಖಿತದ ಮೂಲ ಅಥವಾ ಪ್ರಮಾಣಿತ ಪ್ರತಿ; ಮತ್ತು

(iii) ಅಪೀಲಿನ ಆಧಾರಗಳು

– ಇವುಗಳ ಇರತಕ್ಕದ್ದು.

4. ಪ್ರತಿಯೊಂದು ಅಪೀಲನ್ನು ಅಧಿಕಾರ ವ್ಯಾಪ್ತಿ ಹೊಂದಿರುವ ಜಿಲ್ಲಾ ನ್ಯಾಯಾಧೀಶನಿಗೆ ಖುದ್ದಾಗಿ ಅಥವಾ ನ್ಯಾಯವಾದಿಯ ಮೂಲಕ ಅಥವಾ ಅಧಿಕೃತ ಏಜೆಂಟನ ಮೂಲಕ ಸಲ್ಲಿಸತಕ್ಕದ್ದು. ಅವನು ಅದನ್ನು ಸ್ವೀಕರಿಸಿದ ದಿನಾಂಕವನ್ನು ಷರಾ ಮಾಡತಕ್ಕದ್ದು.

**10. ಅಪೀಲಿನ ವಿಲೆಗಾಗಿನ ಪ್ರಕ್ರಿಯೆ:–** (1) ಜಿಲ್ಲಾ ನ್ಯಾಯಾಧೀಶನು ಅಪೀಲನ್ನು ಅಂಗೀಕರಿಸಿದರೆ, ಅಪೀಲುದಾರನನ್ನು ಸುನಾವಣೆ ಮಾಡುವುದಕ್ಕಾಗಿ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು. ಜಿಲ್ಲಾ ನ್ಯಾಯಾಧೀಶನು, ಅಪೀಲನ್ನು ಯಾವ ದಿನಾಂಕದಂದು ಮತ್ತು ಯಾವ ಕಾಲ ಮತ್ತು ಯಾವ ಸ್ಥಳದಲ್ಲಿ ಸುನಾವಣೆ ಮಾಡತಕ್ಕದ್ದೆಂಬುದನ್ನು ತಿಳಿಸುವ ನೋಟೀಸನ್ನು ಅಪೀಲುದಾರನಿಗೆ ಕೊಡತಕ್ಕದ್ದು. ಅಂಥ ನೋಟೀಸು ಹಾಗೆ ಗೊತ್ತುಪಡಿಸಲಾದ ದಿನದಂದು ಅಥವಾ ಸುನಾವಣೆಯನ್ನು ಮುಂದೂಡಬಹುದಾದಂಥ ಇತರ ಯಾವುದೇ ದಿನದಂದು ಅಪೀಲುದಾರನು ಹಾಜರಾಗದಿದ್ದರೆ, ಅಪೀಲು ತಪ್ಪಿದ್ದಕ್ಕಾಗಿ ವಜಾ ಆಗಲು ಗುರಿಯಾಗಬಹುದು ಅಥವಾ ಗುಣಾವಗುಣಗಳ ಮೇಲೆ ವಿಲೆ ಆಗಬಹುದೆಂಬುದನ್ನು ಸಹ ನಿರೂಪಿಸತಕ್ಕದ್ದು.

(2) ಜಿಲ್ಲಾ ನ್ಯಾಯಾಧೀಶರು, ಅಪೀಲಿನ ಪ್ರತಿಯೊಂದಿಗೆ ನೋಟೀಸಿನ ಒಂದು ಪ್ರತಿಯನ್ನು, ಡೆಪ್ಯುಟಿ ಕಮಿಷನರನಿಗೆ ಕಳುಹಿಸತಕ್ಕದ್ದು ಮತ್ತು ಡೆಪ್ಯುಟಿ ಕಮಿಷನರನಿಂದ ಪ್ರಕರಣದ ದಾಖಲೆಗಳನ್ನು ಕೋರತಕ್ಕದ್ದು ಮತ್ತು ಪಡೆದುಕೊಳ್ಳತಕ್ಕದ್ದು.

**11. ಅಪೀಲಿನ ಸುನಾವಣೆ:–** ಗೊತ್ತುಪಡಿಸಿದ ದಿನಾಂಕದಂದು ಅಥವಾ ಪ್ರಕರಣವನ್ನು ಮುಂದೂಡಬಹುದಾದಂಥ ಇತರ ಯಾವುದೇ ದಿನಾಂಕದಂದು, ಜಿಲ್ಲಾ ನ್ಯಾಯಧೀಶನು, ಅಪೀಲುದಾರನನ್ನು ಮತ್ತು ಡೆಪ್ಯುಟಿ ಕಮಿಷನರನ ಪರವಾಗಿ ಹಾಜರಾದ ವ್ಯಕ್ತಿ ಯಾರಾದರೂ ಇದ್ದರೆ, ಅವನನ್ನು, ಸುನಾವಣೆ ಮಾಡತಕ್ಕದ್ದು.

**12. ಅಪೀಲಿನಲ್ಲಿನ ಆದೇಶ:–** 9ನೇ ನಿಯಮದ ಮೇರೆಗೆ ಅಪೀಲನ್ನು ಸುನಾವಣೆ ಮಾಡಿದ ಮತ್ತು ಪ್ರಕರಣದ ದಾಖಲೆಗಳನ್ನು ಪರೀಕ್ಷಿಸಿದ ತರುವಾಯ, ಜಿಲ್ಲಾ ನ್ಯಾಯಧೀಶನು, 45–ಕ ಪ್ರಕರಣದ (2)ನೇ ಉಪ–ಪ್ರಕರಣ ಅಥವಾ (3)ನೇ ಉಪ–ಪ್ರಕರಣದ ಮೇರೆಗಿನ ಡೆಪ್ಯುಟಿ ಕಮಿಷನರನ ಆದೇಶದಲ್ಲಿ ನಿರ್ಧರಿಸಲಾದಂತೆ ಸ್ವತ್ತುಗಳ ಮಾರುಕಟ್ಟೆ ಮೌಲ್ಯವು, ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ತೀರ್ಮಾನಿಸತಕ್ಕದ್ದು. ಜಿಲ್ಲಾ ನ್ಯಾಯಾಧೀಶನು, ಡೆಪ್ಯುಟಿ ಕಮಿಷನರನು ಮಾಡಿದ ಸ್ವತ್ತುಗಳ ಮೌಲ್ಯ ನಿರ್ಣಯವನ್ನು ಅಂಗೀಕರಿಸದೆ ಇರುವ ಸಂದರ್ಭದಲ್ಲಿ, ಅವನು ಸ್ವತ್ತುಗಳ ಸರಿಯಾದ ಮಾರುಕಟ್ಟೆ ಮೌಲ್ಯವನ್ನು ಮತ್ತು ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸುಂಕವನ್ನು ನಿರ್ಧರಿಸತಕ್ಕದ್ದು. ಜಿಲ್ಲಾ ನ್ಯಾಯಾಧೀಶನು, ತನ್ನ ತೀರ್ಮಾನವನ್ನು ಮತ್ತು

ಅದಕ್ಕಾಗಿನ ಕಾರಣಗಳನ್ನು ಆದೇಶದಲ್ಲಿ ಸೇರಿಸತಕ್ಕದ್ದು ಮತ್ತು ಅದನ್ನು ಅಪೀಲುದಾರನಿಗೆ, ಡೆಪ್ಯುಟಿ ಕಮಿಷನರನಿಗೆ ಮತ್ತು ಸಂಬಂಧಿಸಿದ ನೋಂದಾಯಿಸುವ ಅಧಿಕಾರಿಗೆ ತಿಳಿಸತಕ್ಕದ್ದು.

**13. ಡೆಪ್ಯುಟಿ ಕಮಿಷನರನಿಗೆ ದಾಖಲೆಗಳನ್ನು ಹಿಂತಿರುಗಿತುಸುವುದು:–** ಆದೇಶವನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಜಿಲ್ಲಾ ನ್ಯಾಯಾಧೀಶನು, ಡೆಪ್ಯುಟಿ ಕಮಿಷನರನ ಆ ದಾಖಲೆಗಳನ್ನು ಆ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು.

**14. ಪ್ರಕ್ರಿಯಾ ನಿಯಮಗಳು:–** (1) ಜಿಲ್ಲಾ ನ್ಯಾಯಾಧೀಶನು, ತಾನು ಸೂಕ್ತವೆಂದು ಯೋಚಿಸುವಂತೆ ಅಪೀಲಿನ ಸುನಾವಣೆಯನ್ನು ಕಾಲಕಾಲಕ್ಕೆ ಮುಂದೂಡಬಹುದು.

(2) ಜಿಲ್ಲಾ ನ್ಯಾಯಾಧೀಶನು ಯಾವುದೇ ಹಂತದಲ್ಲಿ ಅಪೀಲುದಾರನಿಂದ ಅಥವಾ ಡೆಪ್ಯುಟಿ ಕಮಿಷನರನಿಂದ ಯಾವುದೇ ಮಾಹಿತಿ, ದಾಖಲೆ ಅಥವಾ ಇತರ ಸಾಕ್ಷ್ಯವನ್ನು ಕೋರಬಹುದು.

(3) ಅಪೀಲು ವಿಚಾರಣೆಗೆ, ಅಪೀಲುದಾರನು ಖುದ್ದಾಗಿ ಅಥವಾ ನ್ಯಾಯವಾದಿ ಅಥವಾ ಒಬ್ಬ ಅಧಿಕೃತ ಏಜೆಂಟನ ಮೂಲಕ ಹಾಜರಾಗಬಹುದು.

(4) ಈ ನಿಯಮಗಳಲ್ಲಿ ಉಪ–ಬಂಧಿಸಿರದ ವಿಷಯಗಳ ಸಂಬಂಧವಾಗಿ, ಅಪೀಲುಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಗೆ ಸಂಬಂಧಿಸಿದ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (ಕೇಂದ್ರ ಅಧಿನಿಯಮ 1908ರ V) ಉಪ–ಬಂಧಗಳು, 45–ಕ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗಿನ ಅಪೀಲುಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**15. ಪಕ್ಷಕಾರರಿಗೆ ನೋಟೀಸು ಮತ್ತು ಆದೇಶಗಳನ್ನು ನೀಡುವ ರೀತಿ:–** 4ನೇ ಅಥವಾ 7ನೇ ನಿಯಮದ ಮೇರೆಗಿನ ಯಾವುದೇ ನೋಟೀಸು ಅಥವಾ ಆದೇಶವನ್ನು ಈ ಕೆಳಕಂಡ ರೀತಿಯಲ್ಲಿ ಜಾರಿ ಮಾಡತಕ್ಕದ್ದು, ಎಂದರೆ:–

(1) ನಿಗಮಿತ ಅಥವಾ ನಿಗಮಿತವಾಗಿರದ ಯಾವುದೇ ಕಂಪನಿ, ಸಂಘ ಅಥವಾ ವ್ಯಕ್ತಿಗಳ ಸಂಘದ ಸಂದರ್ಭದಲ್ಲಿ,–

(i) ಸಂದರ್ಭಾನುಸಾರ ಆ ಕಂಪೆನಿಯು, ಸೊಸೈಟಿ ಅಥವಾ ವ್ಯಕ್ತಿಗಳ ಸಂಘದ ಕಾರ್ಯದರ್ಶಿ ಅಥವಾ ಯಾವನೇ ನಿರ್ದೇಶಕ ಅಥವಾ ಇತರ ಮುಖ್ಯ ಅಧಿಕಾರಿಗೆ; ಅಥವಾ

(ii) ಸಂದರ್ಭಾನುಸಾರ, ಆ ಕಂಪೆನಿ, ಸೊಸೈಟಿ ಅಥವಾ ವ್ಯಕ್ತಿಗಳ ಸಂಘಕ್ಕೆ ನೋಂದಾಯಿತ ಕಛೇರಿಯಲ್ಲಿ ಅಥವಾ ಯಾವುದೇ ನೋಂದಾಯಿತ ಕಛೇರಿ ಇಲ್ಲದಿದ್ದರೆ ಆಗ ಸಂದರ್ಭಾನುಸಾರ ಕಂಪನಿ, ಸೊಸೈಟಿ ಅಥವಾ ವ್ಯಕ್ತಿಗಳ ಸಂಘವು ವ್ಯವಹಾರ ನಡೆಸುತ್ತಿರುವ ಸ್ಥಳದಲ್ಲಿ ಅದನ್ನು ಬಿಡುವ ಮೂಲಕ ಅಥವಾ ಅವುಗಳಿಗೆ ಸಂಬೋಧಿಸಿದ ನೋಂದಾಯಿತ ಅಂಚೆ ತಲುಪೊಪ್ಪಿಗೆ ಸಹಿತವಾಗಿ ಅದನ್ನು ಕಳಿಸುವ ಮೂಲಕ–

ಜಾರಿ ಮಾಡತಕ್ಕದ್ದು.

(2) ಯಾವುದೆ ಫರ್ಮಿನ ಸಂದರ್ಭದಲ್ಲಿ,–

(i) ಯಾರೇ ಒಬ್ಬ ಅಥವಾ ಹೆಚ್ಚು ಪಾಲುದಾರರಿಗೆ; ಅಥವಾ

(ii) ಪಾಲುಗಾರಿಕೆ ವ್ಯವಹಾರವು ನಡೆಯುತ್ತಿರುವಂಥ ಮುಖ್ಯ ಸ್ಥಳದಲ್ಲಿ, ಜಾರಿಯ ಕಾಲದಲ್ಲಿ ಪಾಲುಗಾರಿಕೆ ವ್ಯವಹಾರದ ನಿಯಂತ್ರಣ ಅಥವಾ ವ್ಯವಸ್ಥಾಪನೆಯನ್ನು ಹೊಂದಿರುವ ಯಾವನೇ ವ್ಯಕ್ತಿಗೆ

– ಜಾರಿ ಮಾಡತಕ್ಕದ್ದು.

(3) ಕುಟುಂಬದ ಸಂದರ್ಭದಲ್ಲಿ, ಅಂಥ ಕುಟುಂಬದ ಅಥವಾ ಅಂಥ ಕುಟುಂಬದ ಸ್ವತ್ತಿನ ವ್ಯವಸ್ಥಾಪನೆ ನಡೆಸುತ್ತಿರುವ ವ್ಯಕ್ತಿಗೆ (ಫ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಜಾರಿಮಾಡತಕ್ಕದ್ದು.

(4) ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ,–

(i) ಸಂಬಂಧಪಟ್ಟ ವ್ಯಕ್ತಿಗೆ ಅಥವಾ ಅವನ ನ್ಯಾಯವಾದಿಗೆ ಅಥವಾ ಅಧಿಕೃತ ಏಜಂಟನಿಗೆ ನೋಟೀಸು ಅಥವಾ ಆದೇಶವನ್ನು ವಶಾವಣೆ ಮಾಡುವ ಅಥವಾ ಕೊಡ ಮಾಡುವ ಮೂಲಕ; ಅಥವಾ

(ii) ಕುಟುಂಬದ ಯಾವನೇ ವಯಸ್ಕ ಸದಸ್ಯನಿಗೆ ನೋಟೀಸು ಅಥವಾ ಆದೇಶವನ್ನು ವಶಾವಣೆ ಅಥವಾ ಕೊಡ ಮಾಡುವ ಮೂಲಕ; ಅಥವಾ

(iii) ಸಂಬಂಧಪಟ್ಟ ವ್ಯಕ್ತಿಗಳಿಗೆ ನೋಟೀಸು ಅಥವಾ ಆದೇಶವನ್ನು ನೋಂದಾಯಿತ ಅಂಚೆ ತಲುಪೊಪ್ಪಿಗೆ ಸಹಿತ ಕಳುಹಿಸುವ ಮೂಲಕ; ಅಥವಾ

(iv) ಹಿಂದೆ ಹೇಳಿದ ಜಾರಿಯ ಯಾವುದೇ ವಿಧಾನಗಳು ಕಾರ್ಯಸಾಧ್ಯವಲ್ಲದಿದ್ದರೆ, ನೋಟೀಸು ಅಥವಾ ಆದೇಶವನ್ನು ಸಂಬಂಧಪಟ್ಟವನ, ತಿಳಿದು ಬಂದ ಕೊನೆಯ ನಿವಾಸದ ಅಥವಾ ವ್ಯವಹಾರದ ಸ್ಥಳದ ಎದ್ದು ಕಾಣುವ ಭಾಗದಲ್ಲಿ ಅಂಟಿಸುವುದರ ಮೂಲಕ

– ಜಾರಿ ಮಾಡತಕ್ಕದ್ದು.

## ಕಡಿಮೆ ಮೌಲ್ಯ ಮಾಪನವನ್ನು ತಡೆಗಟ್ಟುವ ನಿಯಮಗಳು
## ನಮೂನೆ – I
## (3ನೇ ನಿಯಮವನ್ನು ನೋಡಿ)

ಕರ್ನಾಟಕ ಸ್ಟಾಂಪುಗಳ (ಕಡಿಮೆ ಮೌಲ್ಯ ಮಾಪನವನ್ನು ತಡೆಗಟ್ಟುವ) ನಿಯಮಗಳು, 1977ರ 3ನೇ ನಿಯಮದ ಮೇರೆಗೆ ಸ್ವತ್ತಿನ ಮತ್ತು ಅದರ ಮಾರುಕಟ್ಟೆ ಮೌಲ್ಯದ ವಿವರಗಳ ನಿರೂಪಣೆ.

| | | | | |
|---|---|---|---|---|
| ಸಬ್ ರಿಜಿಸ್ಟ್ರಾರನ ಕಛೇರಿ | | ದಸ್ತಾವೇಜಿನ ಸಂಖ್ಯೆ ಮತ್ತು ವರ್ಷ | | |
| ಕ್ಲೇಮುದಾರನ ವಿಳಾಸ | | ಉಲ್ಲೇಖ<br>ಸ್ವತ್ತು ಇರುವ ಸ್ಥಳ | | |
| ಕ್ಲೇಮುದಾರನು ಹೊಂದಿರುವ ಭೂಮಿಯ ವಿವರಗಳು | ಖುಷ್ಕಿ | ತರಿ | ಬಾಗಾಯತ್ | ಸರಾಸರಿ ಮೊಬಲಗು ವಾರ್ಷಿಕ ಹುಟ್ಟುಳಿ<br><br>ರೂ.ಪೈ. |
| 1 ಭೂಮಿಯ ವಿಸ್ತೀರ್ಣ ಹೆಕ್ಟೇರುಗಳಲ್ಲಿ | | | | |
| 2 ಭೂಮಿಯ ಮಾದರಿ | | | | |
| 3 ಕಂದಾಯದ ನಿರ್ಧರಣೆ | | | | |
| 4 ರಚನೆಗಳು ಯಾವುವಾದರೂ ಇದ್ದರೆ | | | | |

| | | | | | | | |
|---|---|---|---|---|---|---|---|
| 5 | ಇತರ ಯಾವುವೇ ಅಂಶಗಳು | | | | | | |

| 6 | ಮನೆಯ/ ನಿವೇಶನದ ವಿವರಗಳು | ಚದರ ಅಡಿ | ಅಳತೆ | ಚದರ ಅಡಿ | ಪ್ರಮಾಣ ಪ್ರತಿ ಚ.ಗ. | ದರ | ಮೊಬಲಗು ರೂ.ಪೈ. |
|---|---|---|---|---|---|---|---|
| 1 | ನಿವೇಶನದ ವಿಸ್ತೀರ್ಣ | | | | | | |
| 2 | ಕಟ್ಟಡದ ಮಾದರಿ | | | | | | |
| 3 | ಮೇಲು ಪಾಯ ವಿಸ್ತೀರ್ಣ | | | | | | |
| 4 | ಗೋಡೆಯ ಮಾದರಿ | | | | | | |
| 5 | ಚಾವಣಿಯ ಮಾದರಿ | | | | | | |
| 6 | ಅನ್ವಯವಾಗುವ ಒಟ್ಟು ದರ | | | | | | |
| 7 | ರಚನೆಗಳ ಬೆಲೆ | | | | | | |
| 8 | ವಿಶೇಷ ಲಕ್ಷಗಳು<br>(ಕ) ಗ್ಯಾರೇಜು<br>(ಖ) ವಿದ್ಯುಚ್ಛಕ್ತಿ ಸ್ಥಾಪನೆ ಶೇಕಡಾ 5ರಂತೆ<br>(ಗ) ನಿರ್ಮಲೀಕರಣ ಶೇಕಡಾ 3ರಂತೆ, ನೀರು ಸರಬರಾಜು ಶೇಕಡಾ 5ರಂತೆ<br>(ಘ) ಬಾವಿ | | | | | | |
| 9 | ವಿಶೇಷ ಲಕ್ಷಣಗಳೂ ಒಳಗೊಂಡ ರಚನೆಯ ಒಟ್ಟು ಬೆಲೆ | | | | ಪ್ರಮಾನ ಪ್ರತಿ ಚದರ ಗಜ | ದರ | ಮೊಬಲಗು ರೂ.ಪೈ. |
| 10 | ಕಟ್ಟಿದ ವರ್ಷ<br>(          ) ಇಳಿತಾಯ | | | | | | |
| 11 | ರಚನೆಗಳ ನಿವ್ವಳ ಮೌಲ್ಯ ಮಾಪನ | | | | | | |
| 7 | ಮೇಲ್ಕಂಡಂತೆ ಸ್ವತ್ತಿನ ಮಾರುಕಟ್ಟೆ ಮೌಲ್ಯ | | | | | | |
| 8 | ದಸ್ತಾವೇಜಿನಲ್ಲಿ ಹೇಳಿದಂತೆ ಮಾರುಕಟ್ಟೆ ಮೌಲ್ಯ | | | | | | |
| 9 | ಮೌಲ್ಯದಲ್ಲಿ ವ್ಯತ್ಯಾಸ (ಶೇಕಡಾವಾರು) | | | | | | |

ಉಲ್ಲೇಖ ಸಂಖ್ಯೆ

ದಿನಾಂಕ ........................ ಕಮಿಷನರ್

## ಡೆಪ್ಯುಟಿ ಕಮಿಷನರನ ಆದೇಶ

## ನಮೂನೆ – II

## (4ನೇ ನಿಯಮವನ್ನು ನೋಡಿ)

ಕರ್ನಾಟಕ ಸ್ಟಾಂಪು (ಲಿಖಿತಗಳ ಕಡಿಮೆ ಮೌಲ್ಯಮಾಪನವನ್ನು ತಡೆಗಟ್ಟುವ) ನಿಯಮಗಳು, 1977ರ 4ನೇ ನಿಯಮದ ಮೇರೆಗೆ ನಿಯಮಿಸಿದ ನೋಟೀಸಿನ ನಮೂನೆ.

ಶ್ರೀ/ಶ್ರೀಮತಿ .................................................. ಇವರಿಗೆ, .............................................................. ನಲ್ಲಿರುವ ನೋಂದಾಯಿಸುವ ಅಧಿಕಾರಿಯಿಂದ ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) 45ಕ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ (ಕ) ದಸ್ತಾವೇಜು ಸಂಖ್ಯೆ ......................... ದಿನಾಂಕ ..................... ಆಗಿ ನೋಂದಾಯಿಸಲಾದ ಹಸ್ತಾಂತರಣ/ ವಿನಿಮಯ/ ದಾನದ* ಲಿಖಿತದಲ್ಲಿರುವ ಸ್ವತ್ತುಗಳ ಮಾರುಕಟ್ಟೆ ಮೌಲ್ಯ ಮತ್ತು (ಖ) ಮೇಲ್ಕಂಡ ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸುಂಕ ಇವುಗಳನ್ನು ನಿರ್ಧರಿಸುವುದಕ್ಕಾಗಿ, ಕೆಳಗೆ ರುಜು ಮಾಡಿರುವವನು ಉಲ್ಲೇಖವನ್ನು ಸ್ವೀಕರಿಸಿರುವ ಬಗ್ಗೆ ನೋಟೀಸನ್ನು ದಯವಿಟ್ಟು ತೆಗೆದುಕೊಳ್ಳಿ, ಉಲ್ಲೇಖದ ಪ್ರತಿಯನ್ನು ಲಗತ್ತಿಸಲಾಗಿದೆ.

2. ಲಿಖಿತದಲ್ಲಿ ಸ್ವತ್ತುಗಳ ಮಾರುಕಟ್ಟೆ ಮೌಲ್ಯವನ್ನು ಸತ್ಯವಾಗಿ ಮತ್ತು ಸರಿಯಾಗಿ ತೋರಿಸಲಾಗಿದೆಯೆಂಬುದನ್ನು ತೋರಿಸಲು ಈ ನೋಟೀಸಿನ ಜಾರಿಯ ದಿನಾಂಕದಿಂದ 21 ದಿವಸಗಳೊಳಗೆ ಈ ಕೆಳಗೆ ರುಜು ಮಾಡಿರುವವನಿಗೆ ಬರಹದಲ್ಲಿ, ನಿಮ್ಮ ಮನವಿಗಳು ಯಾವುದಾದರೂ ಇದ್ದರೆ ಅವುಗಳನ್ನು ಒಪ್ಪಿಸಲು ನಿಮ್ಮನ್ನು ಈ ಮೂಲಕ ಅಗತ್ಯಪಡಿಸಲಾಗಿದೆ. ಅನುಮತಿಸಿದ ಕಾಲದೊಳಗೆ ನಿಮ್ಮ ಮನವಿಯನ್ನು ಸಮರ್ಥಿಸಿಕೊಳ್ಳುವುದಕ್ಕೆ ಎಲ್ಲಾ ಸಾಕ್ಷ್ಯವನ್ನು ಸಹ ಹಾಜರುಪಡಿಸಬಹುದು.

3. ಅನುಮತಿಸಿದ ಕಾಲದೊಳಗೆ ಯಾವುದೇ ಮನವಿಯು ಬರದಿದ್ದರೆ, ಲಭ್ಯವಿರುವ ಸಂಗತಿಗಳ ಆಧಾರದ ಮೇಲೆ ವಿಷಯವನ್ನು ವಿಲೇ ಮಾಡಲಾಗುವುದು.

ಸ್ಥಳ: ಡೆಪ್ಯುಟಿ ಕಮಿಷನರ್

ದಿನಾಂಕ:

---

* ಅನ್ವಯವಾಗದಿರುವುದನ್ನು ಬಿಟ್ಟು ಬಿಡುವುದು

## ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 45ಕ ಪ್ರಕರಣದ (1)ನೇ ಉಪ–ಪ್ರಕರಣದ ಉದ್ಧೃತ ಭಾಗ

ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ XVI) ಮೇರೆಗೆ ನೇಮಕಗೊಂಡ ನೋಂದಾಯಿಸುವ ಅಧಿಕಾರಿಗೆ, ಯಾವುದೇ ಹಸ್ತಾಂತರಣ, ವಿನಿಮಯ ಅಥವಾ ದಾನದ ಲಿಖಿತವನ್ನು ನೋಂದಾಯಿಸುವಾಗ, ಹಸ್ತಾಂತರಣ, ವಿನಿಮಯ ಅಥವಾ ದಾನ ಲಿಖಿತದ ವಿಷಯ ವಸ್ತುವಾಗಿರುವಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಲಿಖಿತದಲ್ಲಿ ನಿಜವಾಗಿ ತೋರಿಸಿಲ್ಲವೆಂದು ನಂಬಲು ಕಾರಣವಿದ್ದರೆ, ಅವನು ಅಂಥ ಲಿಖಿತವನ್ನು ನೋಂದಾಯಿಸಿದ ನಂತರ ಅಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಮತ್ತು ಅದರ ಮೇಲೆ ಸಂದಾಯವಾಗತಕ್ಕ ಸರಿಯಾದ ಸುಂಕವನ್ನು ನಿರ್ಧರಿಸುವುದಕ್ಕಾಗಿ, ಅದನ್ನು ಡೆಪ್ಯುಟಿ ಕಮಿಷನರನಿಗೆ ಒಪ್ಪಿಸಬಹುದು.

## ನಮೂನೆ – III

### (6ನೇ ನಿಯಮ ನೋಡಿ)

### ಕರ್ನಾಟಕ ಸ್ಟಾಂಪು (ಲಿಖಿತಗಳ ಕಡಿಮೆ ಮೌಲ್ಯ ಮಾಪನವನ್ನು ತಡೆಗಟ್ಟುವ) ನಿಯಮಗಳು, 1977ರ 6ನೇ ನಿಯಮದ ಮೇರೆಗೆ ನಿಯಮಿಸಿದ ನೋಟೀಸಿನ ನಮೂನೆ

ಶ್ರೀ/ಶ್ರೀಮತಿ ..................................................

..................................................

.................................................. ಇವರಿಗೆ,

.......................................................... ನೋಂದಾಯಿಸುವ ಅಧಿಕಾರಿಯಿಂದ ಸ್ವೀಕರಿಸಿದ ................................ ದಿನಾಂಕದ ದಸ್ತಾವೇಜು ಸಂಖ್ಯೆ ...................................... ಎಂದು ನೋಂದಾಯಿಸಲಾದ/ ಹಸ್ತಾಂತರಣ/ ವಿನಿಮಯ/ ದಾನ ಲಿಖಿತದಲ್ಲಿ ಒಳಗೊಂಡ ಸ್ವತ್ತುಗಳ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) 45 ಕ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಉಲ್ಲೇಖದ ವಿಷಯದಲ್ಲಿ ನಾನು ಸ್ವತ್ತುಗಳ ಮಾರುಕಟ್ಟೆ ಮೌಲ್ಯವನ್ನು ಮತ್ತು ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸುಂಕವನ್ನು ಅನುಕ್ರಮವಾಗಿ ..................................... ರೂಪಾಯಿ (ಅಕ್ಷರಗಳಲ್ಲಿ) .................................. ಮತ್ತು .................................... ರೂಪಾಯಿಗಳು (ಅಕ್ಷರಗಳಲ್ಲಿ) ........................................... ಮೊಬಲಗು ಆಗುವುದೆಂದು ತಾತ್ಕಾಲಿಕವಾಗಿ ನಿರ್ಧರಿಸುವ ಆದೇಶವನ್ನು ಮಾಡಿರುವುದರ ಬಗ್ಗೆ ದಯವಿಟ್ಟು ನೋಟೀಸನ್ನು ತೆಗೆದುಕೊಳ್ಳಿ. ಈ ವಿಷಯದಲ್ಲಿ ಮಾಡಿದ ಆದೇಶದ ಪ್ರತಿಯನ್ನು ಇದಕ್ಕೆ ಲಗತ್ತಿಸಲಾಗಿದೆ.

2. ಸ್ವತ್ತುಗಳ ಮಾರುಕಟ್ಟೆ ಮೌಲ್ಯದ ಮತ್ತು ಲಿಖಿತದ ಮೇಲೆ ಸಂದಾಯ ಮಾಡಬೇಕಾದ ಸುಂಕದ ಅಂತಿಮ ನಿರ್ಧರಣೆಗೆ ಸಂಬಂಧಪಟ್ಟ ವಿಷಯವನ್ನು ಈ ಕೆಳಗೆ ಸಹಿ ಮಾಡಿರುವವನು ..................................... (ದಿನಾಂಕ) ದಂದು .................................. (ಸ್ಥಳ) ಇಲ್ಲಿ ....................................... ಪೂರ್ವಾಹ್ನ/ ಅಪರಾಹ್ನ ಸುನಾವಣೆಗೆ ತೆಗೆದುಕೊಳ್ಳಲಾಗುವುದು. ನಾನು ತಾತ್ಕಾಲಿಕವಾಗಿ ನಿರ್ಧರಿಸಿದ ಸ್ವತ್ತುಗಳ ಮಾರುಕಟ್ಟೆ ಮೌಲ್ಯವನ್ನು ಮತ್ತು ಸುಂಕವನ್ನು ಏಕೆ ಸ್ಥಿರೀಕರಿಸಬಾರದು ಎಂಬುದಕ್ಕೆ ನಿಮ್ಮ ಆಕ್ಷೇಪಣೆಗಳು ಮತ್ತು ಮನವಿಗಳು ಯಾವುದಾದರೂ ಇದ್ದರೆ ಅವುಗಳನ್ನು ಬರಹದಲ್ಲಿ ಸುನಾವಣೆಯ ದಿನಾಂಕಕ್ಕೆ ಮುಂಚೆ ಕೆಳಗೆ ರುಜು

ಮಾಡಿರುವವನ ಮುಂದೆ ದಾಖಲ್ಮಾಡಲು, ಮೌಖಿಕ ಅಥವಾ ದಸ್ತಾವೇಜೀಯ ಸಾಕ್ಷ್ಯವನ್ನು ಮುಂದಿಡಲು ಮತ್ತು ಸುನಾವಣೆಯ ಕಾಲದಲ್ಲಿ ಹಾಜರಿರಲು ಈ ಮೂಲಕ ನಿಮ್ಮನ್ನು ಅಗತ್ಯಪಡಿಸಲಾಗಿದೆ.

ಕೆಳಗೆ ರುಜು ಮಾಡಿರುವವರ ಮುಂದೆ ಹಾಜರಾಗಲು ಅಥವಾ ಅವಶ್ಯವಾಗಿರುವಂಥ ಸಾಕ್ಷ್ಯವನ್ನು ಮುಂದಿಡಲು ಅಥವಾ ಸುಸಂಗತ ದಸ್ತಾವೇಜುಗಳನ್ನು ಹಾಜರ್ಪಡಿಸುವ ಈ ಅವಕಾಶವನ್ನು ಪಡೆದುಕೊಳ್ಳಲು ನೀವು ತಪ್ಪಿದರೆ, ಯಾವುದೇ ಮತ್ತಷ್ಟು ಅವಕಾಶವನ್ನು ಕೊಡಲಾಗುವುದಿಲ್ಲ ಮತ್ತು ಲಭ್ಯವಿರುವ ಸಂಗತಿಗಳ ಆಧಾರದ ಮೇಲೆ ಏಕ ಪಕ್ಷೀಯವಾಗಿ ವಿಷಯವನ್ನು ವಿಲೆ ಮಾಡಲಾಗುವುದು.

ಸ್ಥಳ: ಡೆಪ್ಯುಟಿ ಕಮಿಷನರ್

ದಿನಾಂಕ:

## ಅಧಿನಿಯಮದ 9ನೇ ಪ್ರಕರಣದ ಮೇರೆಗಿನ ಅಧಿಸೂಚನೆ

## ಕ–ಮಾಫಿ

## ಕರ್ನಾಟಕ ಸರ್ಕಾರದ ವ್ಯವಹರಣೆಗಳು

1. ಆದೇಶ ಸಂಖ್ಯೆ ಆರ್‌ಡಿ 33 ಜಿಎಸ್‌ಟಿ 62, ದಿನಾಂಕ 15/18ನೇ ಫೆಬ್ರವರಿ, 1969.

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (ಕರ್ನಾಟಕ ಅಧಿನಿಯಮ 1957ರ 34) 9ನೇ ಪ್ರಕರಣದ (1)ನೇ ಉಪಪ್ರಕರಣದ (ಕ) ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಸದರಿ ಅಧಿನಿಯಮದ ಮೇರೆಗೆ ಲಿಖಿತಗಳಿಗೆ ವಿಧಿಸಬಹುದಾದಂಥ ಸುಂಕಗಳನ್ನು ಕಡಿಮೆ ಮಾಡುವುದು ಅಥವಾ ಮಾಫಿ ಮಾಡುವುದಕ್ಕೆ ಸಂಬಂಧಪಟ್ಟ ರಾಜ್ಯ ಸರ್ಕಾರವು ಹೊರಡಿಸಿದ ಎಲ್ಲ ಆದೇಶಗಳನ್ನು ರದ್ದುಗೊಳಿಸಿ, ಕರ್ನಾಟಕ ಸರ್ಕಾರವು, ಈ ಆದೇಶಕ್ಕೆ ಲಗತ್ತಿಸಲಾದ ಕೋಷ್ಟಕ 1ರಲ್ಲಿ ಸೂಚಿಸಲಾದ ಲಿಖಿತಗಳನ್ನು ಯಾವ ಲಿಖಿತಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳನ್ನು ಮಾಫಿ ಮಾಡತಕ್ಕದ್ದೋ ಆ ಲಿಖಿತಗಳೆಂದು ಮತ್ತು ಈ ಆದೇಶಕ್ಕೆ ಲಗತ್ತಿಸಿದ IIನೇ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಲಿಖಿತಗಳನ್ನು ಯಾವ ಲಿಖಿತಗಳಿಗೆ ಸಂಬಂಧಪಟ್ಟಂತೆ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳನ್ನು ಸದರಿ ಕೋಷ್ಟಕದಲ್ಲಿ ಪ್ರತಿಯೊಂದು ಬಾಬಿಗೆ ಸಂಬಂಧಿಸಿದಂತೆ ಸೂಚಿಸಿರುವಷ್ಟರಮಟ್ಟಿಗೆ ಕಡಿಮೆ ಮಾಡತಕ್ಕದ್ದೋ ಆ ಲಿಖಿತಗಳೆಂದು ನಿರ್ದಿಷ್ಟಪಡಿಸುತ್ತದೆ.

## ಕೋಷ್ಟಕ–1

(1) ಕರ್ನಾಟಕ ಭೂ ಕಂದಾಯ ಸಂಹಿತೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಥವಾ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನುಗಳ ಮೇರೆಗೆ ಬರೆದುಕೊಟ್ಟ, ಮೋಜಣಿ ಮಾಡಿರಲಿ ಅಥವಾ ಮಾಡಿಲ್ಲದಿರಲಿ ಭೂಮಿಯ ಅಧಿಭೋಗಕ್ಕೆ ಸಂಬಂಧಿಸಿದ ಒಪ್ಪಂದ.

(2) ಕೆರೆಗಳ ಮತ್ತು ನೀರಾವರಿ ಕಾಮಗಾರಿಗಳ ದುರಸ್ತಿಗಾಗಿ ನಗದು ರೂಪದಲ್ಲಿ ಅಥವಾ ದುಡಿಮೆಯ ರೂಪದಲ್ಲಿ ವಂತಿಕೆಯ ಸಂದಾಯಕ್ಕಾಗಿ ರೈತರು ಬರೆದುಕೊಟ್ಟ ಮುಚ್ಚಳಿಕೆಗಳು ಅಥವಾ ಒಪ್ಪಂದಗಳು.

(3) ಸರ್ಕಾರವು ಖಾಸಗಿ ವ್ಯಕ್ತಿಗೆ ಮಂಜೂರ್ಮಾಡಿದ ಇತರ ಭೂಮಿಗಳಿಗೆ ಬದಲಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಅವನು ಭೂಮಿಯನ್ನು ಕೊಟ್ಟಿರುವಲ್ಲಿ ಅವನು ಬರೆದುಕೊಟ್ಟ ಲಿಖಿತಗಳು.

(4) ಮೀಸಲು ಸಂರಕ್ಷಿತ ಅರಣ್ಯಗಳಲ್ಲಿ ತುಂಗ್ಯ ವ್ಯವಸ್ಥೆಯ ಮೇರೆಗೆ ಸಾಗುವಳಿಗಾಗಿನ ಒಪ್ಪಂದ.

(5) ಸರ್ಕಾರದ ಅಧಿಕಾರಿಯು ಅಥವಾ ಸರ್ಕಾರಿ ಕಂದಾಯ ಹಸ್ತಾಂತರಿಯು ಭೂಮಿಯ ಹಿಡುವಳಿದಾರನಿಗೆ ಕೊಟ್ಟ ಪಟ್ಟಾಗಳು.

(6) ವಿದ್ಯಾದಾನ ಅಥವಾ ಭೂದಾನಕ್ಕೆ ಸಂಬಂಧಿಸಿದಂತೆ ಭೂದಾನದ ಲಿಖಿತಗಳು.

(7) ಯಾವುದೇ ವಿಶ್ವವಿದ್ಯಾನಿಲಯದ ಹೆಸರಿಗೆ ಮಾಡಿದ ದಾನ, ವ್ಯವಸ್ಥೆ, ನ್ಯಾಸ ಅಥವಾ ಇತರ ವರ್ಗಾವಣೆಗಳ ಪತ್ರಗಳು.

(8) ಸರ್ಕಾರದಿಂದ ಸಹಾಯಾನುದಾನ ಪಡೆಯುವ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪನ ಪ್ರಾಧಿಕಾರವು, ಸಂಸ್ಥೆಗೆ ಸೇರಿದ ಭೂಮಿ ಮತ್ತು ಕಟ್ಟಡವನ್ನು ಸದರಿ ಭೂಮಿ ಮತ್ತು ಕಟ್ಟಡವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಲಾಗಿಲ್ಲ ಅಥವಾ ಸಂಸ್ಥೆಯು ನೀಡಿದ ಶಿಕ್ಷಣವು ದೋಷಪೂರಿತವಾಗಿದೆ ಅಥವಾ ಅತೃಪ್ತಿಕರವಾಗಿದೆ ಎಂಬ ಕಾರಣದ ಮೇಲೆ (ಆರ್‌ಡಿ 116 ಇಎಸ್‌ಟಿ 69, ದಿನಾಂಕ 24ನೇ ನವೆಂಬರ್ 1969ರ ಮೂಲಕ ಪ್ರತ್ಯಾಯೋಜಿಸಲಾದಂತೆ) ಸರ್ಕಾರವು ತಾನು ನೀಡಿದ ಅನುದಾನವನ್ನು ವಸೂಲು ಮಾಡಲು ನಿರ್ಧರಿಸಿದರೆ, ಸಹಾಯಾನುದಾನದ ಮರುಪಾವತಿಯನ್ನು ಭದ್ರಪಡಿಸುವುದಕ್ಕಾಗಿ, ಅಡಮಾನ ಮಾಡಿ ಸರ್ಕಾರದ ಹೆಸರಿನಲ್ಲಿ ಬರೆದುಕೊಟ್ಟ ಲಿಖಿತಗಳು.

(9) ಸರ್ಕಾರವು ವಿದ್ಯಾರ್ಥಿಗಳಿಗೆ ಕೊಟ್ಟ ವಿದ್ಯಾರ್ಥಿವೇತನಗಳು, ಅಧ್ಯಯನ ರಜಾ ರಿಯಾಯಿತಿಗಳು, ಸಂಶೋಧನಾ ವೇತನಗಳು ಮತ್ತು ಪ್ರತಿನಿಯೋಜನೆ ರಿಯಾಯಿತಿಗಳಿಗೆ ಸಂಬಂಧಿಸಿದಂತೆ ಅವರು ಬರೆದು ಕೊಟ್ಟ ಬಂಧ–ಪತ್ರಗಳು.

(10) ಕೇಂದ್ರ ಸಮಾಜ ಕಲ್ಯಾಣ ಮಂಡಲಿಯಿಂದ ತರಬೇತಿ ಪಡೆಯಬೇಕಾದ ಅಭ್ಯರ್ಥಿಗಳು ಬರೆದು ಕೊಟ್ಟ ಬಂಧ–ಪತ್ರಗಳು.

(11) ವಿದ್ಯಾರ್ಥಿಯು ಅಧಿಕೃತ ಶಾಲೆ ಅಥವಾ ಕಾಲೇಜಿಗೆ ಪ್ರವೇಶ ಪಡೆಯುವ ಮೊದಲು ಅಂಥ ವಿದ್ಯಾರ್ಥಿ ಮತ್ತು ಅವನ ಜಾಮೀನುದಾರನು ಬರೆದುಕೊಟ್ಟ ಒಪ್ಪಂದ ಅಥವಾ ಭದ್ರತಾ ಬಂಧ ಪತ್ರ.

(12) ರಾಜ್ಯ ಅಥವಾ ಕೇಂದ್ರ ಸರ್ಕಾರಿ ನೌಕರರು, ರಾಜ್ಯ ಅಥವಾ ಕೇಂದ್ರ ಸರ್ಕಾರವು ಅವರಿಗೆ ಮಂಜೂರು ಮಾಡಿದ ಈ ಕೆಳಕಂಡ ಮುಂಗಡಗಳಿಗೆ ಸಂಬಂಧಿಸಿದಂತೆ ರಾಜ್ಯ ಅಥವಾ ಕೇಂದ್ರ ಸರ್ಕಾರಕ್ಕೆ ಬರೆದು ಕೊಟ್ಟ ಅಡಮಾನ ಪತ್ರಗಳು, ಒಪ್ಪಂದಗಳು ಮತ್ತು ಜಾಮೀನು ಬಂಧ ಪತ್ರಗಳು.

ಮೋಟಾರು ಕಾರು, ಮೋಟಾರು ಸೈಕಲ್ ಮತ್ತು ಬೈಸಿಕಲ್ ಖರೀದಿ ಮುಂಗಡ.

(13) ರಾಜ್ಯ ಅಥವಾ ಕೇಂದ್ರ ಸರ್ಕಾರಿ ನೌಕರನಾಗಿರುವ ಅಥವಾ ನೌಕರನಾಗಿದ್ದ ಯಾವನೇ ವ್ಯಕ್ತಿಯು,–

(i) ಗೃಹ ನಿರ್ಮಾಣ ಅಥವಾ ಗೃಹ ಖರೀದಿ ಮುಂಗಡವನ್ನು;

(ii) ಗೃಹ ದುರಸ್ತಿ ಮುಂಗಡವನ್ನು

– ಮರು ಸಂದಾಯ ಮಾಡಿದ ತರುವಾಯ ರಾಜ್ಯ ಅಥವಾ ಕೇಂದ್ರ ಸರ್ಕಾರವು ಆ ವ್ಯಕ್ತಿಗೆ ಬರೆದುಕೊಟ್ಟ ಅಡಮಾನ ಸ್ವತ್ತಿನ ಮರು ಹಸ್ತಾಂತರಣ ಲಿಖಿತ.

(14) ಉಳಿತಾಯ ಬ್ಯಾಂಕಿನ ನಿಯಮಗಳ ಮೂಲಕ ಅಗತ್ಯಪಡಿಸಿದಂತೆ ಪದದ ಯುಕ್ತ ನಿರ್ವಹಣೆಗಾಗಿ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಭದ್ರತೆಯಾಗಿ ಜಿಲ್ಲಾ ಉಳಿತಾಯ ಬ್ಯಾಂಕಿನಲ್ಲಿ ಹಣ ಠೇವಣಿ ಇಡುವ ವ್ಯಕ್ತಿಯು ಹಣದ ವಿನಿಯೋಗ ಹಾಗೂ ಹಣ ಹಿಂತೆಗೆದುಕೊಳ್ಳುವ ಬಗೆಗಿನ ವಿಶೇಷ ಷರತ್ತುಗಳಿಗೆ ಒಪ್ಪಿ ಜಿಲ್ಲಾ ಉಳಿತಾಯ ಬ್ಯಾಂಕಿನ ಕಾರ್ಯದರ್ಶಿಗೆ ವಿಳಾಸಿಸಲು ಅಗತ್ಯವಿರುವಂಥ ಪತ್ರ.

(15) ಸರ್ಕಾರಿ ಅಧಿಕಾರಿ ಅಥವಾ ಅವನ ಜಾಮೀನುದಾರನು ಪದದ ಸೂಕ್ತ ನಿರ್ವಹಣೆಗಾಗಿ ಅಥವಾ ಆ ಕಾರಣದಿಂದಾಗಿ ಸ್ವೀಕರಿಸಿದ ಹಣದ ಅಥವಾ ಇತರ ಸ್ವತ್ತಿನ ಸೂಕ್ತ ಲೆಕ್ಕಕ್ಕಾಗಿ ಅವನು ಅಡಮಾನ ಮಾಡಿದ ಸ್ವತ್ತಿಗೆ ಸಂಬಂಧಿಸಿದಂತೆ ಸರ್ಕಾರದ ಪರವಾಗಿ ಬರೆದುಕೊಟ್ಟ ಮರು ಹಸ್ತಾಂತರಣ.

(16) ಗೃಹ ನಿರ್ಮಾಣ ಯೋಜನೆಗಳ ಮೇರೆಗೆ ಬರೆದುಕೊಟ್ಟ ಬಂಧ ಪತ್ರಗಳನ್ನು ಹೊರತುಪಡಿಸಿ ಸರ್ಕಾರದ ಹೆಸರಿನಲ್ಲಿ ರಾಜ್ಯದಲ್ಲಿನ ಎಲ್ಲ ಪೌರ ಸಭೆಗಳು ಬರೆದುಕೊಟ್ಟ ಬಂಧ ಪತ್ರಗಳು.

(17) ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಮತ್ತು ಗ್ರಾಮ ಪಂಚಾಯಿತಿಗಳ ಹೆಸರಿನಲ್ಲಿ ಬರೆದುಕೊಟ್ಟ ದಾನದ ಲಿಖಿತಗಳು.

(18) ರಾಜ್ಯ ಸರ್ಕಾರದ ಹೆಸರಿನಲ್ಲಿ ಬರೆದುಕೊಟ್ಟ ಸ್ವತ್ತಿನ ದಾನ ವ್ಯವಸ್ಥೆ, ನ್ಯಾಸ ಅಥವಾ ವರ್ಗಾವಣೆ.

(19) ಭಾರತಕ್ಕೆ ತಾಂತ್ರಿಕ ಸಹಕಾರಿ ನಿಯೋಗದ ಮೇರೆಗೆ ವಹಿಸಿಕೊಡಲಾದ ಅಮೇರಿಕಾ ಸಿಬ್ಬಂದಿಯು ಬರೆದುಕೊಟ್ಟ ಲಿಖಿತಗಳು.

(20) ಭಾರತದಲ್ಲಿನ ಚರ್ಚುಗಳ ಹೆಸರಿನಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆಗೆ ಸಂಬಂಧಪಟ್ಟಂತೆ ಭಾರತದಲ್ಲಿನ ವಿದೇಶಿ ನಿಯೋಗಗಳು ಬರೆದುಕೊಟ್ಟ ಲಿಖಿತಗಳು.

(21) ಸಮಾಪಣೆಯಲ್ಲಿರುವ ಬ್ಯಾಂಕಿಂಗ್ ಕಂಪನಿಯ ಪರಿಸಮಾಪನದ ಕ್ರಮದಲ್ಲಿ ಬರೆದುಕೊಟ್ಟ ಮತ್ತು ಕರ್ನಾಟಕ ಸ್ಟಾಂಪು ಅಧಿನಿಯಮದ ಮೇರೆಗೆ ಸುಂಕವನ್ನು ವಿಧಿಸಬಹುದಾದಂಥ ವರ್ಗಾವಣೆ, ಅಡಮಾನ, ಹಸ್ತಾಂತರಣ, ಮೊಖ್ತಾರನಾಮೆ ಪ್ರಮಾಣ ಪತ್ರ, ಶಪಥ ಪತ್ರ ಅಥವಾ ಬಂಧಪತ್ರಕ್ಕೆ ಸಂಬಂಧಿಸಿದ ಲಿಖಿತಗಳು.

(22) ರಕ್ಷಣಾ ಠೇವಣಿ ಪ್ರಮಾಣ ಪತ್ರಗಳು ಮತ್ತು ಖಜಾನೆ ಉಳಿತಾಯ ಠೇವಣಿ ಪ್ರಮಾಣ ಪತ್ರಗಳು ಇವುಗಳಿಗೆ ಸಂಬಂಧಿಸಿದಂತೆ ಬರೆದುಕೊಟ್ಟ ವರ್ಗಾವಣೆ ಪತ್ರಗಳು.

(23) x x x

(24) x x x

(25) ಸಂಘದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಔದ್ಯಮೀಕರಣ ಯೋಜನೆಯ ಮೇರೆಗೆ ತಾಲ್ಲೂಕು ಔದ್ಯಮಿಕ ಸಹಕಾರ ಸಂಘವು ಅಥವಾ ಅದರ ಅಧಿಕಾರಿ ಅಥವಾ ಸದಸ್ಯನು ಬರೆದುಕೊಡಬೇಕಾದ ಲಿಖಿತಗಳು (ಆದೇಶ ಸಂಖ್ಯೆ ಆರ್‌ಡಿ 10 ಜಿಎಸ್‌ಟಿ 70, ದಿನಾಂಕ 19ನೇ ಏಪ್ರಿಲ್ 1970ರ ಮೂಲಕ ತಿದ್ದುಪಡಿಯಾದಂತೆ)

(26) ನಗರ ಸಹಕಾರಿ ಸಂಘಗಳ ಮತ್ತು ಬ್ಯಾಂಕುಗಳ ಸದಸ್ಯರು ಬರೆದುಕೊಡಬೇಕಾದ ಲಿಖಿತಗಳು ಮತ್ತು ಲಿಖಿತದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗು ಅಥವಾ ಮೌಲ್ಯವು ಐದು ಸಾವಿರ ರೂಪಾಯಿಗಳಿಗಿಂತ

ಹೆಚ್ಚಾಗಿಲ್ಲದಿರುವ ಸಂದರ್ಭದಲ್ಲಿ, ಅದರ ಸದಸ್ಯರ ಹೆಸರಿನಲ್ಲಿ ಅಂಥ ಸಂಘಗಳು ಮತ್ತು ಬ್ಯಾಂಕುಗಳು ಬರೆದುಕೊಟ್ಟ ಮರು ಹಸ್ತಾಂತರಣ ಪತ್ರಗಳು.

(27) ಸಹಕಾರಿ ಕೇಂದ್ರೀಯ ಹಣಕಾಸು ಏಜೆನ್ಸಿಗಳ ಸದಸ್ಯರು ಬರೆದುಕೊಟ್ಟ ಲಿಖಿತಗಳು ಮತ್ತು ಸದಸ್ಯರ ಹೆಸರಿನಲ್ಲಿ ಸದರಿ ಏಜೆನ್ಸಿಗಳು ಬರೆದುಕೊಟ್ಟ ಮರು ಹಸ್ತಾಂತರಣ ಪತ್ರಗಳು.

(28) * * *

(29) ಸಹಕಾರಿ ಸಂಘಗಳು ಅಥವಾ ಅದರ ಅಧಿಕಾರಿಗಳು ಅಥವಾ ನೌಕರರ ಪರವಾಗಿ ಬರೆದುಕೊಡಬೇಕಾದ ಭದ್ರತಾ ಬಂಧಪತ್ರಗಳು.

(30) ಸರ್ಕಾರದಿಂದ ಮಂಜೂರಾದ ಸಾಲಗಳನ್ನು ಪಡೆಯಲು ಸರ್ಕಾರದ ಹೆಸರಿನಲ್ಲಿ ಸಹಕಾರಿ ಸಂಘಗಳು ಬರೆದುಕೊಟ್ಟ ಲಿಖಿತಗಳು (ಅಧಿಸೂಚನೆ ಸಂಖ್ಯೆ ಆರ್‌ಡಿ 5 ಇಎಸ್‌ಟಿ 75, ದಿನಾಂಕ 6ನೇ ಸೆಪ್ಟೆಂಬರ್ 1976ರ ಮೂಲಕ ತಿದ್ದುಪಡಿಯಾದಂತೆ).

(31) ಸಹಕಾರಿ ಸಂಘವು ಪಕ್ಷವಾಗಿರುವಂಥ ಯಾವುದೇ ವಿವಾದದಲ್ಲಿ ಮಧ್ಯಸ್ಥಗಾರರ ಐತೀರ್ಪು.

(32) ಮದರಾಸು ಸಹಕಾರಿ ಕೇಂದ್ರೀಯ ಭೂ ಅಡಮಾನ ಬ್ಯಾಂಕ್ ನಿಯಮಿತ, ಮದರಾಸು ಮತ್ತು ಸಹಕಾರಿ ಸಂಘಗಳ ರಿಜಿಸ್ಟ್ರಾರ್, ಮದರಾಸು ಇವರು ಡಿಬೆಂಚರು ಧಾರಕರಿಗಾಗಿ ನ್ಯಾಸಧಾರಿಯಾಗಿ ತನ್ನ ನಾತೆಯಲ್ಲಿ ಕರ್ನಾಟಕ ಕೇಂದ್ರೀಯ ಸಹಕಾರಿ ಭೂ ಅಡಮಾನ ಬ್ಯಾಂಕ್ ನಿಯಮಿತ, ಬೆಂಗಳೂರು ಇದಕ್ಕೆ ಸದರಿ ಬ್ಯಾಂಕುಗಳ ನಡುವೆ ಆಸ್ತಿಗಳು ಮತ್ತು ಹೊಣೆಗಳ ವಿಭಜನೆಗೆ ಸಂಬಂಧಿಸಿದಂತೆ ಬರಲಾದ ತೀರ್ಮಾನಕ್ಕೆ ಅನುಸಾರವಾಗಿ ಕರ್ನಾಟಕ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಅಡಮಾನಗಳನ್ನು ವಹಿಸಿ ಬರೆದುಕೊಡಬೇಕಾದ ಹಸ್ತಾಂತರಣ ಪತ್ರ.

(33) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು, ಖಾದಿ ಮತ್ತು ಗ್ರಾಮೋದ್ಯೋಗದ ಅಭಿವೃದ್ಧಿಗಾಗಿ ಸಾಲ ಮಂಜೂರಾತಿಗಾಗಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಹೆಸರಿನಲ್ಲಿ ಬರೆದು ಕೊಡಬೇಕಾದ ಒಪ್ಪಂದ.

(34) ಬಿಟ್ಟುಬಿಡಲಾಗಿದೆ.

(35) ಬಿಟ್ಟುಬಿಡಲಾಗಿದೆ.

(36) ಕೋಲಾರ ಚಿನ್ನದ ಗಣಿ ಉದ್ಯಮಗಳ (ಸಂಖ್ಯೆ ಆರ್‌ಡಿ 3 ಎಸ್‌ಟಿ 69, ದಿನಾಂಕ 18ನೇ ಫೆಬ್ರವರಿ 1969) ಆಸ್ತಿಗಳ ಸಂಬಂಧದಲ್ಲಿ ಭಾರತ ಸರ್ಕಾರದ ಹೆಸರಿನಲ್ಲಿ ಕರ್ನಾಟಕ ಸರ್ಕಾರವು ಬರೆದುಕೊಟ್ಟ ಲಿಖಿತಗಳು.

(37) ವಾಣಿಜ್ಯ ಬ್ಯಾಂಕುಗಳು, ಕೃಷಿ ಕೈಗಾರಿಕಾ ನಿಗಮ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳು ಇವು ರೇಷ್ಮೆ ಬೇಸಾಯಗಾರರಿಗೆ ಕೃಷಿ ಸಂಬಂಧ ಹಣಕಾಸು ಒದಗಿಸುವ ಅವುಗಳ ಯೋಜನೆಯ (ಸಂಖ್ಯೆ ಆರ್‌ಡಿ 74 ಇಎಸ್‌ಟಿ 70, ದಿನಾಂಕ 16.7.1971) ಮೇರೆಗೆ ಪ್ರತಿಯೊಂದು ಪ್ರಕರಣದಲ್ಲಿ ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಮಂಜೂರು ಮಾಡಿದ ಸಾಲಕ್ಕೆ ಸಂಬಂಧಿಸಿದಂತೆ ಅಂಥ ವಾಣಿಜ್ಯ ಬ್ಯಾಂಕುಗಳು, ಕೃಷಿ ಕೈಗಾರಿಕಾ ನಿಗಮ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳ ಹೆಸರಿನಲ್ಲಿ ರೇಷ್ಮೆ ಬೇಸಾಯಗಾರರು ಬರೆದುಕೊಡಬೇಕಾದ ಲಿಖಿತಗಳು.

(38) ಗ್ರಾಮೀಣ ಗೃಹ ನಿರ್ಮಾಣ ಯೋಜನಾ ಪರಿಯೋಜನೆಯ ಮೇರೆಗೆ (ಸಂಖ್ಯೆ ಆರ್‌ಡಿ 21 ಇಎಸ್‌ಟಿ 72, ದಿನಾಂಕ 3.3.1975) ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಮಂಜೂರು ಮಾಡಿದ ಸಾಲಗಳಿಗೆ ಸಂಬಂಧಿಸಿದಂತೆ ಬರೆದುಕೊಟ್ಟ ಲಿಖಿತಗಳು.

(39) ಸರ್ಕಾರಿ ನೌಕರರಿಗಾಗಿ ಸಹಾಯಧನ ಪಡೆದ ಉದ್ಯಮ/ ಸಹಾಯಧನ ಪಡೆದ ಬಾಡಿಗೆಯ ಗೃಹ ನಿರ್ಮಾಣ/ ಕೊಳಚೆ ನಿರ್ಮೂಲನೆ/ ಬಾಡಿಗೆಯ ಗೃಹ ನಿರ್ಮಾಣ ಪರಿಯೋಜನೆಗೆ ಸಂಬಂಧಿಸಿದಂತೆ (ಸಂಖ್ಯೆ ಆರ್‌ಡಿ 24 ಇಎಸ್‌ಟಿ 72, ದಿನಾಂಕ 29.3.1972) ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಬರೆದುಕೊಟ್ಟ ಲಿಖಿತಗಳು.

(40) ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇದಕ್ಕೆ ಎಚ್.ಎ.ಎಲ್. IIನೇ ಹಂತದಲ್ಲಿ ಹಂಚಿಕೆ ಮಾಡಲಾದ ಹತ್ತು ಎಕರೆ ಭೂಮಿಗೆ ಸಂಬಂಧಿಸಿದಂತೆ ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇದು ಅಧ್ಯಕ್ಷರು, ನಗರಾಭಿವೃದ್ಧಿ ಮಂಡಲಿ, ಬೆಂಗಳೂರು ಇವರಿಗೆ ಬರೆದುಕೊಡಬೇಕಾದ ಲಿಖಿತ (ಸಂಖ್ಯೆ ಆರ್‌ಡಿ 76 ಇಎಸ್‌ಟಿ 72, ದಿನಾಂಕ 11.8.1972)

(41) ರಾಜ್ಯ ಸರ್ಕಾರದಿಂದಾಗಲಿ ಅಥವಾ ಇತರರಿಂದಾಗಲಿ ಕೇಂದ್ರ ಸರ್ಕಾರವು ಪಡೆದ ಕ್ರಯ ಪತ್ರಗಳು (ಸಂ. ಆರ್‌ಡಿ 71 ಇಎಸ್‌ಟಿ 70, ದಿನಾಂಕ 3.2.1973).

(42) ಮಾಜಿ ಸೈನಿಕರ ಪುನರ್ ವ್ಯವಸ್ಥೆ ಮತ್ತು ಪುನರ್ವಸತಿಗಾಗಿ ವಿಶೇಷ ನಿಧಿಗಳಿಂದ ಮಂಜೂರು ಮಾಡಿದ ಸಾಲಗಳ ಸಂಬಂಧದಲ್ಲಿ ಯೋಧರ, ನಾವಿಕರ ಮತ್ತು ವೈಮಾನಿಕರ ಕೇಡರಿನ ಮಾಜಿ ಸೈನಿಕರು ಜಾಮೀನು ಅಥವಾ ನೌಕರರ ಸಹಿತವಾಗಿ ಅವರು ಮಾಜಿ ಸೈನಿಕರಾಗಿರಲಿ ಅಥವಾ ಆಗಿಲ್ಲದಿರಲಿ ಏಕಮಾತ್ರವಾಗಿ, ಪ್ರತ್ಯೇಕವಾಗಿ ಮತ್ತು ಜಂಟಿಯಾಗಿ ಬರೆದುಕೊಡಬೇಕಾದ ಲಿಖಿತಗಳು.

ಆದೇಶ ಸಂಖ್ಯೆ ಆರ್‌ಡಿ 127 ಇಎಸ್‌ಟಿ 75, ದಿನಾಂಕ 19.3.1976ರ ಮೂಲಕ ತಿದ್ದುಪಡಿ ಮಾಡಲಾದಂತೆ (ಸಂಖ್ಯೆ ಆರ್‌ಡಿ 1 ಇಎಸ್‌ಟಿ 73, ದಿನಾಂಕ 2.5.1973).

(43) ಸಹಕಾರಿ ಏತ ನೀರಾವರಿ ಸಂಘಗಳು ಬರೆದುಕೊಟ್ಟ ಲಿಖಿತಗಳು (ಸಂಖ್ಯೆ ಆರ್‌ಡಿ 35 ಇಎಸ್‌ಟಿ 73, ದಿನಾಂಕ 9.8.1973).

(44) ಎಲ್ಲ ಕೋಮು ಗಲಭೆಗೆ ತುತ್ತಾದವರು ಸರ್ಕಾರದಿಂದ ಮಂಜೂರಾದ ಬಡ್ಡಿ ರಹಿತ ಸಾಲಗಳನ್ನು ಪಡೆಯುವ ಉದ್ದೇಶಕ್ಕಾಗಿ ಬರೆದುಕೊಟ್ಟ ಲಿಖಿತಗಳು (ಸಂಖ್ಯೆ ಆರ್‌ಡಿ 88 ಇಎಸ್‌ಟಿ 73, ದಿನಾಂಕ ................. ಅಕ್ಟೋಬರ್ 1973).

(45) ಉದ್ಯೋಗಿಗಳ ಭವಿಷ್ಯ ನಿಧಿಯ ನ್ಯಾಸಧಾರಿಗಳಿಂದ ಡಿಬೆಂಚರುಗಳ ವರ್ಗಾವಣೆ ಅಥವಾ ಉದ್ಯೋಗಿಗಳ ಭವಿಷ್ಯ ನಿಧಿಯ ನ್ಯಾಸಧಾರಿಗಳಿಗೆ ಡಿಬೆಂಚರುಗಳ ವರ್ಗಾವಣೆ (ಸಂಖ್ಯೆ ಆರ್‌ಡಿ 114 ಇಎಸ್‌ಟಿ 72, ದಿನಾಂಕ 28.12.1973).

(46) ಭಾರತ ಸರ್ಕಾರದಿಂದ ಸಾಲಗಳನ್ನು ಪಡೆಯಲು ಕರ್ನಾಟಕ ರಾಜ್ಯದಲ್ಲಿನ ಶೈಕ್ಷಣಿಕ ಸಂಸ್ಥೆಗಳು ಬರೆದುಕೊಟ್ಟ ಲಿಖಿತಗಳು (ಸಂಖ್ಯೆ ಅರ್‌ಡಿ 105 ಇಎಸ್‌ಟಿ 75, ದಿನಾಂಕ 31.12.1973).

(47) ಜನತಾ ಗೃಹ ನಿರ್ಮಾಣ ಯೋಜನೆಯ ಮೇರೆಗೆ ಸರ್ಕಾರದಿಂದ ಸಾಲಗಳನ್ನು ಪಡೆಯಲು ಫಲಾನುಭವಿಗಳು ಬರೆದುಕೊಟ್ಟ ಅಡಮಾನ ಪತ್ರಗಳು (ಸಂ. ಆರ್‌ಡಿ 130 ಇಎಸ್‌ಟಿ 73, ದಿನಾಂಕ 19.2.1974).

(48) ಕೇಂದ್ರ ಮತ್ತು ರಾಜ್ಯ ಉಗ್ರಾಣ ನಿಗಮಗಳೆರಡರಿಂದಲೂ ಕೊಡಲಾದ ಉಗ್ರಾಣ ರಸೀದಿಗಳು (ಸಂಖ್ಯೆ ಆರ್‌ಡಿ 13 ಇಎಸ್‌ಟಿ 74 ದಿನಾಂಕ 8.3.1974).

(49) ಉದ್ಯೋಗಿಗಳ ರಾಜ್ಯ ವಿಮಾ ನಿಗಮದಿಂದ ಆಸ್ಪತ್ರೆಗಳು, ಉಪಗೃಹಗಳು, ಔಷಧಾಲಯಗಳು, ಕಚೇರಿಗಳು, ಸಿಬ್ಬಂದಿ ಕ್ವಾರ್ಟರ್ಸ್‌ಗಳು ಮತ್ತು ಇತರ ಕಟ್ಟಡಗಳ ನಿರ್ಮಾಣಕ್ಕಾಗಿ ಭೂಮಿಗಳು ಮತ್ತು ಕಟ್ಟಡಗಳ ಖರೀದಿಗೆ/ ವರ್ಗಾವಣೆಗೆ ಸಂಬಂಧಿಸಿದಂತೆ ಸದರಿ ನಿಗಮದ ಹೆಸರಿನಲ್ಲಿ ಬರೆದುಕೊಟ್ಟ ಲಿಖಿತಗಳು (ಸಂ. ಆರ್‌ಡಿ 78 ಇಎಸ್‌ಟಿ 73, ದಿನಾಂಕ 20.4.1974).

(50) ಬಾಣಸವಾಡಿ ಲೇಔಟ್‌ನಲ್ಲಿ ಗುತ್ತಿಗೆ ಹಾಗೂ ಮಾರಾಟದ ಆಧಾರದ ಮೇಲೆ ವಾಯು ಸೇನಾ ಕ್ಷೇಮ ಸಂಘಕ್ಕೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಹಂಚಿಕೆ ಮಾಡಿದ ಎಂಟು ಮನೆಗಳ ಸಂಬಂಧದಲ್ಲಿ ಬರೆದುಕೊಟ್ಟ ಲಿಖಿತಗಳು (ಪತ್ರ ಸಂಖ್ಯೆ ಆರ್‌ಡಿ 104 ಇಎಸ್‌ಟಿ 75, ದಿನಾಂಕ 16.12.1975).

(51) ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ 48ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯಾಧಿಕರಣದ ಮುಂದೆ ದಾಖಲ್ಮಾಡಲಾಗುವ ತಕ್ಷಣದ ಉದ್ದೇಶಕ್ಕಾಗಿ ಸಲ್ಲಿಸಲಾದ ಶಪಥ ಪತ್ರಗಳ ಸಂಬಂಧದಲ್ಲಿನ ಸುಂಕದ (ಸಂಖ್ಯೆ ಆರ್‌ಡಿ 38 ಇಎಸ್‌ಟಿ 76, ದಿನಾಂಕ 30ನೇ ಮಾರ್ಚ್ 1976) ಮಾಫಿ.

(52) 10,25,00,000 ರೂಪಾಯಿಗಳ ಸಾಲವನ್ನು ಪಡೆಯುವುದಕ್ಕಾಗಿ ಜೀವ ವಿಮಾ ನಿಗಮಕ್ಕೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಬರೆದುಕೊಡಬೇಕಾದ ಅಡಮಾನ ಪತ್ರದ ಸಂಬಂಧದಲ್ಲಿನ ಸುಂಕದ ಮಾಫಿ (ಸಂ. ಆರ್‌ಡಿ 39 ಇಎಸ್‌ಟಿ 76 ದಿನಾಂಕ 21ನೇ ಜುಲೈ 1976).

(53) ವಿದ್ಯಾರ್ಥಿನಿಲಯದ ನಿರ್ಮಾಣದ ಉದ್ದೇಶಕ್ಕಾಗಿ ಶ್ರೀ ಗೋಪಾಲಸ್ವಾಮಿ ಅಯ್ಯರ್ ಹರಿಜನ ವಿದ್ಯಾರ್ಥಿ ನಿಲಯ, ಶ್ರೀರಾಮಪುರ, ಬೆಂಗಳೂರು ಇದಕ್ಕೆ ಬೆಂಗಳೂರು ನಗರ ನಿಗಮ ಬರೆದು ಕೊಡಬೇಕಾದ ದಾನ ಬಂಧ ಪತ್ರದ ಸಂಬಂಧದಲ್ಲಿನ ಸುಂಕ ಮಾಫಿ (ನಂ. ಆರ್‌ಡಿ 1 ಇಎಸ್‌ಟಿ 76, ದಿನಾಂಕ 6ನೇ ಆಗಸ್ಟ್ 1976).

(54) ಕುಟುಂಬ ಯೋಜನಾ ಸಂತಾನ ಶಕ್ತಿಹರಣಕ್ಕೆ ಒಪ್ಪಿಕೊಂಡವರು ಮಾಡಬೇಕಾದ ಘೋಷಣೆಯ ಸಂಬಂಧದಲ್ಲಿ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಕ್ಕೆ ಮಾಫಿ (ಸಂ. ಆರ್‌ಡಿ 75 ಇಎಸ್‌ಟಿ 76, ದಿನಾಂಕ 11ನೇ ಫೆಬ್ರವರಿ 1977).

(55) 3,00,00,000 ರೂಪಾಯಿಗಳ ಸಾಲವನ್ನು ಪಡೆಯುವುದಕ್ಕಾಗಿ ಭಾರತದ ಜೀವವಿಮಾ ನಿಗಮಕ್ಕೆ ಕರ್ನಾಟಕ ವಿದ್ಯುತ್ ನಿಗಮವು ಬರೆದುಕೊಡಬೇಕಾದ ಅಡಮಾನ ಪತ್ರಕ್ಕೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಕ್ಕೆ ಮಾಫಿ (ಆದೇಶ ಸಂಖ್ಯೆ ಆರ್‌ಡಿ 56 ಇಎಸ್‌ಟಿ 77, ದಿನಾಂಕ 24ನೇ ಮಾರ್ಚಿ 1977).

(56) ಮಲ್ಲೇಶ್ವರಂ ಉದ್ಯಮಶೀಲ ಮಹಿಳೆಯರ ಸಂಘ (ನಿ) ಮಹಿಳಾ ಕ್ಲಬ್, ಬೆಂಗಳೂರು ಇದಕ್ಕೆ ಬರೆದುಕೊಡಬೇಕಾದ 2,40,000 ರೂಪಾಯಿಗಳಿಗಾಗಿನ ಕ್ರಯ ಪತ್ರಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ಸುಂಕಕ್ಕೆ ಮಾಫಿ (ಆದೇಶ ಸಂಖ್ಯೆ ಆರ್‌ಡಿ 20 ಇಎಸ್‌ಟಿ 77, ದಿನಾಂಕ 4ನೇ ಏಪ್ರಿಲ್ 1977).

(57) ವಿದ್ಯಾರ್ಥಿ ವೇತನ ಕೊಡುವುದಕ್ಕಾಗಿ ಶೈಕ್ಷಣಿಕ ಸಂಸ್ಥೆಗೆ ಪ್ರವೇಶ, ಜಾತಿ ಪ್ರಮಾಣ ಪತ್ರ ಮಂಜೂರಾತಿಗಾಗಿನ ಅಥವಾ ಉದ್ಯೋಗದ ಉದ್ದೇಶಕ್ಕಾಗಿನ ಅರ್ಜಿಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿಗೆ ಸೇರಿದ ವ್ಯಕ್ತಿಗಳು ಪ್ರಮಾಣ ಪೂರ್ವಕ ಮಾಡಿದ ಶಪಥ ಪತ್ರಗಳು ಅಥವಾ ಘೋಷಣೆಗಳ ಸಂಬಂಧದಲ್ಲಿ ವಿಧಿಸಬಹುದಾದ ಸುಂಕಕ್ಕೆ ಮಾಫಿ (ಸಂಖ್ಯೆ ಆರ್‌ಡಿ 153 ಇಎಸ್‌ಟಿ 77, ದಿನಾಂಕ 18ನೇ ಆಗಸ್ಟ್ 1977).

(58) ಜೀವನ ಭೀಮಾನಗರ, ಎಚ್.ಎ.ಎಲ್. IIIನೇ ಹಂತ, ಬೆಂಗಳೂರು ಇಲ್ಲಿ ಜೀವವಿಮಾ ನಿಗಮ ನಿರ್ಮಿಸಿದ 426 ಕ್ವಾರ್ಟರ್ಸ್‌ಗಳ ಮಾರಾಟ ಮತ್ತು ಅಡಮಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಮತ್ತು ಜೀವವಿಮಾ ನಿಗಮದ ನಡುವೆ ಬರೆದುಕೊಡ ಬೇಕಾದಂಥ ಕ್ರಯಪತ್ರ ಮತ್ತು ಅಡಮಾನ ಪತ್ರಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ಸುಂಕಕ್ಕೆ ಮಾಫಿ (ಸಂಖ್ಯೆ ಆರ್‌ಡಿ 166 ಇಎಸ್‌ಟಿ 76, ದಿನಾಂಕ 26ನೇ ಅಕ್ಟೋಬರ್ 1977).

(59) ಕರ್ನಾಟಕ ನೀಲಗಿರಿ ನೆಡುತೋಪು ಯೋಜನೆಯ ಮೇರೆಗೆ ಕರ್ನಾಟಕ ಅರಣ್ಯ ನೆಡುತೋಪು ನಿಗಮ ನಿಯಮಿತವು ಹೊಸ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಕಾರಣವಾಗುವ ಅರಣ್ಯಗಳ ಮುಖ್ಯ ಸಂರಕ್ಷಕ (ಸಾಮಾನ್ಯ) ಮತ್ತು ಸದರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ, ಇವರು ಬರೆದುಕೊಟ್ಟ ಗುತ್ತಿಗೆ ಪತ್ರಗಳಿಗೆ ಸಂಬಂಧಿಸಿದಂತೆ ಸ್ಟಾಂಪ್ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳಿಗೆ 22.2.1977ರಿಂದ ಪರಿಣಾಮಗೊಳ್ಳುವಂತೆ ಮಾಫಿ (ಸಂ. ಆರ್‌ಡಿ 191 ಇಎಸ್‌ಟಿ 77 ದಿನಾಂಕ 31.10.1977).

(60) ಕರ್ನಾಟಕ ಕ್ರಿಕೆಟ್ ಸಂಘ ಮತ್ತು ಕರ್ನಾಟಕ ಫುಟ್‌ಬಾಲ್ ಸಂಘಗಳು ತಲಾ ಸರ್ಕಾರದಿಂದ 5 ಲಕ್ಷ ರೂಪಾಯಿಗಳ ಸಾಲವನ್ನು ಪಡೆಯುವುದಕ್ಕಾಗಿ ಸದರಿ ಸಂಘಗಳು ಸರ್ಕಾರದ ಹೆಸರಿಗೆ ಬರೆದುಕೊಡಬೇಕಾದ ಅಡಮಾನ ಪತ್ರಗಳು (ಸಂಖ್ಯೆ ಆರ್‌ಡಿ 214 ಇಎಸ್‌ಟಿ 77, ದಿನಾಂಕ 16.12.1977).

(61) ವಿಚಾರಣಾ ಆಯೋಗ ಅಧಿನಿಯಮ, 1952ರ ಉಪಬಂಧಗಳ ಮೇರೆಗೆ ಕೇಂದ್ರ ಅಥವಾ ರಾಜ್ಯ ಸರ್ಕಾರವು ನೇಮಿಸಿದ ವಿಚಾರಣಾ ನ್ಯಾಯಾಲಯವು ಹೊರಡಿಸಿದ ನೋಟೀಸುಗಳಿಗೆ ಸಂಬಂಧಿಸಿದಂತೆ ದಾಖಲ್ಮಾಡಲು ಅಗತ್ಯಪಡಿಸಿದ ಶಪಥ ಪತ್ರಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳಿಗೆ ಮಾಫಿ (ಸಂಖ್ಯೆ ಆರ್‌ಡಿ 186 ಇಎಸ್‌ಟಿ 77, ದಿನಾಂಕ 5/12.1.1978).

(62) ಪ್ರಿಮಿಸಿಸ್ ಸಂ. 14, ಸ್ಪೆನ್ಸರ್ ರೋಡು, ಫ್ರೆಜರ್ ಟೌನ್, ಬೆಂಗಳೂರು ಇದಕ್ಕಾಗಿ ಶ್ರೀಮತಿ ಜಿ.ಜೆ. ಮಧುರಾ ಅವರು ನವಜ್ಯೋತಿ ಟ್ರಸ್ಟಿನ ಹೆಸರಿಗೆ ಬರೆದು ಕೊಡಬೇಕಾದ ದಾನ ಮತ್ತು ಕ್ರಯ ಪತ್ರಕ್ಕೆ ಸಂಬಂಧಿಸಿದಂತೆ ಸುಂಕಗಳಿಗೆ ಮಾಫಿ (ಸಂ. ಆರ್‌ಡಿ 175 ಇಎಸ್‌ಟಿ 76, ದಿನಾಂಕ 7.2.1978).

(63) ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸಲಾದ ಯಾವುದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನಿಂದ 4,000 ರೂಪಾಯಿಗಳಿಗೆ ಮೀರದ ಸಾಲಗಳನ್ನು ಪಡೆಯುವುದಕ್ಕಾಗಿ ಬರೆದುಕೊಟ್ಟ ಅಡಮಾನ ಪತ್ರಗಳ ಸಂಬಂಧದಲ್ಲಿನ ಸುಂಕಗಳಿಗೆ ಮಾಫಿ (ಸಂಖ್ಯೆ ಆರ್‌ಡಿ 35 ಇಎಸ್‌ಟಿ 77, ದಿನಾಂಕ 13.2.1978).

(64) 3,30,00,000 ರೂಪಾಯಿಗಳ ಸಾಲವನ್ನು ಪಡೆಯುವುದಕ್ಕಾಗಿ ಭಾರತದ ಜೀವ ವಿಮಾ ನಿಗಮಕ್ಕೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಬರೆದುಕೊಡಬೇಕಾದ ಅಡಮಾನ ಪತ್ರಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ಸುಂಕಕ್ಕೆ ಮಾಫಿ (ಆರ್‌ಡಿ 237 ಇಎಸ್‌ಟಿ 77, ದಿನಾಂಕ 18.3.1978).

(65) 35 ಲಕ್ಷ ರೂಪಾಯಿಗಳ ಸಾಲವನ್ನು ಪಡೆಯುವುದಕ್ಕಾಗಿ ಕರ್ನಾಟಕ ಫುಟ್‌ಬಾಲ್ ಸಂಘವು ಸರ್ಕಾರಕ್ಕೆ ಬರೆದುಕೊಡಬೇಕಾದ ಅಡಮಾನ ಪತ್ರಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ಸುಂಕಕ್ಕೆ ಮಾಫಿ (ಸಂಖ್ಯೆ ಆರ್‌ಡಿ 94 ಇಎಸ್‌ಟಿ 75, ದಿನಾಂಕ 25.3.1978).

(66) ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಅಭಿವೃದ್ಧಿ ನಿಗಮ ನಿಯಮಿತ, ಇದು ವ್ಯಕ್ತಿಗಳಿಗೆ ಮಂಜೂರು ಮಾಡಲಾದ 10,000 ರೂಪಾಯಿಗಳವರೆಗಿನ ಸಾಲಗಳಿಗಾಗಿ ಮತ್ತು ಕಾನೂನಿನ ಮೇರೆಗೆ ನೋಂದಾಯಿತವಾದಂಥ ಮತ್ತು ಲೆಕ್ಕ ಪತ್ರಗಳು ಸಿವಿಲ್ ಲೆಕ್ಕ ಪರಿಶೋಧನೆಗೆ ಒಳಪಟ್ಟಿರುವಂಥ ನೋಂದಾಯಿತ ಸಂಘಗಳು/ ನಿಕಾಯಗಳು ಮತ್ತು ಸಂಸ್ಥೆಗಳಿಗೆ ಅಭಿವೃದ್ಧಿ ನಿಗಮ ನಿಯಮಿತ ಇದು ಮಂಜೂರು ಮಾಡಿದ 50,000 ರೂಪಾಯಿಗಳವರೆಗಿನ ಸಾಲಗಳಿಗಾಗಿ ಬರೆದುಕೊಟ್ಟಿರುವ ದಸ್ತಾವೇಜುಗಳ ಸಂಬಂಧದಲ್ಲಿನ ಸುಂಕಗಳಿಗೆ ಮಾಫಿ (ಆರ್‌ಡಿ 142 ಇಎಸ್‌ಟಿ 75, ದಿನಾಂಕ 23.3.1978).

(67) ಪ್ರೌಢಶಾಲಾ ಕಟ್ಟಡದ ನಿರ್ಮಾಣಕ್ಕಾಗಿ ಕೇಂದ್ರೀಯ ವಕ್ಫ್ ಕೌನ್ಸಿಲ್ಲಿನಿಂದ ಎರಡು ಲಕ್ಷ ರೂಪಾಯಿಗಳ ಸಾಲದ ಮಂಜೂರಾತಿಯ ಸಂಬಂಧವಾಗಿ ಕೇಂದ್ರೀಯ ವಕ್ಫ್ ಕೌನ್ಸಿಲ್, ಹೊಸ ದೆಹಲಿ ಇದರ ಹೆಸರಿನಲ್ಲಿ ಅಂಜುಮನ್–ಎ–ಇಸ್ಲಾಂ, ಹುಬ್ಬಳ್ಳಿ ಇದು ಬರೆದುಕೊಡಬೇಕಾದ ಅಡಮಾನ ಪತ್ರದ ಸಂಬಂಧವಾಗಿ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳಿಗೆ ಮಾಫಿ (ಸಂ. ಆರ್‌ಡಿ 93 ಇಎಸ್‌ಟಿ 78, ದಿನಾಂಕ 27.6.78).

(68) ಆಸ್ಪತ್ರೆಯ ನಿರ್ಮಾಣಕ್ಕಾಗಿ ವೆಂಕಟೇಶ್ವರ ಅಂತರರಾಷ್ಟ್ರೀಯ ಧರ್ಮ ಸಂಸ್ಥೆಯ ಹೆಸರಿಗೆ ಮತ್ತು ಪ್ರಚಾರಕ್ಕಾಗಿ ಬಸವನಪುರದ ಸರ್ವೆ ನಂ. 26, ಬೆಂಗಳೂರು–36 ರಲ್ಲಿರುವ 3½ ಎಕರೆ ಜಮೀನನ್ನು ದಾನ ಕೊಟ್ಟ ಶ್ರೀಮತಿ ನಾರಾಯಣಮ್ಮ ಇವರು ಬರೆದುಕೊಡಬೇಕಾದ ದಾನಪತ್ರದ ಸಂಬಂಧದಲ್ಲಿ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳಿಗೆ ಮಾಫಿ (ಸಂ. ಆರ್‌ಡಿ 44 ಇಎಸ್‌ಟಿ 78, ದಿನಾಂಕ 22/23.8.1978).

(69) ಸೈನಿಕ ಪ್ರಾಧಿಕಾರವು ದಕ್ಷಿಣ ಭಾರತ ಮಹಿಳಾ ಸಂಘ, ಬೆಂಗಳೂರು ಇದಕ್ಕೆ ಮಾಡಿದ ಭೂಮಿಯ ಮಾರಾಟಕ್ಕೆ ಸಂಬಂಧಿಸಿ ಬರೆದುಕೊಡಬೇಕಾಗಿರುವ 25,000 ರೂಪಾಯಿಗಳ ಕ್ರಯ ಪತ್ರದ ಸಂಬಂಧವಾಗಿ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳಿಗೆ ಮಾಫಿ (ಆದೇಶ ಸಂ. ಆರ್‌ಡಿ 217 ಇಎಸ್‌ಟಿ 77, ದಿನಾಂಕ 23.7.1978 ನೋಡಿ).

(70) 5 ಲಕ್ಷ ರೂಪಾಯಿಗಳ ಸಾಲ ಪಡೆದುದಕ್ಕಾಗಿ ಬಸವ ಸಮಿತಿ, ಬೆಂಗಳೂರು ಇದು ಕರ್ನಾಟಕ ಸರ್ಕಾರದ ಪರವಾಗಿ ಬರೆದುಕೊಡಬೇಕಾದ ಅಡಮಾನ ಪತ್ರದ ಸಂಬಂಧವಾಗಿ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳಿಗೆ ಮಾಫಿ (ಸಂ. ಆರ್‌ಡಿ 176 ಇಎಸ್‌ಟಿ 78, ದಿನಾಂಕ 2/3.1.1979 ನೋಡಿ).

(71) 3.63,00,000 ರೂಪಾಯಿಗಳ ಸಾಲವನ್ನು ಪಡೆಯುವುದಕ್ಕಾಗಿ ಜೀವವಿಮಾ ನಿಗಮದ ಪರವಾಗಿ ಮೈಸೂರು ವಿದ್ಯುತ್ ನಿಗಮ ಇದು ಬರೆದುಕೊಟ್ಟ ಅಡಮಾನ ಪತ್ರಕ್ಕೆ ಸಂಬಂಧಿಸಿದ ಅಧಿಸೂಚನೆ ಸಂ. ಆರ್‌ಡಿ 24 ಇಎಸ್‌ಟಿ 79, ದಿನಾಂಕ 23.3.79).

(72) ಆರ್‌ಡಿ 138 ಇಎಸ್‌ಟಿ 79, ದಿನಾಂಕ 26/27.6.1979 ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳು ಮತ್ತು ಗೊಬರ್ ಅನಿಲ ಸ್ಥಾವರಗಳ ಉದ್ದೇಶಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆಯುವುದಕ್ಕಾಗಿ ಬರೆದುಕೊಡಬೇಕಾದ ಲಿಖಿತ.

(73) ಸಂ. ಆರ್‌ಡಿ 105 ಇಎಸ್‌ಟಿ 79, ದಿನಾಂಕ 2.7.79 ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ) ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಆದೇಶ ಸಂ. ಆರ್‌ಡಿ 86 ಇಎಸ್‌ಟಿ 78, ದಿನಾಂಕ 19.3.1979 ಇದನ್ನು ರದ್ದುಗೊಳಿಸಿ, ಕರ್ನಾಟಕ ಸರ್ಕಾರವು 5.1.1979 ರಿಂದ ಪರಿಣಾಮಕ್ಕೆ ಬರುವಂತೆ ಈ ಆದೇಶಕ್ಕೆ ಅನುಬಂಧಿಸಲಾದ Iನೇ ಕೋಷ್ಟಕದಲ್ಲಿ ಸೂಚಿಸಲಾಗಿರುವ ಲಿಖಿತಗಳನ್ನು ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳನ್ನು ಮಾಫಿ ಮಾಡತಕ್ಕ ಲಿಖಿತಗಳೆಂದು ಮತ್ತು ಈ ಆದೇಶಕ್ಕೆ ಅನುಬಂಧಿಸಲಾದ IIನೇ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಲಿಖಿತಗಳನ್ನು ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳನ್ನು ಸದರಿ ಕೋಷ್ಟಕದಲ್ಲಿ, ಆ ಬಾಬಿನ ಸಂಬಂಧವಾಗಿ ಸೂಚಿಸಲಾಗಿರುವಷ್ಟರ ಮಟ್ಟಿಗೆ ಕಡಿಮೆ ಮಾಡತಕ್ಕ ಲಿಖಿತಗಳೆಂದು ಮತ್ತು 30.6.1980ರ ವರೆಗಿನ ಒಂದು ಅವಧಿಗೆ ಜಾರಿಯಲ್ಲಿರುವುದೆಂದು ಈ ಮೂಲಕ ನಿರ್ದಿಷ್ಟಪಡಿಸಿದೆ.

(1) (ಅಲ್ಪಾವಧಿ, ಮಧ್ಯಮಾವಧಿ ಮತ್ತು ಮಾರುಕಟ್ಟೆ ಹಣಕಾಸು ಸೇರಿದಂತೆ) ಉತ್ಪಾದನಾ ಹಣಕಾಸು ಒದಗಿಸುವ ಸಹಕಾರಿ ಸಂಘವು ಮತ್ತು ಅಂಥ ಸಂಘದ ವ್ಯವಹಾರಕ್ಕೆ ಸಂಬಂಧಿಸಿದಂತೆ ಅದರ ಸದಸ್ಯರು ಬರೆದುಕೊಟ್ಟ ಲಿಖಿತಗಳು.

(2) ಭೂ ಅಡಮಾನ ಬ್ಯಾಂಕ್ ಅಥವಾ ಭೂ ಅಡಮಾನ ಸಂಘ ಅಥವಾ ಅದರ ಒಬ್ಬ ಅಧಿಕಾರಿ ಅಥವಾ ಸದಸ್ಯನು ಸದರಿ ಬ್ಯಾಂಕ್ ಅಥವಾ ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಂತೆ, ಲಿಖಿತದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗು ಅಥವಾ ಮೌಲ್ಯವು 10,000 ರೂಪಾಯಿಗಳಿಗಿಂತ ಹೆಚ್ಚಾಗಿಲ್ಲದಿರುವಲ್ಲಿ ಬರೆದುಕೊಟ್ಟ ಲಿಖಿತಗಳು.

(3) ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಕೃಷಿ ಉದ್ಯಮಗಳ ನಿಗಮ ಇವು ರೈತರಿಗೆ ಕೃಷಿ ಹಣಕಾಸು ಒದಗಿಸುವ ಅವುಗಳ ಯೋಜನೆಯ ಮೇರೆಗೆ ಪ್ರತಿ ಸಂದರ್ಭದಲ್ಲಿ 10,000 ರೂಪಾಯಿಗಳಿಗೆ ಮೀರದ ಮೊಬಲಗಿನ ಸಾಲದ ಸಂಬಂಧದಲ್ಲಿ ಸದರಿ ಬ್ಯಾಂಕ್ ಅಥವಾ ನಿಗಮದ ಹೆಸರಿಗೆ ರೈತರು ಬರೆದುಕೊಡಬೇಕಾದ ಲಿಖಿತಗಳು.

(4) ಕರ್ನಾಟಕ ಕೃಷಿ ಸಾಲ ನಿರ್ವಹಣೆ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1974ರ ಮೇರೆಗೆ, 10,000 ರೂಪಾಯಿಗಳವರೆಗಿನ ಸಾಲದ ಮಂಜೂರಾತಿಯ ಸಂಬಂಧದಲ್ಲಿ ಸದರಿ ಅಧಿನಿಯಮದ ಮೇರೆಗೆ ರೈತರು ಲೇವಾದೇವಿ ಏಜೆನ್ಸಿಗಳ ಹೆಸರಿಗೆ ಅಥವಾ ಅವುಗಳ ಮೂಲಕ ಬರೆದುಕೊಡಬೇಕಾದ ಲಿಖಿತಗಳು.

## ಕೋಷ್ಟಕ – II

| | | |
|---|---|---|
| (1) | ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣಕ್ಕಾಗಿ ಸಾಲ ಪಡೆಯುವುದಕ್ಕಾಗಿ ಶೈಕ್ಷಣಿಕ ಸಂಸ್ಥೆಗಳು ಸರ್ಕಾರಕ್ಕೆ ಬರೆದುಕೊಡಬೇಕಾದ ಪತ್ರಗಳು | ವಿಧಿಸಬಹುದಾದ ಸುಂಕದ ಶೇಕಡಾ ಐವತ್ತು |
| (2) | ರಾಷ್ಟ್ರೀಯ ವಿಸ್ತರಣಾ ಸೇವೆ ಮತ್ತು ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಮೇರೆಗೆ ಪುರಸ್ಕೃತವಾದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಗ್ರಾಮ ಪಂಚಾಯಿತಿಗಳು ಸರ್ಕಾರಕ್ಕೆ ಬರೆದುಕೊಟ್ಟ ಬಂಧ ಪತ್ರಗಳು | ಸುಂಕವನ್ನು 1 ರೂ. 50 ಪೈಸೆಗಳಿಗೆ ಇಳಿಸಲಾಗಿದೆ |
| (3) | ಸಾಲದ ರೂಪದಲ್ಲಿ ಮುಂಗಡ ಕೊಟ್ಟಿರುವ ಅಥವಾ ಮುಂಗಡ ಕೊಡಬೇಕಾದ ಹಣದ ಅಥವಾ ಅಸ್ತಿತ್ವದಲ್ಲಿರುವ ಅಥವಾ ಭಾವೀ ಋಣದ ಮರು ಸಂದಾಯಕ್ಕಾಗಿ ಭದ್ರತೆಯ ರೂಪದಲ್ಲಿ ಚರಸ್ವತ್ತನ್ನು ಆಧಾರವಾಗಿ ಇಟ್ಟಿರುವಲ್ಲಿ ಅಂಥ ಆಧಾರ ಇಡುವಿಕೆಗೆ ಸಂಬಂಧಪಟ್ಟ ಒಪ್ಪಂದವನ್ನು ಸಾಕ್ಷೀಕರಿಸಿದ ಅನನುಪ್ರಮಾಣಿತ ಲಿಖಿತಗಳು | ಸುಂಕವನ್ನು 2 ರೂಪಾಯಿಗಳಿಗೆ ಇಳಿಸಲಾಗಿದೆ |
| (4) | ಲಿಖಿತವು, ಶೈಕ್ಷಣಿಕ ಸಂಸ್ಥೆ, ಅಥವಾ ಅಂಥ ಸಂಸ್ಥೆಗೆ ಸೇರಿದ ವಿದ್ಯಾರ್ಥಿನಿಲಯ, ಅನಾಥಾಲಯ, ಭೋಜನ ಗೃಹ ಇವುಗಳನ್ನು ನೆಲೆಗೊಳಿಸುವುದಕ್ಕಾಗಿ ಯಾವುದೇ ಕಟ್ಟಡ ಅಥವಾ ಇತರ ಸ್ಥಿರ ಸ್ವತ್ತಿನ ಹಸ್ತಾಂತರಣಕ್ಕೆ ಅಥವಾ ಅಂಥ ಸಂಸ್ಥೆಯ | ಶೇಕಡಾ ಇಪ್ಪತ್ತೈದರಷ್ಟು ಸುಂಕವನ್ನು ಇಳಿಸಲಾಗಿದೆ. |

| | | |
|---|---|---|
| | ವಿದ್ಯಾರ್ಥಿಗಳಿಗಾಗಿ ಅಂಥ ಶೈಕ್ಷಣಿಕ ಸಂಸ್ಥೆ, ವಿದ್ಯಾರ್ಥಿ ನಿಲಯ, ಅನಾಥಾಲಯ, ಭೋಜನಗೃಹ ಇವುಗಳಿಗಾಗಿನ ಕಟ್ಟಡಗಳ ನಿರ್ಮಾಣಕ್ಕಾಗಿ ಅಥವಾ ಆಟದ ಮೈದಾನವಾಗಿ ಉಪಯೋಗಿಸುವುದಕ್ಕಾಗಿನ ಅಂಥ ಯಾವುದೇ ಭೂಮಿಯ ಹಸ್ತಾಂತರಣಕ್ಕೆ ಸಂಬಂಧಪಟ್ಟಿರುವಲ್ಲಿ, ಸರ್ಕಾರದಿಂದ ಮನ್ನಣೆ ಪಡೆದ ಶೈಕ್ಷಣಿಕ ಸಂಸ್ಥೆಯ ಆಡಳಿತ ಮಂಡಳಿಯ ಹೆಸರಿಗೆ ಬರೆದುಕೊಟ್ಟ ಹಸ್ತಾಂತರಣ ಲಿಖಿತ | |
| (5) | ರಾಜ್ಯದಲ್ಲಿನ ರಾಜಕೀಯ ಸಂತ್ರಸ್ತರಿಗೆ ಬಂದೀಖಾನೆ ಪ್ರಮಾಣ ಪತ್ರವೆಂದು ಕೊಡಲಾದ ಬಂಧೀಖಾನೆ ಪ್ರಾಧಿಕಾರಿಗಳು ಇಟ್ಟುಕೊಂಡು ಬಂದ ರಿಜಿಸ್ಟರುಗಳಲ್ಲಿನ ನಮೂದುಗಳ ಉದ್ಧೃತಿಯ ಪ್ರತಿಗಳು | ಸುಂಕವನ್ನು 0.50 ಪೈಸೆಗೆ ಇಳಿಸಲಾಗಿದೆ. |
| (6) | ಬಿಟ್ಟುಬಿಡಲಾಗಿದೆ | |
| (7) | ಲಿಖಿತದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗು ಅಥವಾ ಮೌಲ್ಯವು ಐದು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿರುವ ಸಂದರ್ಭದಲ್ಲಿ ನಗರ ಸಹಕಾರಿ ಸಂಘಗಳ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅಂಥ ಸಂಘಗಳ ಅಥವಾ ಬ್ಯಾಂಕುಗಳ ಸದಸ್ಯರು ಬರೆದುಕೊಡಬೇಕಾದ ಲಿಖಿತಗಳು ಮತ್ತು ಅಂಥ ಸಂಘಗಳು ಅಥವಾ ಬ್ಯಾಂಕುಗಳು ಅವುಗಳ ಸದಸ್ಯರ ಹೆಸರಿಗೆ ಬರೆದುಕೊಡಬೇಕಾದ ಮರು ಹಸ್ತಾಂತರಣ ಪತ್ರಗಳು | ವಿಧಿಸಬಹುದಾದ ಸುಂಕದ ಶೇಕಡಾ ಐವತ್ತರಷ್ಟು |
| (8) | (ಆದೇಶ ಆರ್‌ಡಿ 22, ಇಎಸ್‌ಆರ್ 82, ದಿನಾಂಕ 1.4.82ರ ಮೂಲಕ ಬಿಟ್ಟುಬಿಡಲಾಗಿದೆ) | |
| (9) | ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಮೇರೆಗೆ ನೋಂದಾಯಿಸಲಾದ ಅಥವಾ ನೋಂದಾಯಿಸಿದೆಯೆಂದು ಭಾವಿಸಲಾದ ಯಾವುದೇ ಇತರ ಸಹಕಾರಿ ಸಂಘಗಳು ಅಂಥ ಸಂಘಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ, ಬರೆದುಕೊಟ್ಟ ಲಿಖಿತಗಳು | ವಿಧಿಸಬಹುದಾದ ಸುಂಕದ ಶೇಕಡಾ ಐವತ್ತರಷ್ಟು |
| (10) | ಆದೇಶ ಕ್ರಮಾಂಕ ಆರ್‌ಡಿ 52 ಇಎಸ್‌ಟಿ 69, ದಿನಾಂಕ 19.3.1971 (ಆದೇಶ ಕ್ರಮಾಂಕ ಆರ್‌ಡಿ 84 ಇಎಸ್‌ಟಿ 81, ದಿನಾಂಕ 6.5.82 ಇದರಿಂದ ಪ್ರತಿಯೋಜಿಸಲಾಗಿದೆ) ಇದರ ಮೇರೆಗೆ ಸರ್ಕಾರವು ಅಂಥ ಸರ್ಕಾರಿ ನೌಕರರಿಗೆ ಮಂಜೂರ್ಮಾಡಿದ ಗೃಹ ನಿರ್ಮಾಣ, ಗೃಹ ಖರೀದಿ ಅಥವಾ ಗೃಹ ದುರಸ್ತಿ ಮುಂಗಡದ ಸಂಬಂಧದಲ್ಲಿ ರಾಜ್ಯ ಸರ್ಕಾರಿ | ವಿಧಿಸಬಹುದಾದ ಸುಂಕದ ಶೇಕಡಾ ಐವತ್ತರಷ್ಟು |

| | | |
|---|---|---|
| | ನೌಕರರು (ಅಖಿಲ ಭಾರತ ಸೇವೆಯ ಅಧಿಕಾರಿಗಳೂ ಸೇರಿ) ಅಥವಾ ಅವರ ಗಂಡಂದಿರು ಅಥವಾ ಹೆಂಡತಿಯರು ಬರೆದುಕೊಟ್ಟ ಅಡಮಾನ ಪತ್ರಗಳು, ಒಪ್ಪಂದಗಳು ಮತ್ತು ಜಾಮೀನು ಪತ್ರಗಳು | |
| (11) | (i) ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಮೇರೆಗೆ ನೋಂದಾಯಿಸಲಾದ ಸಹಕಾರಿ ಸಂಘಗಳು ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 ಇದರ ಮೇರೆಗೆ ನೋಂದಾಯಿತವಾದ ಸಂಸ್ಥೆಗಳು ಮತ್ತು ನೋಂದಾಯಿತ ನ್ಯಾಸಗಳು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಹೆಸರಿಗೆ ಬರೆದುಕೊಟ್ಟಿರುವ ಎಲ್ಲ ಲಿಖಿತಗಳು, ಅಡಮಾನ ಪತ್ರಗಳು, ಒಪ್ಪಂದಗಳು, ಭದ್ರತಾ ಬಂಧ ಪತ್ರಗಳು, ಶಪಥ ಪತ್ರಗಳು, ಇತ್ಯಾದಿ | ವಿಧಿಸಬಹುದಾದ ಸುಂಕದ ಶೇಕಡಾ ಐವತ್ತರಷ್ಟು |
| | (ii) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಹೆಸರಿಗೆ ಕುಶಲ ಕರ್ಮಿಗಳು ವೈಯಕ್ತಿಕವಾಗಿ ಬರೆದುಕೊಟ್ಟ ಎಲ್ಲ ಲಿಖಿತಗಳು, ಒಪ್ಪಂದಗಳು, ಭದ್ರತಾ ಬಂಧ ಪತ್ರಗಳು, ಅಡಮಾನ ಪತ್ರಗಳು, ಶಪಥ ಪತ್ರಗಳು | ವಿಧಿಸಬಹುದಾದ ಸುಂಕದ ಶೇಕಡಾ ಐವತ್ತರಷ್ಟು |
| | (ಅಧಿಸೂಚನೆ ಕ್ರಮಾಂಕ ಆರ್‌ಡಿ 52, ಇಎಸ್‌ಟಿ 72, ದಿನಾಂಕ 21ನೇ ಮಾರ್ಚಿ 1973). | |
| 12 | ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ಅನುಸೂಚಿಯ ಅನುಚ್ಛೇದ 52ರ ಮೇರೆಗೆ ಪ್ರತಿ ಹತ್ತು ರೂಪಾಯಿಯ ಡಿಬೆಂಚರಿಗೆ 2.50 ರೂಪಾಯಿಯಿಂದ ಪ್ರತಿ ನೂರು ರೂಪಾಯಿಗಳಿಗೆ 0.25 (ಆರ್‌ಡಿ 93 ಇಎಸ್‌ಟಿ 73, ದಿನಾಂಕ 16ನೇ ಅಕ್ಟೋಬರ್ 1975) ಯಂತೆ ಡಿಬೆಂಚರಿನ ವರ್ಗಾವಣೆಯ ಮೇಲಿನ ಸ್ಟಾಂಪು ಸುಂಕವನ್ನು ದಿನಾಂಕ 1ನೇ ಅಕ್ಟೋಬರ್ 1975ರಿಂದ ಪರಿಣಾಮಕ್ಕೆ ಬರುವಂತೆ ಇಳಿಸಲಾಗಿದೆ | |
| 13 | ಕಾಸ್ಟ್ ಅಂಡ್ ವರ್ಕ್ಸ್ ಅಕೌಂಟ್ಸ್ ಆಫ್ ಇಂಡಿಯ, ಸಂಸ್ಥೆಯ ಹೆಸರಿಗೆ ಬೆಂಗಳೂರು ನಗರದಲ್ಲಿ 1,25,000 ರೂಪಾಯಿಗಳ ಮೌಲ್ಯದ ಸ್ವತ್ತಿಗೆ ಕೈಗಾರಿಕೋದ್ಯಮ ಮತ್ತು ವಾಣಿಜ್ಯ ಸಹಕಾರಿ ಸಂಘ ನಿಯಮಿತ, ಬೆಂಗಳೂರು ಇದು ಬರೆದುಕೊಡಬೇಕಾದ ಹಸ್ತಾಂತರಣ ಲಿಖಿತದ ಸಂಬಂಧದಲ್ಲಿ ವಿಧಿಸಬಹುದಾದಂಥ ಸುಂಕವನ್ನು ಶೇಕಡಾ ಇಪ್ಪತ್ತೈದರಷ್ಟು ಇಳಿಸಲಾಗಿದೆ | |

| | | |
|---|---|---|
| | (ಆರ್‌ಡಿ 163 ಇಎಸ್‌ಟಿ 75, ದಿನಾಂಕ 16.6.1976) | |
| 14 | ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (ಕರ್ನಾಟಕ ಅಧಿನಿಯಮ 1957ರ ಸಂಖ್ಯೆ 34) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ) ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟು, ಬೆಂಗಳೂರು ಜಿಲ್ಲೆ ರೇಷ್ಮೆ ಹುರಿಮಾಡುವವರ ಸಹಕಾರಿ ಸಂಘ ನಿಯಮಿತ, ಇದರ ಸದಸ್ಯನ ಹೆಸರಿಗೆ ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಬರೆದುಕೊಡಬೇಕಾದ ಕ್ರಯ ಪತ್ರಗಳ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮದ ಹೆಸರಿಗೆ ಸದರಿ ಸಂಘದ ಸದಸ್ಯರು ಬರೆದುಕೊಡಬೇಕಾದ ಅಡಮಾನ ಪತ್ರಗಳ ಸಂಬಂಧದಲ್ಲಿ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳಿಗೆ ಶೇಕಡಾ 50ರಷ್ಟು ಮಾಫಿ ಮಾಡಿದೆ.<br>(ಕ್ರಮಾಂಕ ಆರ್‌ಡಿ 41 ಇಎಸ್‌ಟಿ 79, ದಿ. 5.6.79) | |
| 15 | ಲಿಖಿತಗಳಲ್ಲಿ ನಿರ್ದಿಷ್ಟ ಪಡಿಸಲಾದ ಮೌಲ್ಯದ ಮೊಬಲಗು 10,000 ರೂಪಾಯಿಗಿಂತ ಹೆಚ್ಚಾಗಿರುವಲ್ಲಿ, ಭೂ ಅಡಮಾನ ಸಂಘಗಳು ಅಥವಾ ಅವುಗಳ ಅಧಿಕಾರಿ ಅಥವಾ ಸದಸ್ಯನು ಅಂಥ ಸಂಘಗಳ ಅಥವಾ ಬ್ಯಾಂಕ್‌ಗಳ ವ್ಯವಹಾರಕ್ಕೆ ಸಂಬಂಧಿಸಿ ಬರೆದು ಕೊಡಬೇಕಾದ ಲಿಖಿತಗಳು.<br>(ಆರ್‌ಡಿ ಕ್ರಮಾಂಕ 105 ಇಎಸ್‌ಟಿ 79, ದಿ: 2.7.79 ದಿನಾಂಕ 5.1.1979 ರಿಂದ ಪರಿಣಮಿಸುವಂತೆ) ಮತ್ತು 30.6.1980ರ ವರೆಗಿನ ಅವಧಿಯ ವರೆಗೆ ಜಾರಿಯಲ್ಲಿರುವುದು | ವಿಧಿಸಬಹುದಾದ ಸುಂಕದ ಶೇಕಡಾ ಐವತ್ತರಷ್ಟು |
| 16 | ಸರ್ಕಾರಿ ಆದೇಶ ಕ್ರಮಾಂಕ ಡಿಆರ್‌ಎಲ್ 14 ಬಿಟಿಕೆ 62, ದಿನಾಂಕ 23ನೇ ನವೆಂಬರ್ 1962 | |

ಕರ್ನಾಟಕ ಗ್ರಾಮ ಪಂಚಾಯತಿಗಳು ಮತ್ತು ಸ್ಥಳೀಯ ಮಂಡಲಿಯ ಅಧಿನಿಯಮ, 1959ರ (ಕರ್ನಾಟಕ ಅಧಿನಿಯಮ 1959ರ ಸಂಖ್ಯೆ 10) 164ನೇ ಪ್ರಕರಣದ (1)ನೇ ಉಪ–ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸದರಿ ಪ್ರಕರಣದ ಮೇರೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಸ್ಥಿರ ಸ್ವತ್ತಿನ ವರ್ಗಾವಣೆಗಳ ಮೇಲೆ ಹೆಚ್ಚಿನ ಸ್ಟಾಂಪು ಶುಲ್ಕದ ರೂಪದಲ್ಲಿ ವಿಧಿಸಬಹುದಾದ ಸುಂಕವನ್ನು ಪ್ರಾಥಮಿಕ ಭೂ ಅಡಮಾನ ಬ್ಯಾಂಕ್‌ಗಳ ಹೆಸರಿನಲ್ಲಿ ಅಡಮಾನದ ಮೂಲಕ ಪಡೆಯಲಾದ ಸಾಲಗಳ ಸಂಬಂಧದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ವಿಧಿಸತಕ್ಕದ್ದಲ್ಲವೆಂದು ಈ ಮೂಲಕ ನಿರ್ದೇಶಿಸುತ್ತದೆ.

**ಕರ್ನಾಟಕ ಸರ್ಕಾರ**

ಕ್ರಮಾಂಕ ಆರ್‌ಡಿ 176 ಇಎಸ್‌ಟಿ 81

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 3ನೇ ಜುಲೈ 1982

**ಆದೇಶ**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 34) 9ನೇ ಪ್ರಕರಣದ (1)ನೇ ಉಪ-ಪ್ರಕರಣದ (ಕ) ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟು, ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಸಾಲ ಹಾಗೂ ಸಹಾಯ ಧನವನ್ನು ಪಡೆಯಲು ಉತ್ತರ ಕನ್ನಡ ಜಿಲ್ಲೆಯಲ್ಲಿ ಶಿರಾಳಿ ಮತ್ತು ಆಮದಳ್ಳಿಯ ಗ್ರಾಮ ಪಂಚಾಯತಿ ಸಮಿತಿಗಳು ಬರೆದುಕೊಡಬೇಕಾದ ಲಿಖಿತಗಳ ಸಂಬಂಧದಲ್ಲಿ ಎಂದರೆ ಅಡಮಾನ ಪತ್ರಗಳಿಗೆ ಸದರಿ ಅಧಿನಿಯಮದ ಮೇರೆಗೆ ವಿಶೇಷ ಸಂದರ್ಭವೆಂದು ವಿಧಿಸಬಹುದಾದ ಸುಂಕಗಳನ್ನು ಈ ಮೂಲಕ ಮಾಫಿ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್.ಎಂ. ರಾಮಹನುಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ.

## ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 288 ಇಎಸ್‌ಟಿ 81

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 15ನೇ ಮಾರ್ಚ್ 1982

## ಆದೇಶ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 34) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ) ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ರೂ. 10,46,00.000 (ಹತ್ತುಕೋಟಿ ನಲವತ್ತಾರು ಲಕ್ಷ ರೂಪಾಯಿ ಮಾತ್ರ) ಸಾಲ ಪಡೆಯುವುದಕ್ಕಾಗಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇದು ಭಾರತೀಯ ಜೀವವಿಮಾ ನಿಗಮದ ಹೆಸರಿಗೆ ಬರೆದು ಕೊಡಬೇಕಾದ ಅಡಮಾನ ಪತ್ರಕ್ಕೆ (ಋಣಭಾರ ಪತ್ರ) ಸಂಬಂಧಪಟ್ಟಂತೆ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಸುಂಕಗಳನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಮಾಫಿ ಮಾಡುವುದು ಅವಶ್ಯವೆಂದು ಕರ್ನಾಟಕ ಸರ್ಕಾರವು ಅಭಿಪ್ರಾಯ ಪಟ್ಟು, ಈ ಮೂಲಕ ಮಾಫಿ ಮಾಡಿದೆ.

ಈ ಆದೇಶವನ್ನು, ಹಣಕಾಸಿನ ಇಲಾಖೆಯ ಯು.ಓ. ಟಿಪ್ಪಣಿ ಸಂಖ್ಯೆ ಎಫ್.ಎಸ್. 647/82, ದಿನಾಂಕ 27.2.1982ರ ಪ್ರಕಾರ ಅವರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್.ಎಂ. ರಾಮಹನುಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ

## ಕರ್ನಾಟಕ ಸರ್ಕಾರದ ವ್ಯವಹರಣೆಗಳು

**ವಿಷಯ:** ಔದ್ಯಮಿಕವಾಗಿ ಹಿಂದುಳಿದವೆಂದು ಅಧಿಸೂಚಿತವಾದ ಜಿಲ್ಲೆಗಳಲ್ಲಿ ಸ್ಥಾಪಿಸಲಾದ ಉದ್ಯಮಗಳು ಬರೆದು ಕೊಡಬೇಕಾದ ಲಿಖಿತಗಳ ಸಂಬಂಧದಲ್ಲಿನ ಸ್ಟಾಂಪು ಸುಂಕಕ್ಕೆ ವಿನಾಯಿತಿ–ಆದೇಶಗಳು.

**ಓದಲಾಗಿದೆ:**
1) ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 179 ಇಎಸ್‌ಟಿ 80, ದಿನಾಂಕ 4.11.80.
2) ಸರ್ಕಾರಿ ಆದೇಶ ಸಂಖ್ಯೆ ಸಿಆಯ್ 2 ಎಸ್‌ಪಿಸಿ 81, ದಿನಾಂಕ 11.5.81.
3) ಸರ್ಕಾರಿ ಆದೇಶ ಸಂಖ್ಯೆ ಸಿಆರ್‌ಡಿ 179 ಇಎಸ್‌ಟಿ 80, ದಿನಾಂಕ 29.6.81.
4) ಸರ್ಕಾರಿ ಆದೇಶ ಸಂಖ್ಯೆ ಸಿಆಯ್ 62 ಎಸ್‌ಪಿಸಿ 81, ದಿನಾಂಕ 16.6.81.
5) ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 179 ಇಎಸ್‌ಟಿ 80, ದಿನಾಂಕ 16.10.81.
6) ಸರ್ಕಾರಿ ಆದೇಶ ಸಂಖ್ಯೆ ಸಿಆಯ್ 62 ಎಸ್‌ಪಿಸಿ 82, ದಿನಾಂಕ 17.4.82.

**ಪೀಠಿಕೆ:**

ಅನುಕ್ರಮ ಸಂಖ್ಯೆ (1)ರಲ್ಲಿ ಓದಲಾದ 4.11.1980ರ ಸರ್ಕಾರಿ ಆದೇಶದಲ್ಲಿ 1.10.1980 ರಿಂದ 31.3.81ರ ವರೆಗೆ ಅನುಮೋದಿಸಲಾದ ಹಣಕಾಸು ಸಂಸ್ಥೆಗಳಿಂದ ಸಾಲಗಳು ಮತ್ತು ಋಣಗಳನ್ನು ಪಡೆಯಲು ಔದ್ಯಮಿಕವಾಗಿ ಹಿಂದುಳಿದಿವೆಯೆಂದು ಅಧಿಸೂಚಿತವಾದ ಜಿಲ್ಲೆಗಳಲ್ಲಿರುವ ಹೊಸ ಉದ್ಯಮಗಳು, ಬರೆದುಕೊಟ್ಟ ಸಾಲಗಳ ಮತ್ತು ಋಣಗಳ ಲಿಖಿತಗಳಿಗೆ ಸ್ಟಾಂಪು ಮತ್ತು ಸುಂಕ ಸಂದಾಯ ಮಾಡುವುದಕ್ಕೆ ವಿನಾಯಿತಿಯನ್ನು ನೀಡಲಾಗಿದೆ. (3) ಮತ್ತು (5)ರಲ್ಲಿ ಓದಲಾದ ದಿನಾಂಕ 29.6.81 ಹಾಗೂ 16.10.81ರ ಸರ್ಕಾರಿ ಆದೇಶದಲ್ಲಿ, ಈ ಹಿಂದೆ ಹೇಳಿದ ದಸ್ತಾವೇಜುಗಳ ಮೇಲಿನ ಸ್ಟಾಂಪು ಸುಂಕ ವಿನಾಯಿತಿಯ ಸೌಲಭ್ಯವನ್ನು ಸರ್ಕಾರವು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗಳು ಸಾಮಾನ್ಯ ಆದೇಶಗಳನ್ನು ಹೊರಡಿಸಿದಂತೆಲೆಲ್ಲಾ ವಿಸ್ತರಿಸಿದೆ. ಈಗ ಮೇಲೆ ಹೇಳಿದ 6ನೇ ಕ್ರಮಾಂಕದಲ್ಲಿ ಓದಲಾದ ದಿನಾಂಕ 17.4.1982ರ ಸರ್ಕಾರಿ ಆದೇಶದಲ್ಲಿ, ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಈ ರಿಯಾಯಿತಿಗಳು ಮತ್ತು ಪ್ರೋತ್ಸಾಹಕಗಳ ಮುಂದುವರಿಕೆಗೆ ಮಂಜೂರಾತಿ ಕೊಟ್ಟಿದೆ.

**ಆದೇಶ ಸಂಖ್ಯೆ ಆರ್‌ಡಿ 179 ಇಎಸ್‌ಟಿ 80 ಬೆಂಗಳೂರು, ದಿನಾಂಕ 15ನೇ ಮೇ 1982**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (ಕರ್ನಾಟಕ ಅಧಿನಿಯಮ 1957ರ 34) 9ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ) ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಔದ್ಯಮಿಕ ಅಭಿವೃದ್ಧಿ ಬ್ಯಾಂಕು, ನಿಯಮಿತ, ಭಾರತ ಔದ್ಯಮಿಕ ಸಾಲ ಮತ್ತು ಬಂಡವಾಳ ಹೂಡಿಕೆ ನಿಗಮ ನಿಯಮಿತ, ಭಾರತದ ಔದ್ಯಮಿಕ ಹಣಕಾಸು ನಿಗಮ, ಭಾರತದ ಜೀವವಿಮಾ ನಿಗಮ, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಕರ್ನಾಟಕ ರಾಜ್ಯ ಔದ್ಯಮಿಕ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ, ಕೈಗಾರಿಕಾ ಸಹಕಾರಿ ಬ್ಯಾಂಕುಗಳು ಅಥವಾ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಅನುಸೂಚಿತ ಬ್ಯಾಂಕುಗಳಂಥ ಅಧಿಕೃತ ಹಣಕಾಸು ಒದಗಿಸುವ ಸಂಸ್ಥೆಗಳಿಂದ ಸಾಲಗಳು ಹಾಗೂ ಋಣಗಳನ್ನು ಪಡೆಯಲು (ಬೆಂಗಳೂರು ಮಹಾನಗರ ಪ್ರದೇಶ, ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಬೆಂಗಳೂರು ಉತ್ತರ ತಾಲ್ಲೂಕನ್ನು ಹೊರತುಪಡಿಸಿ) ತುಮಕೂರು, ಹಾಸನ, ದಕ್ಷಿಣಕನ್ನಡ, ಉತ್ತರಕನ್ನಡ, ಧಾರವಾಡ, ಬಿಜಾಪುರ, ಬೆಳಗಾವಿ, ಬೀದರ್, ಗುಲ್ಬರ್ಗಾ, ರಾಯಚೂರು, ಮೈಸೂರು ಮತ್ತು ಅಧಿಸೂಚಿತ ಔದ್ಯಮಿಕ ಪ್ರದೇಶಗಳಲ್ಲಿರುವ ಹೊಸ ಉದ್ಯಮಗಳು ಬರೆದುಕೊಟ್ಟ ಲಿಖಿತಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಸುಂಕಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅಗತ್ಯವಾಗಿದೆಯೆಂದು ಕರ್ನಾಟಕ ಸರ್ಕಾರವು ಅಭಿಪ್ರಾಯ ಪಟ್ಟು ಈ ಮೂಲಕ ಮಾಫಿ ಮಾಡಿದೆ.

1.4.1982 ರಿಂದ 31.3.1983ರ ವರೆಗಿನ ಒಂದು ವರ್ಷದ ಅವಧಿಗಾಗಿ ಈ ರಿಯಾಯಿತಿಗಳು ಹೊಸ ಔದ್ಯಮಿಕ ಬಂಡವಾಳ ಹೂಡಿಕೆಗಳಿಗೆ ದೊರೆಯುವುವು.

ಈ ಆದೇಶವನ್ನು ಹಣಕಾಸು ಇಲಾಖೆಯ ಸಹಮತಿಯೊಂದಿಗೆ ಹೊರಡಿಸಲಾಗಿದೆ. ಸಂಖ್ಯೆ ಎಫ್.ಡಿ. 789/ಇಎಕ್ಸ್‌ಪಿ–7/82, ದಿನಾಂಕ 7.5.1982 ನೋಡಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಎಸ್. ಕನೇಕಲ್**

ಸರ್ಕಾರದ ಉಪ ಕಾರ್ಯದರ್ಶಿ

ಕಂದಾಯ ಇಲಾಖೆ

ಸರ್ಕಾರಿ ಮುದ್ರಣಾಲಯ, ಬೆಂಗಳೂರು. – ಪಿ5